ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ

ಸಮಾಜೋಭಾಷಿಕ ಅಧ್ಯಯನ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನಾ ಮಹಾಪ್ರಬಂಧ

ಸಂಶೋಧಕ

ಕುಪ್ಪೇರಾವ್

ಮಾರ್ಗದರ್ಶಕರು

ಡಾ. ಸಾಂಬಮೂರ್ತಿ

ಸಹ ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೯ - ೧೦

ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಸಮಾಜೋಭಾಷಿಕ ಅಧ್ಯಯನ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಸಂಶೋಧನಾ ಮಹಾಪ್ರಬಂಧ

ಸಂಶೋಧಕ
ಕುಪ್ಪೇರಾವ್

ಮಾರ್ಗದರ್ಶಕರು
ಡಾ.ಸಾಂಬಮೂರ್ತಿ
ಸಹ ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೯ - ೧೦

ದೃಢೀಕರಣ ಪತ್ರ

ಕುಪ್ಪೇರಾವ್ ಅವರು 'ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಸಮಾಜೋಭಾಷಿಕ ಅಧ್ಯಯನ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಲಾಗುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಸಾಂಬಮೂರ್ತಿ)
ಮಾರ್ಗದರ್ಶಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 16.9.2010
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

'ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಸಮಾಜೋಭಾಷಿಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಡಾ.ಸಾಂಬಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Kupparao

(ಕುಪ್ಪೇರಾವ್)
ಸಂಶೋಧಕ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದಿನಾಂಕ : 16.9.2010
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

"ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಸಮಾಜೋಭಾಷಿಕ ಅಧ್ಯಯನ" ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲು ನನಗೆ ತುಂಬಾ ಹರ್ಷವೆನಿಸುತ್ತದೆ. ಈ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನ್ನ ಅಧ್ಯಯನಕ್ಕೆ ನೆರವಾದವರಿಗೆ ಕೃತಜ್ಞತೆಗಳನ್ನು ಹೇಳುವುದು ನನ್ನ ಆದ್ಯ ಕರ್ತವ್ಯವಾಗಿದೆ.

ಪ್ರಾರಂಭದಲ್ಲಿ ಪಿಎಚ್.ಡಿ, ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಂತಹ ಹಿಂದಿನ ಕುಲಪತಿಗಳಾದ ಪ್ರೊ.ಬಿ.ಎ.ವಿವೇಕ ರೈ ಅವರಿಗೆ, ಈಗಿನ ಕುಲಪತಿಗಳಾದಂತಹ ಪ್ರೊ.ಎ.ಮುರಿಗೆಪ್ಪ ಅವರಿಗೆ, ಕುಲಸಚಿವರಾದ ಡಾ.ಮಂಜುನಾಥ ಬೇವಿನಕಟ್ಟಿ ಅವರಿಗೆ ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಡಾ.ವೀರೇಶ ಬಡಿಗೇರ ಅವರಿಗೆ ಮೊದಲು ಕೃತಜ್ಞತೆಗಳನ್ನು ಹೇಳುತ್ತೇನೆ.

ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟು ನನ್ನನ್ನು ಪ್ರೋತ್ಸಾಯಿಸಿ ಅಧ್ಯಯನದ ಎಲ್ಲ ಸಂದರ್ಭಗಳಲ್ಲೂ ಚರ್ಚಿಸಿ, ಗ್ರಹಿಕೆಯ ನೆಲೆಗಳನ್ನು ತಿದ್ದಿ, ತೀಡಿ ಮಾರ್ಗದರ್ಶನ ಮಾಡಿದ ನೆಚ್ಚಿನ ಗುರುಗಳಾದ ಡಾ.ಸಾಂಬಮೂರ್ತಿ ಅವರಿಗೆ, ಆರಂಭದಿಂದಲೂ ಅಧ್ಯಯನಕ್ಕೆ ಸಹಕರಿಸಿ, ಸಲಹೆ ಸೂಚನೆಗಳನ್ನು ನೀಡಿದ ನಮ್ಮ ವಿಭಾಗದ ಗುರುಗಳಾದ ಡಾ.ಕೆ.ವಿ.ನಾರಾಯಣ, ಡಾ.ಡಿ.ಪಾಂಡುರಂಗಬಾಬು, ಡಾ.ಅಶೋಕ ಕುಮಾರ ರಂಜೇರೆ, ಡಾ.ಪಿ.ಮಹಾದೇವಯ್ಯ ಅವರಿಗೂ,

ನನ್ನ ಅಧ್ಯಯನದ ವಿಷಯ ಕುರಿತು ನನ್ನೊಂದಿಗೆ ಚರ್ಚಿಸಿ ಸೂಕ್ತ ಸಲಹೆಗಳನ್ನು ನೀಡಿ ಸಹಕರಿಸಿದ ಮೇಷ್ಟ್ರುಗಳಾದ ಡಾ.ಹಿ.ಚಿ.ಬೋರಲಿಂಗಯ್ಯ, ಡಾ.ಮಾಧವ ಪೆರಾಜೆ, ಡಾ.ಮಲ್ಲೇಪುರಂ ಜಿ.ವೆಂಕಟೇಶ, ಡಾ.ಎ.ಸುಬ್ಬಣ್ಣ ರೈ, ಶ್ರೀ ಸಿ.ವೆಂಕಟೇಶ್, ಡಾ.ಸುಚೇತ ನವರತ್ನ, ಡಾ.ಎಂ.ಉಷಾ, ಡಾ.ವಿಠಲರಾವ್ ಟಿ.ಗಾಯಕ್ವಾಡ್, ಡಾ.ಎ.ಮೋಹನಕುಂಟಾರ, ಡಾ.ವಿ.ಬಿ.ತಾರಕೇಶ್ವರ್, ಡಾ.ಕರೀಗೌಡ ಬೀಚನಹಳ್ಳಿ, ಡಾ.ಎಸ್.ಎಸ್.ಅಂಗಡಿ, ಡಾ.ಕೆ.ರವೀಂದ್ರನಾಥ್, ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಎಸ್.ಆರ್.ಚೆನ್ನವೀರಪ್ಪ, ಡಾ.ಡಿ.ವಿ.ಪರಶಿವಮೂರ್ತಿ, ಡಾ.ಅಮರೇಶ ನುಗಡೋಣಿ, ಡಾ.ರಹಮತ್ ತರೀಕೆರೆ, ಡಾ.ವೆಂಕಟೇಶ್ ಇಂದ್ವಾಡಿ, ಡಾ.ಬಿ.ಎಂ.ಪುಟ್ಟಯ್ಯ, ಡಾ.ಮೊಗಳ್ಳಿ ಗಣೇಶ್, ಡಾ.ಚಲುವರಾಜು ಅವರಿಗೂ

ನನಗೆ ಸಕಾಲಕ್ಕೆ ಗ್ರಂಥಾಲಯದಲ್ಲಿ ಗ್ರಂಥಗಳನ್ನು ಒದಗಿಸಿ ನನ್ನ ಅಧ್ಯಯನಕ್ಕೆ ಪ್ರೇರಕರಾದ ಗ್ರಂಥಾಲಯದ ಮುಖ್ಯಸ್ಥರಾದ ಡಾ.ರಾಧಾಕೃಷ್ಣ, ಡಾ.ಎಚ್.ನಾಗವೇಣಿ ಮತ್ತು ಎರಡೂ ಗ್ರಂಥಾಲಯದ ಸಿಬ್ಬಂದಿ ವರ್ಗದವರಿಗೂ ಹಾಗೂ ಇಡೀ ವಿಶ್ವವಿದ್ಯಾಲಯದ ಆಡಳಿತ ಸಿಬ್ಬಂದಿ ವರ್ಗದವರಿಗೂ,

ಅಧ್ಯಯನ ಸಂದರ್ಭದಲ್ಲಿ ಆರ್ಥಿಕ ಧನ ಸಹಾಯ ನೀಡಿದ ಮಂತ್ರಾಲಯ ಶ್ರೀ ಮಠ, ಮತ್ತು ಹೊಸಪೇಟೆ ತಾಲೂಕು ಬ್ರಾಹ್ಮಣ ಸಂಘದವರಿಗೂ,

ನನ್ನನ್ನು ಅತ್ಯಂತ ಪ್ರೀತಿಯಿಂದ ಸಾಕಿ ಸಲುಹಿ ಪ್ರತಿಹಂತದಲ್ಲಿ ನನ್ನ ಶ್ರೇಯೋಭಿವೃದ್ಧಿಯನ್ನು ಬಯಸುವ ಪೂಜ್ಯ ತಂದೆ ಚಂದ್ರಾಮರಾವ್ ಕುಲಕರ್ಣಿ, ತಾಯಿ ಸುಧಾಬಾಯಿ, ಅಣ್ಣಂದಿರಾದ ಮಾಧವರಾವ್

ಕುಲಕರ್ಣಿ, ಗುರುರಾಜರಾವ್ ಕುಲಕರ್ಣಿ, ಅಕ್ಕ ಸ್ವರ್ಣಗೌರಿ, ಅತ್ತಿಗೆಯರಾದ ರಾಧಾ, ಶೈಲಜಾ, ಮುದ್ದುಮಕ್ಕಳಾದ ವೆಂಕಟಲಕ್ಷ್ಮಿ, ಪುಷ್ಪ, ಶ್ರೀನಿವಾಸ ಅವರಿಗೂ

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನನ್ನ ಅಧ್ಯಯನಕ್ಕೆ ಮಾಹಿತಿ ನೀಡಿ ಅಧ್ಯಯನ ಪೂರ್ಣಗೊಳ್ಳಲು ಸಹಕರಿಸಿದ ತಟ್ಟಿ ಕುಟುಂಬದವರಿಗೂ

ಅಧ್ಯಯನ ವಿಷಯ ಕುರಿತು ಪ್ರತಿ ಸಂದರ್ಭದಲ್ಲಿ ಹೊಸ ವಿಷಯಗಳನ್ನು ಚರ್ಚಿಸುತ್ತಾ ಸಲಹೆ ಸೂಚನೆಗಳನ್ನು ನೀಡುತ್ತಿದ್ದ ವಿಪ್ಲವಿ, ಶೇಖರಾಚಾರಿ ಕೆ., ಸೀತರಾಮ ಹುಳಿಯಾರ್, ಡಾ.ವಾಗೀಶ್ ಡಾ.ದುರ್ಗಾಪ್ರವೀಣ್, ಡಾ.ಗಜಾನನ ಅಡ್ಕಾರ್, ಡಾ.ಕುಮಾರ್ ಜೆ., ಡಾ. ಈರಣ್ಣ ಹುರುಳಿ, ತುಕಾರಾಮ್, ಡಾ.ವೀರಾಕ್ಷಿ, ವೆಳ್ಳಿಮಾ, ಸುಧಾಕರ, ಡಾ.ಗವಿಸಿದ್ದಪ್ಪ, ವೀರೇಶ್ ಉತ್ತಂಗಿ, ಡಾ.ಬಿ.ಎಸ್.ಸುದೀಪ್, ಡಾ.ಚಂದ್ರಪ್ಪ, ಡಾ.ಅರುಣ್, ಬಸವರಾಜ್ ಬಳಿಗೇರ್, ಲಿಂಗಪ್ಪ, ವಿರೇಶ್ ಜಾನೇಕಲ್, ಶರಣಬಸವ ನಾಗಣ್ಣಕಿಲಾರಿ, ನಾಗರಾಜ ಚಿತ್ರಂಪಳ್ಳಿ, ಡಾ.ಲಿಂಗಣ್ಣ, ಡಾ.ಸೋಮಕ್ಕ, ಡಾ.ಹುಲಿಗೆಮ್ಮ ಅವರಿಗೂ

ಅಂದವಾದ ಅಕ್ಷರ ರೂಪದಲ್ಲಿ ಸಂಯೋಜಿಸಿದ *ಮಾನಸ ಗ್ರಾಫಿಕ್ಸ್‌*ನ ಬಸವರಾಜು ಸಿ., ಅವರಿಗೂ

ತುಂಬು ಹೃದಯದ ಕೃತಜ್ಞತೆಗಳು

ಕುಪ್ಪೇರಾವ್

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ದಾಸ ಸಾಹಿತ್ಯದ್ದು ಒಂದು ಪ್ರಮುಖ ಘಟ್ಟ. ಶಿವಶರಣರ ಮತ್ತು ಶರಣೆಯರ ನಂತರ ಜನಸಾಮಾನ್ಯರಿಗೆ ಸರಳವಾಗಿ ಅರ್ಥ ಆಗುವ ಹಾಗೆ ದಾಸವರೇಣ್ಯರು ಸಾಹಿತ್ಯವನ್ನು ರಚಿಸಿದರು. ದಾಸಸಾಹಿತ್ಯದ ಪ್ರಾರಂಭಿಕ ಹಂತವನ್ನು ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಶ್ರೀ ಮಧ್ವಾಚಾರ್ಯರಿಂದಲೇ ಗುರುತಿಸಲಾಗುತ್ತದೆ. ವೀರಶೈವ ಮತದ ಪ್ರಾಬಲ್ಯ ಅಧಿಕವಾಗಿದ್ದ ಕಾಲದಲ್ಲಿ ವೈದಿಕ ಧರ್ಮದ ಪುನರುತ್ಥಾನದ ಕಡೆಗೆ ಮನಸ್ಸು ಮಾಡಿದ ಅನೇಕರು ಹೊಸ ದಾರಿಗಳನ್ನು ತೋರಿದರು. ದಾಸ ಸಾಹಿತ್ಯವು ವೈಷ್ಣವ ಪಂಥದ ಅವಲಂಬನೆಯಾಗಿ ಬಂದಿತು. ಹೀಗಾಗಿ ತಮ್ಮ ಧಾರ್ಮಿಕ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೊಸ ಸಿದ್ಧಾಂತವನ್ನು ಹುಟ್ಟುಹಾಕಿದರು. ದಾಸರ ಪ್ರಯತ್ನದ ಫಲವೇ ದಾಸ ಸಾಹಿತ್ಯಕ್ಕೆ ನಾಂದಿ ಆಯಿತು. ದಾಸರ ಕೀರ್ತನೆಗಳಿಗೆ ಕೇವಲ ಮಧ್ವಸಿದ್ಧಾಂತ ಹಿನ್ನೆಲೆಯಾಗಿಲ್ಲ. ಸಮಾಜದ ವಿವಿಧ ಮುಖದ ಚಿತ್ರಣವು ಕೀರ್ತನೆಗಳಲ್ಲಿ ಪ್ರಮುಖ ವಸ್ತುವಾಗಿ ಮೂಡಿಬಂದಿದೆ.

ಶರಣರ ಸಾಹಿತ್ಯದಂತೆಯೇ ದಾಸ ಸಾಹಿತ್ಯವೂ ಆಯ್ದುಕೊಂಡ ಭಾಷಾ ಮಾಧ್ಯಮ ಸರಳವಾಗಿತ್ತು. ದಾಸರು ಧಾರ್ಮಿಕ ಪ್ರಚಾರಕ್ಕೆ ಜನರ ಆಡುನುಡಿಯನ್ನು ಹೆಚ್ಚಾಗಿ ಬಳಸಿಕೊಂಡರು. ಶಿವ ಶಿರಣರು ಕಾವ್ಯಮಯವಾದ ಗದ್ಯದಲ್ಲಿ ವಚನಗಳನ್ನು ರಚಿಸಿ ಜನಮನವನ್ನು ಸೂರೆಗೊಂಡರೆ ಹರಿದಾಸರು ಗೇಯ ಗುಣವುಳ್ಳ ಕೀರ್ತನೆಗಳನ್ನು ಹಾಡಿ ಸಾಮಾನ್ಯ ಜನರನ್ನು ತಮ್ಮತ್ತ ಸೆಳೆದುಕೊಂಡರು.ಕೀರ್ತನೆಗಳು ಸಂಗೀತ ಪ್ರಧಾನವಾದದ್ದು. ಪರಮಾತ್ಮನು ಸಂಗೀತಕ್ಕೆ ಬಹುಬೇಗ ಪ್ರಸನ್ನನಾಗುವನೆಂಬ ನಂಬಿಕೆ ದಾಸರಲ್ಲಿ ಪ್ರಬಲವಾಗಿತ್ತು. ಭಕ್ತಿಯ ಸಾಹಿತ್ಯಕ್ಕೆ ಸಂಗೀತ ಶಾಸ್ತ್ರ ಹೆಚ್ಚು ಮಿಳಿತಗೊಂಡರೆ ಕೀರ್ತನೆಯ ಸೊಗಸು ಮತ್ತಷ್ಟು ಹೆಚ್ಚುವುದೆಂದು ಭಾವಿಸಿದ ಹರಿದಾಸರು ಸಂಗೀತಕ್ಕೂ ಸಾಹಿತ್ಯಕ್ಕೂ ಸಾಮರಸ್ಯದ ವೈವಿಧ್ಯವನ್ನು ತಂದರು. ಸಂಗೀತಕ್ಕೆ ಸಂಬಂಧಿಸಿದಂತೆ ವಿವಿಧ ರಾಗ, ತಾಳಗಳಲ್ಲೂ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ

ಛಂದಸ್ಸು, ಸುಳಾದಿ, ಉಗಾಭೋಗಗಳಲ್ಲೂ ತಮ್ಮ ಕೃತಿಗಳನ್ನು ರಚಿಸಿದರು. ಪದ, ಸುಳಾದಿ, ಉಗಾಭೋಗ, ಶ್ಲೋಕ, ಕಂದ, ವೃತ್ತ, ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ರಗಳೆ ಮುಂತಾದ ದೇಶೀ ಪ್ರಕಾರಗಳಲ್ಲಿ ಅವರ ಸಾಹಿತ್ಯ ರೂಪುಗೊಂಡಿದೆ. ಕನ್ನಡವನ್ನು ಸಂಗೀತ ಭಾಷೆಯನ್ನಾಗಿ ಮಾಡಿದ ಕೀರ್ತಿ ಮುಖ್ಯವಾಗಿ ಹರಿದಾಸರಿಗೆ ಸಲ್ಲುತ್ತದೆ.

ದಾಸ ಸಾಹಿತ್ಯ ಹೆಸರೇ ಸೂಚಿಸುವ ಹಾಗೆ ದಾಸ ಭಕ್ತರಿಂದ ರಚನೆಯಾದ ಸಾಹಿತ್ಯ. ಭಾಗವತ ಪರಂಪರೆಯೊಂದಿಗೆ ಮಧ್ವಮತ ತತ್ತ್ವಗಳ ತಳಹದಿಯ ಮೇಲೆ ಈ ದಾಸ ಸಾಹಿತ್ಯದಲ್ಲಿ ಭಗವಂತನ ನಾನಾ ರೂಪಗಳ ವರ್ಣನೆ ಭಕ್ತನ ಅಂತರಂಗ ಶೋಧನೆ, ಕಳವಳ, ಸರ್ವಸಮರ್ಪಣ ಭಾವಗಳ ಜೊತೆಗೆ ಮಧ್ವಮತ ತತ್ತ್ವ ನಿರೂಪಣೆಯೂ ಕಂಡು ಬರುತ್ತದೆ. ದಾಸರ ಅನೇಕ ಕೃತಿಗಳಲ್ಲಿ ಸುತ್ತಲಿನ ಸಮಾಜವನ್ನು ಕುರಿತು ಕಳಕಳಿ, ವಿಡಂಬನೆ ಇತ್ಯಾದಿ ಕಂಡುಬರುತ್ತಿದ್ದು, ದಾಸ ಸಾಹಿತ್ಯ ಸಾಮಾಜಿಕವಾಗಿಯೂ ಮಹತ್ವಪೂರ್ಣವಾಗಿದೆ. ಹೀಗಾಗಿ ಭಕ್ತಿಯ ಮೂಲಕ ಮುಕ್ತಿಯನ್ನು ಪಡೆದುಕೊಳ್ಳಬೇಕೆಂದು ಮುಖ್ಯವಾಗಿ ಹಂಬಲಿಸಿದ ದಾಸರು ತಮ್ಮನ್ನು ಮತ್ತು ತಮ್ಮ ಸುತ್ತಮುತ್ತಲಿನ ಸಮಾಜವನ್ನು ಅರಿತುಕೊಳ್ಳಲು ಮತ್ತು ಸುಧಾರಿಸಲು ಸಹಕಾರಿಯಾಗಿ ಮಾಡಿದ ಪ್ರಮಾಣಿಕ ಪ್ರಯತ್ನಗಳೇ ಹರಿದಾಸ ಸಾಹಿತ್ಯದಲ್ಲಿ ಕಂಡುಬರುತ್ತವೆ ಎನ್ನಬಹುದು. ಇವು ವ್ಯಕ್ತವಾದದ್ದು ಸಹಜವಾದ ಆಡುನುಡಿಗಳಲ್ಲಿ. ಈ ಸಂದರ್ಭದಲ್ಲಿ ದಾಸರು ತಮ್ಮ ಅಂತರಂಗದ ಅಭಿವ್ಯಕ್ತಿ ಹಾಗೂ ಮತ ತತ್ತ್ವ ಪ್ರಚಾರಗಳಿಗೆ ಕನ್ನಡ ಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಆಡುಭಾಷೆಗೆ ದೇವ ಭಾಷೆಯ ಸ್ಥಾನಮಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ದಾಸ ಸಾಹಿತ್ಯವು ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತನಾಮ, ದಂಡಕ ಮುಂತಾದ ಶಿಷ್ಟ ಮತ್ತು ದೇಸಿ ಪ್ರಕಾರಗಳಲ್ಲಿ ರಚಿತವಾಗಿದ್ದು ಮುಖ್ಯವಾಗಿ ಅದರ ಗೇಯಗುಣ ಜನ ಸಾಮಾನ್ಯರನ್ನು ವಿಶೇಷವಾಗಿ ಆಕರ್ಷಿಸುತ್ತದೆ. ಅಕ್ಷರಿ ಮತ್ತು ನಿರಕ್ಷರಿಗಳನ್ನು ಏಕಕಾಲಕ್ಕೆ ಸೆಳೆಯಬಲ್ಲ ವಿಶಿಷ್ಟ ಸಾಮರ್ಥ್ಯ ದಾಸ ಸಾಹಿತ್ಯ ಹೊಂದಿದೆ.

ಭಗವಂತನ ಅನುಗ್ರಹ ಹೊಂದುವಲ್ಲಿ ಜ್ಞಾನ, ಭಕ್ತಿ, ಕರ್ಮ ಮಾರ್ಗಗಳಲ್ಲಿ ಭಕ್ತಿ ಮಾರ್ಗವು ಹೆಚ್ಚು ಸರಳವಾದದ್ದು ಮತ್ತು ಹೆಚ್ಚು ಆಪ್ತವಾದದ್ದು. ಭಕ್ತನಾದವನು ಭಗವಂತನ ಮೇಲೆ ಇಟ್ಟಿರುವ ಪ್ರಾಂಜಲವಾದ ನಂಬಿಕೆಯ ಭಕ್ತಿ ಭಗವಂತ ಮತ್ತು ಭಕ್ತನ ನಡುವೆ ಇರಬಹುದಾದ ಸಂಬಂಧವೇ ಭಕ್ತಿ ಎಂದೆನ್ನಬಹುದು. ವೈವಿಧ್ಯ ಪೂರ್ಣ ಭಕ್ತಿ ನಿರೂಪಣೆಯ ದೃಷ್ಟಿಯಿಂದ ದಾಸರ ಕೀರ್ತನೆಗಳು ಅನುಪಮವಾಗಿವೆ. ನವರಸಾದಿ ಭಾವಗಳಿಂದ ದಾಸರು ತಮ್ಮ ಅಂತರಂಗದ ಭಕ್ತಿಯನ್ನು ಭಗವಂತನಿಗೆ ಅರ್ಪಿಸಿದ್ದಾರೆ.

ದಾಸರು ಮುಖ್ಯವಾಗಿ ಎರಡು ಪ್ರಮುಖ ಅಂಶಗಳಿಂದ ಸಾಹಿತ್ಯ ರಚನೆ ಮಾಡಿದ್ದಾರೆ. ಒಂದು, ತಮ್ಮ ಮತ್ತು ಭಗವಂತನ ಸಂಬಂಧವನ್ನು ಕುರಿತು ನಾನಾ ರೀತಿಯಲ್ಲಿ ವರ್ಣಿಸಿದ್ದಾರೆ. ಇಲ್ಲಿ ಪಂಚ ವಿಧ ಭಕ್ತಿಯ ಸ್ವರೂಪವನ್ನು ಕಾಣಬಹುದು. ಭಕ್ತನ ಅಂತರಂಗದ ಕಳವಳ, ಆಸೆ, ನಿರಾಸೆ ತೃಪ್ತಿ ಇತ್ಯಾದಿಗಳಿಗೆ ಸಂಬಂಧಪಟ್ಟ ಹಲವಾರು ಸಂಚಾರೀ ಭಾವಗಳನ್ನು ಪರಿಣಾಮಕಾರಿಯಾಗಿ ಹೇಳಿರುವುದನ್ನು

ಕಾಣುತ್ತೇವೆ. ಎರಡು ತಮಗೂ ಸಮಾಜಕ್ಕೂ ಇರುವ ಸಂಬಂಧವನ್ನು ಕುರಿತು ಹೇಳಿದ್ದಾರೆ. ತಮ್ಮ ಸುತ್ತ ಮುತ್ತಲಿನ ಸಮಾಜ ವಿಮರ್ಶೆಯನ್ನು ಮಾಡುತ್ತಾ ಸರಳವಾದ ಭಕ್ತಿಯನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ಹೇಳಿರುವ ಮಾತು ಉಗ್ರವಾಗಿರಬಹುದು, ವ್ಯಂಗ್ಯವಾಗಿರಬಹುದು. ಏನೇ ಇದ್ದರೂ ಸಮಾಜದ ಸಮಾಜದ ಸುಧಾರಣೆಗೆ ಹೇಳಿದ್ದಾರೆ.

ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಅನೇಕ ಕವಯಿತ್ರಿಯರು ಕೃತಿ ರಚನೆ ಮಾಡಿರುವುದು ಕಂಡುಬರುತ್ತದೆ. ಶರಣ ಸಾಹಿತ್ಯ ರಚನೆಯಲ್ಲಿ ಶಿವಶರಣೆಯರು ದೊಡ್ಡ ಪ್ರಮಾಣದಲ್ಲಿ ಪಾಲ್ಗೊಂಡು ಕೃತಿ ರಚನೆ ಮಾಡಿದ ಖಚಿತ ಮಾಹಿತಿಗಳು ದೊರೆಯುತ್ತವೆ. ದಾಸ ಸಾಹಿತ್ಯದಲ್ಲೂ ಕೂಡ ಅನೇಕ ಮಹಿಳೆಯರು ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ಆದರೆ ಗಂಭೀರ ಅಧ್ಯಯನದ ಕೊರತೆಯಿಂದಾಗಿ ಮೂಲೆ ಗುಂಪಾಗಿದ್ದಾರೆ. ಹೆಳವನಕಟ್ಟೆ ಗಿರಿಯಮ್ಮ ಮತ್ತು ಹರಪನಹಳ್ಳಿ ಭೀಮವ್ವನವರ ಹೆಸರುಗಳು ಮಾತ್ರ ಕೇಳಿಬರುತ್ತಿರುತ್ತವೆ. ಆದರೂ ಸಹ ಇವರ ಕುರಿತು ಅಧ್ಯಯನಗಳು ನಡೆದಿಲ್ಲ.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಕೃತಿಕಾರರು ಕೃತಿ ರಚಿಸಿರುವುದು ಕಂಡುಬರುತ್ತದೆ. ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿರುವುದು ವಿಶೇಷವಾಗಿದೆ. ತಮ್ಮ ಸಮಕಾಲೀನ ಬದುಕಿನ ಚಿತ್ರಣವನ್ನು ಮೌಲ್ಯಗಳನ್ನು ತಮ್ಮ ಕೃತಿಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಕರ್ನಾಟಕ ಭಕ್ತಿಪಂಥ ಚಳುವಳಿಯಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವ ದಾಸ ಸಾಹಿತ್ಯದಲ್ಲಿ ಮಹಿಳೆಯರ ರಚನೆಗಳು ವಿಶೇಷವಾಗಿ ಮೂಡಿಬಂದಿವೆ. ದಾಸ ಸಾಹಿತ್ಯ ೧೫ನೇ ಶತಮಾನದಿಂದ ಈಚೆಗೆ ಬೆಳೆದು ಬಂದಿದ್ದರೂ ಮಹಿಳೆಯರು ಕಂಡುಬರುವುದು ೧೮ನೇ ಶತಮಾನದ ಕೊನೆಯ ಭಾಗದ ಘಟ್ಟದಲ್ಲಿ.

೧೮ನೇ ಶತಮಾನದಲ್ಲಿ ಮಹಿಳೆಯರು ಹೆಚ್ಚಾಗಿ ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ಆ ಕಾಲದಲ್ಲಿಯೇ ಅನೇಕ ಮಹಿಳೆಯರು ಮೌಲಿಕ ಕೀರ್ತನೆಗಳನ್ನು ರಚಿಸಿದ್ದಾರೆ. ಅದಕ್ಕಿಂತಲೂ ಪೂರ್ವದಲ್ಲಿ ಮಧ್ವಾಚಾರ್ಯರ ಸೋದರಿ ಕಲ್ಯಾಣಿದೇವಿ, ಪುರಂದರದಾಸರ ಪತ್ನಿ ಸರಸ್ವತಿ ಬಾಯಿ ಹಾಗೂ ಪುತ್ರಿಯರು ಅಂಕಿತದೊಡನೆ ಕೀರ್ತನೆ ರಚನೆಗೈದ ಇತಿಹಾಸ ಹೇಳುತ್ತದೆಯಾದರೂ ಸ್ಪಷ್ಟ ಆಧಾರಗಳಿಲ್ಲ. ಆದರೆ ೧೮ನೇ ಶತಮಾನದಿಂದ ಈಚೆಗೆ ಅನೇಕ ಮಹಿಳೆಯರ ಅಂಕಿತದಿಂದೊಡಗೂಡಿದ ಅನೇಕ ಕೀರ್ತನೆಗಳು ದೊರೆಯುತ್ತವೆ. ಸಹಜವಾಗಿ ಮಹಿಳಾ ಸಾಹಿತ್ಯ ಸಂವೇದನೆಯ ನೋವು, ನಲಿವುಗಳನ್ನು ದಾಖಲಿಸುತ್ತದೆ. ಸಾಂಸ್ಕೃತಿಕ ಆಚರಣೆಗಳ ವಿವಿಧ ಅಂಶಗಳು ವಿಶೇಷವಾಗಿ ಮೂಡಿಬಂದಿವೆ.

ಮಹಿಳಾ ದಾಸರಲ್ಲಿ ಹರಪನಹಳ್ಳಿ ಭೀಮವ್ವನವರದು ಬಹು ದೊಡ್ಡ ಹೆಸರು. ಭೀಮೇಶ ಕೃಷ್ಣನ ಸೇವೆಯಲ್ಲಿಯೇ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಭೀಮವ್ವನ ಕೀರ್ತನೆಗಳು ಆಕರ್ಷಕವಾಗಿವೆ. ಎಲ್ಲ ಹರಿದಾಸರಂತೆ (ಹರಪನಹಳ್ಳಿ ಭೀಮವ್ವನವರು ಕೂಡ ಭೀಮೇಶ ಕೃಷ್ಣನನ್ನು ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತ ಎಂಬ ಭಾವಗಳಲ್ಲಿ ಕಂಡು ಆ ಅನುಭವವನ್ನು ಹಾಡಾಗಿಸಿದ್ದಾರೆ.)

ಹರಪನಹಳ್ಳಿ ಭೀಮವ್ವನವರು ಕ್ರಿ.ಶ.೧೮೨೩ ಜುಲೈ ೬ರ ಭಾನುವಾರದಂದು ಜನ್ಮ ತಾಳಿದರು. ಇವರ ಹುಟ್ಟೂರು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ನಾರಾಯಣ ದೇವರ ಕೆರೆ. ಈಗ ಈ

ಊರು ತುಂಗಭದ್ರಾ ಅಣೆಕಟ್ಟಿನಲ್ಲಿ ಮುಳುಗಡೆಯಾಗಿದೆ. ಭೀಮವ್ವನವರು ಬಾಲ್ಯದಲ್ಲಿದ್ದಾಗಲೇ ಅನೇಕ ಪವಾಡಗಳನ್ನು ತೋರಿಸಿದ್ದರೆಂದು ದಂತಕತೆಯಿದೆ. ಪುರಾಣ, ಪ್ರವಚನಗಳನ್ನು ತದೇಕ ಚಿತ್ತರಾಗಿ ಕೇಳುತ್ತಿದ್ದಂತೆ. ಕೀರ್ತನೆ ರಚಿಸುವ ಶಕ್ತಿ ಪ್ರಾಪ್ತವಾದಾಗಲೂ ರಚಿಸದೆ ಬಳಲುತ್ತಿದ್ದರಂತೆ. ಸ್ವತಃ ನಾರದರೇ ಬಂದು ಕೀರ್ತನೆಯನ್ನು ರಚಿಸು ಎಂದು ಅಪ್ಪಣೆ ನೀಡಿದರಂತೆ. ಹೀಗೆ ಭೀಮವ್ವನವರ ಜೀವನ ಸಾಹಿತ್ಯದ ಕಡೆಗೆ ವಾಲಿತು.

ಹರಪನಹಳ್ಳಿ ಭೀಮವ್ವನವರು ದಶಾವತಾರ ಸ್ತುತಿಗಳನ್ನು ಮಾಡುವುದರ ಜೊತೆಗೆ ಬ್ರಾಹ್ಮಣ ಸಮುದಾಯದಲ್ಲಿ ಬರುವ ವಿವಿಧ ಬಗೆಯ ಆಚರಣೆಗಳನ್ನು ಕೀರ್ತನೆಗಳ ಮೂಲಕ ದಾಖಲಿಸಿದ್ದಾರೆ ಹಾಗೆಯೇ ಆ ಸಂದರ್ಭದಲ್ಲಿದ್ದ ಉಡುಗೆ ತೊಡುಗೆಯ ವೈವಿಧ್ಯತೆ, ಆಹಾರದ ವೈವಿಧ್ಯತೆ ಹೀಗೆ ಕೀರ್ತನೆಗಳಲ್ಲಿ ಮಾಹಿತಿ ಪೂರಕವಾಗಿ ಬಂದಿವೆ. ಭೀಮವ್ವನವರು ರಚಿಸಿರುವ ೧೪೩ ಕೀರ್ತನೆಗಳು ಮತ್ತು ಏಳು ದೀರ್ಘ ಹಾಡುಗಳು ಅಧ್ಯಯನ ವ್ಯಾಪ್ತಿಯಾಗಿರುತ್ತದೆ.

ಇವರ ಕೀರ್ತನೆಗಳಲ್ಲಿ ಕಂಡುಬರುವ ಸಾಮಾಜಿಕ ಸಾಂಸ್ಕೃತಿಕ ಮತ್ತು ಭಾಷಿಕ ವೈವಿಧ್ಯವನ್ನು ವಿಶ್ಲೇಷಿಸುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ. ಭೀಮವ್ವನವರ ಕೃತಿಗಳಲ್ಲಿನ ಭಾಷೆ ಮೇಲ್ವರ್ಗದ ಪ್ರಭೇದವಾದರೂ ಗ್ರಾಮ್ಯ ರೂಪಗಳು, ಅನ್ಯಭಾಷಾಬಳಕೆ ಮತ್ತು ಇತರ ಭಾಷಿಕ ಅಂಶಗಳನ್ನು ಒಳಗೊಂಡಿದೆ. ಸಾಂಸ್ಕೃತಿಕವಾಗಿ ಆಚರಣೆಗಳನ್ನು ಕುರಿತಂತೆ ವ್ಯಕ್ತಪಡಿಸುವ ರೀತಿ ಮಹತ್ವದ್ದಾಗಿದೆ. ಹಬ್ಬ ಹಾಗೂ ವಿಶೇಷ ಸಂದರ್ಭಗಳಲ್ಲಿ ಉಡುವ ಸೀರೆ ಕುರಿತಂತೆ ಇರುವ ಒಂದು ಹಾಡಿನಲ್ಲಿ ಸುಮಾರು ನೂರಾರು ಬಗೆಯ ಸೀರೆಗಳನ್ನು ವರ್ಣಿಸಲಾಗಿದೆ.

ಪ್ರಸ್ತಾಪಗೊಂಡ ಒಂದೊಂದು ಸೀರೆಗೂ ಒಂದೊಂದು ಬಗೆಯ ಹಿನ್ನೆಲೆ ಇದೆ. ಸೀರೆ ಉಡುವುದಕ್ಕು, ಉಡಿಸುವುದಕ್ಕೂ ಒಂದು ಬಗೆ ಆಚರಣೆ ಇದೆ. ಆಹಾರದ ವೈವಿಧ್ಯವನ್ನು ಕುರಿತಂತೆ ಹೇಳುವಾಗ ಬ್ರಾಹ್ಮಣ ಸಮಾಜದ ಊಟ ಉಪಚಾರ ಕುರಿತಂತೆ, ಆಹಾರದ ವೈವಿಧ್ಯ ಕುರಿತಂತೆ ವಿವರಣೆ ಇವೆ. ಈ ಎಲ್ಲ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ವಿವರಣಾತ್ಮಕ ಮಾದರಿಯಲ್ಲಿ ಸಮಾಜೋಭಾಷಿಕ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇವುಗಳನ್ನು ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಚರ್ಚಿಸಲಾಗಿದೆ.

ಅಧ್ಯಯನದ ಸ್ವರೂಪ ಈ ಕೆಳಗಿನಂತಿದೆ.

ಅಧ್ಯಾಯ - ೧ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಈ ಅಧ್ಯಾಯದಲ್ಲಿ ಪ್ರಸ್ತುತ ಮಹಾಪ್ರಬಂಧದ ಉದ್ದೇಶ ಹಾಗೂ ವ್ಯಾಪ್ತಿಯನ್ನು ಪ್ರಾರಂಭದಲ್ಲೇ ತಿಳಿಸಲಾಗಿದೆ. ಈ ಮಹಾ ಪ್ರಬಂಧದ ಉದ್ದೇಶ ಹಾಗೂ ವ್ಯಾಪ್ತಿಗೆ ಸಂಬಂಧಿಸಿದಂತೆ ಸಂಶೋಧನಯ ಚೌಕಟ್ಟನ್ನು ತಿಳಿಸಲಾಗಿದೆ.

ಅಧ್ಯಾಯ - ೨ರಲ್ಲಿ ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಹರಪನಹಳ್ಳಿ ಭೀಮವ್ವನವರ ಕುರಿತಂತೆ ಬಂದಿರುವ ಕೃತಿಗಳನ್ನು ಮತ್ತು ಲೇಖನಗಳನ್ನು ಸಮೀಕ್ಷೆ ಮಾಡಲಾಗಿದೆ. ಈ ಸಮೀಕ್ಷೆಯಲ್ಲಿ ಮುಖ್ಯವಾಗಿ ಅವರ ಜೀವನ ಚರಿತ್ರೆ, ಸಾಹಿತ್ಯ ರಚನೆ, ಕೀರ್ತನೆಗಳು,

ವಿವಿಧ ಪ್ರಕಾರಗಳನ್ನು ಕುರಿತ ಮಾಹಿತಿಗಳೇ ಮುಖ್ಯವಾಗಿವೆ. ಅವರ ಭಾಷಿಕ ಪ್ರಯೋಗ ಕುರಿತ ಮಾಹಿತಿ ತುಂಬ ಕಡಿಮೆ.

ಅಧ್ಯಾಯ - ೩ ದಾಸಸಾಹಿತ್ಯ - ಮಹಿಳೆಯರ ಕೊಡುಗೆ

ಈ ಅಧ್ಯಾಯದಲ್ಲಿ ಮೊದಲಿಗೆ ದಾಸ ಸಾಹಿತ್ಯದ ಉಗಮ ಮತ್ತು ಪ್ರಮುಖ ದಾಸವರೇಣ್ಯರ ಬಗೆಗಿನ ಮಾಹಿತಿ ಇದೆ. ಮುಂದುವರೆದು ದಾಸ ಸಾಹಿತ್ಯದಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುವ ಕೀರ್ತನಗಾರ್ತಿಯರ ಜೀವನ ವಿವರವನ್ನು ಚರ್ಚಿಸಲಾಗಿದೆ. ಹಾಗೆಯೇ ಅವರು ನೀಡಿದ ಕೊಡುಗೆಗಳನ್ನು ಸಹ ವಿವರಿಸಲಾಗಿದೆ.

ಅಧ್ಯಾಯ - ೪ ದಾಸ ಸಾಹಿತ್ಯದ ಭಾಷಿಕ ರಚನೆ

ಈ ಅಧ್ಯಾಯದಲ್ಲಿ ದಾಸ ಸಾಹಿತ್ಯದ ಭಾಷಿಕ ರಚನೆಯನ್ನು ಕುರಿತು ಚರ್ಚಿಸಲಾಗಿದೆ. ಸಂಸ್ಕೃತ ಭಾಷೆಯ ಅರಿವಿದ್ದರೂ ಸಹಜವಾಗಿ ಕನ್ನಡ ಭಾಷೆಯನ್ನು ಅದರಲ್ಲೂ ಗ್ರಾಮ್ಯ ನುಡಿಗಳನ್ನು ದಾಸರು ಬಳಸಿದರು. ವ್ಯಾಕರಣದ ಅನೇಕ ನಿಯಮಗಳನ್ನು ದಾಟಿದರು. ಹಾಗೆ ದಾಟಿದಾಗಲೂ ಎಲ್ಲೂ ಧಕ್ಕೆ ಬರದ ಹಾಗೆ ಕೀರ್ತನೆಗಳನ್ನು ರಚಿಸಿದರು. ಸಂಸ್ಕೃತ ಅಥವಾ ಗ್ರಾಂಥಿಕ ಭಾಷೆಯಿಂದ ಆದ ಶಿಥಿಲ ರೂಪಗಳನ್ನು, ಸಂಕ್ಷಿಪ್ತರೂಪಗಳನ್ನು, ಸಂವಾದಿ ರೂಪಗಳನ್ನು, ಕನ್ನಡದ ದ್ವಿತ್ವ ರೂಪಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಅಧ್ಯಾಯ - ೫ ಹರಪನಹಳ್ಳಿ ಭೀಮವ್ವನವರ ಜೀವನ ಮತ್ತು ಸಾಧನೆ

ಈ ಅಧ್ಯಾಯದಲ್ಲಿ ಸವಿವರವಾಗಿ ಭೀಮವ್ವನವರ ಜೀವನ ಮತ್ತು ಸಾಧನೆ ಕುರಿತಂತೆ ಚರ್ಚಿಸಲಾಗಿದೆ. ಈ ಸಂದರ್ಭದಲ್ಲಿ ಭೀಮವ್ವನವರ ಕುರಿತು ಬಂದಿರುವ ಕೃತಿಗಳನ್ನು ಮತ್ತು ಲೇಖನಗಳನ್ನು ಪ್ರಧಾನವಾಗಿ ಗಮನಿಸಿ ಬಳಸಿಕೊಳ್ಳಲಾಗಿದೆ. ಭೀಮವ್ವನವರ ಬಾಲ್ಯ ದಾಂಪತ್ಯ ಜೀವನ, ವೈಧವ್ಯ ಹಾಗೆಯೇ ಸಾಹಿತ್ಯಕ ಕೊಡುಗೆಯನ್ನು ವಿಸ್ತಾರವಾಗಿ ಚರ್ಚಿಸಲಾಗಿದೆ.

ಅಧ್ಯಾಯ - ೬ ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಭಾಷಾ ಸ್ವರೂಪ

ಈ ಅಧ್ಯಾಯದಲ್ಲಿ ಭೀಮವ್ವನವರ ಕೀರ್ತನೆಗಳಲ್ಲಿ ಮೂಡಿಬಂದಿರುವ ಭಾಷಿಕ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಭೀಮವ್ವನವರು ಮೇಲ್ವರ್ಗದ ಜಾತಿಗೆ ಸೇರಿದವರಾಗಿದ್ದರೂ ಗ್ರಾಮ್ಯದ ಆಡು ನುಡಿಯನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ. ಹಾಗೆಯೇ ಇನ್ನಿತರ ದಾಸರಲ್ಲಿಲ್ಲದ ಮಹಿಳೆಯರಿಗೆ ವಿಶೇಷವಾಗಿ ಸಂಬಂಧಿಸಿದ ಸಾಂಸ್ಕೃತಿಕ ಆಚರಣೆಗಳ ವಿಷಯವನ್ನು ಕೀರ್ತನೆಗಳಲ್ಲಿ ಹೇಳಿರುವುದು ವಿಶೇಷವೇ ಸರಿ.

ಅಧ್ಯಾಯ - ೭ ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಸಮಾಜೋ-ಭಾಷಿಕ ಆಯಾಮಗಳು

ಈ ಅಧ್ಯಾಯವು ಸಂಶೋಧನೆಯ ಕೇಂದ್ರಬಿಂದುವಾಗಿದೆ. ಹರಪನಳ್ಳಿ ಭೀಮವ್ವನವರಲ್ಲಿ ಕೀರ್ತನೆಗಳಲ್ಲಿ ಮೂಡಿಬಂದಿರುವ ಗಾದೆಗಳನ್ನು ನುಡಿಗಟ್ಟುಗಳನ್ನು, ಬೈಯ್ಗುಳುಗಳನ್ನು, ಉಡುಗೆ, ತೊಡುಗೆಗಳನ್ನು, ಸಂಬಂಧವಾಚಿಗಳನ್ನು ಆಹಾರದ ಬಗೆಯನ್ನು, ಅನ್ಯದೇಶಿ ಪದಗಳ ಬಳಕೆಯನ್ನು ಕುರಿತು ಅವುಗಳ

ಸಾಮಾಜಿಕ ಹಿನ್ನೆಲೆಯ ಮಹತ್ವದ ಜೊತೆಗೆ ವಿವರವಾಗಿ ಚರ್ಚಿಸಲಾಗಿದೆ. ಉಡುಗೆ ತೊಡುಗೆಯ ವಿಷಯಕ್ಕೆ ಹಾಗೂ ಆಹಾರದ ವಿಷಯಕ್ಕೆ ಸಂಬಂಧಿಸಿದ ಹಾಗೆ ಹೇಳುವುದಾದರೆ ಬೇರಾವ ದಾಸರಲ್ಲೂ ಮೂಡಿ ಬರದಷ್ಟು ಹರಪನಹಳ್ಳಿ ಭೀಮವ್ವನವರ ಕೃತಿಗಳಲ್ಲಿ ವೈವಿಧ್ಯವಾಗಿ ಮೂಡಿ ಬಂದಿರುವುದನ್ನು ಸಹ ಚರ್ಚಿಸಲಾಗಿದೆ.

ಅಧ್ಯಾಯ - ೮ ಸಮಾರೋಪ

ಇಲ್ಲಿ ಇಡೀ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ. ಇಂತಹ ಭೀಮವ್ವನವರ ಕೀರ್ತನೆಗಳ ಮೇಲಿನ ಭಾಷಿಕ ಅಧ್ಯಯನ ಕುರಿತ ಮೊದಲನೇ ಅಧ್ಯಯನವಾಗಿದ್ದು ಒಂದು ಸಮಾಜದ ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ ವಿವರಗಳನ್ನು ಕಟ್ಟಿಕೊಡುತ್ತದೆ.

ಅನುಬಂಧದಲ್ಲಿ

ಕ್ಷೇತ್ರಕಾರ್ಯಕ್ಕೆ ತೆರಳಿದ ಸಂದರ್ಭದಲ್ಲಿ ದೊರೆತ ಅಪ್ರಕಟಿತ ಎಂಟು ಕೀರ್ತನೆಗಳನ್ನು ಸಂಗ್ರಹಿಸಿಕೊಡಲಾಗಿದೆ.

ಅಧ್ಯಾಯ - ಎರಡು

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ - ಎರಡು

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅದೆಷ್ಟೋ ಚೇತನ ಯುಕ್ತ ಭಕ್ತಿ ಕವಿಗಳು ಎಲೆ ಮರೆಯ ಕಾಯಿಯಂತೆ ಹಾಗೆ ಉಳಿದುಬಿಟ್ಟಿದ್ದಾರೆ. ಸಾಹಿತ್ಯ ಚರ್ಚೆಯ ಮುಖ್ಯವಾಹಿನಿಗೆ ಬಾರದೆ ವಿದ್ವಾಂಸರ ಅನಾದರಕ್ಕೆ ಒಳಗಾಗಿದ್ದಾರೆ. ಅವರ ಸಾಹಿತ್ಯವಂತೂ ದೂರವೇ ಉಳಿದುಬಿಟ್ಟಿದೆ. ಈ ನಿಟ್ಟಿನಲ್ಲಿ ಹರಿದಾಸ ಪಂಥದಲ್ಲಿ ಬರುವ ಅನೇಕ ಮಹಿಳಾ ಕೀರ್ತನಕಾರರು ಸಹ ಅನಾದರಕ್ಕೆ ತುತ್ತಾಗಿದ್ದಾರೆ. ಅಂಥ ಅನೇಕ ಮಹಿಳಾ ಕೀರ್ತನಕಾರರಲ್ಲಿ ಹರಪನಹಳ್ಳಿ ಭೀಮವ್ವನವರು ಕೂಡ ಒಬ್ಬರು. ಯಾವುದೇ ಪ್ರಚಾರವಿಲ್ಲದೆ ಸಾಹಿತ್ಯ ಕ್ಷೇತ್ರದಿಂದ ದೂರವೇ ಉಳಿದಿದ್ದರೂ ಹರಪನಹಳ್ಳಿ ಭೀಮವ್ವನವರು ಚಿರಪರಿಚಿತರು. ಯಾಕೆಂದರೆ ಭೀಮವ್ವನವರು ಲಿಖಿತ ರೂಪದಲ್ಲಿ ಪರಿಚಯವಾಗುವುದಕ್ಕಿಂತ ಮುಖ್ಯವಾಗಿ ಮೌಖಿಕ ಹಾಡಿನ ರೂಪದಲ್ಲಿ ವೈದಿಕರ ಮನೆಯಲ್ಲಿ ನಿತ್ಯನೂತನವಾಗಿ ಚಿರಪರಿಚಿತರಾಗಿದ್ದಾರೆ. ಆದರೂ ಶ್ರೀನಿವಾಸ ಹಾವನೂರ ಅವರು ಹೇಳುವಂತೆ "ಭೀಮವ್ವನವರು ರಚಿಸಿದ ನಳಚರಿತ್ರೆ ಮೊದಲಬಾರಿಗೆ ೧೯೨೧ರಲ್ಲಿ ಬೆಂಗಳೂರಿನ ಶಾರದಾ ವಿಲಾಸ ಪ್ರೆಸ್‌ನವರು ಅದನ್ನು ಮುದ್ರಿಸಿ ಪ್ರಕಟಿಸಿದರು. ನಂತರ ಬಂದ ಕರ್ನಾಟಕ ಕವಿಚರಿತೆಯ ೩ನೆಯ ಸಂಪುಟದಲ್ಲಿ (೧೯೨೭) ೧೯ನೆಯ ಶತಮಾನದ ಹಲವಾರು ದಾಸರ ಹೆಸರಿವೆ. ಆದರೆ ಭೀಮವ್ವನ ಹೆಸರು ದಾಖಲಾಗಿಲ್ಲ. ೧೯೩೩ರಲ್ಲಿ ಪ್ರಕಟವಾಗಿದ್ದ ಸುಪ್ರಸಿದ್ಧ ಕರ್ಣಾಟಕ ಭಕ್ತಿ ವಿಜಯದಲ್ಲಿ ಅದೇ ದಶಕದ Mystic Teachings of Haridasa... ಎಂಬುದರಲ್ಲಿ ಹೇಳವನಕಟ್ಟೆ ಗಿರಿಯಮ್ಮ ಕಾಣಿಸಿಕೊಂಡಿದ್ದಾಳೆ; ಆದರೆ ಭೀಮವ್ವನವರ ಹೆಸರಿಲ್ಲ. ಮುಂದುವರೆದು ೧೯೬೫ರಲ್ಲಿ ಕರ್ನಾಟಕ ಹರಿದಾಸ ಸಾಹಿತ್ಯದ ಚರಿತ್ರೆಯ ಉದ್ಗ್ರಂಥವೊಂದು ಪ್ರಕಟವಾಯಿತು. ಅದರಲ್ಲೂ ಕೂಡ ಹರಪನಹಳ್ಳಿ ಭೀಮವ್ವನವರ ಹೆಸರು ಕಾಣುವುದಿಲ್ಲ."[೧]

[illegible]

[illegible]

[illegible]

[illegible]

ಶ್ರೀನಿವಾಸ ಹಾವನೂರ ಅವರು ತಿಳಿಸುವಂತೆ "ಸರೋಜಿನಿಮಹಿಷಿ ಅವರ 'ಕರ್ನಾಟಕ ಕವಯತ್ರಿಯರು' ಎಂಬ ಸಂಪ್ರಬಂಧದಲ್ಲಿ ಅವ್ವನವರ ಕಿರು ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಕರ್ಮವೀರ ಪತ್ರಿಕೆಯಲ್ಲಿ ಸರಿತಾ ಕುಸುಮಾಕರ ದೇಸಾಯಿಯವರು ಅವ್ವನವರ ಕುರಿತು ಕಿರುಪರಿಚಯವನ್ನು ಮಾಡಿಕೊಟ್ಟರು. ಮುಂದುವರಿದು ಅವರೇ 'ವಾಗಭೂಷಣ' ಎಂಬ ಪತ್ರಿಕೆಯ ವಾರ್ಷಿಕ ಸಂಪುಟದಲ್ಲಿ (೧೯೭೩) ಮತ್ತೊಂದು ಲೇಖನ ಬರೆದರು. ಗುಲಬರ್ಗ ಆಕಾಶವಾಣಿಯಲ್ಲಿ ಸಂಗೀತ ರೂಪಕವನ್ನು ಸಾದರಪಡಿಸಿ ೧೯೮೭ರಲ್ಲಿ ಅಖಿಲ ಭಾರತ ಮಟ್ಟದ ಪುರಸ್ಕಾರ ಪಡೆದರು. ೧೯೮೪ರಲ್ಲಿ ಅವ್ವನವರ ಹಾಡುಗಳ ಸಂಕಲನವನ್ನು ಹೊರ ತಂದರು. ಕೊನೆಯಲ್ಲಿ ೨೦೦೧ರಲ್ಲಿ 'ಹರಪನಹಳ್ಳಿ ಭೀಮವ್ವನವರ ಹಾಡುಗಳ ಒಂದು ಅಧ್ಯಯನ' ಕೃತಿಯನ್ನು ಹೊರತಂದರು."

ಭಕ್ತಿ ಪಂಥಕ್ಕೆ ಸೇರಿದ ಕವಯತ್ರಿಯರಲ್ಲಿ ಹರಪನಹಳ್ಳಿ ಭೀಮವ್ವನವರಿಗೆ ಪ್ರಮುಖ ಸ್ಥಾನವಿದೆ. ಹರಿದಾಸ ಪರಂಪರೆಯಲ್ಲಿ ಸಂಪ್ರದಾಯಿಕ ಆಚರಣೆಗಳಿಗೆ ಮಹತ್ವ ಕೊಟ್ಟು ಕೀರ್ತನೆಗಳನ್ನು ರಚಿಸಿದ್ದು ವಿಶೇಷವೇ. ಭೀಮೇಶ ಕೃಷ್ಣ ಎಂಬ ಅಂಕಿತನಾಮದೊಂದಿಗೆ ಅನೇಕ ಬಿಡಿ ಕೀರ್ತನೆಗಳನ್ನೂ ದೀರ್ಘವಾದ ಪುರಾಣದ ಹಿನ್ನೆಲೆಯುಳ್ಳ ಕಥನ ಕಾವ್ಯಗಳನ್ನೂ ರಚಿಸಿ ಮನೆಮಾತಾಗಿದ್ದಾಳೆ. ಭೀಮವ್ವನವರ ಕುರಿತು ಇದುವರೆಗೂ ಅನೇಕ ಲೇಖನಗಳು, ಕೃತಿಗಳು, ಪ್ರಕಟವಾಗಿವೆ. ಹಾಗೆ ಪ್ರಕಟಗೊಂಡ ಕೃತಿಗಳ ಮಹತ್ವವನ್ನು ಕುರಿತು ಈ ಅಧ್ಯಾಯದಲ್ಲಿ, ವಿವೇಚಿಸಲಾಗುವುದು.

ಮುಖ್ಯವಾಗಿ ಹರಪನಹಳ್ಳಿ ಭೀಮವ್ವನವರ ಕುರಿತು ಮಾಡಲಾಗಿರುವ ಕೃತಿಗಳ ಅಧ್ಯಯನ ಸಮೀಕ್ಷೆಯಲ್ಲಿ ಎರಡು ವಿಧಾನವನ್ನು ಅನುಸರಿಸಲಾಗಿದೆ. ಮೊದಲನೆಯದಾಗಿ ಭೀಮವ್ವನವರನ್ನೇ ಕೇಂದ್ರವಾಗಿಟ್ಟುಕೊಂಡು ಹೊರಬಂದಿರುವ ಕೃತಿಗಳ ಸಮೀಕ್ಷೆ ಎರಡನೆಯದಾಗಿ ಭೀಮವ್ವನವರನ್ನು ಸಾಹಿತ್ಯಿಕವಾಗಿ ಇಲ್ಲವೆ ಪರಿಚಯಾತ್ಮಕ ರೂಪದಲ್ಲಿ ಮೂಡಿ ಬಂದಿರುವ ಲೇಖನಗಳ ಸಮೀಕ್ಷೆ. ಈ ಮೂಲಕ ಕೃತಿಗಳು ಒಳಗೊಂಡಿರಬಹುದಾದ ಆಶಯ, ಅಭಿವ್ಯಕ್ತಿಯನ್ನು ಸಮೀಕ್ಷೆ ಮಾಡಲಾಗುವುದು.

ಭೀಮವ್ವನವರ ಕುರಿತು ಬಂದಿರುವ ಕೃತಿಗಳು

೧. ಹರಪನಹಳ್ಳಿ ಭೀಮವ್ವನ ಹಾಡುಗಳು	ಟಿ.ಎನ್.ನಾಗರತ್ನ	೧೯೮೪
೨. ಮುತ್ತಿನಹಾರ, ಹರಪನಹಳ್ಳಿ ಭೀಮವ್ವ	ಜಯಲಕ್ಷ್ಮೀ ಮಂಗಳಮೂರ್ತಿ	೧೯೯೮
೩. ಹರಪನಹಳ್ಳಿ ಭೀಮವ್ವ	ಜಯಲಕ್ಷ್ಮೀ ಮಂಗಳಮೂರ್ತಿ	೧೯೯೯
೪. ಹರಪನಹಳ್ಳಿ ಭೀಮವ್ವನವರ ಹಾಡುಗಳು ಒಂದು ಅಧ್ಯಯನ	ಸರಿತ ಕುಸುಮಾಕರ ದೇಸಾಯಿ	೨೦೦೦
೫. ಹೂವ ಕೊಡೆ ತಾಯಿ	ಜಿ.ಪವನಕುಮಾರ	೨೦೦೨
೬. ಸಮಗ್ರ ದಾಸ ಸಾಹಿತ್ಯ	ಟಿ.ಎನ್.ನಾಗರತ್ನ	೨೦೦೩
೭. ಮರೆಯದೆ ಸಲಹೆನ್ನನು	ತಟ್ಟಿವೆಂಕೋಬರಾವ್	೨೦೦೪
೮. ಕನ್ನಡದ ಹೆಮ್ಮೆಯ ಕವಯತ್ರಿ ಹರಪನಹಳ್ಳಿ ಭೀಮವ್ವ	ಜಯಸಿಂಹ	೨೦೦೭

ಭೀಮವ್ವನವರ ಕುರಿತು ಬಂದಿರುವ ಲೇಖನಗಳು

೧. ಭೀಮೇಶಕೃಷ್ಣ ಭಜನಾಮೃತ ೧೯೯೬

೨. ಹರಪನಹಳ್ಳಿ ಭೀಮವ್ವ ಹಲವು ಹನ್ನೊಂದು ಹರಪನಹಳ್ಳಿ ಕುಂ.ಬಾ.ಸದಾಶಿವಪ್ಪ ೨೦೦೨

೩. ಕವಯತ್ರಿ ಭೀಮದೇವಿ ಧ್ರುವನಾರಾಯಣ

೩. ಹರಪನಹಳ್ಳಿ ಭೀಮವ್ವನ ಹಾಡುಗಳು

ಸೂಪಶಾಸ್ತ್ರ ವೈದ್ಯಶಾಸ್ತ್ರದ ಹಿನ್ನೆಲೆಯಲ್ಲಿ ಹರಿಹರಶ್ರೀನಿವಾಸರಾವ್

೪. ಶ್ರೀಮದ್ ಭಾಗವತ ಋಣ ಮತ್ತು ವೃದ್ಧಿ ಮಾನಕರಿ ಶ್ರೀನಿವಾಸಚಾರ್

ಮೇಲಿನ ಎಲ್ಲಾ ಕೃತಿಗಳಲ್ಲಿ ಮತ್ತು ಲೇಖನಗಳಲ್ಲಿ ಭೀಮವ್ವನವರ ಕುರಿತು ಜನನ, ಮರಣ, ಕೀರ್ತನೆ ರಚಿಸಿದ ಸಂದರ್ಭ, ಅವರು ಅನುಭವಿಸಿದ ನೋವು, ಇನ್ನೂ ಮುಂತಾದ ಮಹತ್ವಪೂರ್ಣ ದಾಖಲೆಯನ್ನು ಒದಗಿಸುತ್ತವೆ. ಇವುಗಳ ಹಿನ್ನಲೆಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

'ಹರಪನಹಳ್ಳಿ ಭೀಮವ್ವನ ಹಾಡುಗಳು' ಎನ್ನುವ ಕೃತಿ ಟಿ.ಎನ್.ನಾಗರತ್ನರವರ ಸಂಪಾದಿತ ಕೃತಿಯಾಗಿದೆ. ೧೯೮೪ರಲ್ಲಿ ಮುದ್ರಣ ರೂಪ ಪಡೆದು ಹೊರಬಂದಿತು. ಮೌಖಿಕ ಮತ್ತು ಹಸ್ತಪ್ರತಿಯ ರೂಪದಲ್ಲಿದ್ದ ಕೀರ್ತನೆಗಳನ್ನು ಮೊದಲ ಬಾರಿಗೆ ಸಂಪಾದನೆ ಮಾಡಿದರು. ಮುದ್ರಣ ರೂಪ ಹೊರ ಬರುವ ಮೊದಲು ಭೀಮವ್ವನ ಹಾಡುಗಳು ಸಾಹಿತ್ಯದ ಮುಖ್ಯವಾಹಿನಿಗೆ ಬಂದಿರಲಿಲ್ಲ. ಕೇವಲ ವಂಶಸ್ಥರ, ವೈದಿಕ ಸಂಪ್ರದಾಯಸ್ಥರ ಬಾಯಿಯಲ್ಲಿ ಮೌಖಿಕ ಹಾಡಿನ ರೂಪಗಳಾಗಿ, ಹಸ್ತಪ್ರತಿಗಳಾಗಿ ಇದ್ದವು. ಟಿ.ಎನ್.ನಾಗರತ್ನವರ ಸಂಪಾದಿತ ಈ ಕೃತಿಯಲ್ಲಿ ೧೪೩ ಬಿಡಿ ಬಿಡಿಯಾದ ಕೀರ್ತನೆಗಳು ಮತ್ತು ೬ ದೊಡ್ಡ ಹಾಡು ಅಥವಾ ದೀರ್ಘ ಕಥನ ಕಾವ್ಯಗಳನ್ನು ಕಾಣಬಹುದು. ಕೆಲವೊಂದು ಕೀರ್ತನೆಗಳಿಗೆ ಪಾಠಂತರದ ಉಲ್ಲೇಖವನ್ನು ಸಹ ಅಡಿಟಿಪ್ಪಣಿಯಲ್ಲಿ ನೀಡಿದ್ದಾರೆ. ಅದಕ್ಕೂ ಪೂರ್ವದಲ್ಲಿ ಟಿ.ಎನ್. ನಾಗರತ್ನರವರು ಸೊಗಸಾದ ಸುಮಾರು ನಲ್ವತ್ತು ಪುಟಗಳಷ್ಟು ಭೀಮವ್ವನವರ ಕುರಿತು ಮಾಹಿತಿಯನ್ನು ನೀಡಿದ್ದಾರೆ. ಈ ವಿಸ್ತಾರ ಮಾಹಿತಿಯಲ್ಲಿ ಭೀಮವ್ವನವರ ಬಾಲ್ಯ ಜೀವನ, ದಾಂಪತ್ಯ ಜೀವನ, ವೈಧವ್ಯ ಪ್ರಾಪ್ತಿಯಾದ ಜೀವನದ ಸ್ಥಿತಿಗತಿಯನ್ನು ತಿಳಿಯಬಹುದು. ಬಹುಶಃ ಮೊದಲ ಬಾರಿಗೆ ಇಷ್ಟು ದೀರ್ಘವಾಗಿ ಅವ್ವನವರನ್ನು ಪರಿಚಯಿಸುವ ಲೇಖನವಾಗಿರಬೇಕು.

ಭೀಮವ್ವನವರು ಜನಿಸುತ್ತಲೇ ಪವಾಡ ಸದೃಶ ಶಿಶುವಾಗಿ ಜನಿಸಿದರು. ಮನೆಯು ಕೂಡ ಭಕ್ತಿಮಯವಾದ ವಾತವರಣದಿಂದ ಕೂಡಿತ್ತು. ಭೀಮವ್ವನವರ ತಾತನಾದ ವೆಂಕಪ್ಪಚಾರ್ಯರು ಸಹ ವಿದ್ವಾಂಸರಾಗಿದ್ದರು. ಈ ಎಲ್ಲ ಭಕ್ತಿಮಯ ಸಾಮಿಪ್ಯ ಸಹಜವಾಗಿ ಭೀಮವ್ವನವರು ಸೃಜನ ಶೀಲ ಕವಿಯಾಗಿ ಮೂಡಿಬರುವುದಕ್ಕೆ ಸಾಧ್ಯವಾಯಿತು. ಭೀಮವ್ವನವರು ಬಾಲ್ಯದಲ್ಲಿ ಅಗಾಧ ನೆನಪಿನ ಶಕ್ತಿಯನ್ನು ಹೊಂದಿದ್ದ ಹಲವಾರು ಸಂಗತಿಗಳನ್ನು ಅನೇಕ ದೃಷ್ಟಾಂತಗಳ ಮೂಲಕ ನೀಡಲಾಗಿದೆ.

ಹಾಗೆಯೇ ಭೀಮವ್ವ ರಚಿಸಿರುವ ಕೃತಿಯಲ್ಲಿ ಅಡಕಗೊಂಡಿರುವ ವರ್ಣನಾ ಕುಶಲತೆ, ಸಂಭಾಷಣೆ, ಚತುರತೆ, ಭಕ್ತಿ ಪ್ರತಿಪಾದನೆ, ಸಂಪ್ರದಾಯ ಪ್ರಿಯತೆ, ದಶಾವತಾರ ವರ್ಣನೆ, ಸಂದರ್ಶಿಸಿದ ತೀರ್ಥಕ್ಷೇತ್ರಗಳ

[illegible]

ವಿವರಣೆಯನ್ನು ಉದಾಹರಣೆ ಮೂಲಕ ವಿವರಿಸಿದ್ದಾರೆ. ಅವ್ವನವರು ನಂಬಿದ್ದ ಮತ್ತು ಹಾಕಿಕೊಟ್ಟ ಸಂಪ್ರದಾಯತೆ ಇಂದಿಗೂ ಆಚರಣೆಯಲ್ಲಿದೆ ಎನ್ನುವುದಕ್ಕೆ ಲೇಖಕಿ ಹೇಳಿರುವ ಮಾತುಗಳೇ ಸಾಕ್ಷಿಯಾಗುತ್ತವೆ. 'ಶ್ರೀಹರಿಯ ದಯದಿಂದ ಒಂದುಗೂಡಿದ ನಳದಮಯಂತಿಯರ ಕಥೆಯನ್ನು ಭಕ್ತಿಯಿಂದ ಕೇಳಿದರೆ ಕೆಟ್ಟ ಕಲಿಬಾಧೆ ಬರದು ನಾಶವಾಗುವುದು' ಎಂಬ ಫಲಸ್ತುತಿಯೊಂದಿಗೆ ಹಾಡು ಮುಗಿಯುತ್ತದೆ. ಈ ನಂಬಿಕೆ ಇಂದಿಗೂ ಅವ್ವನವರ ಮನೆತನದವರಲ್ಲಿದೆ. ಕಷ್ಟ ಬಂದಾಗ ದೇವರಿಗೆ ತುಪ್ಪದ ದೀಪ ಹಚ್ಚಿಟ್ಟು ನಳ ಚರಿತ್ರೆಯನ್ನು ಹಾಡುತ್ತಾರೆ.

ಮುಯ್ಯದ ಹಾಡು, ಪತಿದಾನ ಕೊಟ್ಟಹಾಡು, ಶುಕುಂತಲೆ-ದುಷ್ಯಂತ ಮಹಾರಾಜನ ಹಾಡು, ರತಿಕಲ್ಯಾಣ, ನಳಚರಿತ್ರೆ, ಸುಭದ್ರಾ ಕಲ್ಯಾಣ, ಎಂಬ ದೀರ್ಘ ಹಾಡುಗಳ ವಸ್ತು ವಿಶಿಷ್ಟತೆಯನ್ನು ಗುರುತಿಸಿರುವುದು ಮನಗಾಣಬಹುದು.

ಕೃತಿಯ ಕೊನೆಯ ಭಾಗವಾದ ಅನುಬಂಧ ಮತ್ತು ಟಿಪ್ಪಣಿ ವಿಭಾಗದಲ್ಲಿ ಅನೇಕ ಮಹತ್ವಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಭೀಮವ್ವನವರ ಕೀರ್ತನೆಯಲ್ಲಿ ಬಳಕೆಯಾದ ಪುರಾಣದ ಸಂಗತಿಗಳಿಗೆ ನೀಡಿದ ವಿವರಣೆಗಳು ಹಾಡುಗಳನ್ನು ಸ್ಪಷ್ಟವಾಗಿ ತಿಳಿಯಲು ಸಹಾಯಕಾರಿಯಾಗಿವೆ. ಕೀರ್ತನೆಯಲ್ಲಿ ಬಳಕೆಗೊಂಡ ಗ್ರಾಮ್ಯ ಪದಗಳಿಗೆ ಅರ್ಥ ನೀಡಿರುವುದು, ವಿವಿಧ ಬಗೆಯ ಉಡುಗೆ ತೊಡುಗೆ, ಆಭರಣಗಳ ಪಟ್ಟಿಯನ್ನು ನೀಡಿರುವುದು, ವಿವಿಧ ಬಗೆಯ ಶಾಕಾರದ ಪಟ್ಟಿಯನ್ನು ನೀಡಿರುವುದು ಕೀರ್ತನೆಗಳ ಗ್ರಹಿಕೆಗೆ ತುಂಬಾ ಸಹಾಯವಾಗಿದೆ.

ಹರಪನಹಳ್ಳಿ ಭೀಮವ್ವ

ಈ ಕಿರು ಗ್ರಂಥವನ್ನು ಸಿದ್ಧಪಡಿಸಿದವರು ಶ್ರೀಮತಿ ಜಯಲಕ್ಷ್ಮೀ ಮಂಗಳಮೂರ್ತಿಯವರು. ೩೧ ಕೀರ್ತನೆಗಳ ಜೊತೆಗೆ ಸುಮಾರು ಎಂಟು ಪುಟಗಳಷ್ಟು ಭೀಮವ್ವನವರ ಕುರಿತು ಪರಿಚಯಾತ್ಮಕ ಟಿಪ್ಪಣಿಯಿದೆ. ಆ ಕಿರು ಟಿಪ್ಪಣಿಯಲ್ಲಿ ಭೀಮವ್ವನವರ ಜನನ-ಮರಣ, ಕಾವ್ಯದ ಮಹತ್ವ ಕುರಿತು ಚರ್ಚಿಸಿದ್ದಾರೆ. ಮಾಹಿತಿ ಪ್ರಧಾನ ನೆಲೆಯಲ್ಲಿ ಮೂಡಿಬಂದ ಪುಸ್ತಕವಿದು.

ಹರಪನಹಳ್ಳಿ ಭೀಮವ್ವ

ಗುಲ್ಬರ್ಗಾ ವಿಶ್ವವಿದ್ಯಾಲಯವು ಹಮ್ಮಿಕೊಂಡ 'ಪ್ರಚಾರ ಉಪನ್ಯಾಸ ಗ್ರಂಥಮಾಲೆ'ಯ ಯೋಜನೆಯ ಅಡಿಯಲ್ಲಿ ಸಿದ್ಧಗೊಂಡ ಪುಸ್ತಕವಿದು. ಈ ಕಿರುಕೃತಿಯನ್ನು ರಚಿಸಿದವರು ಶ್ರೀಮತಿ ಜಯಲಕ್ಷ್ಮಿ ಮಂಗಳಮೂರ್ತಿಯವರು. ಇಲ್ಲಿಯೂ ಸಹ ಭೀಮವ್ವನವರ ಕುರಿತು ಪರಿಚಯಾತ್ಮಕ ಟಿಪ್ಪಣಿ ಮೂಡಿಬಂದಿದೆ.

ಹರಪನಹಳ್ಳಿ ಭೀಮವ್ವನವರ ಹಾಡುಗಳು ಒಂದು ಅಧ್ಯಯನ

ಸಂಪೂರ್ಣವಾಗಿ ಈ ಕೃತಿಯು ಭೀಮವ್ವನವರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುವ ಮಹತ್ವಪೂರ್ಣ ಕೃತಿಯಾಗಿದೆ. ಲೇಖಕಿ ಸರಿತಾ ಕುಸುಮಾಕರ ದೇಸಾಯಿಯವರು ಬಹುಶ್ರದ್ಧೆಯಿಂದ, ಬಹು ಆಸ್ಥೆಯಿಂದ ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ.

ಸರಿತಾಕುಸುಮಾಕರ ದೇಸಾಯಿಯವರು ಹತ್ತು ಅಧ್ಯಾಯಗಳ ಮೂಲಕ ವಿಷಯವನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. ಈ ಕೃತಿಯು ಅನೇಕ ಹೊಸ ಹೊಸ ಹೊಳಹುಗಳನ್ನು ಕೊಡುತ್ತದೆ. ಯಾವ ಯಾವ ಸಂದರ್ಭದಲ್ಲಿ ಕೀರ್ತನೆಗಳು ರಚನೆಯಾದವು, ಅವುಗಳ ಹಿಂದಿನ ತಾತ್ವಿಕತೆ ಏನು? ಎಂಬುದನ್ನು ಸಹ ಚರ್ಚಿಸಿಲಾಗಿದೆ. ಶ್ರೀ ಕೃಷ್ಣನು ತನ್ನ ತಂಗಿಯನ್ನು ಪಾರ್ಥನಾದ ಅರ್ಜುನನಿಗೆ ಧಾರೆ ಎರೆದುಕೊಟ್ಟಿದ್ದು ಅಂದಿನ ಬಹುಪತ್ನಿತ್ವ ಪದ್ಧತಿಯನ್ನು ತಿಳಿಸುತ್ತದೆ.

ಕುಟುಂಬದಲ್ಲಿನ ದಾಂಪತ್ಯ ಕಲಹಗಳನ್ನು ಭಕ್ತಿಯ ಮೂಲಕ, ಬಾಗಿಲು ಕಟ್ಟುವ ಹಾಡಿನ ಮೂಲಕ ವ್ಯಕ್ತಗೊಳಿಸಲಾಗಿದೆ. ಸ್ತ್ರೀಯರ ವೇಷಭೂಷಣ, ತೀರ್ಥಕ್ಷೇತ್ರಕ್ಕೆ ತೆರಳಿಸಿದ ಸಂದರ್ಭದಲ್ಲಿ ಅವ್ವನವರ ಮನಸ್ಥಿತಿ, ಶಕುಂತಲಾ, ಸುಭದ್ರೆ, ಶನಿವಾರ, ಶುಕ್ರವಾರದ ಹಾಡಿನಲ್ಲಿ ಬರುವ ಪಾತ್ರಗಳ ಮನಸ್ಥಿತಿಯನ್ನು ಭೀಮವ್ವನವರು ಹಾಡಿನ ಮೂಲಕ ಹೇಳಿರುವುದನ್ನು ಲೇಖಕಿಯು ಸಮರ್ಥವಾಗಿ ವಿವೇಚಿಸಿದ್ದಾರೆ. ಆ ವಿವೇಚನೆಯು ಭಕ್ತಿಯ ಸಂಪ್ರದಾಯದ ಗೆರೆಯನ್ನು ದಾಟಿಲ್ಲವೆಂದು ಹೇಳಬಹುದು.

ಅನುಶಾಸನ ಪರ್ವದಲ್ಲಿ ಭೀಷ್ಮಾಚಾರ್ಯರು ಧರ್ಮರಾಯನಿಗೆ ದ್ರವ್ಯವಿಲ್ಲದರು ವ್ರತನೇಮಗಳನ್ನು ಮಾಡಬೇಕು ಎಂಬ ಮಾತನ್ನು ಗ್ರಹಿಸಿ ಭೀಮವ್ವನವರು ಸಹ ಅಖಂಡವ್ರತವನ್ನು ಕೈಗೊಂಡ ವಿಚಾರ ಕಾಣಬಹುದು. ಇಂಥ ಕಾಠಿಣ್ಯ ಭರಿತವಾದ ವ್ರತ ನೇಮಗಳನ್ನು ಕೈಗೊಂಡಿದ್ದರಿಂದಲೇನೊ ಭೀಮವ್ವನವರು ಸಂಪೂರ್ಣವಾಗಿ ಭಕ್ತಿಯ ಕಡೆಗೆ ವಾಲಿದ್ದಾರೆ. ಆದ್ದರಿಂದ ಬೇರೆ ದಾಸರಿಗೆ ಹೋಲಿಸಿದರೆ ಭೀಮವ್ವನವರಲ್ಲಿ ಸಂಪ್ರದಾಯ, ನೇಮ, ವ್ರತ, ನಿಷ್ಠೆಗೆ ಸಂಬಂಧಿಸಿದಂತೆ ಮುಯ್ಯದ ಹಾಡು, ಸಂಪತ್ತು ಶುಕ್ರವಾರದ ಹಾಡು, ಶನಿವಾರದ ಹಾಡು, ಸುಧಾಮನ ಹಾಡು, ವೆಂಕಟೇಶ ಮಹಾತ್ಮ್ಯೆ, ಇನ್ನೂ ಮುಂತಾದ ಕೀರ್ತನೆಗಳು ಅಧಿಕ ಸಂಖ್ಯೆಯಲ್ಲಿವೆ.

ಭೀಮವ್ವನವರು ಹಾಡು ರಚಿಸುವುದಕ್ಕೆ ಬ್ರಾಹ್ಮಣ ಹೆಂಗಸರು ಹಾಡುತ್ತಿದ್ದ ಹಾಡುಗಳೇ ಪ್ರೇರಣೆ ಮತ್ತು ಪ್ರಭಾವ ಎನ್ನಬಹುದು. ಅವ್ವನವರ ಅನೇಕ ದೀರ್ಘ ಹಾಡುಗಳಲ್ಲಿ ನಳ ಚರಿತ್ರೆಯು ಒಂದಾಗಿದೆ. ಮೂಲದಲ್ಲಿರುವ ನಳಚರಿತ್ರೆಗೂ, ಕನಕದಾಸರ ನಳಚರಿತ್ರೆಗೂ ಹೋಲಿಸಿದಾಗ ಭೀಮವ್ವನವರ ನಳಚರಿತ್ರೆಯು ಭಿನ್ನವಾಗಿ ಮೂಡಿಬಂದಿದೆ. ಭೀಮವ್ವನವರ ಸೃಜನ ಶೀಲತೆಯ ಗಟ್ಟಿತನವನ್ನು ಕಾಣಬಹುದು. ಸಂಪ್ರದಾಯ ಮನಸ್ಸಿನ ಸಂಪ್ರದಾಯದ ವಲಯದಲ್ಲಿ ಬೆಳೆದು ಬಂದಿರುವ ಭೀಮವ್ವನಿಗೆ "ಏಕಪತ್ನಿ ವ್ರತ ಹಾಗೂ ಪಾತಿವ್ರತ್ಯದ ಮಹಿಮೆಯನ್ನು ಕಾಂತಸಮ್ಮಿತವಾದ ರೀತಿಯಲ್ಲಿ ವಿವರಿಸಲು ಅದರಲ್ಲೂ ಹೆಣ್ಣು ಮಕ್ಕಳ ಮನಮುಟ್ಟುವಂತೆ ಈ ಸದ್ಗುಣಗಳು ಅವರಲ್ಲಿ ಮನೆ ಮಾಡುವಂತೆ ಮಾಡಲು ಈ ಕಥೆಗಿಂತ ಸೂಕ್ತವಾದ ಕಥೆ ಬೇರೊಂದಿಲ್ಲವೆಂದು" ಅನಿಸಿರಬಹುದೆಂಬುದು ಲೇಖಕಿಯ ಚರ್ಚೆಯಾಗಿದೆ.

ಭೀಮವ್ವ ನಳಚರಿತ್ರೆಯನ್ನು ರಚಿಸುವಾಗ ಅನೇಕ ಕಡೆಗಳಲ್ಲಿ ಬದಲಾವಣೆಯನ್ನು ತಂದುಕೊಂಡಿದ್ದಾರೆ. ಅವರು ತಂದು ಕೊಂಡ ಬದಲಾವಣೆಗಳು ಎಲ್ಲಿಯೂ ಮೂಲಕಥೆಗೆ ಧಕ್ಕೆಯುಂಟಾಗಿಲ್ಲ.

ಕೃತಿಯ ಕೊನೆಯ ಭಾಗದಲ್ಲಿ ಅಲಂಕಾರ, ಆಭರಣಗಳ ಕುರಿತು ಅನೇಕ ಚಿತ್ರಗಳಿವೆ. ಒಂದೊಂದು ಸಾರಿ ನಮಗೆ ಆಭರಣದ ಹೆಸರು ತಿಳಿದಿರುತ್ತದೆ ಆಭರಣವನ್ನು ಸೂಚಿಸಲಾಗುವುದಿಲ್ಲ. ಆಭರಣವನ್ನು

ನೋಡಿರುತ್ತೇವೆ ಆದರೆ ಆಭರಣದ ಹೆಸರನ್ನು ಹೇಳಲಾಗುವುದಿಲ್ಲ. ಆದರೆ ಈ ಭಾಗದಲ್ಲಿ ಅವುಗಳ ಹೆಸರಿನ ಉಲ್ಲೇಖದೊಂದಿಗೆ ಛಾಯಚಿತ್ರಗಳ ಮೂಲಕ ತೋರಿಸಿರುವುದು ವಿಶೇಷವೇ ಸರಿ. ಒಟ್ಟಾರೆಯಾಗಿ ಹೇಳುವುದಾದರೆ ಹರಪನಹಳ್ಳಿ ಭೀಮವ್ವನವರ ಕುರಿತು ತಿಳಿಯಬಯಸುವವರಿಗೆ ಉತ್ತಮ ಆಕರ ಗ್ರಂಥವೆಂದು ಹೇಳಬಹುದು.

ಹರಪನಹಳ್ಳಿ ಭೀಮವ್ವನವರ ಜೀವನ ಮತ್ತು ಕೃತಿಗಳು

ಸಂಶೋಧನ ಕೃತಿಯ ಸಂಕ್ಷಿಪ್ತ ರೂಪವೇ 'ಹೂವ ಕೊಡೆ ತಾಯಿ.' ಜಿ.ಪವನ್‌ಕುಮಾರ್‌ರವರ ಎಂ.ಫಿಲ್. ಪದವಿಯ ಸಂಶೋಧನಾ ಕೃತಿಯಾಗಿದೆ. ದಾಸ ಸಾಹಿತ್ಯದಲ್ಲಿ ಮಹಿಳಾ ಕೀರ್ತನಗಾರ್ತಿಯರ ಸಂಖ್ಯೆ ಕಡಮೆ ಎಂದೇ ಹೇಳಬಹುದು. ಆದರೂ ದಾಸ ಸಾಹಿತ್ಯದಲ್ಲಿ ಮಹಿಳೆಯರು ಕೀರ್ತನೆ ರಚಿಸುವುದಕ್ಕೆ ಸಾಮಾಜಿಕ ಹಿನ್ನಲೆಯನ್ನು ಲೇಖಕರು ನಿಖರವಾಗಿ ಗುರುತಿಸಿದ್ದಾರೆ. "ಬದುಕುವುದೇ ದುಸ್ತರವೆನಿಸಿರುವ ಸಮಯದಲ್ಲಿ ಹುಟ್ಟಿ ಬಂದ ಆಶಾಗೀತೆಗಳಾಗಿವೆ ಈ ಕೀರ್ತನೆಗಳು" ಎನ್ನುವ ಮಾತುಗಳು ವೈದಿಕ ಮನೆತನದ ಅದರಲ್ಲೂ ವೈಧವ್ಯ ಪ್ರಾಪ್ತಿಯಾದ ಹೆಂಗಸರ ಜೀವನದ ಸ್ಥಿತಿ-ಗತಿಗಳನ್ನು ತೋರಿಸಿಕೊಡುತ್ತವೆ. ಬಹುಶಃ ಈ ಹೇಳಿಕೆಯನ್ನು ಗಮನಿಸಿದಾಗ ಕೇವಲ ಹರಪನಹಳ್ಳಿ ಭೀಮವ್ವನವರ ಕುರಿತು ಹೇಳಿದ್ದಲ್ಲ ಬದಲು ಇಡೀ ಹರಿದಾಸ ಸಾಹಿತ್ಯದಲ್ಲಿ ಕಾಣಬರುವ ಮಹಿಳಾ ಹರಿದಾಸರ ಕೀರ್ತನೆಗಳನ್ನು ಅನುಲಕ್ಷಿಸಿ ಚರ್ಚಿಸಿದ್ದಾರೆ ಎಂದು ಹೇಳಬಹುದು.

ಮನೆಯ ವಾತಾವರಣ ದಟ್ಟವಾಗಿ ಪ್ರಭಾವ ಬೀರಿದೆ ಎನ್ನುವುದನ್ನು ದಿವಸೀಗೌರಿ, ಮಂಗಳಗೌರಿ, ಸ್ವರ್ಣಗೌರಿ, ವರಮಹಾಲಕ್ಷ್ಮೀ, ಮುಂತಾದ ಹಬ್ಬಗಳ ಮತ್ತು ವ್ರತಗಳ ಕುರಿತು ಬಂದಿರುವ ಹಾಡುಗಳು ಸಾರುತ್ತವೆ. ಸಂಪ್ರದಾಯದ ಹಾಡುಗಳು ಇನ್ನಿತರ ಹಾಡುಗಳಿಗಿಂತ ಹೆಚ್ಚು ಮತ್ತು ಬೇಗನೆ ಪ್ರಸಿದ್ಧಕ್ಕೆ ಬಂದವೆಂದರೆ "ತಮ್ಮೊಳಗಿನ ತಲ್ಲಣಗಳನ್ನು ಬದಿಗೊತ್ತಿ ಸಮಾಜದ ಏಳಿಗೆಗೆ, ಸಮಸ್ತ ವೃಂದಕ್ಕೆ ಒಳಿತನ್ನು ಬಯಸುವ ಸಂಪ್ರದಾಯದ ಹಾಡುಗಳು ಮುಖ್ಯ ಮಾಧ್ಯಮಗಳಾಗಿ ಪರಿವರ್ತಿತಗೊಂಡವು" ಹೀಗೆ ಲೇಖಕರು ಅನೇಕ ಪ್ರಮುಖ ಅಂಶಗಳನ್ನು ಚರ್ಚಿಸಿದ್ದಾರೆ.

ಮರೆಯದೆ ಸಲಹೆನ್ನನು ಎನ್ನುವ ಕೃತಿಯನ್ನು ರಚನೆ ಮಾಡಿದವರು ತಟ್ಟಿ ವೆಂಕೋಬರಾವ್ ಅವರು. ಈ ಕೃತಿಯ ಮುಖ್ಯ ವಿಶೇಷವೇನೆಂದರೆ ಹರಪನಹಳ್ಳಿ ಭೀಮವ್ವನವರ ಜೀವನದ ವಿವರಗಳನ್ನು ಕಾವ್ಯರೂಪದಲ್ಲಿ ಕಟ್ಟಿಕೊಡಲಾಗಿದೆ. ಸುಮಾರು ೧೦೮ ನುಡಿಗಳಲ್ಲಿ ಭಾಮಿನಿ ಷಟ್ಪದಿಯಲ್ಲಿ ಭೀಮವ್ವನವರ ಕುರಿತು ಚರಿತ್ರೆ ಹೊರ ಹೊಮ್ಮಿದೆ.

'ಅವ್ವನವರ ಕೃತಿಗಳಲ್ಲಿ ತತ್ತ್ವವಾದ' ಎಂಬ ಲೇಖನದಲ್ಲಿ ಮಧ್ವಾಚಾರ್ಯರ ತತ್ವಗಳಿಗೂ ಮತ್ತು ಭೀಮವ್ವನವರ ಹಾಡುಗಳಿಗೂ ಇರುವ ಸಾಮ್ಯತೆಯನ್ನು ಲೇಖಕರು ಬಹು ಸೂಕ್ಷ್ಮತೆಯಿಂದ ಗುರುತಿಸಿದ್ದಾರೆ. ಕೇವಲ ಶ್ರವಣದಿಂದ ಗ್ರಹಿಸಿದುದನ್ನು ಆಡು ನುಡಿಯ ಭಾಷೆಯಲ್ಲಿ ಕಟ್ಟಿಕೊಟ್ಟಿರುವುದು ಭೀಮವ್ವನವರ ವ್ಯಕ್ತಿತ್ವ, ಸೃಜನಶೀಲತೆಯನ್ನು ತಿಳಿಯುವಲ್ಲಿ ಸಹಾಯವಾಗಿದೆ. ಒಳ್ಳೆಯ ಓದು ಎಷ್ಟು ಮುಖ್ಯವೋ ಕೇಳುವ ಕ್ರಿಯೆಯೂ ಕೂಡ ಅಷ್ಟೇ ಮುಖ್ಯ ಎಂಬುದನ್ನು ಭೀಮವ್ವನವರ ಜೀವನದಿಂದ ತಿಳಿಯಬಹುದು. ಭೀಮವ್ವ ರಚಿಸಿರುವ 'ಸ್ತುತಿಮಣಿ ಮಾಲಿಕೆ'ಯಲ್ಲಂತೂ ಮಧ್ವ ತತ್ವದ ಪ್ರಮೇಯವನ್ನು ಕಾಣಬಹುದಾಗಿದೆ.

ಭೀಮವ್ವ ಒರ್ವ ವೈದಿಕ ಪರಿಸರದ ಹೆಣ್ಣುಮಗಳು. ಅದರಲ್ಲಿ ಬೇರೆ ಮಡಿಯಾದ ಹೆಂಗಸು, ಹೊರಬರಲಾದ ಗೃಹಿಣಿ ಸಮಾಜದ ಸಮಸ್ಯೆಯನ್ನು ಹೇಗೆ ಅರಿಯಬಲ್ಲಳು? ಅವರ ಕಾವ್ಯದಲ್ಲಿ ಸಮಾಜದ ವಿವಿಧ ಮುಖಗಳನ್ನು ನೋಡಲು ಸಾಧ್ಯವೇ? ಎನ್ನುವ ಗಂಭೀರ ಪ್ರಶ್ನೆಗಳಿಗೆ ಲೇಖಕರು ಸಮರ್ಥವಾಗಿ ಉತ್ತರ ನೀಡಿದ್ದಾರೆ. ಸಮಾಜದ ಸಮಸ್ಯೆ ನೋಡದಿದ್ದರೇನಂತೆ ಕೇಳಿ ತಿಳಿಯಬಹುದಲ್ಲವೆ? ಎನ್ನುವ ಲೇಖಕರು ಭೀಮವ್ವನವರ ಹಾಡುಗಳಲ್ಲಿ ಮೂಡಿಬಂದ ಉದಾಹರಣೆಗಳ ಮೂಲಕ ಚರ್ಚಿಸಿದ್ದಾರೆ.

ಅವ್ವನವರ ಕೃತಿಗಳಲ್ಲಿ ಭಕ್ತಿಯ ಪ್ರತಿಪಾದನೆ, ತತ್ವವಾದ, ದಶಾವತಾರಗಳ ವರ್ಣನೆ, ಹಾಸ್ಯಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ಮುಂತಾದ ಅಂಶಗಳ ಹಿನ್ನೆಲೆಯಲ್ಲಿ ಲೇಖಕರು ವಿಚಾರವನ್ನು ವಿದ್ವತ್ಪೂರ್ಣವಾಗಿ ಚರ್ಚಿಸಿದ್ದಾರೆ.

ಕನ್ನಡದ ಹೆಮ್ಮೆಯ ಕವಯತ್ರಿ ಹರಪನಹಳ್ಳಿ ಭೀಮವ್ವ

ಶ್ರೀ ತಿರುಮಲೇಶ ಹರಿವಿಠಲದಾಸರು ಎಂಬ ಅಂಕಿತನಾಮವನ್ನು ಹೊಂದಿರುವ 'ಜಯಸಿಂಹ' ಎಂಬುವರು ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ. ಭೀಮವ್ವನವರ ಕುರಿತು ಮಾಹಿತಿಯನ್ನು ನೋಡಬಹುದಾಗಿದೆ. ಉಳಿದೆಲ್ಲಾ ಕೃತಿಗಳಂತೆ ಈ ಕೃತಿಯಲ್ಲಿಯೂ ಸಹ ಬಾಲ್ಯದ ಜೀವನ, ದಾಂಪತ್ಯ, ವೈಧವ್ಯ ಪ್ರಾಪ್ತಿಯಾದ ಜೀವನ, ಸಾಹಿತ್ಯಿಕ ಜೀವನ ಮುಂತಾದ ವಿವರಣೆಗಳನ್ನು ಕಾಣಬಹುದು.

ಲೇಖಕ ಧ್ರುವನಾರಾಯಣ ಅವರ ತಮ್ಮ 'ನಾರಾಯಣ ದೇವರ ಕೆರೆ' ಎಂಬ ಕೃತಿಯಲ್ಲಿ 'ಕವಯಿತ್ರಿ ಭೀಮಾದೇವಿ, ೧೮೨೨-೧೯೦೩ (ಭೀಮಕ್ಕ)' ಎನ್ನುವ ಲೇಖನವನ್ನು ಬರೆದಿದ್ದಾರೆ. ಹನುಮಂತದೇವರ ಮೇಲೆ ಭೀಮವ್ವನವರು ರಚಿಸಿದ ಹಲವಾರು ಸಾಲುಗಳನ್ನು ಉಲ್ಲೇಖ ಮಾಡಿದ್ದಾರೆ. ಹಾಗೆಯೇ ಗಂಗಾದೇವಿಯ ಸ್ತೋತ್ರ, ಈಶ್ವರನಿಗೆ ಪಾರ್ವತಿಯು ಬಾಗಿಲು ಕಟ್ಟಿದ ಹಾಡು, ಕಾಶಿವಿಶ್ವನಾಥನ ಸ್ತೋತ್ರ, ಬೊಮ್ಮಗಟ್ಟಿ ಪ್ರಾಣದೇವರ ಸ್ತೋತ್ರ, ಸ್ತುತಿಮಣಿಮಾಲಿಕೆ, ಎಂಬ ಶೀರ್ಷಿಕೆಯಡಿಯಲ್ಲಿ ಕೀರ್ತನೆಗಳನ್ನು

ಭೀಮವ್ವನವರು ರಚಿಸಿದ ಹಾಡುಗಳನ್ನು ಹಾಡುತ್ತಿದ್ದ ಚಿನ್ನಿವಾಲರ ತುಳಸವ್ವ, ಕೋಳೂರು ಗಂಗಾಬಾಯಿ, ಹಾಗೂ ಬಾದನಹಟ್ಟಿ ಶೀತಮ್ಮ ಮುಂತಾದವರು ಸಾಂಪ್ರದಾಯಿಕ ಹಾಡಿನ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ ಎನ್ನುವುದು ಲೇಖಕರ ಅಭಿಪ್ರಾಯವಾಗಿದೆ.

ಕುಂ.ಬಾ.ಸದಾಶಿವಪ್ಪನವರ 'ಹಲವು ಹನ್ನೊಂದು ಹರಪನಹಳ್ಳಿ' ಎನ್ನುವ ಕೃತಿಯಲ್ಲಿ 'ಹರಪನಹಳ್ಳಿ ಭೀಮವ್ವ' ಎನ್ನುವ ಲೇಖನವನ್ನು ಕಾಣಬಹುದು. ಸಹಜವೆಂಬಂತೆ ಭೀಮವ್ವನವರ ಬಾಲ್ಯ ಜೀವನದಿಂದ ಹಿಡಿದು ವೈಧವ್ಯ ಜೀವನದ ತನಕ ಬೆಳೆದು ಬಂದ ಬಗೆಯನ್ನು ಹೇಳಲಾಗಿದೆ. ಯಾವ ಯಾವ ದೇವರ ಮೇಲೆ ಯಾವ ಯಾವ ಹಾಡುಗಳನ್ನು ಭೀಮವ್ವನವರು ರಚಿಸಿದ್ದಾರೆ ಎಂಬ ದೀರ್ಘಪಟ್ಟಿಯೊಂದನ್ನು ನೀಡಲಾಗಿದೆ.

'ಭೂತ ರಾಜನಾಯ್ಯವಂದಿಪೆ ವಾದಿರಾಜ ಜೀಯ
ಖ್ಯಾತಿಲಿ ಸುಜನರ ವಾರ್ತೆಯ ನಾಲಿಸಿ
ಭಕ್ತರ ಪೊರೆದೆಯೋ ಹರಪನಹಳ್ಳಿಯ"

[illegible]

ಎನ್ನುವ ಕೀರ್ತನೆ ರಚನೆಗೊಂಡಿದ್ದರ ಹಿನ್ನೆಲೆಯನ್ನು ಲೇಖಕರು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಅವರದೇ ನುಡಿಗಳಲ್ಲಿ ಹೇಳುವುದಾದರೆ "ಭೀಮವ್ವ ಬದುಕಿದ್ದ ಕಾಲ ಅಂಟು ಜಾಡ್ಯಗಳ ಕಾಲ. ಹರಪನಹಳ್ಳಿ ಕ್ರಿಸ್ತಶಕ ೧೯೦೨ರಿಂದ ೧೯೩೨ರವರೆಗೆ ೧೩ ಸಲ ಪ್ಲೇಗು ಕಾಣಿಸಿಕೊಂಡಿದೆ. ಪ್ಲೇಗು ಹರಡಿದಾಗಲೆಲ್ಲ ಜನರು ಊರು ಬಿಟ್ಟು ಹೊರಗೆ ಬೀಡು ಹಾಕಬೇಕಾಗಿತ್ತು. ಆಗ ಜನರು ಗುರುಗಳಿಗೆ ದೇವರುಗಳಿಗೆ, ಮೊರೆಹೋಗುತ್ತಿದ್ದರು. ಸೋದೆಯ ವಾದಿರಾಜ ಮಠದ ಯತಿವರರು ಹರಪನಹಳ್ಳಿಗೆ ಆಗಮಿಸಿ ಭಕ್ತರಿಗೆ ಆಶೀರ್ವದಿಸಿದ್ದು, ವಯೋವೃದ್ಧರು ಈಗಲೂ ನೆನಪಿಸಿಕೊಳ್ಳುವರು". ಈ ಹಿನ್ನೆಲೆಯಲ್ಲಿ ಮೇಲಿನ ಕೀರ್ತನೆ ಮೂಡಿ ಬಂದಿದೆ ಎನ್ನುವ ಲೇಖಕರ ಅಭಿಪ್ರಾಯ ಇನ್ನಿತರ ಕೃತಿಗಳಲ್ಲಾಗಲೀ, ಲೇಖನಗಳಲ್ಲಾಗಲಿ ಮೂಡಿರದ ಹೊಸ ವಿಚಾರವೆಂದೇ ಹೇಳಬಹುದು.

ಮಾನಕರಿ ಶ್ರೀನಿವಾಸಚಾರ್ಯರ ಸಂಶೋಧನ ಗ್ರಂಥವಾದ 'ಶ್ರೀಮದ್ ಭಾಗವತ ಋಣ ಮತ್ತು ವೃದ್ಧಿ'ಯಲ್ಲಿ ಭೀಮವ್ವನವರ ಕುರಿತಾದ ಕೆಲವು ವಿಚಾರಗಳಿವೆ. ಶ್ರೀಮದ್ಭಾಗವತ ದಶಮಸ್ಕಂಥ ಉತ್ತರಾರ್ಧದ ೯೮-೯೯ನೇ ಅಧ್ಯಾಯಗಳಲ್ಲಿರುವ ಕುಚೇಲೋಪಾಖ್ಯಾನವನ್ನು ಸುಧಾಮನ ಹಾಡು ಎಂಬುದಾಗಿ ಕಂಡರಿಸಿದ್ದನ್ನು; ಮೂಲದ ಕೃತಿಗೂ ಭೀಮವ್ವನವರಿಂದ ರಚಿತವಾದ ಕೃತಿಗೂ ಹಲವು ವ್ಯತ್ಯಾಸಗಳನ್ನು ಗುರುತಿಸಿಲಾಗಿದೆ. ಲೇಖಕರು ಗುರುತಿಸಿರುವ ಹಲವಾರು ಅಂಶಗಳು ಭೀಮವ್ವನ ಸೃಜನಶೀಲ ಮನಸ್ಸನ್ನು ಎತ್ತಿ ತೋರಿಸುತ್ತವೆ.

ಹರಪನಹಳ್ಳಿ ಭೀಮವ್ವನವರ ಕುರಿತು ಮೂಡಿಬಂದಿರುವ ಇನ್ನುಳಿದ ಲೇಖನಗಳು ಕವಯತ್ರಿಯ ಜೀವನ, ಬರಹ, ಕಾವ್ಯಶೈಲಿಯನ್ನು ಪರಿಚಯಿಸುತ್ತವೆ. ಕವಯತ್ರಿ ಭೀಮವ್ವ ಅನ್ಯ ಕವಯತ್ರಿಗಿಂತ ಯಾವ ವಿಧದಲ್ಲಿ, ಶೈಲಿಯಲ್ಲಿ ಭಿನ್ನವಾಗಿ ಕಾಣುತ್ತಾರೆ ಎಂಬ ಅಂಶವನ್ನು ನೀಡುತ್ತವೆ.

ಮೇಲಿನ ಎಲ್ಲ ಕೃತಿಗಳನ್ನು ಮತ್ತು ಲೇಖನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನವನ್ನು ಮುಂದುವರಿಸಲಾಗಿದೆ. ಈವರೆಗೂ ಮೂಡಿಬಂದ ಅಧ್ಯಯನಗಳು ಸಾಂಪ್ರದಾಯಕ ರೀತಿಯಿಂದ ಕೂಡಿವೆ. ಸಮಾಜೋ ಭಾಷಿಕ ಹಿನ್ನಲೆಯಲ್ಲಿ ಕೃತಿಗಳಾಗಲಿ, ಲೇಖನಗಳಾಗಲಿ ಮೂಡಿಬಂದಿಲ್ಲ. ಹಾಗೆಂದು ತೀರ ಸಾಂಪ್ರದಾಯಕ ರೀತಿಯಲ್ಲಿಯೂ ಮೂಡಿಬಂದಿಲ್ಲ. ಅಧ್ಯಯನಕ್ಕೆ ಪೂರಕವಾಗುವಂತೆ ಅಲ್ಲಲ್ಲಿ ಸಮಾಜೋ ಭಾಷಿಕ ಆಯಾಮಗಳು ದೊರೆತಿವೆ. ಅಂಥ ಅಂಶಗಳನ್ನು ಕಡೆಗಾಣಿಸದೆ ಅಧ್ಯಯನವನ್ನು ಮುಂದುವರೆಸಲಾಗಿದೆ.

ಅಧ್ಯಾಯ - ಮೂರು

ದಾಸಸಾಹಿತ್ಯ- ಮಹಿಳೆಯರ ಕೊಡುಗೆ

ಅಧ್ಯಾಯ - ಮೂರು

ದಾಸಸಾಹಿತ್ಯ- ಮಹಿಳೆಯರ ಕೊಡುಗೆ

ದಾಸಸಾಹಿತ್ಯದ ಆರಂಭ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮತ್ತೆ ಮತ್ತೆ ನೆನಪು ಮಾಡಿಕೊಳ್ಳಬಹುದಾದ ಎರಡು ಜ್ಞಾನ ಕ್ಷೇತ್ರಗಳೆಂದರೆ ಒಂದು ವಚನ ಸಾಹಿತ್ಯ ಎರಡನೆಯದು ದಾಸಸಾಹಿತ್ಯ. ಒಂದೇ ನೆಲದಲ್ಲಿ ಒಂದೇ ಭಾಷೆಯಲ್ಲಿ ಈ ಎರಡು ಸಾಹಿತ್ಯದ ಚಳುವಳಿಗಳ ರೂಪ ಧಾರೆ ಹರಿದು ಬಂದದ್ದು ವಿಶೇಷವೇ ಸರಿ. ಈ ಎರಡು ಸಾಹಿತ್ಯದ ಚಳುವಳಿಗಳ ರೂಪ ಸ್ವರೂಪ ಬೇರೆ ಬೇರೆಯಾಗಿವೆ. ವಚನ ಸಾಹಿತ್ಯ ತನ್ನ ಕಾಯಕ ಅನುಭಾವದ ನೆಲೆಯ ಮೂಲಕ ತನ್ನ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿತು. ದಾಸ ಸಾಹಿತ್ಯ ತನ್ನ ಕಾರ್ಯಕ್ಷೇತ್ರವನ್ನು ಭಕ್ತಿಯ ಹಿನ್ನೆಲೆಯಲ್ಲಿ ವಿಸ್ತಾರಗೊಳಿಸಿತು. ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಚಲಿಸಿದ ಮಾರ್ಗವು ಭಿನ್ನವಾದರೂ ಹುಟ್ಟು ಹಾಕಿದ ಆಂದೋಲನದ ಗುರಿ ಒಂದೇ ಆಗಿತ್ತು. ವೈಚಾರಿಕ ಕ್ರಾಂತಿ, ಸಾಮಾಜಿಕ ಆಂದೋಲನ, ಸಾಮಾಜಿಕ ಬದಲಾವಣೆಯ ಕಾರ್ಯದಲ್ಲಿ ತೊಡಗಿದ್ದುದು. ಸಮಾಜದ ಸುತ್ತ ಆವರಿಸಿಕೊಂಡಿದ್ದ ಮೌಢ್ಯದ ಬಂಧನವನ್ನು ಕಳಚಿ ಸಮಾಜದ ಹಿತವನ್ನು ಕಾಪಾಡುವುದಾಗಿತ್ತು. ಈ ಸಂದರ್ಭದಲ್ಲಿ ತಮ್ಮ ಜೀವನದ ಅಮೂಲ್ಯ ಕ್ಷಣಗಳನ್ನು, ಸುಖ ಸಂಕಥನಗಳ ತ್ಯಾಗ, ಹಲವು ಪ್ರತಿ ಬಂಧಕ, ಹಿಂಸೆಯ ಪ್ರತಿರೋಧದ ನಡುವೆಯೂ ಚಿಂತನ ಧಾರೆ ಹರಿಯಿತು. ಈ ಮುಖಾಂತರ ಮಾನವೀಯ ನೆಲೆಯಲ್ಲಿ ಚಿಂತಿಸುವಂತೆ ಮಾಡಿದ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯದ ಕೊಡುಗೆ ಅಪಾರ ಮತ್ತು ಮಹತ್ವದ್ದಾಗಿದೆ.

"ದಾಸಸಾಹಿತ್ಯದಲ್ಲಿನ ಜ್ಞಾನಿಗಳ ರಚನೆಗಳು ಮುಗಿದವು. ದಾಸಸಾಹಿತ್ಯ ಬೆಳೆಯುವುದರ ಬದಲು ಕ್ಷೀಣದೆಸೆಗೆ ಬರಹತ್ತಿತ್ತು. ೧೯ನೇ ಶತಮಾನ ಹರಿದಾಸ ಸಾಹಿತ್ಯದ ಅವನತಿಯ ಕಾಲ"[1] ಎಂಬ ವಿಚಾರದ ಹೊರತಾಗಿಯೂ ದಾಸ ಸಾಹಿತ್ಯ ಪರಂಪರೆಯನ್ನು ಕ್ರಿ.ಶ. ೧೫ರಿಂದ ಹಿಡಿದು ೨೦ನೇ ಶತಮಾನದ ತನಕ ಕೊಂಡೊಯ್ಯಬಹುದು. ಕ್ಷೇತ್ರ ಕಾರ್ಯಕ್ಕೆ ತೆರಳಿದ ಸಂದರ್ಭದಲ್ಲಿ ಇಂದಿಗೂ ಬೆರಳೆಣಿಕೆಯ

[illegible]

[illegible]

[illegible]

ಮಹಿಳೆಯರು ಹರಿದಾಸ ಕೀರ್ತನೆಯ ಮಾದರಿಯಲ್ಲಿ ಭಕ್ತಿ ಕೇಂದ್ರಿತ ಕೀರ್ತನೆಗಳನ್ನು ರಚಿಸುತ್ತಿರುವುದು ಗಮನಕ್ಕೆ ಬಂತು. ಸುಮಾರು ಐದು ಶತಮಾನಗಳ ಕಾಲಾವಧಿಯಲ್ಲಿ ಅನೇಕ ದಾಸವರೇಣ್ಯರು, ಕೀರ್ತನಕಾರರು ಅತ್ಯಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ಸಂಗೀತ ಕ್ಷೇತ್ರವೂ ಹೊಸ ಹೊಸ ಪ್ರಯೋಗಗಳಿಗೆ ತೆರೆದುಕೊಂಡಿತು. ದೇವರನ್ನು ಗಾಯನ ಭಕ್ತಿಯಿಂದಲೇ ಸುತ್ತಿಸುವುದು ಸೂಕ್ತವೆಂದು ಹರಿದಾಸರಿಗೆ ತೋರಿರಬೇಕು. ಅಂತಲೇ ಅವರ ಹಾಡಿಗೆ ತಂಬೂರಿ, ತಾಳ, ಚಿಟಿಕೆಗಳು ಆಶ್ರಯ ನೀಡಿದವು. ಸಂಗೀತಕ್ಕೆ ಆತ್ಮದೊಂದಿಗೆ ಸಂವಾದ ಮಾಡುವಷ್ಟು ಶಕ್ತಿಯಿದೆ. ಸಂಗೀತ ಮತ್ತು ಸಾಹಿತ್ಯದ ಸಾಮರಸ್ಯ ಹೇಗೆ ಒಂದಕ್ಕೊಂದು ಪೂರಕವಾಗಿದೆ ಎನ್ನುವುದನ್ನು ಈ ಕೀರ್ತನೆಯಲ್ಲಿ ಕಾಣಬಹುದು.

"ಕೇಳನೋ ಹರಿ ತಾಳನೊ
ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ
ತಂಬೂರಿ ಮೊದಲಾದ ಅಖಿಳ ವಾದ್ಯಗಳಿದ್ದು
ಕೊಂಬು ಕೊಳಲು ಧ್ವನಿಸ್ವರಗಳಿದ್ದು
ತುಂಬುರು ನಾರದರ ಗಾನ ಕೇಳುವ ಹರಿ
ನಂಬಲಾರ ಈ ಡಂಭಕದ ಕೂಗಾಟ ||೧||
ನಾನಾ ಬಗೆಯ ರಾಗ ಭಾವ ತಿಳಿದು ಸ್ವರ
ಜ್ಞಾನ ಮನೋಧರ್ಮ ಜಾತಿಯಿದ್ದು
ದಾನವಾರಿಯ ದಿವ್ಯನಾಮ ರಹಿತವಾದ
ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು ||೨||
ಅಡಿಗಡಿದಾನಂದ ಬಾಷ್ಪ ಪುಳಕದಿಂದ
ನಡೆ ನುಡಿಗೆ ಶ್ರೀಹರಿಯೆನ್ನುತ
ದೃಢಭಕ್ತರನು ಕೂಡಿ ಹರಿ ಕೀರ್ತನೆ ಪಾಡಿ
ಕಡೆಗೆ ಪುರಂದರ ವಿಠಲನೆಂದರೆ ಕೇಳ್ವ"[೨] ||೩||

ಒಂದಕ್ಕೊಂದು ಪೂರಕವೆಂಬಂತೆ ಹರಿದಾಸ ಸಾಹಿತ್ಯದಲ್ಲಿ ಸಂಗೀತ ಮತ್ತು ಸಾಹಿತ್ಯ ಮೈದುಂಬಿ ಬಂದಿತು. ಹರಿದಾಸರು ಸಂಸ್ಕೃತ ಸಾಹಿತ್ಯದ ಹಿನ್ನೆಲೆಯಿಂದ ಬಂದವರಾಗಿದ್ದರು. ಸಹಜವಾಗಿ ಅವರ ಕಾವ್ಯ ಪ್ರೌಢ ಭಾಷೆಯಲ್ಲಿಯೇ ಇರಬೇಕಾಗಿತ್ತು. ಪ್ರೌಢ ರೀತಿಯಲ್ಲಿ ರಚಿಸುವ ಶಕ್ತಿಯೂ ಇತ್ತು. ಆದರೂ ಹರಿದಾಸರು ಸರಳ ಭಾಷೆಯನ್ನು ಪ್ರಯೋಗ ಮಾಡಿದರು. ಮಾತುಗಳೆಲ್ಲವೂ ಹಾಡಿನ ಸ್ವರೂಪವನ್ನು ಪಡೆದುಕೊಂಡವು. ಆಡುವ ಆಟ, ನೋಡುವ -ಕೇಳುವ ಪಾಠ, ಮನಮೋಹಕವಾದ ನುಡಿ ಮುತ್ತುಗಳು, ಗಾದೆಗಳು, ಹಾಡಿನ ಲಯದಲ್ಲಿ ಸಿಲುಕಿಕೊಂಡವು. ಹೀಗೆ ಹರಿದಾಸ ಸಾಹಿತ್ಯವು ಒಂದು ಕಡೆಯಲ್ಲಿ ಸಾಹಿತ್ಯ ತತ್ವದಿಂದಲೂ ಇನ್ನೊಂದು ಕಡೆ ಸಂಗೀತ ತತ್ವದಿಂದಲೂ ಶ್ರೀಮಂತಿಕೆ ಪಡೆದು ಸಮೃದ್ಧಿಯಾಯಿತು. ತನ್ನದೇ ಆದ ಅನನ್ಯತೆಯನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿತು.

[illegible]

[illegible]

[illegible]

ಹರಿದಾಸರು ಜೀವನದ ಅನುಭವದಿಂದ ಮತ್ತು ಶಾಸ್ತ್ರದ ತಿಳುವಳಿಕೆಯಿಂದ ಅಪಾರ ಜ್ಞಾನವನ್ನು ಹೊಂದಿದ್ದರು. ಕ್ಲಿಷ್ಟ ರಚನೆಯನ್ನು ದೂರವಿರಿಸಿ ಸರಳ, ಸುಲಭವಾಗಿ ಗ್ರಹಿಕೆಗೆ ಬರುವಂತೆ ಕೀರ್ತನೆಗಳನ್ನು ರಚಿಸಿದರು. "ಹರಿದಾಸ ಕೀರ್ತನೆಗಳ ವೈಶಿಷ್ಟ್ಯವೆಂದರೆ ಅದರ ವೈವಿಧ್ಯ ಪದಪದ್ಯಗಳು ಉಗಾಭೋಗಗಳು, ಸುಳಾದಿಗಳು, ಲಾಲಿ, ಜೋಗುಳ, ಸುವ್ವಿ, ಉಯ್ಯಾಲೆಹಾಡು, ಸೋಬಾನೆ ಹಾಡುಗಳು, ಮಂಗಳಪದಗಳು, ದೇವರ ನಾಮಗಳು, ಕೃತಿಗಳು ನಿಂದಾಸ್ತುತಿಗಳು, ದಂಡಕ, ಹೀಗೆ ಹತ್ತು ಹಲವು ಸ್ತರಗಳಲ್ಲಿ ಸಾಹಿತ್ಯ ರಚಿಸಿ, ಅವುಗಳನ್ನು ಸಂಗೀತದ ಸುಗಂಧದ ಮೂಲಕ ಪ್ರಸರಿಸಿದ ಹರಿದಾಸರು ಷಟ್ಪದಿ, ಕಂದಪದ್ಯ, ಸೀಸಪದ್ಯ, ವೃತ್ತನಾಮ, ಗುಂಡಕ್ರಿಯೆ, ಮುಂತಾದ ವಿವಿಧ ಪ್ರಭೇದಗಳಲ್ಲಿ ಕಾವ್ಯ ಕೃಷಿ ಮಾಡಿದರು. ಶಾಸ್ತ್ರದ ಪ್ರಮೇಯಗಳನ್ನು, ಸಂಗೀತದ ಲಕ್ಷಣಗಳನ್ನು, ಸಾಹಿತ್ಯದ ಸಿದ್ಧಿಯನ್ನು ಒಟ್ಟಿಗೇ ಸಾಧಿಸಿದ ದಾಸರು ಭಕ್ತಿಗೀತೆಗಳನ್ನು, ಶಿಶುಗೀತೆಗಳನ್ನು, ಸಂದರ್ಭಗೀತೆಗಳನ್ನು, ಶಾಸ್ತ್ರಗೀತೆಗಳನ್ನು ಹಾಡಿ ಸಂಗೀತ ಜಗತ್ತಿಗೆ ವೈವಿಧ್ಯದ ಜೀವ ತುಂಬಿದರು."[೩]

ಹರಿದಾಸರು ದೇಸಿ ಮಟ್ಟುಗಳ ಕಡೆಗೆ ಗಮನಹರಿಸಿದರು. ಅವರ ಭಕ್ತಿಯ ತನ್ಮಯತೆ ಗೇಯತೆಯ ಭಾವನೆಯನ್ನು ತಂದುಕೊಟ್ಟಿತ್ತು. ಅಂತಲೇ ಕೀರ್ತನೆಗಳು ಅಕ್ಷರಸ್ಥರ ಮತ್ತು ಅನಕ್ಷರಸ್ಥರ ಬಾಯಿಯಲ್ಲಿ ಮೌಖಿಕರೂಪದಲ್ಲಿ ಸವೆಯದೆ ಹಾಗೆ ಉಳಿದಿವೆ. ಪುರಾಣ, ಭಾಗವತ, ಭಾರತ, ರಾಮಾಯಣದ ಕೃತಿಗಳಿಂದ ಆಧರಿಸಿದ ವಿಷಯಗಳನ್ನು ಹೇಳುವಾಗಲೂ, ದೇವರ ಮಹಿಮೆಯನ್ನು ಕೊಂಡಾಡುವಾಗಲೂ ಸರಳತೆಯನ್ನು ಅನುಸರಿಸಿದರು. ಹರಿದಾಸರು ಬದುಕಿದ್ದ ಕಾಲಾವಧಿಯು ಹಲವು ಸಂದಿಗ್ಧ ಪರಿಸ್ಥಿತಿಗಳಿಂದ ಕೂಡಿತ್ತು. ಪ್ರಭುತ್ವದ ಆಡಳಿತ ಮತ್ತು ಧರ್ಮದ ಕುರಿತು ತಪ್ಪಾದ ವ್ಯಾಖ್ಯಾನಗಳು ಜನಸಾಮಾನ್ಯರ ಜೀವನವನ್ನು ಹಿಡಿತದಲ್ಲಿಟ್ಟುಕೊಂಡಿದ್ದವು. ಜನಸಾಮಾನ್ಯರ ಜೀವನ ಅಧೋಗತಿಗೆ ಇಳಿದುಹೋಗಿತ್ತು. ದೀರ್ಘಕಾಲಿಕವಾಗಿ ಕಾಡುವ ರೋಗಗಳಂತೆ ಅನೇಕ ಸಮಸ್ಯೆಗಳು ಸಮಾಜವನ್ನು ಕಾಡುತ್ತಿದ್ದವು. ಸಮಾಜ ಅನೈತಿಕ ಹಾದಿಯನ್ನು ಹಿಡಿದಿತ್ತು. ಇಂಥ ಸಂದರ್ಭದಲ್ಲಿ ಸಮಾಜವನ್ನು ಎದುರುಗೊಂಡ ದಾಸರು ನೇರ, ನಿಷ್ಠುರವಾಗಿ, ಖಚಿತವಾಗಿ ಖಂಡಿಸಿದರು. ಹರಿದಾಸರು ಮೇಲ್ಜಾತಿಯ ಬಂಧನದಿಂದ ಹೊರಬರಲಾಗದಿದ್ದರೂ ಆ ಜಾತಿ ವ್ಯವಸ್ಥೆಯಲ್ಲಿ ಇರಬಹುದಾದ ಸಂಪ್ರದಾಯಕವಲ್ಲದ ಅಸಾಂಪ್ರದಾಯಿಕ ಆಚರಣೆಗಳನ್ನು ಖಂಡಿಸಿದರು. ಯಾವುದು ಮಡಿ, ಯಾವುದು ಸ್ನಾನ, ಅವುಗಳ ಮಹತ್ವವೇನು ಎಂದು ಕೀರ್ತನೆಗಳಲ್ಲಿ ಸುಂದರವಾಗಿ ಹೇಳಿದರು.

"ಮಡಿ ಮಡಿ ಮಡಿಯೆಂದಡಿಗಡಿದ್ಹಾರುತಿ
ಮಡಿ ಮಾಡುವ ಬಗೆ ಬೇರುಂಟು
ಬಟ್ಟೆಯ ನೀರೊಳಗದ್ದಿ ಒಣಗಿಸಿ
ಉಟ್ಟುಕೊಂಡರೆ ಅದು ಮಡಿಯಲ್ಲ
ಹೊಟ್ಟೆಯೊಳಗಿನ ಕ್ರಾಮ ಕ್ರೋಧವ
ಬಿಟ್ಟು ನಡೆದರೆ ಅದು ಮಡಿಯು"[೪]

[illegible]

ಜೀವನದಲ್ಲಿ ಯಾವುದು ಮಡಿ, ಅದು ಹೇಗಿರಬೇಕು, ಹೇಗಿರುತ್ತದೆ ಎಂದು ದಾಸರು ಮಾರ್ಮಿಕವಾಗಿ ಹೇಳಿದ್ದಾರೆ.

'ಸ್ನಾನ' ದ ಕ್ರಿಯೆ ಬಾಹ್ಯವಾಗಿದ್ದರೆ ಸಂಪೂರ್ಣವೆನಿಸದು. ಅದು ಅಂತರ್ಯದಲ್ಲಿನ ದೇಹಕ್ಕೆ ಜ್ಞಾನ ಸ್ನಾನ ಮಾಡಿಸಬೇಕು ಎಂಬ ದಾಸರ ಕಳಕಳಿ ಈ ಕೀರ್ತನೆಯಲ್ಲಿ ಸುಂದರವಾಗಿ ಮೂಡಿಬಂದಿದೆ.

"ಪರಸತಿಯ ಬಯಸದಿದ್ದರೆ ಒಂದು ಸ್ನಾನ
ಪರರ ನಿಂದಿಸದಿರುವುದು ಒಂದು ಸ್ನಾನ
ಪರರೊಡವೆಯಪಹರಿಸದಿರೆ ಒಂದು ಸ್ನಾನ
ಪರತತ್ತ್ವ ತಿಳಿದುಕೊಂಡರೆ ಒಂದು ಸ್ನಾನ"[೫]

"ಜನಸಮುದಾಯದ ನಡುವೆ ಬದುಕಿದ ದಾಸರು ಈ ಸಮಾಜದ ಕಿಲುಬನ್ನು ತೊಳೆಯುವ ಕೆಲಸ ಮಾಡಿದರು. ಇಲ್ಲಿನ ದೋಷಗಳನ್ನು ಪ್ರಶ್ನಿಸುವ ಮೂಲಕ ಪ್ರತಿಕ್ರಿಯಿಸುವ ಮೂಲಕ ಸಾಮಾಜಿಕವಾಗಿ ಸ್ಪಂದಿಸಿದರು. ಮನುಕುಲಕ್ಕೆ ಪರಿಹಾರ ನೀಡುವ ಮೂಲಕ ಆ ಮಿತಿಯನ್ನು ದಾಟುವ ಬಗೆಯನ್ನೂ ಹೇಳುತ್ತಾರೆ. ಸಾಮಾಜಿಕವಾಗಿ ಪ್ರತಿಕ್ರಿಯಿಸುವ ಸಂದರ್ಭದಲ್ಲಿ ದಾಸರ ದಾಟಿ ವ್ಯಂಗ್ಯ ವಿಡಂಬನೆಯಾಗಿ ವಿಷಾದವಾಗಿ ಪ್ರಕಟವಾಗಿದೆ."[೬]

ಈ ಎಲ್ಲಾ ಸಮಸ್ಯೆಗಳ ಮಧ್ಯದಲ್ಲಿಯೂ ಹರಿದಾಸ ಸಾಹಿತ್ಯವು ರಾಜಾಶ್ರಯಕ್ಕೆ ಒಳಗಾಗಿತ್ತು. ವಿಜಯನಗರದ ಅರಸರ ಕಾಲದಲ್ಲಿ ವ್ಯಾಸರಾಯರು ರಾಜಗುರುಗಳಾಗಿದ್ದರು. ಅವರ ಭಕ್ತಿಯ ಗರಡಿಯಲ್ಲಿ ಅನೇಕ ದಾಸರು ಬೆಳೆದು ಬಂದರು. ಶ್ರೀ ಮಧ್ವಾಚಾರ್ಯರು ಸ್ಥಾಪಿಸಿದ ಅಷ್ಟಮಠದ ಯತಿಗಳು ಸಹ ಹರಿದಾಸ ಸಾಹಿತ್ಯಕ್ಕೆ ವಿಶೇಷ ಪ್ರಾಧಾನ್ಯವನ್ನು ನೀಡಿದರು. ಒಂದು ಕಾಲಕ್ಕೆ ಮತ, ಧರ್ಮವನ್ನು ಎತ್ತಿ ಹಿಡಿಯುವುದಕ್ಕೆ ಬಂದ ಚಳುವಳಿ ಎನಿಸಿದರೂ ಅದರಲ್ಲೂ ಸಮಾಜ ಮುಖಿಯಾದ ಚಿಂತನೆಗಳಿವೆ.

ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳು ಹರಿದಾಸ ಸಾಹಿತ್ಯಕ್ಕೆ ವಿಶೇಷ ಕೊಡುಗೆಯನ್ನು ನೀಡಿದರು. ಇದರಿಂದಾಗಿ ಆರೋಗ್ಯಕರವಾದ ಕೀರ್ತನೆಯೂ ಭಕ್ತಿಯ ಮೂಸೆಯಲ್ಲಿ ಒಡಮೂಡಿತು.

ಹರಿದಾಸ ಸಾಹಿತ್ಯದಲ್ಲಿ ಸ್ವಮತದ ಪ್ರಶಂಸೆಯಾಗಲಿ, ಪರಮತದ ಖಂಡನೆಯಾಗಲಿ, ದೇವರನ್ನು ಸ್ತುತಿಸುವಾಗಲೂ, ನಿಂದಿಸುವಾಗಲೂ, ಸಮಾಜ ಸಂಕೀರ್ಣತೆಯನ್ನು ಕಟ್ಟಿ ಕೊಡುವಾಗಲೂ ಹೀಗೆ ಅನೇಕ ಸಂದರ್ಭಗಳಲ್ಲಿ ಭಕ್ತಿಯ ಹೊರತಾಗಿ ಮೂಡಿಬಂದಿಲ್ಲ. ಭಕ್ತಿಯ ಹಿನ್ನೆಲೆಯಲ್ಲಿ ಮೂಡಿಬಂದಿವೆ. ಸಕಲವೆಲ್ಲವೂ ದೈವ ಪ್ರೇರಣೆ ಎಂಬ ಭಾವನೆಯನ್ನು ಹೊಂದಿದ್ದರು.

"ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದ ಸೇವನಂ
ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ"

ನವ ವಿಧ ಭಕುತಿಗೆ ಅನುಗುಣವಾಗಿ ಅನೇಕ ಕೀರ್ತನೆಗಳನ್ನು ಹರಿದಾಸರು ರಚಿಸಿದರು. ಈ ನವವಿಧದ ಭಕ್ತಿಯ ಮಾರ್ಗಗಳು ಹರಿಯ ದಶಾವತಾರದ ಕಲ್ಪನೆಯನ್ನು ಅಥವಾ ಶ್ರೀ ವಿಷ್ಣುವಿನ

ಸರ್ವವ್ಯಾಪ್ತಿಯನ್ನು ಹೇಳಲು ಸಹಾಯವಾಯಿತು. 'ಭಕ್ತಿ' ತನ್ನ ಗರಿ ಬಿಚ್ಚಿ, ಮನಸೋ ಇಚ್ಛೆ ಯಾವ ಭಯ, ಬಂಧನ, ಅಡೆ ತಡೆಯಿಲ್ಲದೆ ವ್ಯಾಪ್ತಿಯನ್ನು ಮೀರಿ ಬೆಳೆಯಿತು. ಪುರಂದರದಾಸರೊರ್ವರೇ ಸುಮಾರು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿದ್ದಾರೆ ಎಂಬ ಐತಿಹ್ಯವಿದೆ. ದೊರೆತ ಕೀರ್ತನೆಗಳ ಸಂಖ್ಯೆ ಅಗಣಿತ. ಆ ಕೀರ್ತನೆಗಳೆಲ್ಲವೂ ಭಕ್ತಿಯ ಪರಧಿಯನ್ನು ದಾಟಿ ಮುಂದೆ ಹೋಗಿಲ್ಲ. ಭಕ್ತಿ ಪರಾಕಾಷ್ಟೆಯ ತುತ್ತ ತುದಿಯನ್ನು ಕಾಣಬಹುದು.

ಹರಿಯನ್ನೇ ಕೇಂದ್ರ ಬಿಂದುವನ್ನಾಗಿಟ್ಟುಕೊಂಡು ಹರಿದಾಸರಿಂದ ರಚಿತವಾದ ಸಾಹಿತ್ಯ ಹರಿದಾಸ ಸಾಹಿತ್ಯ. ಮಧ್ವಮತ ತತ್ತ್ವ ನಿರೂಪಣೆ ಮತ್ತು ಸರ್ವವ್ಯಾಪಕನಾದ ಭಗವಂತನ ಮಹಿಮೆಯನ್ನು ಕುರಿತು ಕೀರ್ತಿಸುವುದೇ ಇಲ್ಲಿನ ಗುರಿ. ಅಂತರಂಗದ ಅಭಿವ್ಯಕ್ತಿಯನ್ನು ಸುಳಾದಿ, ಉಗಾಭೋಗ, ಕೀರ್ತನೆ, ವೃತ್ತನಾಮ, ಮುಂಡಿಗೆ, ದಂಡಕ, ಮುಂತಾದ ಪ್ರಕಾರಗಳಲ್ಲಿ ಹರಿಸಿದರು. ಕೀರ್ತನೆಯಲ್ಲಿ ಸಾಹಿತ್ಯ ಎಷ್ಟು ಮುಖ್ಯವಾಗಿತ್ತೋ ಅಷ್ಟೇ ಸಂಗೀತವೂ ಮುಖ್ಯವಾಗಿತ್ತು. ಕೀರ್ತನೆ ದೇಸಿ ಮಟ್ಟು ಆಗಿದ್ದರಿಂದ ಗೇಯತೆಯ ಗುಣ ದಟ್ಟವಾಗಿತ್ತು.

"ಕನ್ನಡದಲ್ಲಿ ಕೀರ್ತನೆ ಅಥವಾ ಪದ ಎಂಬುದೇನೂ ಹೊಸದಲ್ಲ. ಕನ್ನಡದ ಮಟ್ಟಿಗೆ ಪಾಡು, ಮೇಲ್ಪಾಡು ಭಾಜನೆಗಳಿದ್ದವು. ಆಮೇಲೆ ಶರಣರು ವಚನಗಳನ್ನು ಪದಗಳಂತೆ ಹಾಡಿದರು. ಅದೇ ಹರಿದಾಸರ ಬಾಯಲ್ಲಿ ಹರಿಸ್ತುತಿ ಪರವಾದ ಹಾಡಾಯಿತು."[೭] ಎನ್ನುವ ವಿಚಾರದಲ್ಲಿ ಕೀರ್ತನ ಪ್ರಕಾರದ ಮೇಲೆ ಹಲವು ಪ್ರಭಾವ ಬೀರಿರುವುದನ್ನು ಕಾಣಬಹುದು. ಅಲ್ಲದೆ ಶಿವಶರಣರಲ್ಲಿ 'ಸ್ವರ ವಚನ' ಎಂಬ ಪ್ರಯೋಗವಿತ್ತು. "ಶಿವಶರಣರು ಬರೆದ ಹಾಡುಗಳು ಪಲ್ಲವಿಯಿಂದ ಕೂಡಿ ಬೇರೆ ಬೇರೆ ರಾಗಗಳಲ್ಲಿ ಹಾಡಲು ಅನುವರಿತು ರಚಿತವಾದ ಗೇಯ ಕೃತಿಗಳು... ಹರಿದಾಸರ ಕೀರ್ತನ ಪ್ರಕಾರಕ್ಕೆ ಮೂಲವೂ ಮಾದರಿಯವೂ ಆಗಿತ್ತೆಂದು"[೮] ಎಂದು ಡಾ.ಎಲ್.ಬಸವರಾಜು(೧೯)ರವರು ಅಭಿಪ್ರಾಯ ಪಡುತ್ತಾರೆ.

"ಕೀರ್ತನೆ ದೇವರನಾಮ ಎಂಬ ಹೆಸರು ಯಾವಾಗ ಪ್ರಚಾರದಲ್ಲಿ ಬಂತೆಂಬುದು ತಿಳಿಯದು. ಬಹುಶಃ ಪುರಂದರದಾಸರ ಮತ್ತು ಕನಕದಾಸರ ಕಾಲದಲ್ಲಿ ಬಂದಿರಬಹುದೆಂದು ಕಾಣುತ್ತದೆ. ದೇವರ ನಾಮಸ್ಮರಣೆ ಸ್ತುತಿ ಲೀಲೆಗಳ ಕಥನ ಇವು ಪ್ರಧಾನವಾಗಿದ್ದ ಕೀರ್ತನಪದ ವಿಶೇಷವು ರೂಢವಾಗುತ್ತ ಬಂದಿತು. ಇದಕ್ಕೆ 'ದಾಸರಪದ' ಎಂದು ಹೇಳುವ ಪ್ರಥೆಯೂ ಉಂಟು"[೯] ಈ ಹೇಳಿಕೆ ಅಷ್ಟೊಂದು ಸಮಂಜಸವಲ್ಲ ಎಂದು ಹೇಳಬಹುದು. ಯಾಕೆಂದರೆ ದೇವರನ್ನು ಹಲವು ನಾಮಗಳಿಂದ ಸ್ತುತಿಸುವುದು ಮೊದಲಿನಿಂದಲೂ ಇದೆ. ಅದರ ಬಳಕೆ ಗೌಣವಾಗಿತ್ತು. ಆದರೆ ಕನಕ ಪುರಂದರ ದಾಸರ ಕಾಲದಲ್ಲಿ ವಿಪುಲವಾಗಿ ಬೆಳೆದು ಬಂತು. ಡಾ.ಎಲ್.ಬಸವರಾಜು ಅವರ ಇನ್ನೊಂದು ಪ್ರಮುಖ ಹೇಳಿಕೆಯನ್ನು ಗಮನಿಸಬಹುದು. "ಕವಿರಾಜಮಾರ್ಗದ ಕಾಲಕ್ಕಿಂತ ಹಿಂದಿನಿಂದಲೂ ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದ ಶಿವದಾಸರೂ ಹದಿನೈದು-ಹದಿನಾರನೇ ಶತಮಾನಗಳಲ್ಲಿ ಹರಿದಾಸ ಬಳಸಿ ಬೆಳಸಿಕೊಂಡು ಬಂದರು"[೧೦]

ಮೇಲಿನ ಎಲ್ಲಾ ವಾದಗಳನ್ನು ಗಮನಿಸಿದಾಗ ಮುಖ್ಯವಾಗಿ ತಿಳಿದು ಬರುವುದೇನೆಂದರೆ 'ಕೀರ್ತನೆ' ಪ್ರಕಾರವು ದಾಸರು ರಚಿಸುವ ಪೂರ್ವದಲ್ಲಿತ್ತು. ಅದನ್ನು 'ಸ್ವರವಚನ' ಎಂದು ಕರೆಯುತ್ತಿದ್ದರು. ಹಾಗೆಯೇ ಬಳಕೆಯಲ್ಲಿಯೂ ಕೂಡ ಇತ್ತು. ಸ್ವರವಚನ ರೂಪದಲ್ಲಿ ಕೂಡ ಕೀರ್ತನೆಯಲ್ಲಿ ಕಾಣಬಹುದಾದ ಪಲ್ಲವಿ, ಅನುಪಲ್ಲವಿ, ಚರಣ, ಅಂಕಿತ ನಾಮಗಳಿಂದ ಕೂಡಿತ್ತು ಎನ್ನುವುದನ್ನು ಗಮನಿಸಬಹುದು. ಕೀರ್ತನೆಯು ತಾಳ, ಚಿಟಿಗೆ, ತಂಬೂರಿಗಳನ್ನು ಪಡೆದುಕೊಂಡು ಹೊಸ ರೂಪದಲ್ಲಿ ರಚನೆಯಾಯಿತು. ಸಂಗೀತ ಪ್ರಪಂಚಕ್ಕೆ ಹಲವು ಅಮೂಲ್ಯ ಕೊಡುಗೆಗಳನ್ನು ಹರಿದಾಸರು ನೀಡಿದರೆಂದರೆ ತಪ್ಪಾಗಲಾರದು. ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು, ಕೈಯಲ್ಲಿ ತಂಬೂರಿ ಹಿಡಿದು, ಮನೆ ಮನೆಗೆ ತೆರಳಿ ಸರಳ ಭಕ್ತಿಯನ್ನು ಪರಿಚಯಮಾಡಿಕೊಟ್ಟರು. ನವವಿಧ ಭಕ್ತಿಯ ಸ್ವರೂಪವನ್ನು ತಿಳಿಯ ಹೇಳಿದರು. ನೈತಿಕ ಜೀವನವನ್ನು ಕೈಗೊಂಡು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂಬ ಹಿತನುಡಿಯನ್ನು ಹೇಳಿದರು. ಆದ್ದರಿಂದ ಕೀರ್ತನೆಯು ಸಂಪ್ರದಾಯಿಕ ಆಚರಣೆಗಳಾದ ಮದುವೆ, ಉಪನಯನ, ಮುಂತಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಉಳಿದುಕೊಂಡು ಬಂದಿದೆ. "ಈ ಪರಂಪರೆಯ ಮೂಲಕ ಹರಿದ ಭಕ್ತಿ ವಾಹಿನಿ ಮತ್ತೊಮ್ಮೆ ಕರ್ನಾಟಕದ ಜನಮನವನ್ನು ಪುನೀತಗೊಳಿಸಿತು. ಈ ಯುಗದಲ್ಲಿ ದೇಶದಾದ್ಯಂತ ವ್ಯಾಪಿಸಿಕೊಂಡಿದ್ದ ಭಕ್ತಿಪಂಥದ ಪ್ರತಿಬಿಂಬ ಕರ್ನಾಟಕದಲ್ಲಿ ಈ ರೂಪದಲ್ಲಿ ಕಾಣಿಸಿಕೊಂಡಿತೆಂಬುದಷ್ಟೇ ಅಲ್ಲ. ಇದರಿಂದ ಕರ್ನಾಟಕ ಧಾರ್ಮಿಕ ಜಗತ್ತಿನ ಒಂದು ಮುಖ ಉದ್ಧಾರವಾದುದು ಮಾತ್ರವಲ್ಲ. ಸಾಹಿತ್ಯ ಲೋಕವೂ ಕೃತಾರ್ಥವಾಯಿತು. ಜಾಗತಿಕ ಸಾಹಿತ್ಯಕ್ಕೆ ನಮ್ಮ ಕೊಡುಗೆಗಳಲ್ಲಿ ಇದೂ ಒಂದು ಎಂದು ಹೇಳಿಕೊಳ್ಳಬಹುದಾದಂಥ ಅಮೂಲ್ಯ ಸಾಹಿತ್ಯ ಇದರಿಂದ ನಮಗೆ ದೊರೆಯಿತು."[೧೧]

ಹರಿದಾಸ ಸಾಹಿತ್ಯವು ಗುರುಶಿಷ್ಯ ಪರಂಪರೆಯ ಮಾದರಿಯಲ್ಲಿ ಬೆಳೆದು ಬಂದಿದೆ. ಗುರು ಮತ್ತು ಶಿಷ್ಯರ ಸಂಬಂಧದ ಔನ್ನತ್ಯವನ್ನು ಹರಿದಾಸ ಸಾಹಿತ್ಯದಲ್ಲಿ ನಿಚ್ಚಳವಾಗಿ ಕಾಣಬಹುದು.

ನಮಃ ಶ್ರೀಪಾದರಾಜಾಯ ನಮಸ್ತೆ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯಾರ್ಯಾಯತೇ ನಮಃ

ಕೇವಲ ಶಿಷ್ಯ ಗುರುಗಳನ್ನು ಹೊಗಳುವುದು ಮಾತ್ರವಲ್ಲ 'ಗುರು' ಆದವನು ಸಹ ಶಿಷ್ಯನ ಸಾಧನೆಯನ್ನು ಮೆಚ್ಚಿ ಹೊಗಳಿರುವುದನ್ನು ಕಾಣಬಹುದು. ನಿಷ್ಕಲ್ಮಷವಾದ ಮನಸಿನ ಔದ್ಧಿಕತೆ ಯಾವಾಗಲೂ ಉದಾರ ಭಾವನೆಯನ್ನು ಹೊಂದಿರುತ್ತದೆ. ಅಂತಲೇ ಪುರಂದರದಾಸರ ಗುರುಗಳಾದ ವ್ಯಾಸರಾಯರೇ ತಮ್ಮ ಶಿಷ್ಯನನ್ನು ಹೀಗೆ ಹೊಗಳಿದ್ದಾರೆ.

"ದಾಸರೆಂದರೆ ಪುರಂದರ ದಾಸರಯ್ಯ
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ
ನೀತಿಯೆಲ್ಲವನರಿತು ನಿಗಮವೇದ್ಯನ ನಿತ್ಯ
ವಾತಸುತನಲ್ಲಿಹನ ವರ್ಣಿಸುತಲಿ
ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ
ಪೂತಾತ್ಮ ಪುರಂದರದಾಸರಿವರಯ್ಯ"[೧೨]

ಹರಿದಾಸ ಸಾಹಿತ್ಯದ ಉಗಮ

ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಹರಿದಾಸ ಸಾಹಿತ್ಯದ ಮೂಲ ಪುರುಷರಾರು, ಹರಿದಾಸ ಪಂಥದ ಹುಟ್ಟಿಗೆ ಕಾರಣರಾರು ಎಂಬ ವಿಷಯದ ಬಗ್ಗೆ ವಿದ್ವಾಂಸರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಶ್ರೀ ಮಧ್ವಾಚಾರ್ಯರೇ ಹರಿದಾಸ ಪಂಥದ ಮೂಲ ಕರ್ತೃಗಳು ಎನ್ನುವ ವಾದ ಒಂದು ಕಡೆಯಾದರೆ ಅಚಲಾನಂದ ವಿಠಲದಾಸರು ಮೊದಲಿಗರು ಎಂಬ ಭಿನ್ನವಾದವೂ ಇದೆ. ಅನೇಕ ಹರಿದಾಸ ಕೀರ್ತನೆಗಳಲ್ಲಿ ಮಧ್ವಾಚಾರ್ಯರನ್ನು ಕೊಂಡಾಡಿದ್ದಾರೆ. ಅವರೇ ಮೂಲ ಗುರುಗಳು, ಹರಿದಾಸ ಪಂಥದ ಆದ್ಯ ಪ್ರವರ್ತಕರು ಎಂಬ ಅಂಶವುಳ್ಳ, ಕೀರ್ತನೆಗಳು ಇವೆ. ಹಾಗೇ ಕೊಂಡಾಡುವುದಕ್ಕೆ ಕಾರಣವಿದೆ. ಹನುಮ-ಭೀಮ-ಮಧ್ವ ಪುರಾಣದ ಹಿನ್ನೆಲೆಯಿಂದ ಹರಿದಾಸರು ಚಿತ್ರಿಸಿದ್ದಾರೆ. ಭಕ್ತಿಭಾವದಿಂದ ಸ್ತುತಿಸಿದ್ದಾರೆ. ಆದರೆ ಚಾರಿತ್ರಿಕ ದಾಖಲೆಗಳ ವಿಷಯಕ್ಕೆ ಬಂದಾಗ ಪುರಾಣದ ಸತ್ಯ ಸಂಗತಿಗಳು ಮರೆಯಾಗುವುದು ಸಹಜ. ಪುರಂದರ ದಾಸರ ಕೀರ್ತನೆಯೊಂದರಲ್ಲಿ ಮಧ್ವಾಚಾರ್ಯರೇ ಆದಿ ಗುರುಗಳು ಎಂಬ ಚಿತ್ರಣವನ್ನು ಕಾಣಬಹುದು.

"ಶ್ರೀಪತಿ ನಾಭಿ ಕಮಲದಿ ಅಜ ಜನಿಸಿದನು
ಅಜನ ಮಾನಸ ಪುತ್ರರೇ ಸನಕಾದಿಗಳು
ಸನಕಾದಿಗಳ ಶಿಷ್ಯರೇ ಸತ್ಯಪ್ರಜ್ಞರು
ಸತ್ಯಪ್ರಜ್ಞರ ಶಿಷ್ಯರೇ ಅಚ್ಯುತ ಪ್ರೇಕ್ಷರು
ಅಚ್ಯುತ ಪ್ರೇಕ್ಷರ ಕರಸಂಜಾತರೇ ಮಹಾ ಭಾಷ್ಯಕಾರರು
ಮಹಾ ಭಾಷ್ಯಕಾರರೇ ಗುರುಮುಖ್ಯ ಪ್ರಾಣರು
ಗುರು ಮುಖ್ಯ ಪ್ರಾಣಪತಿ ನಮ್ಮ ಪುರಂದರವಿಠಲ
ದಾಸರಿಗೆ ನಮೋನಮೋ..."[೧೩]

ಜೀ. ವರದರಾಜರಾಯರು (-) ಒಂದು ಕಡೆಯಲ್ಲಿ ಮದ್ವಾಚಾರ್ಯರು ರಚಿಸಿದ 'ದ್ವಾದಶ ಸ್ತೋತ್ರ' ಎಂಬ ಭಕ್ತಿ ಪ್ರಧಾನ ಸ್ತೋತ್ರವೇ ದಾಸ ಪಂಥಕ್ಕೆ ಮೂಲ ಪ್ರೇರಣೆ ಎಂಬುದು ಹಲವರ ನಂಬಿಕೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಬೇಲೂರು ಕೇಶವದಾಸರು ಅಚಲಾನಂದ ವಿಠಲದಾಸರು ರಚಿಸಿರುವ ಕೀರ್ತನೆಗಳನ್ನು ಆಧಾರವಾಗಿಟ್ಟುಕೊಂಡು ಅಚಲಾನಂದ ದಾಸರೇ ಮೊದಲಿಗರು ಎಂಬ ವಾದವನ್ನು ಮುಂದೆ ಇಡುತ್ತಾರೆ. ಜೊತೆಗೆ ಅಚಲಾನಂದದಾಸರು ೯ನೇ ಶತಮಾನದವರೆಂದು ಅಭಿಪ್ರಾಯ ಪಡುತ್ತಾರೆ.

ಕೇವಲ ಕೀರ್ತನೆಗಳ ಆಧಾರದ ಮೇಲೆ ಪ್ರಾಚೀನತೆಯನ್ನು ಗುರುತಿಸಲು ಸಾಧ್ಯವಿಲ್ಲ. ಚರಿತ್ರೆಯನ್ನು ಗುರುತಿಸಲು ಹಲವಾರು ಮಾನದಂಡಗಳಿವೆ. 'ಅಚಲಾನಂದ ವಿಠಲಾಂಕಿತ' ಎಂಬ ಅಂಕಿತ ನಾಮದಲ್ಲಿ ದೊರೆತ ಉಗಾಭೋಗದ ಭಾಷೆ ಸು.೧೫ನೇ ಶತಮಾನಕ್ಕೆ ಸೇರಿದ್ದೆಂದು, ಶಿವಶರಣರ ವಚನ ರೂಪ ಧರಿಸಿದೆಯೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಆ ಉಗಾಭೋಗ ಈ ರೀತಿಯಲ್ಲಿದೆ.

ಪಾತಕರೊಳಗೆಲ್ಲ ನಾನೆ ವೆಗ್ಗಳನಯ್ಯ

ಪ್ರಾಯಶ್ಚಿತ್ತಕ್ಕೆ ನಿನ್ನ ನಾಮವೇ ಘನವಯ್ಯ

ಪಾತಕವನು ನಾನು ಮಾಡಿದ್ದು ಏನು

ಪಾತಕ ಪಾವನ ಎರಡು ನಿನ್ನಾಧೀನ

ಪಾತಕವೆನಗಿಲ್ಲ ಪ್ರಾಯಶ್ಚಿತ್ತವೆನಗಿಲ್ಲ ಕೇಳಯ್ಯ ದೇವ ಅಚಲಾನಂದ ವಿಠಲ"[೧೪] ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮದಿಂದ ನೋಡಿದಾಗ ೧೦ನೇ ಶತಮಾನದ ಭಾಷೆ ಮತ್ತು ಸಾಹಿತ್ಯದ ರೂಪ ಚಂಪುಮಯವಾಗಿತ್ತು. ಅತ್ಯಂತ ಪ್ರೌಢವಾಗಿತ್ತು. ಸಂಸ್ಕೃತದ ಬಳಕೆ ಯಥೇಚ್ಛವಾಗಿತ್ತು. ಈಗಾಗಲೇ ಚಂಪುಯುಗವೆಂದು ಗುರುತಿಸಿರುವ ಸಾಹಿತ್ಯದಲ್ಲಿ ಮೇಲಿನ ಸರಳ ಭಾಷೆಯ ಉಲ್ಲೇಖ ಎಲ್ಲಿಯೂ ದೊರೆತಿಲ್ಲ.

ಅಚಲಾನಂದ ವಿಠಲ ದಾಸರದು ಇನ್ನೊಂದು ಕೀರ್ತನೆಯಲ್ಲಿ ಸ್ವಲ್ಪಮಟ್ಟಿಗೆ ಖಚಿತ ಮಾಹಿತಿ ದೊರಕುತ್ತದೆ.

ಕೇಳೋ ಜೀವವೆ ನೀ ಮಧ್ವ ಮತವನನುರಿಸಿ

ಶ್ರೀ ಲೋಲನಂಘ್ರಿಗಳ ನೆನೆದು ಸುಖಿಸೋ

ಎಂಬ ಅವರ ಕೀರ್ತನೆಯಲ್ಲಂತೂ ಮಧ್ವಮತದ ಸ್ಪಷ್ಟ ಉಲ್ಲೇಖವಿದ್ದು, ಅಚಲಾನಂದರು ಮಧ್ವಾಚಾರ್ಯರಿಗಿಂತ ಈಚಿನವರೆಂಬುದನ್ನು ಸ್ಪಷ್ಟಪಡಿಸುತ್ತದೆ."[೧೫] ಎಂಬ ವಾದವನ್ನು ಆರ್.ಎನ್.ಪಂಚಮುಖಿ, ಕೆ.ಎಂ.ಕೃಷ್ಣರಾವ್, ಹೆಚ್.ಕೆ.ವೇದವ್ಯಾಸಾಚಾರ್, ಜಿ.ವರದರಾಜರಾವ್, ರಂ.ಶ್ರೀ.ಮುಗಳಿ, ಕಪಟರಾಳ ಕೃಷ್ಣರಾಯರಂತಹ ವಿದ್ವಾಂಸರು ಸ್ವೀಕರಿಸಿದ್ದಾರೆ.

ಈ ಮೇಲಿನ ಎಲ್ಲ ಕಾರಣಗಳಿಂದಾಗಿ ಕೇಶವದಾಸರ ವಾದವನ್ನು ವಿದ್ವಾಂಸರು ತಳ್ಳಿ ಹಾಕಿದ್ದಾರೆ. ಅಲ್ಲದೆ "ಎಂತು ಮರುಳಾದೆ ನಾನೆಂತು ಮರಳಾದೆ" ಎಂಬ ಕೀರ್ತನೆಯನ್ನು ಇಟ್ಟುಕೊಂಡು ನರಹರಿ ತೀರ್ಥರೇ ಮೊದಲಿಗರೆಂದು, ಹರಿದಾಸ ಕೃತಿಗಳಲ್ಲಿ ಮೊದಲನೆಯದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.

"ಇತ್ತೀಚಿಗೆ ಟಿ.ಎಸ್.ನಾಗರತ್ನರವರು ತತ್ವಚಾರ್ರಿಕಾ ಎಂಬ ಪತ್ರಿಕೆಯಲ್ಲಿ ಅಚಲಾನಂದರು ಇಬ್ಬರಿದ್ದು, ಒಂಭತ್ತನೆಯ ಶತಮಾನದ ಅಚಲಾನಂದರು ಮಠಾಧಿಪತಿಗಳು, ಇನ್ನೊಬ್ಬ ಅಚಲಾನಂದರು ೧೭ನೇ ಶತಮಾನದವರು. ಅವರು ಮೈಸೂರಿನ ದೊರೆ ಮೊದಲನೇ ಕೃಷ್ಣರಾಜರಿಂದ ವೃತ್ತಿಯನ್ನು ಪಡೆದವರು. ಈಗ ದೊರೆತಿರುವ ಅಚಲಾನಂದ ವಿಠಲರ ಅಂಕಿತದಲ್ಲಿರುವ ಕೀರ್ತನೆ, ಉಗಾಭೋಗಗಳು ಎರಡನೇ ಅಚಲಾನಂದರವು. ಹದಿನೇಳನೆಯ ಶತಮಾನದ ಹೊತ್ತಿಗೆ ಹರಿದಾಸ ಸಾಹಿತ್ಯ ವಿಪುಲವಾಗಿ ಬೆಳೆದಿತ್ತು ಎಂದೂ ಆದ್ಯರಲ್ಲಿ ಒಬ್ಬರಾದ ಅಚಲಾನಂದರ ಕುರಿತಾದ ಚರ್ಚೆಗೆ ಸಂಶೋಧನೆ ಪರಿಹಾರ ನೀಡಿದ್ದಾರೆ."[೧೬]

ದಾಸ ಸಾಹಿತ್ಯ ಖಚಿತವಾದ ಆಕಾರ ಪಡೆದುಕೊಂಡಿದ್ದು ಶ್ರೀಪಾದರಾಜರಿಂದಲೇ.

ದಾಸಸಾಹಿತ್ಯದ ಕಾಲಘಟ್ಟ

ಹರಿದಾಸ ಸಾಹಿತ್ಯದ ಕಾಲಘಟ್ಟ ಕುರಿತಂತೆ ವಿದ್ವಾಂಸರಲ್ಲಿ ಒಮ್ಮತ ಅಭಿಪ್ರಾಯವಿಲ್ಲ. ತಮಗೆ ದೊರೆತ ಲಿಖಿತ, ಅಲಿಖಿತ ಆಧಾರ, ಮೌಖಿಕ ಆಧಾರದ ಮೇಲೆ ಐತಿಹ್ಯವನ್ನು ಗುರುತಿಸುವುದನ್ನು

ಕಾಣಬಹುದು. ಈ ಬಗೆಯ ಕಾಲಘಟ್ಟಗಳ ವಿವೇಚನೆಯಿಂದ ದಾಸರ ಕಾಲಗಳನ್ನು ಗುರುತಿಸಬಹುದು. ಭಾಷಾ ರಚನೆಯಲ್ಲೂ ಆದ ಬದಲಾವಣೆಯನ್ನು ಸಹ ಗುರುತಿಸಬಹುದು.

ಶ್ರೀ ರಾ.ಸ್ವಾ.ಪಂಚಮುಖಿಯವರು ಹರಿದಾಸ ಸಾಹಿತ್ಯವನ್ನು ನಾಲ್ಕು ಹಂತಗಳಲ್ಲಿ ಗುರುತಿಸಿದ್ದಾರೆ. ಅದು ಹೀಗಿದೆ.

೧. ಮಧ್ವಾಚಾರ್ಯರು ಮತ್ತು ಅವರ ಶಿಷ್ಯರಾದ ನರಹರಿತೀರ್ಥ ಹಾಗೂ ಜಯತೀರ್ಥರ ಕಾಲದಲ್ಲಿ ಮೂಡಿ ಬಂದ ಸಾಹಿತ್ಯ.

೨. ಪುರಂಪದರದಾಸರ ಕಾಲ: ವ್ಯಾಸರಾಯರು, ಪುರಂದರದಾಸರು, ಕನಕದಾಸರು ಮೊದಲಾದವರು ಹರಿದಾಸ ಸಾಹಿತ್ಯವನ್ನು ರಚಿಸಿದರು.

೩. ವಿಜಯದಾಸರ ಕಾಲ: ವಿಜಯದಾಸರ ನಂತರದಿಂದ ಸೃಷ್ಟಿ ಆದ ಸಾಹಿತ್ಯ ಇದರಲ್ಲಿ ಮುಖ್ಯವಾಗಿ ಜಗನ್ನಾಥ ದಾಸರು, ಮೋಹನದಾಸರನ್ನು ಹೆಸರಿಸಬಹುದು.

೪. ಪ್ರಾಣೇಶದಾಸ, ಗುರುಪ್ರಾಣೇಶದಾಸ ಮುಂತಾದವರು ರಚಿಸಿದ ಸಾಹಿತ್ಯ”[೧೭]

ಡಾ. ಎಚ್.ಕೆ.ವೇದವ್ಯಾಸ ಆಚಾರ್ಯರ ವಿಂಗಡಣೆ ವಿಶೇಷವಾಗಿದೆ. ಯಾವ ಪ್ರಮುಖ ದಾಸರ ನಾಮಧೇಯವನ್ನು ಉಲ್ಲೇಖಿಸದೆ ನಾಲ್ಕು ಘಟ್ಟಗಳನ್ನು ಹೆಸರಿಸಿದ್ದಾರೆ. ಅವು ಹೀಗಿದೆ.

೧. ಆರಂಭದ ಕಾಲ

೨. ಉನ್ನತಿಯ ಕಾಲ

೩. ವಿಸ್ತಾರ ಕಾಲ

೪. ಅವನತಿಯ ಕಾಲ”[೧೮]

ಕೆ.ಜಿ.ಶಾಸ್ತ್ರೀಯವರು ( ) ಹರಿದಾಸ ಸಾಹಿತ್ಯವನ್ನು ಎರಡು ರೀತಿಯಲ್ಲಿ ಗುರುತಿಸಿದ್ದಾರೆ. ೧೨ರಿಂದ ೧೯ರವರೆಗೆ ಬೆಳೆದು ಬಂದ ಸಾಹಿತ್ಯವನ್ನು ಎರಡು ಹಂತಗಳಲ್ಲಿ ಪರಿಗಣಿಸುವುದು ಸೂಕ್ತವೆಂದು ಅವರ ಅಭಿಪ್ರಾಯವಾಗಿದೆ.

೧. ನರಹರಿ ತೀರ್ಥರಿಂದ ಹಿಡಿದು ಪುರಂದರ, ಕನಕದಾಸರ ಕಾಲದಲ್ಲಿ ಸೃಷ್ಟಿಯಾದ ಸಾಹಿತ್ಯ.

೨. ವಿಜಯದಾಸರ ನಂತರ ಮೂಡಿಬಂದ ಸಾಹಿತ್ಯ[೧೯]

ಡಾ.ಎಸ್.ತಿಪ್ಪೇರುದ್ರ ಸ್ವಾಮಿಯವರು ಹರಿದಾಸ ಸಾಹಿತ್ಯದ ಕಾಲಾವಧಿಯನ್ನು ಅನುಲಕ್ಷಿಸಿ ಒಂದೇ ಹಂತವನ್ನು ಗುರುತಿಸುತ್ತಾರೆ.

೧. ಪುರಂದರಯುಗ[೨೦]

ಡಾ.ಆರ್.ಜಿ.ಗುಡಿಯವರು ಸಹ ಹರಿದಾಸ ಸಾಹಿತ್ಯವನ್ನು ನಾಲ್ಕು ಹಂತಗಳಲ್ಲಿ ಗುರುತಿಸಿದ್ದಾರೆ.

೧. ಶ್ರೀಪಾದರಾಜ ಪೂರ್ವಯುಗ (ಕ್ರಿ.ಶ.೮೭೯-೧೪೫೦)

೨. ಶ್ರೀಪಾದರಾಜ ಯುಗ (ಕ್ರಿ.ಶ. ೧೪೫೧-೧೫೬೫)

೩. ವಿಜಯದಾಸರ ಯುಗ (ಕ್ರಿ.ಶ. ೧೫೬೬-೧೮೦೯)

೪. ಶಿಷ್ಯ-ಪ್ರಶಿಷ್ಯರ ಯುಗ (ಕ್ರಿ.ಶ. ೧೮೧೦-)[೨೧]

ಡಾ. ಸುಮನ್‌ರಂಗನಾಥರವರು ಲೇಖಕ ಆರ್.ಜಿ.ಗುಡಿಯವರ ವಿಭಾಗ ಕ್ರಮವನ್ನು ಅನುಲಕ್ಷಿಸಿ ಐದು ಹಂತಗಳಲ್ಲಿ ಹರಿದಾಸ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಗುರುತಿಸಿದ್ದಾರೆ. ಅವುಗಳು ಹೀಗಿವೆ.

೧. ಶ್ರೀಪಾದರಾಜರ ಪೂರ್ವಯುಗ (ಕ್ರಿ.ಶ.೧೩ರಿಂದ ೧೫ನೇ ಶತಮಾನ)

೨. ಶ್ರೀಪಾದರಾಜರ ಯುಗ (ಕ್ರೀ.ಶ.೧೫ರಿಂದ ೧೬ನೇ ಶತಮಾನ)

೩. ಸಂಧಿಕಾಲ (ಕ್ರಿ.ಶ.೧೬ನೆಯ ಶತಮಾನದ ಉತ್ತರಾರ್ಧ)

೪. ವಿಜಯದಾಸರಯುಗ (ಕ್ರಿ.ಶ.೧೮ರಿಂದ ೧೯ನೆ ಶತಮಾನ)

೫. ಪ್ರಾಣೇಶದಾಸರಯುಗ (ಕ್ರಿ.ಶ.೧೯ನೇ ಶತಮಾನ)"[೨೨]

ಡಾ.ಸುಮನ್ ರಂಗನಾಥವರು ಶ್ರೀಪಾದರಾಜರ ಯುಗ ಮತ್ತು ವಿಜಯದಾಸರಯುಗ ನಡುವಿನ ಕಾಲಾವಧಿಯನ್ನು 'ಸಂಧಿಕಾಲ' ಎಂಬುದಾಗಿ ಗುರುತಿಸಿದ್ದಾರೆ.

ಒಟ್ಟಾರೆಯಾಗಿ ಅಚ್ಚ ಕನ್ನಡ ಕೀರ್ತನೆಗಳು ದೊರಕಿದ್ದು ನರಹರಿತೀರ್ಥರಕಾಲದಲ್ಲಿ. ಪಂಚಮುಖಿಯವರು ಹೇಳುವ ಹಾಗೆ "ನರಹರಿತೀಥರು ಕನ್ನಡದಲ್ಲಿ ಪದಗಳನ್ನು ರಚಿಸಿ ದಾಸಕೂಟದ ಮೂಲ ಪುರುಷರೆಂದು ಪ್ರಸಿದ್ಧಿ ಪಡೆದಿದ್ದಾರೆ."[೨೩] ಅಲ್ಲಿಂದ ಮುಂದೆ ಅನೇಕ ದಾಸರು ಹರಿದಾಸ ಸಾಹಿತ್ಯವನ್ನು ರಚನೆ ಮಾಡಿದರು.

ನರಹರಿತೀರ್ಥರು

ನರಹರಿತೀರ್ಥರು ಮಧ್ವಾಚಾರ್ಯರ ಶಿಷ್ಯರು. ಇವರು ರಚಿಸಿದ ನಾಲ್ಕು ಕೃತಿಗಳು ದೊರೆತಿವೆ. ಅವುಗಳೆಂದರೆ

೧. ಎಂತು ಮರುಳಾದೆ.

೨. ಹರಿಯೇ ಇದು ಸರಿಯೆ

೩. ತಿಳಕೊ ನಿನ್ನೊಳಗೆ

೪. ಎದುರ್‍ಯಾರೇ ಗುರುವೆ ಸಮರ‍್ಯಾರೊ

ಆದರೆ ಎ.ವಿ.ನಾವಡ ಮತ್ತು ಗಾಯತ್ರಿನಾವಡರವರು ಸಂಪಾದಿಸಿರುವ 'ಸಾವಿರಾರು ಕೀರ್ತನೆಗಳು' ಎನ್ನುವ ಕೃತಿಯಲ್ಲಿ ಎರಡು ಕೀರ್ತನೆಗಳ ಉಲ್ಲೇಖವಿದೆ. ಆ ಎರಡು ಕೀರ್ತನೆಗಳಲ್ಲಿ 'ರಘುಪತಿ' ಮತ್ತು 'ನರಹರಿ' ಎಂಬ ಅಂಕಿತನಾಮಗಳನ್ನು ಕಾಣಬಹುದು.

ಶ್ರೀಪಾದರಾಜರು (೧೪೦೪-೧೫೦೨)

ನರಹರಿತೀರ್ಥರ ನಂತರ ಬಂದವರು ಶ್ರೀಪಾದರಾಜರು. ಇವರ ಕಾಲ ಕ್ರಿ.ಶ. ೧೪೦೪, ಶೇಷಗಿರಿ ಆಚಾರ್ಯ ಮತ್ತು ಗಿರಿಯಮ್ಮ ಎಂಬ ದಂಪತಿಗಳ ಮಗನಾಗಿ ಚನ್ನಪಟ್ಟಣ ಸಮೀಪದ ಅಬ್ಬೂರು ಗ್ರಾಮದಲ್ಲಿ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ಲಕ್ಷ್ಮೀನಾರಾಯಣ. ಸ್ವರ್ಣವರ್ಣತೀರ್ಥರಿಂದ ಸನ್ಯಾಸ ದೀಕ್ಷೆ ಪಡೆದರು. ಶ್ರೀ ರಘುನಾಥತೀರ್ಥರು ಇವರಿಗೆ 'ಶ್ರೀಪಾದರಾಜ'ರೆಂಬ ನಾಮಧೇಯವನ್ನು ನೀಡಿದರು. ಮುಂದೆ ಶ್ರೀಪಾದರಾಜರು 'ರಂಗವಿಠಲ' ಅಂಕಿತನಾಮದಿಂದ ಅನೇಕ ಕೀರ್ತನೆಗಳನ್ನು

ರಚಿಸಿದರು. ಹರಿದಾಸ ಸಾಹಿತ್ಯಕ್ಕೆ ಹೊಸಬಗೆಯ ಸಂಚಲನವನ್ನು ತಂದು ಕೊಟ್ಟರು. ಡಾ.ಡಿ.ಕೆ.ಭೀಮಸೇನರಾವ ಅವರು ಹೇಳುವಂತೆ ಕನ್ನಡವನ್ನು ಅನಾವರಣ ಮಾಡದೆ, ಕನ್ನಡವನ್ನು ಮೈಲಿಗೆಯ ಮಾತೆಂದು ತೆಗಳದೆ "ಕನ್ನಡ ಭಾಷೆಯಲ್ಲಿಯೇ ಪರಮಾತ್ಮನನ್ನು ಕೀರ್ತಿಸಿದರು. ಲೋಕಕ್ಕೆ ಉಪದೇಶವನ್ನಿತ್ತರು."

ದೇವರ ಪೂಜೆ ಮಾಡುವ ಸಂದರ್ಭದಲ್ಲಿ ಸಂಸ್ಕೃತದ ಮಂತ್ರದ ಜೊತೆಗೆ ಕನ್ನಡ ಕೀರ್ತನೆಗಳನ್ನು ಹಾಡುವ ಸಂಪ್ರದಾಯವನ್ನು ಹುಟ್ಟು ಹಾಕಿದವರು ಶ್ರೀಪಾದರಾಜರು. ಶ್ರೀಪಾದರಾಜರು ಕೆಲಕಾಲ ತಮಿಳುನಾಡಿನ ಶ್ರೀರಂಗಂನಲ್ಲಿದ್ದರು. ಅಲ್ಲಿನ ಆಳ್ವಾರರು ರಚಿಸಿದ ತೇವಾರಂಗಳು ಜನಸಾಮಾನ್ಯರ ಮೇಲೆ ಅಗಾಧ ಪ್ರಭಾವವನ್ನು ಬೀರಿದ್ದವು. ಈ ಘಟನೆಯನ್ನು ಅರಿತಿದ್ದ ಶ್ರೀಪಾದರಾಜರು ಶ್ರೀರಂಗದಿಂದ ಮುಳುಬಾಗಿಲಿಗೆ ಬಂದು ನೆಲೆ ನಿಂತು ಸರಳವಾಗಿ ಕನ್ನಡ ಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿದರು. ಸಂಸ್ಕೃತದ ಪ್ರಭಾವವಿದ್ದ ಕಾಲದಲ್ಲಿ ಮಠದ ಯತಿಯಾಗಿದ್ದುಕೊಂಡು ಕನ್ನಡ ಭಾಷೆಯಲ್ಲಿ ಕೀರ್ತನೆಯನ್ನು ರಚಿಸಿದ್ದು ಸಾಧನೆಯ ವಿಷಯವೆಂದೇ ಹೇಳಬಹುದು 'ಗೋಪಿಗೀತ' 'ವೇಣುಗೀತ' 'ಭ್ರಮರಗೀತ' ಮೊದಲಾದ ಹರಿಯ ಮಹಿಮೆಯುಳ್ಳ ಕೀರ್ತನೆಗಳನ್ನು ರಚಿಸಿದರು. ದಂಡಕ, ವೃತ್ತನಾಮಗಳಲ್ಲಿ ಮೊದಲಬಾರಿಗೆ ಹರಿಯ ಸ್ತುತಿಯುಳ್ಳ ರಚನೆಗಳನ್ನು ರಚಿಸಿದವರು ಶ್ರೀಪಾದರಾಜರು.

"ಇಟ್ಟಾಂಗೆ ಇರುವೇನೋ ಹರಿಯೇ ಎನ್ನದೊರೆಯ
ಸೃಷ್ಟಿವಂದಿತ ಪಾದ ಪದುಮ ಶ್ರೀ ಹರಿಯೇ
ಗಂಗಾ ಜನಕ ಪಾಂಡುರಂಗ ನಿನ್ನಯಭಕ್ತರ
ಸಂಗವಿರಲಿ ದುಷ್ಟಸಂಗಬ್ಯಾಡ
ಅಂಜನೆಯರ ಕೂಡಿ ಅಂಗನ ಬಾಣಕೆ ಸಿಲಾರೆ
ಭಂಗವ ಪಡಲಾರೆ ಶ್ರೀರಂಗವಿಠಲ ಹರಿಯೇ"[೨೪]

ಹೀಗೆ ಭಕ್ತಿಯೊಂದನ್ನು ಬಿಟ್ಟು ಬೇರೆ ಏನನ್ನೂ ಧೇನಿಸದೆ, ಆಸೆ-ಕ್ಲೇಷಗೊಳಗಾಗದೆ ಹಲವಾರು ಕೀರ್ತನೆಗಳನ್ನು ರಚಿಸಿದರು. "ಪೋಪುಹೋಗೋಣಬಾರೊರಂಗ" ಉತ್ತಮರಯೆನಗಿತ್ತು ಸಲಹು 'ಎಲ್ಲಾಡಿ ಬಂದ್ಯೋ ಎನ್ನರಂಗಯ್ಯಾ' 'ಒಲಿದೆಯಾತಕಮ್ಮ ಲಕುಮೀ' ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ' ಎಂಬ ಕೀರ್ತನೆಗಳು ಜನಜನಿತವಾಗಿವೆ. ಶ್ರೀಪಾದರಾಜರ ಕನ್ನಡ ಕೃತಿಗಳಲ್ಲಿ ಪದಲಾಲಿತ್ಯ ಅಲಂಕಾರ ಪೌಢಿಮೆ, ಶೃಂಗಾರ, ಶಾಂತಿ, ಭಕ್ತಿ ರಸಗಳ ನಿರೂಪಣೆ ಇವು ಓದುಗರ ಚಿತ್ತವನ್ನೂ ಹೃದಯವನ್ನೂ ಆಕರ್ಷಿಸುವುವು. ಶ್ರೀಭಾಗವತದ ಕೃಷ್ಣಕತೆಯನ್ನು ಚಿಕ್ಕ ಚಿಕ್ಕ ಪದಗಳಲ್ಲಿ ಬಹುರಸವತ್ತಾಗಿ ರಚಿಸಿದ್ದಾರೆ.

ವ್ಯಾಸರಾಯರು

ಶ್ರೀಪಾದರಾಜರ ಶಿಷ್ಯ ಬಳಗದಲ್ಲಿ ವ್ಯಾಸರಾಯರು ಪ್ರಮುಖರು ಮತ್ತು ಪ್ರಸಿದ್ಧರು. ವಿಜಯನಗರದ ಅರಸರುಗಳಿಗೆ ರಾಜಗುರುಗಳಾಗಿದ್ದರು. ವಿಜಯನಗರದ ಪ್ರಮುಖ ರಾಜನಾದ ಶ್ರೀ ಕೃಷ್ಣದೇವರಾಯನ ಕುಹೂ ಯೋಗವನ್ನು ನಿವಾರಿಸಿ ಖ್ಯಾತರಾದವರು.

ಗುರುವಿನೋಪಾದಿಯಲ್ಲಿ ನೆಲೆನಿಂತು ಹರಿದಾಸರ ದೊಡ್ಡಸಂಘಟನೆಯನ್ನೂ ಬೆಳೆಸಿದರು. ಇವರ ಕಾಲವಧಿಯಲ್ಲಿಯೇ 'ವ್ಯಾಸಕೂಟ' 'ದಾಸಕೂಟ' 'ದೀಕ್ಷೆಯ ಕ್ರಮ' 'ಅಂಕಿತ ಪ್ರಧಾನ' ಪದ್ಧತಿಗಳು ಗುರುಪರಂಪರೆ ಎನ್ನುವಂತೆ ಬೆಳೆದುಬಂದವು. ಮುಂದುವರೆದು ವ್ಯಾಸರಾಯರೇ ವ್ಯಾಸಕೂಟದ ಸಂಸ್ಥಾಪಕರಾದರು. ದಾಸಕೂಟವನ್ನು ರಚಿಸಿ ಪುರಂದರದಾಸರ ಆದಿಯಾಗಿ ಎಲ್ಲಾ ದಾಸರಿಗೆ ಭಕ್ತಿಯ ವೇದಿಕೆಯನ್ನು ನಿರ್ಮಿಸಿಕೊಟ್ಟರು. ಕೃಷ್ಣ, ಶ್ರೀಕೃಷ್ಣ, ಸಿರಿಕೃಷ್ಣ, ಮುದ್ದುಕೃಷ್ಣ ಎಂಬ ಮುದ್ರಿಕೆಯಲ್ಲಿ ತಮ್ಮ ರಚನೆಗಳನ್ನು ಬರೆದರು. 'ಅಂತರಂಗದಲಿ ಹರಿಯ ಕಾಣದವ ಹುಟ್ಟುಕುರುಡನೊ' 'ಹರಿದಾಸರ ಸಂಗಕೆ ಎಣೆಯುಂಟೆ' 'ಕೃಷ್ಣ ನೀ ಬೇಗನೇಬಾರೋ' ಕೊಳಲನೊದವ ಚದುರನ್ಯಾರೆ ಪೇಳಮ್ಮಯ್ಯ' 'ದಾಸರೆಂದರೆ ಪುರಂದರದಾಸರಯ್ಯ' ಮುಂತಾದ ಕೀರ್ತನೆಗಳನ್ನು ಸರಳವಾಗಿ ಸುಂದರವಾಗಿ ರಚಿಸಿದ್ದಾರೆ.

"ಅಂತರಂಗದಲ್ಲಿ ಹರಿಯ ಕಾಣದವ
ಹುಟ್ಟುಕುರುಡನೋ
ಸಂತತ ಸಿರಿಕೃಷ್ಣ ಚರಿತೆ ಕೇಳದವ
ಜಡಮತಿ ಕಿವುಡನೊ ಎಂದೆಂದಿಗೂ"[೨೫]

ಎನ್ನುತ್ತಾ ಹರಿಯ ಶ್ರೇಷ್ಠತೆಯನ್ನು ಎತ್ತಿಹಿಡಿದರು. ಹರಿಯ ಅಥವಾ ಭಗವಂತನ ಮೇಲೆ ಎಷ್ಟು ಪ್ರಿಯವಾದ ಭಕ್ತಿಯುಂಟೋ ಅಷ್ಟೇ ಪ್ರೀತಿ ಗುರುಗಳ ಮೇಲೂ ಇತ್ತು. ನಿಗರ್ವದ ಸಂಕೇತವಾಗಿದ್ದರು. 'ಮಹಿಮೆ ಸಾಲದೆ ಇಷ್ಟೆ ಮಹಿಮೆ ಸಾಲದೆ' ಎನ್ನುನ ಕೀರ್ತನೆಯಲ್ಲಿ ತಮ್ಮ ಗುರುಗಳನ್ನು ಅವರ ವ್ಯಕ್ತಿತ್ವದ ಮಹಾತಿಶಯವನ್ನು ಕೊಂಡಾಡಿದ್ದಾರೆ. ಗುರುವಿನ ಸ್ಥಾನದಲ್ಲಿ ನಿಂತು ಶಿಷ್ಯನನ್ನು ಹೊಗಳುವ ಮನಸ್ಸು ಶ್ರೀಮಂತಿಕೆಯದ್ದಾಗಿರುತ್ತದೆ ಎನ್ನುವುದಕ್ಕೆ ವ್ಯಾಸರಾಯರೇ ದೊಡ್ಡ ಉದಾಹರಣೆಯಾಗಿದ್ದಾರೆ. ತಮ್ಮ ಅನೇಕ ಜನ ಶಿಷ್ಯರಲ್ಲಿ ಒಬ್ಬರಾದ ಪುರಂದರದಾಸರನ್ನು 'ದಾಸರೆಂದರೆ ಪುರಂದರದಾಸರಯ್ಯ' ಎಂದು ಶಿಷ್ಯನನ್ನು ಕೊಂಡಾಡಿದ್ದಾರೆ.

"ಶ್ರೇಷ್ಠ ಪಂಡಿತರೂ ಯತಿಯೂ ಆಗಿ ತತ್ಕಾಲೀನ ಜನಜೀವನದ ಮೇಲೆ ಪ್ರಭಾವ ಬೀರಿ ಶಿಷ್ಯರ ಮೂಲಕ ದಾಸಕೂಟ ವಾಙ್ಮಯಕ್ಕೆ ಎತ್ತರದ ಪೀಠವನ್ನು ಕಲ್ಪಿಸಿಕೊಟ್ಟು ಕನ್ನಡ ಜನತೆಗೆ ಮಹೋಪಕಾರ ಮಾಡಿದ ಮಹಾವ್ಯಕ್ತಿಯೆಂದು ವ್ಯಾಸರಾಯರನ್ನು ನೆನೆಯಬೇಕು"[೨೬] ಎಂದು ರಂ.ಶ್ರೀ.ಮುಗಳಿ ಅಭಿಪ್ರಾಯ ಪಡುತ್ತಾರೆ.

ವಾದಿರಾಜರು (೧೪೮೦-೧೬೦೦)

ಸೋದೆ ಮಠದ ಸ್ವಾಮಿಗಳಾಗಿದ್ದ ವಾದಿರಾಜರು ವ್ಯಾಸರಾಯರ ಪ್ರಮುಖ ಶಿಷ್ಯರು. ಕನ್ನಡ, ಸಂಸ್ಕೃತ, ತುಳುಭಾಷೆಗಳನ್ನು ಬಲ್ಲವರಾಗಿದ್ದರು. ಸಂಸ್ಕೃತ ಭಾಷೆಯಲ್ಲಿ 'ರುಕ್ಮಿಣೀಶ ವಿಜಯ,' 'ಸರಸಭಾರತೀವಿಲಾಸ' 'ಯುಕ್ತಿಮಲ್ಲಿಕಾ' ಎಂಬ ಗ್ರಂಥಗಳನ್ನು ರಚಿಸಿದರು. ಕನ್ನಡದಲ್ಲಿ 'ವೈಕುಂಠವರ್ಣನೆ', 'ಲಕ್ಷ್ಮೀಶೋಬಾನೆ' 'ಸ್ವಪ್ನಪದ' 'ಕೀಚಕವಧ' 'ಕೇಶವನಾಮ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ವೈದಿಕರ ಹೆಂಗಸರ ಬಾಯಲ್ಲಿ 'ಲಕ್ಷ್ಮೀಶೋಬಾನೆ' ಎಂಬ ದೀರ್ಘಕೀರ್ತನೆಯು ನಿತ್ಯನೂತನವಾಗಿದೆ.

'ಹಯವದನ' ಎಂಬ ಅಂಕಿತನಾಮದಿಂದ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಮಾಧ್ವತತ್ವ ಪ್ರತಿಪಾದನೆ, ಸಾಮಾಜಿಕ ವಿಡಂಬನೆ, ಭಗವಂತನಲ್ಲಿ ಅಪಾರ ನಂಬಿಕೆ, ಆರ್ತತೆ ಮುಂತಾದ ಭಾವಗಳು ಕೀರ್ತನೆಯಲ್ಲಿ ಅಡಕಗೊಂಡಿವೆ.

'ತಾಳುವಿಕೆಗಿಂತ ತಪವು ಇಲ್ಲ'

'ಕುದುರೆ ಬಂದಿದೆ ಚೆಲುವ ಕುದುರೆ ಬಂದಿದೆ'

'ಒಂದುಬಾರಿ ಸ್ಮರಣೆ ಸಾಲದೆ'

'ಓದುವುದು ವೇದ ಹಾಕುವುದು ಗಾಳ'

'ತೇಜಿಯೇರಿ ಮೆರೆದು ಬಂದ'

'ನಿನ್ನ ದಾಸನು ನಾನು ಎಂತಹನಯ್ಯ'

ಸರಳ, ಗಂಭೀರ ಅರ್ಥವನ್ನೊಳಗೊಂಡಂತೆ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಪರಮಾತ್ಮನ ಅನುಗ್ರಹ ಹಾಗೂ ಧನ್ಯಭಾವಗಳಿಂದ ಕೂಡಿದ ಹಲವಾರು ಕೀರ್ತನೆಗಳು ಅನೇಕರ ಬಾಯಲ್ಲಿ ಕಂಠಸ್ಥ ರೂಪದಲ್ಲಿ ಉಳಿದಿವೆ.

ಪುರಂದರದಾಸರು (೧೪೮೦-೧೫೬೪)

ದಾಸಸಾಹಿತ್ಯ ಅಥವಾ ಕೀರ್ತನೆಗಳು ಎಂದ ಕೂಡಲೇ ನೆನಪಿಗೆ ಬರುವವರು ಪುರಂದರದಾಸರು. 'ದಾಸಶ್ರೇಷ್ಠ'ರೆಂದು ತಮ್ಮ ಗುರುಗಳ ಕಡೆಯಿಂದ ಹೊಗಳಿಸಿಕೊಂಡವರು. ಒಂದಾನೊಂದು ಕಾಲದಲ್ಲಿ ಮಿತಿಮೀರಿದ ವೈಭೋಗ ಜೀವನವನ್ನು ಕೈಗೊಂಡಿದ್ದ ಪುರುಂದರದಾಸರು ಮೂಗುತಿಯ ಪ್ರಸಂಗಕ್ಕಾಗಿ ಜೀವನದಲ್ಲಿ ಐಹಿಕ ಸುಖವನ್ನು ತ್ಯಜಿಸಿ ಹರಿದಾಸರಾದರು. ನಾಲ್ಕುಲಕ್ಷ ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿದ್ದಾರೆ ಎಂಬ ಅಭಿಪ್ರಾಯವಿದೆ. ಆದರೆ ಆ ನಾಲ್ಕುಲಕ್ಷ ಎಪ್ಪತ್ತೈದು ಸಾವಿರ ಕೀರ್ತನೆಗಳು ಅಲಭ್ಯವಾಗಿವೆ. ಕೇವಲ ಸಾವಿರ ಕೀರ್ತನೆಗಳು ಮಾತ್ರ ಲಭ್ಯವಾಗಿದೆ.

ದಾಸ ಸಾಹಿತ್ಯದಲ್ಲಿ ಪುರಂದರದಾಸರಿಗೆ ಹಿರಿಯ ಸ್ಥಾನವಿದೆ. 'ಪುರಂದರೋಪನಿಷತ್ತು' ಎಂದು ಕರೆಯಿಸಿಕೊಳ್ಳುವ ಇವರ ಸಾಹಿತ್ಯ ಗಾತ್ರದಲ್ಲಿ, ರಚನೆಯಲ್ಲೂ ಮಹತ್ವದ್ದಾಗಿದೆ.

ಪುರಂದರದಾಸರು ತಮ್ಮ ಜೀವನದಲ್ಲಿ ಅನೇಕ ಬಾರಿ ತೀರ್ಥಯಾತ್ರೆಯನ್ನು ಕೈಗೊಂಡಿರಬೇಕು. ಈ ಸಂದರ್ಭದಲ್ಲಿ ವಿವಿಧ ಮನೋಭಾವದವರು, ವಿಭಿನ್ನರೀತಿಯ ಮತ, ಪಂಥಗಳ ತತ್ವವನ್ನು ಅರಿತು ತಮಗೆ ಸರಿ ಎನಿಸಿದ್ದನ್ನು ಬೋಧಿಸಿದರು.

ಮಾನವಜನ್ಮ ದೊಡ್ಡದು

ಇದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ

ಎಂದು ಹಾಡುವ ಮೂಲಕ ಮನುಷ್ಯನ ಜೀವನ ಎಷ್ಟೊಂದು ಅಮೂಲ್ಯವಾದದ್ದು ಎಂದು ತಿಳಿಹೇಳಿದರು. ಮನುಷ್ಯ ಜೀವನ ಹುಟ್ಟಬೇಕಾದರೆ ಲಕ್ಷೋಪಲಕ್ಷ ಜೀವರಾಶಿಗಳಲ್ಲಿ ಮಿಂದು ಬರಬೇಕು. ಅಂಥ ಜೀವನವು ದೊರೆತಿರುವಾಗ ಅದನ್ನು ಶುಷ್ಕವಾಗಿಸಿಕೊಳ್ಳದೆ ಸರಿಯಾದ ಮಾರ್ಗದಲ್ಲಿ ಮುನ್ನೆಡೆಸುವಂತೆ ಮಾರ್ಗದರ್ಶನವಿತ್ತರು.

ಭಕ್ತಿಯ ಆವೇಶದಲ್ಲಿ ಮೂಡಿಬಂದ ಕೀರ್ತನೆಗಳು ಲಯ ರಹಿತವಾಗಲಿಲ್ಲ. ಬದಲು ಸಂಗೀತ ಪ್ರಪಂಚವೇ ಸಮೃದ್ಧಿಯಾಗಿ ಬೆಳೆದು ಬಂತು. ಪುರಂದರದಾಸರಲ್ಲಿದ್ದ ಸಂಗೀತ ಜ್ಞಾನ ಅವರನ್ನು 'ಕರ್ನಾಟಕ ಸಂಗೀತದ ಪಿತಾಮಹ' ಎನಿಸುವಂತೆ ಅಥವಾ ಕೊಂಡಾಡುವಂತೆ ಮಾಡಿತು. "ಪುರಂದರದಾಸರಂತೂ ಸಂಗೀತ ಶಿಕ್ಷಣ ಕ್ರಮವನ್ನೇ ನಿರ್ಮಿಸಿಕೊಟ್ಟರಲ್ಲದೆ ಸರಳವರಸೆ, ಜಂಟಿವರಸೆ, ಅಲಂಕಾರ, ಪಿಳ್ಳಾರಿ ಗೀತೆಗಳು ಈ ಅಭ್ಯಾಸ ವ್ಯವಸ್ಥೆಯನ್ನು ಪ್ರಾರಂಭಿಸಿದರು. ಮಾತಿಗೆ ಗೀತವನ್ನು, ವಾಕ್ಯದ 'ವಾಕ್ಕು'ಗಳಿಗೆ ಗೇಯತೆಗಳನ್ನು ನೀಡಿ ವಾಗ್ಗೇಯಕಾರರೆನಿಸಿದ ಪುರಂದರದಾಸರಂತೂ ಕೀರ್ತನ ಪ್ರಪಂಚದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದರು. ಈ ಹೊತ್ತಿಗೂ ಅಂತಹ ದೊಡ್ಡ ವಿದ್ವಾಂಸರೇ ಇದ್ದರೂ ಪುರಂದರದಾಸರ 'ಲಂಬೋದರ ಲಕುಮಿಕರ' 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಕೃತಿಗಳೇ ಕರ್ನಾಟಕ ಸಂಗೀತದ ಪ್ರವೇಶದ್ವಾರ"[೨೨] ದಂತಿವೆ.

ಪುರಂದರದಾಸರ ಇನ್ನೊಂದು ವೈಶಿಷ್ಟ್ಯವೆಂದರೆ ಯಾವ ಭಾವನೆಯನ್ನು ತಾಳುತ್ತಿದ್ದರೋ ಆ ಭಾವನೆಯನ್ನು ಸಮರ್ಥವಾಗಿ ಚಿತ್ರಿಸುತ್ತಿದ್ದರು. ದೇವರ ಕುರಿತು ನಿಂದನೆ ಸುತ್ತಿಮಾಡುವಾಗ ಯಾವ ಮುಲಾಜಿಗೂ ಒಳಗಾಗದೆ ದೇವರನ್ನು ಮನುಷ್ಯನೆಂಬ ತೆರದಲ್ಲಿ ನಿಂದಿಸುತ್ತಿದ್ದರು. "ನೀನ್ಯಾಕೋ ನಿನ್ನ ಹಂಗ್ಯಾಕೊ ರಂಗಾ,' 'ಆರುಬದುಕಿದರಯ್ಯ ಹರಿ ನಿನ್ನ,' ಎಂಬ ಮುಂತಾದ ಕೀರ್ತನೆಗಳಲ್ಲಿ ನಿಂದನೆ ಸೇರಿಗೆ ಸವ್ವಾ ಸೇರು ಎನ್ನುವಂತೆ ಮೂಡಿಬಂದಿದೆ. ದೇವರ ಸರ್ವವ್ಯಾಪಕತನವನ್ನು ಕೊಂಡಾಡುವಾಗಲೂ 'ಅವನಿಲ್ಲದ ಹೊರತು ಜೀವನವೇ ನರಕ' ಎಂಬ ಆತ್ಮನಿವೇದನೆಯ ಭಾವ ದಟ್ಟವಾಗಿ ಮೂಡಿಬಂದಿದೆ.

ಸಮಾಜದಲ್ಲಿನ ದುಷ್ಟಜನರ ಸ್ವಭಾವವನ್ನು, ಅವರಲ್ಲಿನ ಸಣ್ಣತನವನ್ನು ನಿರ್ಭಯವಾಗಿ, ಖಚಿತವಾಗಿ ಖಂಡಿಸಿದ್ದಾರೆ. ಹಾಗೆಯೇ ಬಾಲಕೃಷ್ಣನನ್ನು ಆಡಿಸುವಾಗ ಸಂಪೂರ್ಣವಾಗಿ 'ಯಶೋಧೆ'ಯೇ ಆಗಿಬಿಡುತ್ತಿದ್ದರು. ಅಂತಲೇ ಬಾಲ ಲೀಲೆಯುಳ್ಳ ಕೀರ್ತನೆಗಳು ಪುರಂದರದಾಸರಲ್ಲಿ ಅನನ್ಯವಾಗಿ ಮೂಡಿಬಂದಿವೆ. ಒಂದು ಸಾರಿ ಯಶೋಧೆಯಾಗಿ ಮಾರ್ಪಟ್ಟರೆ ಇನ್ನೊಂದು ಸಾರಿ ಬಾಲಕೃಷ್ಣನ ಅವತಾರಿಗಳಾಗಿ ಕೀರ್ತನೆಯನ್ನು ರಚಿಸಿ ಬಿಡುತ್ತಿದ್ದರು. 'ಗುಮ್ಮನ ಕರೆಯದಿರೆ ಅಮ್ಮ ನೀನು,' 'ಅಮ್ಮಾ ನಿಮ್ಮ ಮನೆಗಳಲ್ಲಿ,' 'ಆಡಹೋಗಲು ಬೇಡವೊ,' 'ಆಡಿಸಿದಳೆಶೋಧೆ ಜಗದೋದ್ಧಾರನ' ಮುಂತಾದ ಕೀರ್ತನೆಗಳಲ್ಲಿ ತಾಯಿ ಮತ್ತು ಮಗುವಿನ ನಡುವೆ ಇರಬಹುದಾದ ದೈವಿಕ ವಾತ್ಸಲ್ಯ ಭಾವವನ್ನು ದಟ್ಟವಾಗಿ ಕಾಣಬಹುದು.

ಹರಿದಾಸ ಸಾಹಿತ್ಯಕ್ಕೆ ಪುರಂದರದಾಸರು ನೀಡಿದ ಕೊಡುಗೆ ಬಹುದೊಡ್ಡದು. ಅವರ ಕಾಲದಲ್ಲಿ ಸಾಮಾನ್ಯ ಭಾಷೆ ಸಂಗೀತರೂಪವನ್ನು ಪಡೆದು ವಿಜೃಂಭಿಸಿತು. ಸಂಗೀತ ಮತ್ತು ಸಾಹಿತ್ಯ ಸಮಪಾತಳಿಯಲ್ಲಿ ಮೇಳೈಯಿಸಿ ಹೊಸದಾರಿಯನ್ನೇ ಸೃಷ್ಟಿಸಿತು ಮುಂದಿನ ಹರಿದಾಸರಿಗೆ ಆದ್ಯಗುರುಗಳೆನಿಸಿದರು.

ಕನಕದಾಸರು (೧೫೦೯-೧೬೦೨)

ಹರಿದಾಸ ಸಾಹಿತ್ಯದ ಇನ್ನೊಂದು ದೊಡ್ಡ ಪ್ರತಿಭೆ ಕನಕದಾಸರು. ಪಂಡಿತ ವರ್ಗದ ವಿರೋಧದ ನಡುವೆಯೂ ವ್ಯಾಸರಾಯರು ಕನಕದಾಸರನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಇದರಿಂದಾಗಿ ದಾಸಸಾಹಿತ್ಯವು

ಒಬ್ಬ ಪ್ರಭುತಿ ಕೃತಿಗಳ ರಚನಾಕಾರನನ್ನು ಕಾಣುವಂತಾಯಿತು. ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಕೇವಲ ಹರಿದಾಸರೆನಿಸದೆ ಉತ್ತಮ ಕವಿಗಳು ಎಂಬ ಬಿರುದಿಗೆ ಖ್ಯಾತನಾಮರಾದರು. ಇವರು ಬ್ರಾಹ್ಮಣೇತರರಾಗಿದ್ದರಿಂದ ಅನುಭವಿಸಿದ ನೋವು, ಸಮಾಜ ವಿಡಂಬನೆ, ಹೇಳುವುದನ್ನು ನಿರ್ಭಯವಾಗಿ ಖಂಡಿಸುವ ಕೆಚ್ಚು, ಅವರ ಶೈಲಿಯಲ್ಲಿ ಕಾಣಬರುವ ಹರಿತ, ಅವರ ಮುಂಡಿಗೆಗಳ ಅಂತರ್ಮುಖಿ ಚಿಂತನೆಗಳು ದಾಸಸಾಹಿತ್ಯಕ್ಕೆ ವಿಶೇಷ ಮೌಲ್ಯವನ್ನು ತಂದುಕೊಟ್ಟಿವೆ. ಅಂತಲೇ ಪುರಂದರದಾಸರು ಕನಕ ದಾಸರ ವ್ಯಕ್ತಿ ಪ್ರತಿಭೆಯನ್ನು ಮೆಚ್ಚಿ 'ಇವಗೆ ನಾಡೆಲ್ಲಾ ಹುಡುಕಿದರು ಈಡಾರ ಕಾಣೆ' ಎಂದು ಕೊಂಡಾಡಿದರು. ಗುರುಗಳಾದ ವ್ಯಾಸರಾಯರಿಂದ ಅಂಕಿತವನ್ನು ಪಡೆಯಲಿಲ್ಲ. ಬದಲು ತಮ್ಮ ಗ್ರಾಮದ ಆರಾಧ್ಯ ದೇವರಾದ 'ಕಾಗಿನೆಲೆ ಆದಿಕೇಶವ'ನ ಹೆಸರನ್ನೇ ಅಂಕಿತವಾಗಿ ಇಟ್ಟುಕೊಂಡರು.

'ನಳಚರಿತ್ರೆ', 'ಹರಿಭಕ್ತಿಸಾರ', 'ರಾಮಧಾನ್ಯ ಚರಿತ್ರೆ', ಮುಂತಾದ ಕಾವ್ಯಗಳನ್ನು ರಚಿಸಿದ್ದಾರೆ. ಈ ಎಲ್ಲಾ ಕೃತಿಗಳು ಕನಕದಾಸರಲ್ಲಿರುವ ಕವಿಯ ಮನೋಭಾವವನ್ನು ತೋರಿಸಿಕೊಡುತ್ತವೆ. ಹರಿದಾಸರು ಕನ್ನಡ ಭಾಷೆಯನ್ನು ಬಳಸಿದರು. ಕನಕದಾಸರು ಇನ್ನೊಂದು ಹೆಜ್ಜೆ ಮುಂದೆ ಹೋಗಿ 'ಗ್ರಾಮ್ಯ' ಪದಗಳ ನುಡಿಯಲ್ಲಿ ಕೀರ್ತನೆಯನ್ನು ರಚಿಸಿದರು.

"ದ್ಯಾವಿ ನಮ್ಮ ದ್ಯಾವರು ಬಂದರು ಬನ್ನಿರೆ
ಕೆಂಗಣ್ಣ ಮೀನನಾಗಿ ನಮ್ಮರಂಗ
ಗುಂಗಾಡಿ ಸೋಮನ ಕೊಂದಾನ್ಮ್ಯ
ಗುಂಗಾಡಿ ಸೋಮನಕೊಂದು ವೇದವನು
ಬಂಗಾರದೊಡಲನಿಗಿತ್ತಾನ್ಮ್ಯ ೧
ಡೊಳ್ಳಿನ ಮ್ಯಾಲ್ ಕೈಯ ಭರಮಪ್ಪ ಹಾಕ್ಯಾನು
ತಾಳ ಶಿವನಪ್ಪ ತಟ್ಟ್ಯಾನ್ಮ
ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು
ಚೆಲುವ ಕನಕಪ್ಪ ಕುಣಿದಾನ್ಮ್ಯ"[೨೪]

ಕನಕದಾಸರು ಸಮಾಜವನ್ನು ಕಟು ವಿಮರ್ಶೆಗೆ ಒಳಪಡಿಸಿದಂತೆ ಇನ್ನಾರೂ ಕಟು ವಿಮರ್ಶೆಗೆ ಒಳಪಡಿಸಲಿಲ್ಲ. ಕನಕದಾಸರ "ಕಾವ್ಯ ಗ್ರಂಥ ಮತ್ತು ಕೀರ್ತನೆಗಳಲ್ಲಿ ನವೋನವ ಪ್ರತಿಭೆ ಸಹಜಲಾಸ್ಯದಿಂದ ಕುಣಿದಿದ್ದಾಳೆ. ಅವನ ವಾಣಿಯಲ್ಲಿ ಸಹಜ ಸೊಮ್ಮು ದೇಸಿಯ ಸವಿತಿರುಳು ಮೈಗೊಂಡಿವೆ. ಅವನು ಮಹಾಭಕ್ತನಾದಂತೆ ಮಹಾಕವಿಯ ಸತ್ವವುಳ್ಳವನು. ಅವನ ಜೀವನವೇ ಮಹಾಕೃತಿಯಾಗಿತ್ತು, ಅವನ ಕೃತಿಗಳಲ್ಲಿ ಮಹೋನ್ನತಿ ಬೆಳಗಿದೆ. ಪುರಂದರದಾಸನಂತೆ ಆದರೂ ಅವನಿಗಿಂತ ಕೆಲಮಟ್ಟಿಗೆ ಬೇರೆಯಾಗಿ ಕನಕದಾಸನು ತನ್ನ ಜೀವನ ಮತ್ತು ಸಾಹಿತ್ಯಗಳ ಸಿದ್ಧಿಯಿಂದ ಕನ್ನಡಿಗರಿಗೆ ಬೆಳಕನ್ನು ನೀಡುವ ಚಿರಂತನವಾದ ಸಂಸ್ಕೃತಿ ಪ್ರದೀಪಗಳಲ್ಲಿ ಒಂದಾಗಿದ್ದಾನೆ"[೨೫] ಎಂಬುದಾಗಿ ರಂ.ಶ್ರೀಯವರು ಹೇಳಿದ್ದಾರೆ.

ಎರಡನೇ ಕಾಲಘಟ್ಟದ ಹರಿದಾಸ ಸಾಹಿತ್ಯದಲ್ಲಿ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಮಹಿಪತಿದಾಸರು ಮುಂತಾದವರು ಬರುತ್ತಾರೆ. ಈ ಕಾಲಘಟ್ಟದಲ್ಲಿ ಸಂಪೂರ್ಣವಾಗಿ ಹರಿದಾಸ ಸಾಹಿತ್ಯವು ಮಧ್ವ ತತ್ವದ ಸಾರವನ್ನು, ಹರಿಯ ಪಾರಮ್ಯವನ್ನು ಪ್ರಮುಖವಾಗಿ ಚಿತ್ರಿಸಿತು.

[illegible]

[illegible]

[illegible]

ವಿಜಯದಾಸರು

ಹರಿದಾಸ ಸಾಹಿತ್ಯದ ಉತ್ತರಾರ್ಧಕ್ಕೆ ವಿಜಯದಾಸರೇ ಪ್ರಮುಖರಾದರು. ಪುರಂದರದಾಸರು ಕನಸಿನಲ್ಲಿ ಬಂದು 'ವಿಜಯವಿಠ್ಠಲ' ಎಂಬ ಅಂಕಿತ ಮುದ್ರೆಯನ್ನು ನೀಡಿ ಮಾರ್ಗದರ್ಶನವಿತ್ತರು ಎಂಬ ಪ್ರತೀತಿ ಇದೆ. ವಿಜಯದಾಸರು ಸುಮಾರು ೨೫ ಸಾವಿರ ಕೀರ್ತನೆ, ಸುಳಾದಿ, ಉಗಾಭೋಗ ಬರೆದು ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. 'ಸುಳಾದಿ'ಯನ್ನು ಅತಿ ಹೆಚ್ಚಾಗಿ ವಿಜಯದಾಸರಲ್ಲಿ ಕಾಣಬಹುದು. ಅಂತಲೇ ಅವರು 'ಸುಳಾದಿದಾಸರು' ಎಂದು ಪ್ರಸಿದ್ಧಿ ಪಡೆದಿದ್ದಾರೆ.

'ಇರಬಾರದೊ ಬಡವ ಜಗತ್ತಿನೊಳಗೆ;

'ಎಚ್ಚತ್ತು ಇರು ಕಂಡ್ಯಮನವೆ;

'ಕಾದನಾ ವತ್ಸವ ಹರಿ'

'ಕೈಲಾಸವಾಸ ಗೌರೀಶ ಈಶ'

'ಗುರುಪುರಂದರ ದಾಸರೆ ನಿಮ್ಮ ಚರಣ ಕಮಲವ ನಂಬಿದೆ'

'ಡೀ ಡೀ, ಆಡ್ಯಾನೆರಂಗ'

ಮುಂತಾದ ಕೀರ್ತನೆಗಳಲ್ಲಿ ಮಧ್ವತತ್ವ ಪ್ರತಿಪಾದನೆ ಇವರು ಮಾಡಿರುವ ವೈಶಿಷ್ಟ್ಯವಾಗಿದೆ. ಹರಿನಾಮಸ್ಮರಣೆ, ಹರಿಸರ್ವೋತ್ತಮತ್ವ, ಮುಂತಾದ ಗಂಭೀರ ವಿಚಾರಧಾರೆಯನ್ನು ಹೃದ್ಯವಾಗುವಂತೆ ಕೀರ್ತನೆಗಳಲ್ಲಿ ಚಿತ್ರಿಸಿದ್ದಾರೆ. "ವಿಜಯದಾಸರ ಕೀರ್ತನೆಗಳು ಸ್ವಾನುಭವ ಲೋಕಾನುಭವಗಳ ಸರಳ ನಿರೂಪಣೆಗಳಾಗಿದ್ದರೆ ಅವರ ಸುಳಾದಿಗಳು ಶಾಸ್ತ್ರಜ್ಞಾನದ ನಿಬಿಡವಾದ ಅಕ್ಷಯ ನಿಧಿಗಳಾಗಿವೆ."[೨೦]

ಗೋಪಾಲದಾಸರು (೧೭೨೨-೧೭೬೫)

ಗೋಪಾಲದಾಸರು ವಿಜಯದಾಸರ ಶಿಷ್ಯರು. ದಾಸಚತುಷ್ಟಯರಲ್ಲಿ ಒಬ್ಬರಾದ ಇವರು 'ಭಕ್ತಿಯಲಿ ಭಾಗಣ್ಣ' ಎಂದು ಜನಪ್ರಿಯವಾಗಿದ್ದರು. ಬಾಹ್ಯವಾಗಿ ಬಡತನವನ್ನು ಅನುಭವಿಸಿದ ಗೋಪಾಲದಾಸರು ಬೌದ್ಧಿಕವಾಗಿ ಶ್ರೀಮಂತರಾಗಿದ್ದರು. ಅಂತಲೇ ಅವರು ರಚಿಸಿದ ಭಕ್ತಿಪರವಾದ ಕೀರ್ತನೆಗಳು ಶಾಸ್ತ್ರಸಿದ್ಧಾಂತದ ಕಡೆಗೆ ವಾಲಿವೆ.

'ಆವರೋಗವೂ ಎನಗೆ ದೇವ ಧನ್ವಂತ್ರಿ'

'ಏನಬೇಡಲಿ ನಿನ್ನ ಬಳಿಗೆ ಬಂದು'

'ಬರುವುದೆಲ್ಲ ಬರಲಿ ಶ್ರೀ ಹರಿಯ ಕರುಣವಿರಲಿ

ಎಲ್ಲಿ ನೋಡಲಿ ನೀನಿಲ್ಲದ ಸ್ಥಳವಿಲ್ಲ.

ದಾಸ್ಯ, ಶಾಂತಭಾವಗಳು ಇವರ ಕೀರ್ತನೆಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. 'ಗೋಪಾಲವಿಠಲ' ಇವರ ಕೀರ್ತನಾ ಮುದ್ರಿಕೆಯಾಗಿದೆ. ಗೋಪಾಲದಾಸರು ಜಗನ್ನಾಥದಾಸರಿಗೆ ಒದಗಿ ಬಂದಿದ್ದ ಅಪಮೃತ್ಯುವನ್ನು ಪರಿಹರಿಸಿ ಅವರ ಆಯುಷ್ಯವನ್ನು ಹೆಚ್ಚಿಸಿದರು.

ಭಗವಂತನ ಸ್ಮರಣೆ ಒಂದೇ ಸ್ಥಳದಲ್ಲಿ ಕೇಂದ್ರವಾಗದೆ ಅದು ನಿರಂತರವಾಗಿ ಹರಿಯುತ್ತಿರಬೇಕು. ದೇವರನ್ನು ಸ್ಮರಿಸಲು ಮೀಸಲು ಸಮಯವೆಂಬುದೇ ಇಲ್ಲ. ಹರಿಸ್ಮರಣೆಗೆ ದೇಶಕಾಲಾದಿ ನಿಯಮವಿಲ್ಲ ಎಂದು ಗೋಪಾಲದಾಸರು ಸುಂದರವಾಗಿ ಕೀರ್ತನೆಯೊಂದರಲ್ಲಿ ಹೀಗೆ ಹೇಳಿದ್ದಾರೆ.

"ಆವಾಗ ಎನಗಿನ್ನು ನಿನ್ನ ಸ್ಮೃತಿಯು ಬಂತೆ

ಆವ ದೇಶವೆ ಪುಣ್ಯ ದೇಶವಯ್ಯ

ಆವ ಕಾಲದಲ್ಲಿ ನಿನ್ನ ಸ್ಮೃತಿಯು ಬಂತೆ

ಆವ ಕಾಲವೆ ಪುಣ್ಯ ಕಾಲವಯ್ಯ

ಜೀವನದಲ್ಲಿ ಅಪಾರ ಬಡತನ ಒದಗಿ ಬಂದರೂ ವ್ಯಾಕುಲಕ್ಕೆ ಒಳಗಾಗದೆ ದೇವರೇ ಸರ್ವಸಮಸ್ಯೆಗಳ ನಿವಾರಕ ಎಂಬುದಾಗಿ ನಂಬಿದ್ದರು. ಅವರ ಬಡತನ ಎಂದು ಭಕ್ತಿಗೆ ಅಡ್ಡಿಪಡ್ಡಿಸಲಿಲ್ಲ. ಬದಲು ಪೂರಕವಾಯಿತೆಂದು ಹೇಳಬಹುದು.

ಜಗನ್ನಾಥದಾಸರು (೧೭೨೮-೧೮೦೯)

ಜಗನ್ನಾಥದಾಸರು ವಿಜಯದಾಸರ ಪ್ರಮುಖ ಶಿಷ್ಯರೊಲ್ಲಬ್ಬರು. ತಮ್ಮ ಗುರುಗಳನ್ನು ಕುರಿತು 'ರತುನ ದೊರಕಿತಲ್ಲ ಎನಗೆ ರತುನ ದೊರಕಿತಲ್ಲ' ಎಂದು ಕೊಂಡಾಡಿದ್ದಾರೆ. ದಾಸಚತುಷ್ಟಯದಲ್ಲಿ ನಾಲ್ಕನೆಯವರು ಜಗನ್ನಾಥದಾಸರು. ಸಂಸ್ಕೃತ ಭಾಷೆಯನ್ನು ಆಳವಾಗಿ ಅಭ್ಯಾಸ ಮಾಡಿದ ಪಂಡಿತರಾಗಿದ್ದರು. ಅವರ ಕೀರ್ತನೆಗಳ ಸಮೂಹದಲ್ಲಿ ಸ್ತುತಿಗೀತಗಳ ಭಾಗವೇ ಅಧಿಕವೆಂದು ಹೇಳಬಹುದು. ಸುವ್ವಾಲಿಗಳ ರಚನೆ ಅವರ ವಿಶೇಷವಾಗಿದೆ. ತತ್ವ ಸುವ್ವಾಲಿಯು ತ್ರಿಪದಿಯಲ್ಲಿ ರಚಿತವಾದ ಕೃತಿ. ಇವರ ಇನ್ನೊಂದು ಪ್ರಮುಖ ಕೃತಿ 'ಹರಿಕಥಾಮೃತಸಾರ'. ೩೨ ಸಂಧಿಗಳಿಂದ ಕೂಡಿದ್ದು ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಸಂಪೂರ್ಣವಾಗಿ ಹರಿಯ ಮಹಿಮೆಯನ್ನು ಸಾರುವ ಕೃತಿಯಾಗಿದೆ. 'ಜಗನ್ನಾಥವಿಠಲ' ಎಂಬ ಅಂಕಿತನಾಮದಿಂದ ಸುಮಾರು ೩೦೦ ಕೀರ್ತನೆಗಳನ್ನು ೩ ಸುಳಾದಿ ೨ ಉಗಾಭೋಗಗಳನ್ನೂ ರಚಿಸಿದ್ದಾರೆ.

'ಎಂದು ಕಾಂಬೆನೊ ಪಾಂಡುರಂಗಮೂರುತಿಯ'

'ದಾಸೋಹಂ ತವ ದಾಸೋಹಂ'

'ಬಲು ರಮ್ಯವಾಗಿದೆ ಹರಿಯ ಮಂಚ'

'ಯಾಕೆ ಮೂಕನಾದ್ಯೋ'

'ರಂಗನಿನ್ನ ಕೊಂಡಾಡುವ ಮಂಗಳಾತ್ಮರ'

ಇನ್ನೂ ಮುಂತಾದ ಕೀರ್ತನೆಗಳು ಜನಜನಿತವಾಗಿವೆ. ಹರಿಕಥಾಮೃತಸಾರವಂತೂ ಪರಾಯಣದ ಕೃತಿಯಾಗಿದೆ. ಇವರ ಕಾವ್ಯದಲ್ಲಿ ಪಾಂಡಿತ್ಯ, ಶಬ್ದ ಸಂಯೋಜನೆಯ ಸೌಂದರ್ಯ, ಕವಿತಾ ರಚನೆಯ ಕೌಶಲ ಕಂಡುಬರುತ್ತದೆ.

ಮಹಿಳಾ ಕೀರ್ತನಕಾರರು

ಕನ್ನಡ ಸಾಹಿತ್ಯ ಪರಂಪರೆಯನ್ನು ಗಮನಿಸುತ್ತಾ ಬಂದಂತೆ ಎದ್ದು ಕಾಣುವ ವಿಚಾರವೆಂದರೆ ಎಲ್ಲ ಕ್ಷೇತ್ರಗಳಲ್ಲೂ ಪುರುಷರ ಅಧಿಪತ್ಯವನ್ನು ಕಾಣುವುದು. ಹರಿದಾಸರಲ್ಲೂ ಸಹಾ ಇದೇ ಮುಂದುವರೆದಿದೆ. ಇದಕ್ಕೆ ಕಾರಣ ಮಹಿಳೆ ಪುರುಷರಷ್ಟು ನಿರ್ಭಿಡೆಯಿಂದ ನುಗ್ಗುವುದು ಕಷ್ಟವಾಗಿದ್ದ ಕಾಲ. ಹಾಗಾಗಿ ಆರಂಭದಿಂದ ಬಹುಕಾಲದವರೆಗೆ ಪುರುಷದಾಸರೇ ದಾಸ ಸಾಹಿತ್ಯದಲ್ಲಿ ಅಧಿಕ ಕಂಡುಬರುತ್ತಾರೆ. ಅಲ್ಲದೆ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಮಹಿಳೆಯರ ಸಂಖ್ಯೆ ಗೌಣವಾಗಿದೆ. ಬಹುಶಃ ಮಹಿಳೆಯರಿಗೆ ಸ್ವಾತಂತ್ರವಿಲ್ಲದಿರುವುದೇ ಇದಕ್ಕೆ ಕಾರಣವಾಗಿರಬಹುದು. ಆದರೂ ಅನೇಕ ಮಹಿಳೆಯರು ತಮ್ಮ ಇಕ್ಕಟ್ಟಿನ ಜೀವನದ ನಡುವೆಯೂ ಕೇವಲ ಶ್ರವಣ ಮಾಧ್ಯಮದಿಂದ ಪಡೆದ ಜ್ಞಾನದ ಫಲದಿಂದ ಅನೇಕ ಕೀರ್ತನೆಗಳನ್ನು ರಚಿಸಿ ತಮ್ಮದೇ ಆದ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಮಹಿಳಾ ಕೀರ್ತನಕಾರರ ಕುರಿತು ಟಿ.ಎನ್.ನಾಗರತ್ನರವರು ಹೇಳಿರುವ ಮಾತುಗಳು ಅವರ ಜೀವನ ಸ್ವರೂಪವನ್ನು ತಿಳಿಯಬಹುದಾಗಿದೆ.

ದಾಸ ಮಹಿಳೆಯರು

"ಲೌಕಿಕ ಸಂಸಾರದ ಪರಿಸರದಲ್ಲಿ ನಡೆಯುವ ಎಲ್ಲಾ ಘಟನೆಗಳನ್ನು ದೇವತೆಗಳ ನಡುವಣ ವಿಚಾರವೆಂಬಂತೆ ಕಲ್ಪಿಸಿ ಹಾಡಿ ತಮ್ಮ ಕೃತಿಗಳಿಗೆ ಒಂದು ಭಕ್ತಿಯ ಆವರಣವನ್ನು ಅಲೌಕಿಕ ಚೌಕಟ್ಟನ್ನು ಕಟ್ಟಿಕೊಟ್ಟಿದ್ದಾರೆ. ಆ ಮೂಲಕ ಅವರನ್ನು ನಮ್ಮ ನಡುವೆ ಎಳೆದು ತಂದು ಆತ್ಮೀಯರನ್ನಾಗಿಸಿದ್ದಾರೆ. ಬಹುಶಃ ಹುದುಗಿಸಿಟ್ಟ ಅವರ ಆಸೆ ಆಕಾಂಕ್ಷೆಗಳು ಕಂಡುಕೊಂಡ ಅಭಿವ್ಯಕ್ತಿಯಿದೆಂದು ಭಾವಿಸಬಹುದು.

ಮಹಿಳಾ ಕೀರ್ತನಕಾರರಲ್ಲಿ ಹೆಚ್ಚಾಗಿ ಸಾಂಪ್ರದಾಯಿಕ ಶೈಲಿಯ ಹಾಡುಗಳು ಮೂಡಿ ಬಂದಿವೆ. ಸಂಪ್ರದಾಯದ ಹಾಡಿನ ರೀತಿಯ ರಚನೆಗಳು ಹೆಚ್ಚು ಸಂಸಾರಿಕ ವಲಯವೆ ಅವುಗಳ ಕೇಂದ್ರ. ಅಲ್ಲಿಯ ರಾಗ-ದ್ವೇಷಗಳು, ಬಂಧುತ್ವ-ಬಂಧುರತೆಗಳು, ವಾಗ್ವಾದಗಳು, ನಿಂದೆ ಅಣಕಗಳು ಅವರೆಲ್ಲರ ಹಾಡುಗಳಲ್ಲಿ ವಿಜೃಂಭಿಸಿವೆ. ಒಟ್ಟಾರೆ ಅವರ ಹಾಡುಗಳು ಅವರು ಬದುಕಿದ್ದ ಅವರಿಗೆ ಪರಿಚಯವಿದ್ದ ಪರಿಸರವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತವೆ.

ಮಹಿಳೆಯರ ಇಂತಹ ಹಾಡುಗಳು, ಕಾವ್ಯಗಳು ಶಾಸ್ತ್ರ ಸಂಪ್ರದಾಯಗಳು ಮುಖ್ಯವಾಗಿ (ಬ್ರಾಹ್ಮಣ ಸಮುದಾಯದ) ದಾಖಲೆಗಳಂತಿವೆ. ಅದೇ ತಾನೆ ಹುಟ್ಟಿದ ಮಗು, ಬಾಲೆ, ಷೋಡಸಿ, ಬಸುರಿಹೆಂಗಸಿನ ಬಯಕೆಗಳು, ಬಾಣಂತಿಗೆ ಮಾಡುವ ಉಪಚಾರ ಎಲ್ಲವೂ ಇಲ್ಲಿ ಸಮೂಹವಾಗಿವೆ. ಆದರೆ ಅವುಗಳನ್ನು ದೇವಾನುದೇವತೆಗಳ ಸಂದರ್ಭ ಕಲ್ಪಿಸಿ ಹೇಳಿರುವುದರಿಂದ ಅವು ಭಕ್ತಿ ಸಾಹಿತ್ಯ ವಲಯಕ್ಕೆ ಸೇರಿಹೋಗಿವೆ. ಮತ್ತು ಅದು ಅವರ ತಮ್ಮ ಭಾವಾನುಭವಗಳ ಅಭಿವ್ಯಕ್ತಿಗೆ ಕಂಡುಕೊಂಡ ತಂತ್ರವೂ ಹೌದು.

ಈ ಎಲ್ಲ ವೈಷ್ಣವ ಕವಯಿತ್ರಿಯರು ಆ ಕಾಲದ ಅಡುಗೆ ಊಟ ತಿಂಡಿಗಳು, ಒಡವೆ ವಸ್ತ್ರಗಳು, ರೂಢಿ ಸಂಪ್ರದಾಯಗಳು, ಆಚಾರ ವಿಚಾರಗಳು ಎಲ್ಲವುಗಳ ಸೂಕ್ಷ್ಮಾತಿಸೂಕ್ಷ್ಮ ನಿರೂಪಣೆ ವರ್ಣನೆಗಳನ್ನು ಕೊಡುವ ಮೂಲಕ ಆ ಕಾಲದ ಕನ್ನಡಿಗರ ಸಂಸ್ಕೃತಿಯನ್ನು ಪದರ ಪದರವಾಗಿ ಅನಾವರಣಗೊಳಿಸಿದ್ದಾರೆ. ಈ ದೃಷ್ಟಿಯಿಂದ ಇವರು ಇತರ ಹರಿದಾಸರನ್ನು ಮೀರಿ ನಿಲ್ಲುತ್ತಾರೆ.

ವೈಧವ್ಯದ ದೆಸೆಯಿಂದಾಗಿ ಹತ್ತಿಕ್ಕಿದ ಅವರುಗಳ ಮಾತನಾಡುವ ಚಪಲವೂ ಹೀಗೆ ಕಾವ್ಯಗಳ, ಹಾಡುಗಳ ರೂಪದಲ್ಲಿ ಪುಂಖಾನು ಪುಂಖವಾಗಿ ಹೊರಹೊಮ್ಮಿದ್ದಿರಬೇಕು.”[೩೧]

‘ಆ ಕಾಲದ ಕನ್ನಡಿಗರ ಸಂಸ್ಕೃತಿಯನ್ನು ಪದರ ಪದರವಾಗಿ ಅನಾವರಣಗೊಳಿಸಿದ್ದಾರೆ’ ಎನ್ನುವುದಕ್ಕಿಂತ ಆಯಾಯ ಕಾಲದ ಲೇಖಕಿಯರ ಕಾಲಘಟ್ಟದ ಮೇಲು ವರ್ಗ ಎನಿಸಿದ್ದ ಬ್ರಾಹ್ಮಣ ಸಮುದಾಯದ ಜೀವನವನ್ನು ತೋರಿಸಿಕೊಡುತ್ತವೆ. ಬ್ರಾಹ್ಮಣ ಸಮುದಾಯದಲ್ಲಿರಬಹುದಾದ ಸಂಪ್ರದಾಯ ಬದ್ಧ ಜೀವನವನ್ನು ಕಾಣಬಹುದು. ಶರಣ ಸಾಹಿತ್ಯದಲ್ಲಿ ಕಾಣಬರುವ ಮಹಿಳೆಯರ ಸಂಖ್ಯೆ ವಿಪುಲವಾಗಿದ್ದು ಅವರ ದಾಖಲೆಗಳು ಸಹ ಹೇರಳವಾಗಿ, ಖಚಿತವಾಗಿ ದೊರೆಯುತ್ತವೆ. ದಾಸ ಸಾಹಿತ್ಯದಲ್ಲಿ ಮಹಿಳೆಯರ ಸಂಖ್ಯೆ ಗೌಣವಾಗಿದೆ. ಆದರೂ ಅನೇಕ ಮಹಿಳೆಯರು ಕೀರ್ತನೆಯನ್ನು ರಚಿಸಿದ್ದಾರೆ. ಅವರ ಕುರಿತು ಯಾವುದೇ ವಿಧವಾದ ಗಂಭೀರ ಚಿಂತನೆಗಳು, ಸಂಶೋಧನೆಗಳು ಮೂಡಿಬಂದಿಲ್ಲ. ಆದ್ದರಿಂದ ಯಾರೂ ಕೂಡ ಮುಖ್ಯವಾಹಿನಿಗೆ ಬರದೆ ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮನವರಿಗೆ ಮಾತ್ರ ಸೀಮಿತವಾಗಿದೆ. ಹರಿದಾಸ ಸಾಹಿತ್ಯದ ಮೊದಲ ಕೀರ್ತನೆಗಾರ್ತಿಯಾದ ಗಲಗಲಿ ಅವ್ವನವರಿಂದ ಹಿಡಿದು ಪ್ರಯಾಗಬಾಯಿ, ಹೆಳವನಕಟ್ಟೆ ಗಿರಿಯಮ್ಮ, ಓರುಬಾಯಿ ಲಕ್ಷ್ಮೀದೇವಮ್ಮನವರು, ಹರಪನಹಳ್ಳಿಭೀಮವ್ವ, ನಿಡಗುರುಕಿ ಜೀವೂಬಾಯಿ, ಅಂಬಾಬಾಯಿ, ಯದುಗಿರಿಯಮ್ಮ, ನಾಡಿಗರ ಶಾಂತಿಬಾಯ, ಸರಸಬಾಯಿ, ನಂಜನಗೂಡು ತಿರುಮಲಾಂಬ, ಬಳ್ಳಾರಿ ರಾಧಾಬಾಯಿ, ಕಳಸದ ಸುಂದರಮ್ಮ, ಗುಂಡಮ್ಮ, ಸರಸ್ವತಿಬಾಯಿ, ಇನ್ನೂ ಮುಂತಾದ ಕೀರ್ತನೆಗಾರ್ತಿಯರು ತಮ್ಮ ಸಾಹಿತ್ಯದ ಮೂಲಕ ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಗಲಗಲಿ ಅವ್ವನವರು

ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಗಲಗಲಿ ಅವ್ವನವರೇ ಮೊದಲಿಗರೆಂಬುದು ವಿದ್ವಾಂಸರ ಒಮ್ಮತದ ಅಭಿಪ್ರಾಯವಾಗಿದೆ. ಅವ್ವನವರದು ಬಡತನ ಕುಟುಂಬ. ಇಂದಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಭೋಗಾಪುರ ಗ್ರಾಮದಲ್ಲಿ ಇವರ ತಂದೆ ಅರ್ಚಕ ವೃತ್ತಿಯನ್ನು ಕೈಗೊಂಡಿದ್ದರು. ಮನೆಯಲ್ಲಿ ಅವ್ವನವರನ್ನು ರಮಾ, ರಮಾಬಾಯಿ ಎಂದು ಕರೆಯುತ್ತಿದ್ದರು.

ಗಲಗಲಿ ಕುಟುಂಬವೂ ಪಂಡಿತ ಕುಟುಂಬವಾಗಿತ್ತು. ರಾಜಮನ್ನಣೆಯೂ ದೊರಕಿತ್ತು. ಮಹಾರಾಜರಿಂದ ಜಹಗೀರು ಪಡೆದ ವಂಶವಾಗಿತ್ತು. ಇವರ ಪೂರ್ವಜರು ಸಹ ರಾಜರೊಂದಿಗೆ ಗುರುತಿಸಿಕೊಂಡು ಬಂದಿದ್ದರು. ವಿದ್ವತ್ ಅವರ ಮನೆಯ ಸ್ವತ್ತಾಗಿತ್ತು. ಮಹರ್ಷಿಗಳ ಮನೆತನದವರೆಂದು ಸಹ ಪ್ರಸಿದ್ಧರಾಗಿದ್ದರು. ಅಂತಹ ವಿದ್ವತ್ ಕುಟುಂಬದಿಂದ ಬಂದ ಮುದ್ಗಲಾಚಾರ್ಯರು ಸಹ ಒರ್ವ ಘನವಿದ್ವಾಂಸರಾಗಿದ್ದರು. ಒಂದು ಸಾರಿ ಪಂಡಿತ ಮುದ್ಗಲಾಚಾರ್ಯರು ವಿದ್ವತ್ ಸಂಬಂಧಿ ಗೋಷ್ಠಿಗೆ ಮೈಸೂರಿಗೆ ತೆರಳಿದ್ದರಂತೆ. ಅಲ್ಲಿಂದ ಹಿಂತಿರುಗಿ ಬರುವಾಗ ಭೋಗಾಪುರ ಗ್ರಾಮದಲ್ಲಿ ತಂಗಿದ್ದರು. ಆ ಸಂದರ್ಭದಲ್ಲಿ ೧೨ರ ವಯಸ್ಸಿನ ಬಾಲೆಯನ್ನು ಕಂಡು ಮದುವೆಯಾಗುವ ಹಂಬಲವನ್ನು ಸೂಚಿಸಿದರಂತೆ. ಮದುವೆಯಾಗುವಾಗ ಮುದ್ಗಲಾಚಾರ್ಯರು ೬೦ ವರ್ಷದ ವಯೋವೃದ್ಧರಾಗಿದ್ದರು.

[illegible]

ಮದುವೆಯಾದ ೮ ದಿನಗಳ ಅಂತರದಲ್ಲಿಯೇ ತೀರಿಹೋದರು. ತೀರಿಹೋಗುವ ಪೂರ್ವದಲ್ಲಿಯೇ ತಮ್ಮ ಮಕ್ಕಳನ್ನು ಕರೆದು ನೀವೇ ಶಿಕ್ಷಣ ನೀಡಬೇಕು ಎಂದು ಹೇಳಿದರಂತೆ. ಹೀಗೆ ಗಲಗಲಿ ಅವ್ವನವರ ಜೀವನದಲ್ಲಿ ಮಕ್ಕಳೇ ಗುರುಗಳಾದರು. ತಾಯಿಯೇ ಶಿಷ್ಯರಾದರು.

ಗಲಗಲಿ ಅವ್ವನವರ ವಿದ್ವತ್ ಅಗಾಧವಾಗಿತ್ತು. "ಅವ್ವನವರಿಗೆ ಆರು ಜನ ಷಟ್ ಶಾಸ್ತ್ರ ಪಂಡಿತರಾದ ಮಕ್ಕಳಿದ್ದರು. ಒಂದು ಸಲ ಪುಣೆಯ ಪೇಶ್ವಾಯಿ ದರಬಾರಿನಲ್ಲಿ ಉತ್ತರ ಪ್ರದೇಶದ ಕಾಶಿಯಿಂದ ಬಂದ ಪಂಡಿತರೊಡನೆ ಈ ಆರು ಜನ ಮಕ್ಕಳು ವಾಕ್ಯಾರ್ಥಮಾಡುತ್ತಿದ್ದರು. ಒಳಗಡೆ ಜನಾನಾಖಾನಾದಲ್ಲಿ ಅವ್ವನವರು ಕುಳಿತು ಮಕ್ಕಳ ವಾಕ್ಯಾರ್ಥಗಳನ್ನು ಕೇಳುತ್ತಿದ್ದರು. ವಾದ ಮಧ್ಯದಲ್ಲಿ ಒಂದು ಪದದ ಅರ್ಥವನ್ನು ಬಿಡಿಸುವಾಗ ಮಕ್ಕಳು ತಡವರಿಸಿದರು. ಅವ್ವನವರು ಕೂಡಲೇ ಸರಿಯಾದ ಉತ್ತರವನ್ನು ಬರೆದು ಕಳಿಸಿದರು. ಅದನ್ನು ನೋಡಿ ಆಶ್ಚರ್ಯಚಕಿತನಾದ ಪೇಶ್ವಾಯಿ ಅವ್ವನವರ ಹೆಸರಿನಿಂದಲೇ ಸನದು ಹೊರಡಿಸಿ ವಾರ್ಷಿಕ ಅನುದಾನವನ್ನು ನೀಡಿದನು. ಅದು ಸಂಸ್ಥಾನಗಳು ವಿಲೀನೀಕರಣವಾಗುವವರೆಗೂ ಗಲಗಲಿಯ ಮನೆತನಕ್ಕೆ ದೊರೆಯುತ್ತಿತ್ತು. ಅದರಂತೆ ಅವರ ಪಾಂಡಿತ್ಯ ಪ್ರಸಿದ್ಧಿಗಳನ್ನು ಕೇಳಿದ ಮೈಸೂರು ಮಹಾರಾಜರು ಅವರಿಗೆ ಭೂಮಿಗಳನ್ನಿತ್ತು ಗೌರವಿಸಿದ್ದರು."[೩೭] ಎಂಬ ಮಾಹಿತಿ ದೊರೆಯುತ್ತದೆ.

ರಾಮೇಶ, ರಮೇಶ, ರಮಾಬಾಯಿ, ರಮಿಯರಸು ಎಂಬ ಮುದ್ರಿಕೆಯೊಂದಿಗೆ ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಮುಯ್ಯದ ಹಾಡು, ಸೇತುಬಂಧನದ ಹಾಡು, ಶೃಂಗಾರ ತಾರತಮ್ಯ, ಮೋರೆಗೆ ನೀರು ತಂದ ಹಾಡು ಹಾಗೂ ಕೋಲ ಹಾಡುಗಳು ಮತ್ತು ಉಗಾಭೋಗ ಅಲ್ಲದೆ ಜೋಗುಳ ಹಾಡುಗಳಾಗಿ ೫೭ ನುಡಿಗಳ ಸುದೀರ್ಘವಾದ ಶ್ರೀ ಕೃಷ್ಣಜನ್ಮದ ಹಾಡು ರಚಿಸಿದ್ದಾರೆ.

ಗಲಗಲಿ ಅವ್ವನವರು ಎಷ್ಟೊಂದು ವಿನಯ ಸ್ವಭಾವದವರಾಗಿದ್ದರು ಎಂಬುದಕ್ಕೆ ಈ ಕೆಳಗಿನ ಕೀರ್ತನೆಯ ಸಾಕ್ಷಿ.

ಮುದ್ಗಲವಾಸನ ಶುದ್ಧ ನಾಮದವರು
ಮುದ್ದು ಪಾದಗಳ ಸ್ಮರಿಸುತ
ಮುದ್ದು ಪಾದಗಳ ಸ್ಮರಿಸುತ ರಚಿಸಿದ
ಅಪದ್ಧ ನೋಡದಲೆ ಹರಿ ಕೊಳ್ಳೋ
ಮೂಢಳು ನಾನೊಂದು ಬೇಡಿ ಬಯಸಿಕೊಂಡೆ
ಮಾಡಿದೆ ರಚನಿಯ ಮನ ಉಬ್ಬಿ.

ವಿದ್ವತ್‌ಪೂರ್ಣ ಸುತರಿಂದ ಪಡೆದ ಸಂಸ್ಕೃತ ಸಾಹಿತ್ಯದ ತಲಸ್ಪರ್ಶಿಯಾದ ಜ್ಞಾನವಿತ್ತು. ಅಂತಲೇ ಅವ್ವನವರಿಂದ ಪ್ರೌಢವಾದ ವಿಚಾರಗಳು ಹೊರ ಹೊಮ್ಮಿವೆ. ವಿಚಾರಗಳು ಪ್ರೌಢತೆಯಿಂದ ಕೂಡಿವೆಯೇ ಹೊರತು ರಚನೆಗಳ ಭಾಷೆ ಎಲ್ಲಿಯೂ ಬಿಗಿಗೊಂಡಿಲ್ಲ. ಸರಳವಾಗಿ, ಸುಲಭ ರೀತಿಯಲ್ಲಿ ಅರ್ಥವಾಗುವ ಹಾಗೆ ಮೂಡಿಬಂದಿವೆ.

''ಹತ್ತೆಂಟು ಸಾಲಿನ ಬತ್ತಾಸದಂಗಡಿ

ಭತ್ತದ ಅರಳು ಮೊದಲಾಗಿ

ಭತ್ತದ ಅರಳು ಮೊದಲಾಗಿ ಸಕ್ಕರಿ ಬೊಂಬೆಯ

ತಂದಿಟ್ಟು ಮಾರುವವರು ಕಡಿಮೆಯಿಲ್ಲ

ಬಾಜಾರದೊಳಗಿನ್ನು ರಾಜ ಸಿಂಹಾಸನ

ರಾಜ ರಮೇಶ ಕುಳಿತಲ್ಲಿಯೆ

ರಾಜ ರಾಮೇಶ ಕುಳಿತು ಪೂಜಿಗೊಂಬೊ

ಮೂರ್ಜಗವು ಮುದದಿಂದ''[೩೩]

ಸಜ್ಜನರ ಸಹವಾಸದ ಮಹತ್ವವನ್ನು ಎರಡು ಸಾಲುಗಳಲ್ಲಿ ಮನಮುಟ್ಟುವಂತೆ ಹೇಳಿದ್ದಾರೆ. ಎಲ್ಲಿಯೂ ಕ್ಲಿಷ್ಟತೆಯಿಲ್ಲ. ಸರಳವಾಗಿ ಮನನವಾಗುತ್ತದೆ.

"ಭಾವಜ್ಞರ ಸಂಗ ಶಾವೀಗೆ ಉಂಡಂತೆ ಭಾವವರಿಯದಾ ಪಾಮರರ

ಭಾವವರಿಯದ ಪಾಮರರ ಸಹವಾಸ ಬೇವಿನ ಹಾಲು ಕುಡಿದಂತೆಮ"[೩೪]

ಅವರ ಕೀರ್ತನೆಗಳಲ್ಲಿನ ಹೋಲಿಕೆಗಳನ್ನು ಗಮನಿಸಿದರೆ ಸರ್ವಜ್ಞರ ತ್ರಿಪದಿಗಳು ನೆನಪಾಗುತ್ತದೆ.

ಜೀವನದುದ್ದಕ್ಕೂ ಶ್ರೀಹರಿಯನ್ನೇ ನಂಬಿ, ಆರಾಧಿಸಿ, ಬಿಡದೆ ಧ್ಯೇನಿಸಿ ಅವ್ವನವರು ಶೂರ್ಪಾಲಿ ನೃಸಿಂಹ ಕ್ಷೇತ್ರದಲ್ಲಿ ಕಾಲವಾದರು.

ಪ್ರಯಾಗಬಾಯಿ

ಗಲಗಲಿ ಅವ್ವನವರ ಶಿಷ್ಯೆ ಪ್ರಯಾಗವ್ವ. ಇವರಿಗೆ 'ಭಾಗಮ್ಮ' ಎಂಬ ಇನ್ನೊಂದು ಹೆಸರೂ ಇದೆ. ಗಲಗಲಿ ಅವ್ವನವರ ಜೊತೆ ಸದಾ ಇರುತ್ತಿದ್ದರು. ಅವ್ವನವರ ಜೀವನ ಪ್ರಭಾವಕ್ಕೆ ಒಳಗಾಗಿ ಕೆಲವು ಹಾಡುಗಳನ್ನು ರಚಿಸಿದ್ದಾರೆ.

ಹರಿಭಕ್ತಿ ರಸಭರಿತ ಕಾವ್ಯಕೃತಿ ಕೊಟ್ಟ ವೇದಾಂತ ವಿದುಷಿ. ಅಪರೋಕ್ಷ ಜ್ಞಾನಿಗಳ ಪತ್ನಿಯ ಸಹವಾಸ ತನಗೆ ದೊರೆತಿದ್ದುದು ತನ್ನ ಏಸು ಜನ್ಮದ ಭಾಗ್ಯವೋ ಏನೋ ಎಂದು ಕೃತಜ್ಞತೆ ಸಲ್ಲಿಸಿದ್ದಾರೆ.

"ಏಸು ಜನ್ಮದ ಪುಣ್ಯವಾಸವಾಯಿತೋ ವಿಷ್ಣು ದಾಸಾ ದಾಸಿ ನಾನಾದೆ|

ಈ ಸಂಸಾರ ಕ್ಲೇಶವ ಕಳೆದು ಸುವಾಸನೆಯ ಕೊಡು ಗುರುರಾಜ||[೩೫]

ಬಹುಕಾಲ ಕಾಶಿಯಲ್ಲಿ ನೆಲೆಯೂರಿದ್ದರಿಂದ 'ಪ್ರಯಾಗವ್ವ' ಎಂಬ ನಾಮ ಬಂದಿರಬೇಕು. ಉತ್ತರಭಾರತದ ಹಲವು ತೀರ್ಥಕ್ಷೇತ್ರಗಳಲ್ಲಿ ಪ್ರಯಾಗವೂ ಒಂದಾಗಿದೆ. ಪಾಂಡುರಂಗ ಎಂಬ ಅಂಕಿತನಾಮದಿಂದ ಕೀರ್ತನೆಗಳನ್ನು ರಚಿಸಿದ್ದಾರೆ. ಪಂಢರಪುರದ ವಿಠಲನ ಭಕ್ತೆ. ಅವನೇ ಅಂತಿಮ ಗುರುವೂ ಹೌದು. ಮನೆಯ ದೇವರೂ ಹೌದು.

"ಪುಂಡರೀಕನ ಪ್ರಭು ಪಾಂಡುರಂಗನ

ಪಾದ ಕಂಡು ವಂದನೆಯ ಮಾಡುವೆನು|

ದಂಡಿಸಿ ದೇಹವ ತಾಂಡವ ಕೃಷ್ಣನ

ಕೊಂಡಾಡಿ ಪದವ ಹೇಳುವೆನು||[೩೬]

ಪ್ರಯಾಗಬಾಯಿಯವರ ಕೆಲವೇ ಕೆಲವು ಕೃತಿಗಳು ದೊರೆತಿವೆ. ಉರುಟಣೆ ಹಾಡು, ಭೂಮದಹಾಡು, ಹಸಿಕರದ ಹಾಡುಗಳನ್ನು ರಚಿಸಿದ್ದಾರೆ.

ಅವ್ವನವರ ಆಜ್ಞೆಯಂತೆ ಭಾಗವತದ ತೃತೀಯ ಸ್ಕಂದವನ್ನು ಕನ್ನಡದಲ್ಲಿ ಪ್ರಯಾಗವ್ವ ಸರಳವಾಗಿ ಕನ್ನಡ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

"ತೃತೀಯ ಸ್ಕಂದದಲ್ಲಿ ರತಿಯಿಟ್ಟು ಮನದಲ್ಲೆಯತಿ

ಮುನಿರಾಯನಿಗೊಂದಿಸುವೆ ಅತಿ ಭಕ್ತಿಯಿಂದಲೇ

ಮತಿಬೇಡಿ ಪಾರ್ವತಿ ಸುತೆಗೆ ವಂದನೆಯ ಮಾಡುವೆನು

ಸ್ವಾಮಿ ಗುರುಗಳ ಪಾದ ನೇಮದಿ ಭಜಿಸುವೆ"[೩೭]

ಹಣಮಂತ ತಾಸಗಾಂವಕರ ಅಭಿಪ್ರಾಯದಂತೆ ಪ್ರಯಾಗವ್ವ ಹರಿದಾಸ ಸಾಹಿತ್ಯದ ದ್ವಿತೀಯ ದಾಸ ಮಹಿಳೆ ಎನಿಸಿದ್ದಾರೆ.

ಹೆಳವನಕಟ್ಟೆ ಗಿರಿಯಮ್ಮ

ಹರಿದಾಸ ಸಾಹಿತ್ಯದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಸ್ಥಾನ ತುಂಬಾ ದೊಡ್ಡದು. ಗಿರಿಯಮ್ಮನ ಜನ್ಮಸ್ಥಳ ಧಾರವಾಡ ಜಿಲ್ಲೆಯ ರಾಣೆಬೆನ್ನೂರು. ತಂದೆಯ ಹೆಸರು ಭೀಷ್ಮಪ್ಪ ಜೋಯಿಸರು. ಬಾಲ್ಯದಲ್ಲಿಯೇ ಹೆತ್ತವರನ್ನು ಕಳೆದುಕೊಂಡು ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು. ಚಿಕ್ಕಂದಿನಲ್ಲೇ ಹೆತ್ತವರನ್ನು ಕಳೆದುಕೊಂಡ ಏಕಾಂಗಿತನದ ಅನುಭವ ತೀವ್ರವಾಗಿರಬೇಕು. ಆ ಭಾವದಿಂದಲೇ

"ತಂದೆ ತಾಯೆಂಬುದನು ನಾನೊಂದು

ಗುರುತನರಿಯೆ ನಿಮ್ಮ ಕಂದಳೆನಿಸಿ

ಕಡೆಹಾಯಿಸೊ ಹೆಳವನಕಟ್ಟೆರಂಗ"[೩೮]

ಎಂದು ರಂಗನಾಥನಲ್ಲಿ ಬೇಡಿದ್ದಾರೆ. ಆಗಿನ ಕಾಲದ ನಿಯಮದಂತೆ ಗಿರಿಯಮ್ಮನವರಿಗೆ ೧೨ ವರ್ಷ ತುಂಬುತ್ತಿದ್ದಂತೆ ಹರಿಹರ ತಾಲೂಕಿನ ಮಲೆಬೆನ್ನೂರಿನ ಶಾನುಭೋಗ ಕೃಷ್ಣಪ್ಪನವರ ಮಗ ತಿಪ್ಪರಸನೊಂದಿಗೆ ಮದುವೆ ಮಾಡಲಾಯಿತು. ಸಂಸಾರದಲ್ಲಿ ಇಷ್ಟವಿರದ ಗಿರಿಯಮ್ಮ ಪತಿಗೆ ಇನ್ನೊಂದು ಮದುವೆ ಮಾಡಿಸಿ ತನ್ನ ಸಮಯವನ್ನು ಮನೆಯ ಕಾರ್ಯಗಳಿಗೂ ಭಗವಂತನ ಸೇವೆಗೂ ಮೀಸಲಿಟ್ಟಳು.

ಮಲೆಬೆನ್ನೂರಿನ ಹತ್ತಿರವಿರುವ 'ಹೆಳವನಕಟ್ಟೆ' ರಂಗನಾಥನ ಕ್ಷೇತ್ರವಾಗಿತ್ತು. ಗಿರಿಯಮ್ಮ ಈ ರಂಗನಾಥ ಕ್ಷೇತ್ರದಿಂದ ತುಂಬಾ ಪ್ರಭಾವಿತಳಾಗಿದ್ದಳು. ರಂಗನಾಥನೇ ಆತ್ಮಸಖನಾದ, ಮಾರ್ಗದರ್ಶಕನಾದ. ಮುಂದೆ 'ಹೆಳವನಕಟ್ಟೆರಂಗ' ಗಿರಿಯಮ್ಮನವರ ಕೀರ್ತನೆಯ ಮುದ್ರಿಕೆಯಾಯಿತು ಕೆಲಮೊಮ್ಮೆ 'ಹೆಳವನಕಟ್ಟೆ ವೆಂಕಟ' ಎಂಬ ಮುದ್ರಿಕೆಯಲ್ಲೂ ಕೀರ್ತನೆಯನ್ನು ರಚಿಸಿದ್ದಾಳೆ.

ಗಿರಿಯಮ್ಮ ೪೫ ಸಣ್ಣಹಾಡುಗಳು ಹಾಗೂ ೫ ದೊಡ್ಡ ಹಾಡುಗಳನ್ನು ರಚಿಸಿದ್ದಾಳೆ. ಒಂದೇ ಒಂದು ಉಗಾಭೋಗವನ್ನು ರಚಿಸಿದ್ದಾರೆ. ಜೊತೆಗೆ ಏಳು ದೀರ್ಘಕೃತಿಗಳನ್ನು ಸಹ ರಚಿಸಿದ್ದಾಳೆ. ಅವು ಹೀಗಿವೆ. ಉದ್ದಾಳಿಕನ ಕಥೆ, ಶಂಕರಗಂಡನ ಹಾಡು, ಸೀತಕಲ್ಯಾಣ, ಚಂದ್ರಹಾಸನ ಕಥೆ, ಬ್ರಹ್ಮಕೊರವಂಜಿ, ಲವಕುಶರಕಾಳಗ, ಕೃಷ್ಣಕೊರವಂಜಿ. ಗಿರಿಯಮ್ಮನ ಹಾಡುಗಳಲ್ಲಿ ಭಕ್ತಿಪೂರ್ಣವಾದ ದೇವತಾ ಸ್ತುತಿಗಳು, ಆತ್ಮನಿವೇದನೆ, ಲೋಕನೀತಿ ಮುಂತಾದ ಭಾವಗಳನ್ನು ಕಾಣಬಹುದು.

ಗಿರಿಯಮ್ಮನದು ತಾಯಿಯ ಮನಸ್ಸು. ಕೀರ್ತನೆಯಲ್ಲಿ ಮಧುರಭಾವ ಮತ್ತು ವಾತ್ಸಲ್ಯಭಾವಗಳು ಸಹಜವಾಗಿ ಮೂಡಿಬಂದಿವೆ. ಭಗವಂತ ಸರ್ವವ್ಯಾಪ್ತನು. ನಂಬಿದವರನ್ನು ಎಂದಿಗೂ ಕೈ ಬಿಡದವನು. ಅವನು ಕಾರುಣ್ಯಮೂರ್ತಿ ಎಂದು ಗಿರಿಯಮ್ಮ ಬಗೆಬಗೆಯಾಗಿ ಚಿತ್ರಿಸಿದ್ದಾಳೆ.

'ಕಾಯೊ ಕರುಣಾಕರನೆನೀಯನ್ನಾ', 'ನಂಬಿದೆ ನಂಬಿದೆ ಅಂಬು ಜಾಕ್ಷನೆ' 'ದಯಪೂರ್ಣ ಗುಣನಿಧಿಯ ದೀನರಕ್ಷಕ, 'ಹೊನ್ನ ತಾಗುಬ್ಬಿಹೊನ್ನತಾ' 'ತೋರಬಾರದೆ ನಿಮ್ಮ ಚರಿತೆಯನು.'

ಗಿರಿಯಮ್ಮನಿಗೆ ರಂಗನಾಥನೇ ಆರಾಧ್ಯ ದೈವವಾದರೂ ಹರಿಹರರಲ್ಲಿ ಎಂದಿಗೂ ಭೇದವನ್ನು ಎಣಿಸಲಿಲ್ಲ. ಇಬ್ಬರು ಸಮಾನರು ಎಂಬ ಭಾವ ಕೀರ್ತನೆಯಲ್ಲಿ ಮೂಡಿಬಂದಿದೆ.

"ಈತ ಲಿಂಗದೇವ ಶಿವನು
ಆತ ರಂಗಧಾಮ ವಿಷ್ಣು
ಮಾತಕೇಳೊ ಮಂಕು ಮನುಜ
ಮನದ ಅಹಂಕಾರ ಬಿಟ್ಟು
ವೇದಕ್ಕೆ ಸಿಕ್ಕದ ನೀತ
ವೇದನಾಲ್ಕು ತಂದನಾತ
ಬೂದಿ ಮೈಯೊಳು ಧರಿಸಿದನೀತ
ಪೋದಗಿರಿಯ ಪೊತ್ತನಾತ
ವ್ಯಾಧ್ಯನಾಗಿ ಒಲಿದನೀತ
ಮಾಧವ ಮಧುಸೂದನನಾತ
ಮದನನ್ನ ಉರಿಯಸೀತ
ಮದನನ ಪಡೆದಾತನಾತ
ಗಂಗೆಯ ಪೊತ್ತವ ನೀತ
ಗಂಗೆ ಪದದಿ ಪಡೆದನಾತ
ತುಂಗ ಹೆಳವನಕಟ್ಟೆ
ಲಿಂಗ ಅಂತರಂಗ ರಂಗನಾಥ"[೩೯]

ಸಂಪ್ರದಾಯಕ್ಕೆ ಸಂಬಂಧಿಸಿದ ಆರತಿ ಹಾಡು ಉರುಟಣೆ ಹಾಡು, ಬಾಗಿಲು ಕಟ್ಟುವಹಾಡು ಇನ್ನೂ ಮುಂತಾದ ಬಗೆಯ ಹಾಡುಗಳು ಗೌಣವಾಗಿವೆ. ಸಮಯ ಸ್ಫೂರ್ತಿಯಿಂದ ಸಹಜವಾಗಿ ಹೊಮ್ಮಿದ ಹಾಡುಗಳಲ್ಲಿ ಕವಿಯ ಮನೋಧರ್ಮವನ್ನು ಕಾಣಬಹುದು.

"ಮಹಿಳಾ ದಾಸರಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಹೆಸರು ದೊಡ್ಡದು. ಹೆಳವನಕಟ್ಟೆ ರಂಗಯ್ಯನ ಸೇವೆಯಲ್ಲೆ ಬದುಕಿನ ಸಾರ್ಥಕ್ಯವನ್ನು ಕಂಡ ಗಿರಿಯಮ್ಮನ ಕೀರ್ತನೆಗಳು ಚಿತ್ತಾಪಹಾರಕವಾಗಿವೆ. ಹರಿ ಹರರ ಅಭೇದವನ್ನು ಗಿರಿಯಮ್ಮ ತಮ್ಮ ಹಾಡುಗಳಲ್ಲಿ ಪರಿಶೀಲಿಸಿರುವುದು ಗಮನಸತಕ್ಕ ಸಂಗತಿ ಆಕೆಯ ಕೀರ್ತನೆಗಳಲ್ಲಿ ಒಪ್ಪಾಲು ಸುತ್ತಿಗೀತೆಗಳು, ಮುಪ್ಪಾಲು ಭಕ್ತ ಹೃದಯದ ಮೊರೆ. ಅವರ ಕೀರ್ತನೆಗಳ ಒಳದನಿಯಾಗಿ ಭಕ್ತೆಯೊಬ್ಬಳ ಪ್ರಾಸಾದಿತ ವಾಣಿ ಕೇಳಿಸುತ್ತಿದೆ. ತನ್ನ ನೆಚ್ಚಿನ ದೈವ ರಂಗನಾಥ ಮಹಿಮಾತಿಶಯಗಳನ್ನ ಬಗೆಬಗೆಯಲ್ಲಿ ಬಣ್ಣಿಸಿದಷ್ಟು ಆಕೆಗೆ ದಣಿವು ಬಾರದು. ಎಲ್ಲ ದಾಸರಂತೆ ರಂಗನಾಥನನ್ನು ಪಂಚಭಾವಗಳಲ್ಲಿ ಕಂಡು ಆ ಅನುಭವವನ್ನು ಹಾಡಾಗಿಸಿದ್ದಾರೆ"[೪೦]

ಅಂಬಾಬಾಯಿ (೧೯೦೨-೧೦೪೫)

ತಂದೆ ಮುದ್ದುಮೋಹನ ದಾಸರಿಂದ ಅಂಕಿತ ಪಡೆದ ಹಲವಾರು ಮಹಿಳೆಯರಲ್ಲಿ ಅಂಬಾಬಾಯಿಯು ಒಬ್ಬರು. ಅಂಬಾಬಾಯಿಯವರ ಜನ್ಮಸ್ಥಳ ಚಿತ್ರದುರ್ಗ. ಅವರು ಶೋಭನಕೃತು ಸಂವತ್ಸರದ ಕಾರ್ತಿಕಶುದ್ಧ ದಶಮಿ ದಿನದಂದು ಜನ್ಮ ತಾಳಿದರು. ಅಂದರೆ ೧೯೦೨ ನೇ ಇಸವಿಯೆಂದು ಗುರುತಿಸಬಹುದು.

ತಂದೆ ಭೀಮಸೇನರಾಯರು ತಾಯಿ ಭಾರತೀಬಾಯಿಯವರ ಮಗಳಾಗಿ ಜನಿಸಿದ ಅಂಬಾಬಾಯಿ ಜಾಣೆಯಾಗಿದ್ದರು. ಇವರ ತಂದೆ ನಾಲ್ಕನೆಯ ತರಗತಿಯವರೆಗೂ ಓದಿಸಿದರು. ಅಂದಿನ ಕಾಲದಲ್ಲಿ ಉನ್ನತ ಶಿಕ್ಷಣ ನಿಷೇಧವಾಗಿದ್ದರಿಂದ ಅಂಬಾ ಬಾಯಿಯವರಿಗೆ ೧೦ ವರ್ಷಕ್ಕೆ ಮದುವೆ ಮಾಡಲಾಯಿತು. ಗೋಪಾಲಪುರದ ಹನುಮಂತಾಚಾರ್ಯ ಎಂಬ ಬಾಲಕನೊಂದಿಗೆ ವಿವಾಹ ಮಾಡಿದರು. ಬದುಕು ಸುಗಮವಾಗಿ ಸಾಗಲಿಲ್ಲ. ಅಂಬಾಬಾಯಿಯವರ ಜೀವನದಲ್ಲಿ ವಿಧಿ ಕ್ರೂರವಾಗಿ ನಡೆದುಕೊಂಡು ಬಿಟ್ಟಿತ್ತು. ಪ್ಲೇಗಿನ ಕಾಟದಿಂದಾಗಿ ಒಂದೇ ಒಂದು ದಿನದಲ್ಲಿ ತಂದೆಯನ್ನು, ಗಂಡನನ್ನು ಕಳೆದುಕೊಂಡರು. ಮಾನವೀಯತೆಯ ಸಂಪತ್ತಿನಲ್ಲಿ ದರಿದ್ರರಾಗಿದ್ದ ಗಂಡನ ಮನೆಯವರು ಎಳೆಯ ಬಾಲಕಿ ಅಂಬಾಬಾಯಿಯವರಿಗೆ ಕೇಶಮುಂಡನ ಮಾಡಿಸಿ ತವರಿಗೆ ಕಳುಹಿಸಿದ್ದರು. ಜೊತೆಗೆ ಆಸ್ತಿಯು ಒಂದು ಚೂರೂ ಸಿಗದಂತೆ ಮಾಡಿದರು. ಗಂಡನ ಮನೆಯಿಂದ ಹೊರದೂಡಲ್ಪಟ್ಟ ಅಂಬಾಬಾಯಿ ನೇರವಾಗಿ ತಮ್ಮನ ಮನೆಗೆ ಬಂದರು. ತಮ್ಮನ ಮನೆ ತುಂಬು ಸಂಸಾರದಿಂದ ಬಳಲಿತ್ತು. ಆದರೂ ಆರು ತಿಂಗಳುಗಳ ಕಾಲ ತಮ್ಮನ ಮನೆಯಲ್ಲಿಯೇ ವಾಸ್ತವ್ಯ ಹೂಡಿದರು. ನಂತರ ತಂಗಿ ಸೀತಬಾಯಿಯ ಮನೆಗೆ ಬಂದು ೧೬ ವರ್ಷಗಳ ಕಾಲ ಜೀವಿಸಿದರು. ಮನೆಯ ಕೆಲಸದ ಜೊತೆ ಧಾರ್ಮಿಕ ಪ್ರವೃತ್ತಿಯನ್ನು ಬೆಳೆಸಿಕೊಂಡರು. ಪೂಜೆ, ವ್ರತ, ಉಪವಾಸ, ಪಾರಾಯಣ, ಅಧ್ಯಯನಗಳಲ್ಲಿ ಗಾಢವಾಗಿ ತಮ್ಮನ್ನು ತೊಡಗಿಸಿಕೊಂಡ ಅವರ ಜೀವನವೇ ಧಾರ್ಮಿಕಮಯವಾಗಿತ್ತು. ಈ ಧಾರ್ಮಿಕ ಜೀವನ ಅವರ ಜೀವನಕ್ಕೆ ಭದ್ರ ಬುನಾದಿಯನ್ನು ಹಾಕಿತು.

ಅಂಬಾಬಾಯಿಯವರಿಗೆ ತಂದೆ ಮುದ್ದುಮೋಹನದಾಸರು 'ಗೋಪಾಲಕೃಷ್ಣ ವಿಠಲ' ಎಂಬ ಮುದ್ರಿಕೆಯನ್ನು ನೀಡಿದರು. ಮುಂದೆ ಅದೇ ಅಂಕಿತದಲ್ಲಿ ಕೀರ್ತನೆಗಳನ್ನು ರಚನೆಗೈದರು. ಗುರುಗಳಿಂದ

ಅಂಕಿತ ದೊರೆತ ಮೇಲೆ ಜೀವನದಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಯಾಯಿತು. ತಾನೋರ್ವ ವಿಧವೆ, ಮಡಿಹೆಂಗಸು ಮಂದಭಾಗ್ಯೆ, ತಮ್ಮ ತಂಗಿಯರ ಸಂಸಾರಗಳಿಗೆ ಭಾರವಾದವಳು ಎಂಬ ಭಾವನೆಗಳಿಂದ ಮುಕ್ತರಾದರು.

"ಗುರುಕೊಟ್ಟ ಅಂಕಿತವೆ ಮಾಂಗಲ್ಯವಾಯ್ತನೆಗೆ
ಗುರುವಿಟ್ಟ ನಾಮವೆ ತಿಲಕವಾಯ್ತು
ಗುರುಕರುಣವೆಂಬ ಕವಚವ ತೊಟ್ಟು ಹರುಷದಿ
ಗುರು ಪ್ರೀತಿ ಎಂಬ ವಸನವನುಟ್ಟು ಮುದದಿ"[೪೧]

ಅಂಬಾಬಾಯಿಯವರು ಕೇವಲ ೧೬ ವರ್ಷಗಳ ಕಾಲ ಮಾತ್ರ ಜೀವಿಸಿದ್ದರು. ಆ ಚಿಕ್ಕ ಅವಧಿಯಲ್ಲಿ ಸಾರ್ಥಕ ಜೀವನವನ್ನು ಕೈಗೊಂಡರು. ಜೀವನದ ದಿನಗಳನ್ನು ಭಕ್ತಿಗಾಗಿ ಮೀಸಲಿಟ್ಟಿದ್ದರು. ಅಂತಲೇ ಹಲವಾರು ಕೀರ್ತನೆಗಳನ್ನು ರಚಿಸಲು ಸಾಧ್ಯವಾಯಿತು. ಸುಮಾರು ೩೦೦ ಕೀರ್ತನೆಗಳನ್ನು ರಚಿಸಿದ್ದಾರೆ. ಹರಿಯ ಕುರಿತು ಮಾಡಿರುವ ಸ್ತುತಿಗಳೇ ಅಧಿಕವಾಗಿವೆ. ಗಣಪತಿ, ಕೃಷ್ಣನಬಾಲಲೀಲೆಗಳು, ತಿರುಪತಿಯ ಶ್ರೀನಿವಾಸ ವೈಭವ, ಉಡುಪಿ ಕೃಷ್ಣನ ಚೆಲುವು, ಪಾಂಡರಾಪುರದ ಕೃಷ್ಣನ ಸೊಗಸು, ಕರಿಗಿರಿ ನರಸಿಂಹನ ಕರುಣೆ ಮುಂತಾದ ದೇವರ ಮಹಿಮೆಯನ್ನು ಕೊಂಡಾಡಿದ್ದಾರೆ.

ನಿಡಗುರಕಿ ಜೀವೂಬಾಯಿ

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ನಿಡಗುರುಕಿ ಗ್ರಾಮದಲ್ಲಿ ಜೀವುಬಾಯಿ ಜನ್ಮ ತಾಳಿದರು. ಇವರ ಕಾಲ ೧೮೯೭ ನವೆಂಬರ್ ೧೮. ಸಂಪ್ರದಾಯಸ್ಥ ಕುಟುಂಬದ ರಾಮಚಂದ್ರರಾಯ ಮತ್ತು ರಮಾಬಾಯಿ ದಂಪತಿಗಳ ನಾಲ್ಕನೆಯ ಪುತ್ರಿಯೇ ಜೀವೂಬಾಯಿ. ಜೀವೂಬಾಯಿಯವರ ತಂದೆ-ತಾಯಿ ಆಸ್ತಿಕ ಮನೋಭಾವದವರಾಗಿದ್ದರು. ತಂದೆಯೇ ಜೀವುಬಾಯಿಯವರಿಗೆ ಗುರುಗಳಾಗಿದ್ದರು. ಶಿಕ್ಷಣದ ಜೊತೆಗೆ ಪಿಟೀಲು ನುಡಿಸುವ ವಿದ್ಯೆಯನ್ನು ಹೇಳಿಕೊಟ್ಟಿದ್ದರು. ತಾಯಿಯವರು ಸಂಪ್ರದಾಯಕ್ಕೆ ಸಂಬಂಧಿಸಿದ ಅನೇಕ ಆಚಾರ-ವಿಚಾರಗಳೊಂದಿಗೆ ಸಾಂಪ್ರದಾಯಕ ಹಾಡುಗಳನ್ನು ಕಲಿಸುತ್ತಿದ್ದರು.ಕೆಲಸದ ಜೊತೆಯಲ್ಲಿ ಬಿಡುವಿನ ವೇಳೆಯಲ್ಲಿ ಈ ಪಾರಂಪರಿಕ ವಿದ್ಯೆಗಳನ್ನು ಕಲಿತರು.

೧೦ನೇ ವರ್ಷದಲ್ಲಿ ಮದುವೆಯಾಗಿ ೧೧ನೇ ವರ್ಷಕ್ಕೆ ವಿಧವೆಯಾದರು. ಮೊದಮೊದಲು ತಮ್ಮ ಬಿಡುವಿನ ವೇಳೆಯಲ್ಲಿ ಕಥೆಗಳನ್ನು ಓದುತ್ತಿದ್ದರು. ಅಲ್ಲದೆ 'ನಿರುಪಮ' 'ತಾರಮುಖಿ' 'ಸುಂದರರಾಜ' ಎಂಬ ಕಥೆಗಳನ್ನು ಸಹ ಬರೆದಿದ್ದಾರೆ. ಈ ಕ್ರಿಯೆ ಅವರಿಗೆ ಸರಿಯಾಗಿ ಕಾಣಬರಲಿಲ್ಲ. ಕಥೆಯ ಸಹವಾಸಬಿಟ್ಟು ಆಧ್ಯಾತ್ಮ ಕ್ಷೇತ್ರಕ್ಕೆ ಹೊರಳಿದರು. ರಾಮಾಯಣ, ಭಾಗವತ, ಮಹಾಭಾರತ, ಪುರಾಣ, ಕೃತಿಗಳನ್ನು ಅಧ್ಯಯನ ಮಾಡಿದರು. ಸಾಧ್ಯವಾದಷ್ಟು ಮಟ್ಟಿಗೆ ತೀರ್ಥಕ್ಷೇತ್ರಗಳ ಸಂದರ್ಶನ ಮಾಡಿದರು. ಜೀವುಬಾಯಿಯವರ ಸ್ನೇಹಿತ ಬಳಗ ಸಾತ್ವಿಕಮಯವಾಗಿತ್ತು. ಹಬ್ಬದ ದಿನಗಳಲ್ಲಿ ಒಟ್ಟಾಗಿ ಹಾಡುತ್ತಿದ್ದರು. ಋಷಿಪಂಚಮಿ, ಮಹಾಶಿವರಾತ್ರಿ, ಗೋಕುಲಾಷ್ಟಮಿ ದಿನದಂದು ಭಗವಂತನ ಕುರಿತು ಸಂಕೀರ್ತನೆ ಕೈಗೊಳ್ಳುತ್ತಿದ್ದರು. ಇಡೀ ಸುತ್ತಮುತ್ತಲಿನ ವಾತವರಣವೇ ಭಕ್ತಿಮಯವಾಗಿ ಬಿಡುತ್ತಿತ್ತು.

ಜೀವುಬಾಯಿಯವರು ಜೀವನದಲ್ಲಿ ಒಂದು ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದರು. ಪ್ರತಿ ಸಂವತ್ಸರದ ಯುಗಾದಿಗೆ ಕೀರ್ತನೆಯನ್ನು ರಚಿಸಿ ದೇವರಿಗೆ ಅರ್ಪಿಸುತ್ತಿದ್ದರು. ಜೀವನದ ಅಂತಿಮ ದಿನದ ತನಕವೂ ಈ ರೂಢಿಯನ್ನು ಕೈಬಿಡದೆ ನೆಡೆಸಿಕೊಂಡು ಬಂದಿದ್ದರು. ತಿದ್ದುವ ಕ್ರಮವಿಲ್ಲದೆ ಈ ಕೀರ್ತನೆಗಳು ಮೂಡಿ ಬಂದಿರುವುದು ಇನ್ನೊಂದು ವಿಶೇಷವಾಗಿದೆ.

ಶ್ರೀ ಉರಗಾದ್ರಿವಾಸ ವಿಠ್ಠಲದಾಸರು ಜೀವುಬಾಯಿಯವರಿಗೆ ಶ್ರೀ 'ಕಮಲನಾಭ ವಿಠ್ಠಲ' ಎಂಬ ಮುದ್ರಿಕೆಯನ್ನು ಅನುಗ್ರಹಿಸಿದ್ದರು. ಅಂಕಿತವನ್ನು ಪಡೆದುಕೊಂಡು 'ಕರುಣದಿಂದ ಕಾಯೋ ಎನ್ನನು ಉರಗ್ರಾದಿವಾಸ ವಿಠ್ಠಲದೇವ' ಎಂಬ ಕೀರ್ತನೆಯನ್ನು ಮೊದಲ ಬಾರಿಗೆ ರಚಿಸಿ ಗುರುಗಳಿಗೆ ಅರ್ಪಿಸಿದ್ದರು. ಮುಂದೆ ಈ ಅಂಕಿತನಾಮದಿಂದ ಸುಮಾರು ೧೭೦ ಕೀರ್ತನೆಗಳನ್ನು ೧೦ ದೀರ್ಘಹಾಡುಗಳನ್ನು ರಚಿಸಿದರು.

ದೀರ್ಘ ಕೀರ್ತನೆಗಳಲ್ಲಿ ಶ್ರೀ ಪುರಂದರ ವಿಠಲದಾಸರ ಚರಿತ್ರೆ, ಶ್ರೀರಾಮ ಜನನ ಮತ್ತು ಸೀತಾ ಕಲ್ಯಾಣ, ಗಾಲವ ಚರಿತ್ರೆ, ಶ್ರೀವರಮಹಾಲಕ್ಷ್ಮೀಕಥೆ, ಸಮುದ್ರಮಂಥನ, ಶ್ರೀಹರಿಯಲೀಲಾ, ಶ್ರೀಕೃಷ್ಣಲೀಲಾ, ಶ್ರೀಹರಿಮಾನಸ ಪೂಜಾರಾಧಾ ಮಾಧವ ವಿಲಾಸ, ಶ್ರೀಪಾಂಡುರಂಗ ಚರಿತ್ರೆಯನ್ನು ಕಾಣಬಹುದು.

'ಶ್ರೀಹರಿಲೀಲಾ' ಎಂಬ ದೀರ್ಘ ಹಾಡಿನಲ್ಲಿ ನಾರದರ ಮುಖಾಂತರ ಹರಿಯ ಮಹಿಮೆಯನ್ನು ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ.

"ಅಣುರೇಣು ತೃಣದಲ್ಲಿ ಹರಿಯು
ಇಹನೆಂದು ಶೃತಿ ಸಾರುತಿರಲು ಎಣಿಸಬಹುದೇ ಅಣುಮಹದ್ರೂಪನ
ಗುಣಗಳನೆಂದೆನುತಾ
ಜಗವೆಲ್ಲಾ ತುಂಬಿರುವ ದೇವನ
ಹುಡುಕುವುದುಂಟೇ ಲೋಕದ ಜನರು
ಅಗಣಿತ ಆಶ್ಚರ್ಯನ ಮಹಾಮಹಿಮೆ
ಪೊಗಳಲು ಅಗಣಿತವೇ"[೪೨]

ಜೀವುಬಾಯಿಯವರಿಗೆ ಅಪಾರ ಜ್ಞಾನವಿದ್ದಾಗಲೂ ವಿನಯವನ್ನು ತೋರಿಸಿದ್ದಾರೆ. ಬಹುಶಃ ಈ ಬಗೆಯ ವಿನೀತಭಾವ ದೊಡ್ಡವರ ಗುಣವಿರಬಹುದು. ತನ್ನ ಕಾವ್ಯಕ್ರಿಯೆಯ ಕುರಿತು ಹೇಳುವ ಮಾತುಗಳು ಹೃದ್ಯವಾಗಿವೆ.

"ಅರಿತ ಸಜ್ಜನರು ಜರಿಯದೆ ಆಲಿಸಿ
ಸರಿಮಾಳ್ಪದು ತಪ್ಪುಗಳನ್ನು
ತಪ್ಪುಗಳೆಣಿಸಲಾಗದು ಬುಧರು
ಆದರದಿ ತಪ್ಪುಗಳ ತಿದ್ದುತಲಿ ಮನನಲಿದು
ದೂರದ್ಯೆಸಿರಿ ದೋಷರಾಶಿಗಳನೆ"[೪೩]

ಹೀಗೆ ಅನೇಕ ಕೀರ್ತನೆಗಳನ್ನು ರಚಿಸಿ ಅತ್ಯಮೂಲ್ಯವಾದ ಕೊಡುಗೆಯನ್ನು ಅಂಬಾಬಾಯಿಯವರು ನೀಡಿದ್ದಾರೆ.

ಓರುಬಾಯಿ ಲಕ್ಷ್ಮೀದೇವಮ್ಮ

ಸಂಡೂರಿನ ದಿವಾನರಾಗಿದ್ದ ಲಕ್ಷ್ಮಣರಾಯರ ಮತ್ತು ಗೋದಾವರಿಬಾಯಿಯವರ ಏಕಮಾತ್ರ ಪುತ್ರಿಯಾಗಿ ಓರುಬಾಯಿ ಲಕ್ಷ್ಮೀದೇವಮ್ಮನವರು ಕ್ರಿ.ಶ. ೧೮೬೫ಯಲ್ಲಿ ಜನಿಸಿದರು. ಆಗಿನ ಸಂದರ್ಭದಲ್ಲಿ ಸಾಮಾನ್ಯವಾಗಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಇವರ ತಂದೆಯೇ ಇವರಿಗೆ ಗುರುಗಳಾದರು. ಮನೆಯಲ್ಲಿಯೇ ಸಂಸ್ಕೃತ ಕನ್ನಡ ಭಾಷೆಗಳನ್ನು ಹೇಳಿಕೊಡುತ್ತಿದ್ದರು. ಮನೆಯಲ್ಲಿ ಸಾಂಪ್ರದಾಯಿಕ ಆಚಾರ-ವಿಚಾರಗಳನ್ನು ಮನೆಗೆಲಸವನ್ನು ಓರಣವಾಗಿ ಮಾಡುವುದನ್ನೇ ಕಲಿಯಬೇಕಾಗಿತ್ತು. ಅದುವೇ ಅವರು ಕಲಿಯಬೇಕಾದ ಜ್ಞಾನದ ಶಿಸ್ತಾಗಿತ್ತು.

ತಾಯಿಯವರ ಕಡೆಯಿಂದ ಆಚಾರ-ವಿಚಾರಕ್ಕೆ ಸಂಬಂಧಿಸಿದಂತೆ ಸಾಂಪ್ರದಾಯಿಕ ಹಾಡುಗಳು, ಹೆಣ್ಣಿಗೆ ಹಾಕುವುದು ಮುಂತಾದ ಕಲೆಗಳು ಬಳುವಳಿಯಾಗಿ ಬಂದಿದ್ದವು. ಓರುಬಾಯಿ ಲಕ್ಷ್ಮೀದೇವಮ್ಮನವರಿಗೆ ಐದು ವರ್ಷ ತುಂಬುತ್ತಿದ್ದಂತೆ ಸೋದರಮಾವ ಮಧ್ವರಾಯನೊಂದಿಗೆ ವಿವಾಹ ಮಾಲಾಡಯಿತು. ಆಗಿನಕಾಲದಲ್ಲಿ ಮಧ್ವರಾಯರು ವಕೀಲ ವೃತ್ತಿಯಲ್ಲಿ ನೈಪುಣ್ಯವನ್ನು ಹೊಂದಿ ಪ್ರಸಿದ್ಧರಾಗಿದ್ದರು. ಕೆಲ ಕಾಲದ ಬಳಿಕ ಈ ದಂಪತಿಗಳಿಗೆ ಒಂದು ಗಂಡುಮಗುವಾಯಿತು. ಒಂದು ವರ್ಷ ಕಾಲ ಜೀವಿಸಿದ್ದ ಮಗು ಹಠಾತ್ತನೆ ತೀರಿಹೋಯಿತು. ಇದರಿಂದಾಗಿ ದಂಪತಿಗಳ ಮನಸ್ಸು ದುಃಖತಪ್ತವಾಯಿತು. ಮಧ್ವರಾಯರು ತಮ್ಮ ತಂಗಿಯ ಮಗುವನ್ನೇ ದತ್ತು ತೆಗೆದುಕೊಂಡರು. ನಂತರ ಮಧ್ವರಾಯರು ತಮ್ಮ ನೆಲೆಯನ್ನು ಆದವಾನಿಗೆ ವರ್ಗಾವಣೆ ಮಾಡಿದರು.

ಲಕ್ಷ್ಮೀದೇವಮ್ಮನವರು ಕೀರ್ತನೆಗಳ ಜೊತೆಗೆ ದೀರ್ಘಕೃತಿಗಳನ್ನು ಸಹ ರಚಿಸಿದ್ದಾರೆ. ಇವರು ಸಹ ಗಣಪತಿ, ನರಸಿಂಹ, ಮಂತ್ರಾಲಯ ರಾಘವೇಂದ್ರಪ್ರಭು, ತಿರುಪತಿ ವೆಂಕಟೇಶ, ಪಾರ್ವತಿ ಮುಂತಾದ ದೇವ-ದೇವತೆಗಳ ಮೇಲೆ ಪುರಾಣದ ಹಿನ್ನೆಲೆಯನ್ನಿಟ್ಟುಕೊಂಡು ಕೀರ್ತನೆಯನ್ನು ರಚಿಸಿದ್ದಾರೆ. ಇವರ ಅಂಕಿತನಾಮ ನರಸಿಂಹವಿಠಲ.

ತರಕಾರಿ ಹಾಡಿನಲ್ಲಿ ದೇವರನ್ನು ನೆನೆಯುತ್ತಾ ಶಬ್ದ ಚಮತ್ಕೃತಿಯ ವಿಶೇಷತೆಯನ್ನು ಕಾಣಬಹುದು. ಈ ಪುಟ್ಟ ಕೀರ್ತನೆ ಅಮ್ಮನವರ ಪ್ರತಿಭೆಗೆ ಸಾಕ್ಷಿಯಾಗಿದೆ.

"ನಿನ್ನ ದಾಸರ ಬಿಟ್ಟನಾ ಬಾಳೆ ಕಾಯೋ
ಸಣ್ಣ ಮೂರುತಿ ನೀ ನಿಂಬೆ ಕಾಯೋ
ಮಾರಜನಕನೆ ಅಳಿದ ಮಾವನ್ನ ಕಾಯೋ
ಸಾರಿ ಕರೆದರೆ ನೀ ಬಾರೆ ಕಾಯೋ
ಮಾರ ಜನಕ ನರಸಿಂಹ ವಿಠಲ ಕಾಯೋ
ಮಾಡಿದ್ದೆಲ್ಲವು ಎನಗೆ ಸಮತೆ ಕಾಯೋ"[೪೪]

ಹರಿದಾಸ ಸಾಹಿತ್ಯಕ್ಕೆ ಮಹಿಳೆಯರು ಬಹು ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ದೀಪದಂತೆ ತಮ್ಮನ್ನು ತಾವು ಸುಟ್ಟುಕೊಂಡು ಜೀವನದಲ್ಲಿ ಸಾಹಿತ್ಯದ ಮುಖಾಂತರ ತತ್ವವನ್ನು ಕಟ್ಟಿಕೊಟ್ಟಿದ್ದಾರೆ. ವೈಧವ್ಯ ಪ್ರಾಪ್ತಿಯಾದರೂ ಜೀವನದಲ್ಲಿ ಧೃತಿಗೆಟ್ಟವರಲ್ಲ. ಹಿರಿಯ-ಕಿರಿಯರಿಂದ, ಸಮಾಜದ ಅಪಮಾನಗಳಿಂದ ವ್ಯಾಕುಲರಾಗದೆ, ಎಲ್ಲವನ್ನು ಸಹಿಸಿಕೊಂಡು ಬದುಕಿದರು. ಅವರ ಮನೆಯೇ ಶಿಕ್ಷಣ ನೀಡುವ, ಆಚಾರ-ವಿಚಾರವನ್ನು ಕಲಿಸುವ ತಾಣವಾಗಿತ್ತು.

ಒಂದೇ ಸಮುದಾಯಕ್ಕೆ ಸೇರಿದ್ದರೂ ನೋಟಗಳು, ಬದುಕುವ ಪರಿಸರ ಭಿನ್ನವಾಗಿರುತ್ತದೆ. ಎಂಬುದಕ್ಕೆ ಮಹಿಳಾ ದಾಸರ ಕೀರ್ತನೆಗಳೇ ಸಾಕ್ಷಿಯಾಗಿವೆ. ಮಹಿಳೆಯರಲ್ಲಿ ಕಾಣಬರುವ ಸಂಪ್ರದಾಯಿಕ ಜೀವನ ಪುರುಷದಾಸರ ರಚನೆಯಲ್ಲಿ ಕಾಣಬರುವುದಿಲ್ಲ. ಮಹಿಳೆಯರು ವಿಶೇಷವಾಗಿ ರಚಿಸಿರುವ ಆರತಿ ಹಾಡು, ಮುಯ್ಯದಹಾಡು, ಬಾಗಿಲಕಟ್ಟೋ ಹಾಡು, ವ್ರತ, ನಾಮಕರಣ, ಬೀಗರ ಹಾಡು, ಉರುಟಣೆ ಹಾಡು, ಒಗಟಿನ ರೂಪದ ಹಾಡುಗಳು ಅವರ ಪ್ರತಿಭೆಯನ್ನು ತೋರಿಸಿ ಕೊಡುವುದರ ಜೊತೆಗೆ ಮಹಿಳೆಯರ ಸ್ಥಿತಿ-ಗತಿಗಳನ್ನು ಹೇಳುತ್ತವೆ.

“ಈ ಮಹಿಳೆಯರು ಶಾಲೆಗೆ ಹೋಗಿ ಕಲಿತವರಲ್ಲ. ಔಪಚಾರಿಕ ಶಿಕ್ಷಣ ವಿಧಾನದಿಂದ ಶಾಸ್ತ್ರಾದಿಗಳನ್ನು ಅಭ್ಯಾಸ ಮಾಡುವ ಅವಕಾಶವಿದ್ದರೂ ಅಲ್ಲಿ ಕೇವಲ ಶ್ರವಣದ ಮೂಲಕ ಗ್ರಹಿಸಿದ ಪರಂಪರಾಗತ ಜ್ಞಾನವೇ ದೊಡ್ಡ ಆಸ್ತಿ. ಕಟ್ಟುನಿಟ್ಟಾದ ಸಂಪ್ರದಾಯಸ್ಥ ಬದುಕಿನ ಕೋಟಲೆಗಳ ನಡುವೆ ಆ ಬದುಕಿನ ಒಳಗೆ ಇದ್ದುಕೊಂಡೇ ಇವರ ಸಾಧನೆ ಸಾಗಬೇಕು. ಇಂಥ ಪರಿಸರದಲ್ಲಿ ಹರಿದಾಸರು ಅಚ್ಚ ಕನ್ನಡದಲ್ಲಿ ಪ್ರಚಾರಕ್ಕೆ ತಂದಿದ್ದ ವೈಷ್ಣವ ಮತದ ಸಿದ್ಧಾಂತ ತತ್ವಗಳನ್ನು ಭಕ್ತಿಯ ಬಗೆಗೆ ಅವರು ಬೆಳೆಯಿಸಿದ ನಂಬಿಕೆ, ವಿಚಾರಗಳನ್ನು ಮಾತ್ರವಲ್ಲ. ಅವರದೇ ಅಭಿವ್ಯಕ್ತಿ ಮಾದರಿಗಳನ್ನು ಪಡೆದುಕೊಂಡು ಈ ಹೆಣ್ಣು ಮಕ್ಕಳು ತಮ್ಮದೇ ರೀತಿಯಿಂದ ಹಾಡುಗಳನ್ನು ಕಟ್ಟಿ ಹಾಡತೊಡಗಿದರು.”[೪೯]

ಅಡಿಟಿಪ್ಪಣಿ

೧. ಕರ್ನಾಟಕ ಭಕ್ತ ವಿಜಯ, ಬೇಲೂರು ಕೇಶವದಾಸರು, ಪು-೧೮

೨. ಸಾವಿರಾರು ಕೀರ್ತನೆಗಳು, (ಸಂ) ಎ.ವಿ.ನಾವಡ, ಪುಟ-೨೫೪

೩. ಅದೇ, ಪುಟ-೫

೪. ಅದೇ, ಪುಟ-೩೨೯

೫. ಅದೇ, ಪುಟ-೩೭೧

೬. ಅದೇ, ಪುಟ-೨೪

೭. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೯೩, ಪುಟ-೨೧೨

೮. ಡಾ.ಎಲ್.ಬಸವರಾಜು, ಶಿವದಾಸ ಗೀತಾಂಜಲಿ, ೧೯೯೦, ಪುಟ-೬೬

೯. ರಂ.ಶ್ರೀ.ಮುಗಳಿ, ಪ್ರಾಚೀನ ಕನ್ನಡ ಸಾಹಿತ್ಯ ರೂಪುಗಳು, ೧೯೭೨, ಪುಟ-೨೬೨

೧೦. ಡಾ.ಎಲ್.ಬಸವರಾಜು, ತಿರುಮಲಾರ್ಯನ ಶೃಂಗಾರ ನಿದರ್ಶನ (ಪ್ರಸ್ತಾವನೆ), ೧೯೭೧, ಪುಟ-೩೧

೧೧. ಪ್ರಧಾನ ಗುರುದತ್ತ: ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಪುಟ-೩೫

೧೨. ಎ.ವಿ.ನಾವಡ: ಸಾವಿರಾರು ಕೀರ್ತನೆಗಳು, ಪುಟ-೧೧೫

೧೩. ಟಿ.ಎಲ್.ನಾಗರತ್ನ: ಹರಿದಾಸರ ಭಕ್ತಿಯ ಸ್ವರೂಪ, ಪುಟ-೧೨

೧೪. ಟಿ.ಎಲ್.ನಾಗರತ್ನ: ಹರಿದಾಸರ ಭಕ್ತಿಯ ಸ್ವರೂಪ, ಪುಟ-೧೪

೧೫. ಟಿ.ಎಲ್.ನಾಗರತ್ನ: ಹರಿದಾಸರ ಭಕ್ತಿಯ ಸ್ವರೂಪ, ಪುಟ-೧೭

೧೬. ಡಾ.ಶೀಲಾದಾಸ್, ಸುಳಾದಿಗಳು ಒಂದು ಅಧ್ಯಯನ, ಪುಟ-೧೪

೧೭. ಹರಿದಾಸ ಸಾಹಿತ್ಯ, ಲೇ:ಆರ್.ಎಸ್.ಪಂಚಮುಖಿ, ಪುಟ-೪೯-೫೦

೧೮. ಕರ್ನಾಟಕದ ಹರಿದಾಸರು, ಲೇ:ಡಾ.ಹೆಚ್.ಕೆ.ವೇದವ್ಯಾಸರು, ಪುಟ-೩೧೪

೧೯. ದಾಸ ಸಾಹಿತ್ಯದ ದ್ವಿತೀಯ ಘಟ್ಟದ ಸಾಧನೆ, ಡಾ.ಕೆ.ಜಿ.ಶಾಸ್ತ್ರಿ

೨೦. ದಾಸ ಸಾಹಿತ್ಯದ ದ್ವಿತೀಯ ಘಟ್ಟದ ಸಾಧನೆ, ಡಾ.ಕೆ.ಜಿ.ಶಾಸ್ತ್ರಿ, ಪುಟ-೧೮

೨೧. ದಾಸ ಸಾಹಿತ್ಯ ಒಂದು ಸೈದ್ಧಾಂತಿಕ ಅಧ್ಯಯನ, ಲೇ:ಆರ್.ಜಿ.ಗುಡಿ, ಪುಟ-೧೪

೨೨. ಪ್ರಾಣೇಶ ದಾಸರೂ ಒಂದು ಅಧ್ಯಯನ, ಲೇ:ಡಾ.ಸುಮನ್ ಯಜುರ್ವೇದಿ, ಪುಟ-೨೭

೨೩. ಹರಿದಾಸ ಸಾಹಿತ್ಯ, ಲೇ:ಆರ್.ಎಸ್.ಪಂಚಮುಖಿ, ಪುಟ-೪೯-೫೦

೨೪. ಎ.ವಿ.ನಾವಡ (ಸಂ), ಸಾವಿರಾರು ಕೀರ್ತನೆಗಳು, ಪುಟ-೬೪

೨೫. ಅದೇ, ಪುಟ-೬೭

೨೬. ಕನ್ನಡ ಸಾಹಿತ್ಯ ಚರಿತ್ರೆ, ಲೇ:ರಂ.ಶ್ರೀ.ಮುಗಳಿ, ಪುಟ-೨೧೨

೨೭. ಎ.ವಿ.ನಾವಡ: ಸಾವಿರಾರು ಕೀರ್ತನೆಗಳು, ಪು-೨

೨೮. ಎ.ವಿ.ನಾವಡ: ಸಾವಿರಾರು ಕೀರ್ತನೆಗಳು, ಪುಟ-೧೧೫

೨೯. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೯೩, ಪುಟ-೨೫೯

೩೦. ಹೆಚ್.ಎಸ್.ವೆಂಕಟೇಶ ಮೂರ್ತಿ ಕೀರ್ತನಗಾರರು, ಪುಟ-೪೧

೩೧. ಶ್ರೀಮತಿ ಆರ್ಯಾಂಬ ಪಟ್ಟಾಭಿ, ಮಹಿಳಾ ಸಾಹಿತ್ಯ ಸಮೀಕ್ಷೆ, ಪುಟ-೧೨೪-೧೨೫

೩೨. ಡಾ.ಕೃಷ್ಣಕೊಲ್ಹಾರ ಕುಲಕರ್ಣಿ, ಕಾಖಂಡಕಿ ಶ್ರೀಮಹಿಪತಿದಾಸರು, ಪುಟ-೬೨

೩೩. ಸಮಗ್ರ ದಾಸ ಸಾಹಿತ್ಯ, ಸಂಪುಟ-೭, ಪುಟ-೧೨೬

೩೪. ಸಮಗ್ರ ದಾಸ ಸಾಹಿತ್ಯ, ಸಂಪುಟ-೭, ಪುಟ-೨೭

೩೫. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೪, ಪುಟ-೨೧೩

೩೬. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೪, ಪುಟ-೧೫೯

೩೭. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೪, ಪುಟ-೧೯೮

೩೮. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೧, ಪುಟ-೩೯

೩೯. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೧, ಪುಟ-೫೪

೪೦. ಎ.ವಿ.ನಾವಡ: ಸಾವಿರಾರು ಕೀರ್ತನೆಗಳು, ಪುಟ-೧೮

೪೧. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೩, ಪುಟ-೧೪೧

೪೨. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೨, ಪುಟ-೫೩

೪೩. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೨, ಪುಟ-೫೭

೪೪. ಸಮಗ್ರ ದಾಸ ಸಾಹಿತ್ಯ, ಸಂಪುಟ-೧೮, ಭಾಗ-೪, ಪುಟ-೫೧

ಅಧ್ಯಾಯ - ನಾಲ್ಕು

ದಾಸಸಾಹಿತ್ಯ ಭಾಷಿಕರಚನೆ

ಅಧ್ಯಾಯ - ನಾಲ್ಕು

ದಾಸಸಾಹಿತ್ಯ ಭಾಷಿಕರಚನೆ

೧೨ನೇ ಶತಮಾನದಲ್ಲಿ ಶರಣರು ತಮ್ಮ ಸಾಹಿತ್ಯಕ್ಕೆ ಶಿಷ್ಟ ಭಾಷೆಯ ಜೊತೆಗೆ ಆಡುನುಡಿಯ ಭಾಷೆಯನ್ನು ಬಳಸಿಕೊಂಡರು. ಹೀಗಾಗಿ ಶರಣರ ಸಾಹಿತ್ಯ ಕ್ಷೇತ್ರ ವಿಶಾಲವಾಯಿತು. ಹಲವಾರು ಬಗೆಯ ವೃತ್ತಿ ಜನಾಂಗದವರು ತಮ್ಮ ವೃತ್ತಿ ಅನುಭವದ ಮೇರೆಗೆ ಸಾಹಿತ್ಯವನ್ನು ರಚನೆ ಮಾಡಿದರು. ಇದರಿಂದಾಗಿ ಶರಣರು ಅತಿ ಬೇಗನೆ ಜನ ಸಾಮಾನ್ಯರ ಬಳಿ ತಲುಪಲು ನೆರವಾಯಿತು.

ಭಾಗವತ, ಮಹಾಭಾರತ, ರಾಮಾಯಣ, ಉಪನಿಷತ್ ಹೀಗೆ ಸಂಸ್ಕೃತದ ಉತ್ಕೃಷ್ಟ ಕಾವ್ಯಗಳು ಪಂಡಿತ ವರ್ಗದವರಿಗೆ ಮಾತ್ರ ಸೀಮಿತವಾಗಿದ್ದವು. ಅವುಗಳು ಉಳಿಯಬೇಕೆಂದರೆ ಜನಸಾಮಾನ್ಯರ ಬಳಿಗೆ ಹೋಗಲೇಬೇಕು. ಸಂಸ್ಕೃತದ ಮಹಾಕಾವ್ಯಗಳಲ್ಲಿ ಅಡಗಿರುವ ತತ್ವಗಳನ್ನು ಜನಸಾಮಾನ್ಯರಿಗೆ ತಿಳಿಯಬೇಕೆಂದರೆ ಜನಸಾಮಾನ್ಯರ ಭಾಷೆಯಲ್ಲೇ ಅಂದರೆ ಅವರಾಡುವ ಗ್ರಾಮ್ಯ ಭಾಷೆಯಲ್ಲೇ ಹೇಳಬೇಕೆಂಬ ಸಿದ್ಧಾಂತ ದಾಸರಿಗೆ ಮನವರಿಕೆಯಾಯಿತು. ಇದಕ್ಕೂ ಮೊದಲು ೧೨ನೇ ಶತಮಾನದಲ್ಲಿ ಶರಣರು ಈ ಪ್ರಯೋಗ ಮಾಡಿ ಜನಪ್ರಿಯರಾಗಿದ್ದರು. ಗುಂಡ್ಮಿ ಚಂದ್ರಶೇಖರ ಐತಾಳರು ಹೇಳುವಾಗ "ಹರಿದಾಸರು ಇಂಥ ಮಾಧ್ಯಮವನ್ನು ಅರಸುವ ಅವಶ್ಯಕತೆ ಇತ್ತು. ಅದಕ್ಕೆ ರಾಗ ತಾಳಬದ್ಧವಾದ ಕೀರ್ತನ ಪ್ರಕಾರ ಆವಿಷ್ಕಾರವಾಯಿತು. ಎಲ್ಲ ದೃಷ್ಟಿಯಿಂದಲೂ ಇದು ವಚನ ಸಾಹಿತ್ಯದಿಂದ ಪ್ರತೇಕ ಪ್ರಕಾರವಾಗಿ ಬೆಳೆಯಿತು. ಸಂಗೀತದ ಸೌಗಂಧದೊಡನೆ ಈ ಸಾಹಿತ್ಯ ಪ್ರಕಾರ ಹೆಚ್ಚು ಜನಪ್ರಿಯವಾಗಿ ಮಧ್ವಮತ ತತ್ತ್ವ ಪ್ರಣಾಳಿಯಾಯಿತು. ಭಕ್ತಿಯ ಭಾಗೀರಥಿ ಇದರ ಮೂಲಕ ಪ್ರವಹಿಸಿತು. ಅಂತಲೇ ಇಂದಿಗೂ ಅಕ್ಷರಬಾರದ ಅದೆಷ್ಟೋ ಜನರು ಕೇವಲ ರಾಗ, ತಾಳ, ಲಯದ ಮುಖಾಂತರ ಹೊರಹೊಮ್ಮಿರುವ ಕೀರ್ತನ ಸಾಹಿತ್ಯವನ್ನು ಗ್ರಹಿಸಿ ಹಾಡುವವರಿದ್ದಾರೆ.

ಮುಂದುವರೆದು ದಾಸರು ಕೀರ್ತನೆಯ ಸಾಹಿತ್ಯ ಸೃಷ್ಟಿಯನ್ನು ಸರಳ ಗೊಳಿಸಿದರು. ಈ ಸಂದರ್ಭದಲ್ಲಿ ದಾಸರು ವ್ಯಾಕರಣದ ಹಲವಾರು ನಿಯಮಗಳನ್ನು ದಾಟಿದರು. ಕೇವಲ ಮಹಾಕಾವ್ಯಗಳ

ಉದ್ಗ್ರಂಥಗಳ ತತ್ವಗಳನ್ನು ಹೇಳದೆ ಸಮಾಜದಲ್ಲಿದ್ದ ಅರ್ಥಹೀನ ಆಚರಣೆಗಳನ್ನು ಖಂಡಿಸಿದರು. ಹಾಗೆ ಖಂಡಿಸುವಾಗಲೂ ಸಾಮಾನ್ಯ ರೂಪಗಳನ್ನು ಬಳಸಿಕೊಂಡಿದ್ದರು. ಈ ಸಂದರ್ಭದಲ್ಲಿ ಸಂಸ್ಕೃತದ ನುಡಿಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡದೆ ಸರಳವಾಗಿ ಸಾಹಿತ್ಯವನ್ನು ರಚನೆಮಾಡಿದರು.

ದಾಸರು ಕಾರ್ಯಕ್ಷೇತ್ರ ಕೈಗೊಂಡದ್ದು ಜನಸಾಮಾನ್ಯರ ಜೀವನ ನಡುವೆ. ಅಂತಲೇ ಅವರಿಗೆ ಬೇರೆ ಬೇರೆ ರೀತಿಯ ವೃತ್ತಿಗಳು ಹಾಗೂ ಬೇರೆ ಬೇರೆ ರೀತಿಯ ಸಮುದಾಯದ ಮನೋಧರ್ಮಗಳನ್ನು ತಿಳಿಯಲು ಸಾಧ್ಯವಾಯಿತು. ಅಲ್ಲದೆ ಜನ ಸಾಮಾನ್ಯರೊಂದಿಗೆ ಮುಕ್ತವಾಗಿ ಬೆರೆತು ಮಾತಾಡಿದರು. ಅವರವರ ವೃತ್ತಿ ಹವ್ಯಾಸಗಳಲ್ಲಿ ತೊಡಗಿರುತ್ತಲೇ ಭಕ್ತಿಯ ಹಿರಿಮೆಯನ್ನು ಮನಗಾಣಿಸಿ ಹಿಡಿಯಬೇಕಾದ ದಾರಿಯನ್ನು ತಿಳಿಸಿದರು. ಜನಸಾಮಾನ್ಯರ ಆಡುಭಾಷೆಯಲ್ಲಿಯೇ ತಮ್ಮ ತತ್ತ್ವ ಸಿದ್ಧಾಂತವನ್ನು ಹೇಳಿದುದು ದಾಸರು ಕೈಗೊಂಡ ಭಾಷಿಕ ಕ್ರಾಂತಿ ಎನ್ನಬಹುದು.

ಹ್ಯಾಂಗೆ ನೀ ದಾಸನಾದೆ ಹೀಂಗೆ ಸಂಸಾರದೊಳು
ಮಂಗನಂದದಲ್ಲಿ ಭವಭಂಗವ ಪಡುವವನು

ಇಲ್ಲಿ ಬಳಕೆಯಾಗಿರುವ ಹ್ಯಾಂಗೆ, ಹೀಂಗೆ ಎಂಬ ಶಬ್ದಗಳು ಹೇಗೆ, ಹೀಗೆ ಎಂಬ ಶಬ್ದಗಳಿಗೆ ಪರ್ಯಾಯ ಪದಗಳಾಗಿ ಬಳಕೆಯಾಗಿವೆ.

ರೊಕ್ಕ ಎರಡಕ್ಕು ದುಃಖ ಕಾಣಕ್ಕ
ಮಕ್ಕಳ ಮರಿಗಳ ಮಾಡೋದು ರೊಕ್ಕ
ಸಕ್ಕರೆ ತುಪ್ಪವ ಸವಿಯೋದು ರೊಕ್ಕ
ಕಕ್ಕುಲಾತಿಯನ್ನು ಬಿಡಿಸೋದು ರೊಕ್ಕ
ಫಕ್ಕನೆ ಹೋದರೆ ಘಾತಕಾಣಕ್ಕ

ಮೇಲಿನ ಕೀರ್ತನೆಯಲ್ಲಿ ಬಳಕೆಯಾಗಿರುವ ರೊಕ್ಕ, ಕಕ್ಕುಲಾತಿ, ಎಂಬ ಪದಗಳ ಗ್ರಾಮೀಣ ಆಡುನುಡಿಗಳಾಗಿವೆ. ಕಕ್ಕುಲಾತಿ ಎಂಬ ಪದವು ಪ್ರೀತಿ, ಕಾಳಜಿ ಎಂಬರ್ಥದಲ್ಲಿ ಬಳಕೆಯಾಗಿದೆ. ಮುಸುರೆ, ಟೊಳ್ಳು ಕುಂಟಸುದ್ದಿ, ಹೀಗೆ ಸಹಜವಾಗಿ ಮಾತಿನ ಮಧ್ಯೆ ಬಳಕೆಯಾಗುವ ಪದಗಳನ್ನೇ ದಾಸರು ಆಯ್ದುಕೊಂಡಿದ್ದಾರೆ.

ಮಾತು ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯುವ ಮಾಪನವಾಗಿದೆ. ಸಮಾಜವು ತನ್ನದೇ ಆದ ಒಂದು ಒಂದು ಲೋಕಜ್ಞಾನವನ್ನು ನಿರ್ಮಿಸಿಕೊಂಡಿದೆ. ಅಲ್ಲಿ ಪ್ರಾಣಿಗಳ ಗುಣ ಹಿನ್ನೆಲೆಯಲ್ಲಿ ಭಾಷಿಕ ರಚನೆ ಬಳಕೆಯಾಗುತ್ತಿರುತ್ತದೆ. ಕೋಪಿಷ್ಟ, ಪಾಪಿಷ್ಟರ ಸ್ವಭಾವವನ್ನು ಚಿತ್ರಿಸುವುದಕ್ಕೆ ಭಾಷಿಕ ರಚನೆ ಸರಳವಾಗಿರುವುದನ್ನು ಈ ಕೀರ್ತನೆಯಲ್ಲಿ ಕಾಣಬಹುದು.

ಪಾಪಿ ಬಲ್ಲನೆ ಪರರ ಸುಃಖ ದುಃಖವ
ಕೋಪಿ ಬಲ್ಲನೆ ಶಾಂತಿ ಸುಗುಣದ ಘನವ

ಕತ್ತೆ ಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ
ಮೃತ್ಯು ಬಲ್ಲಳೆ ವೇಳೆ ಹೊತ್ತೆಂಬುದ

ತೊತ್ತು ಬಲ್ಲಳೆ ಮಾನಾಪಮಾನವೆಂಬುದನು
ಮತ್ತೆ ಬಲ್ಲುದೆ ಬೆಕ್ಕು ಹರಿಯ ಮೀಸಲವ ೧

ಹೇನು ಬಲ್ಲುದೆ ಮುಡಿವ ಹೂವಿನ ಪರಿಮಳವ
ಶ್ವಾನ ಬಲ್ಲುದೆ ರಾಗ ಭೇದಂಗಳ
ಮೀನುಬಲ್ಲುದೆ ನೀರು ಸವುಳು ಸ್ವಾದೆಂಬುದು
ಹೀನ ಬಲ್ಲನೆ ಸುಗಮ ದುರ್ಗುಣವನು ೨

ಬಾಳೆ ಬಲ್ಲುದೆ ಮರಳಿ ಫಲವಾಗೋ ಸುದ್ಧಿಯನು
ಸೂಳೆ ಬಲ್ಲಳೆ ಗೆಳಯಗಿಹ ಬಡತನವ
ಕೇಳಬಲ್ಲನೆ ಕಿವುಡ ಏಕಾಂತ ಮಾತುಗಳ
ಹೇಳಬಲ್ಲನೆ ಮೂಕ ಕನಸ ಕಂಡುದನು ೩

ಕಾಗೆ ಬಲ್ಲುದೆ ಒಳ್ಳೆ ಕೋಗಿಲೆಯ ಸ್ವರವನ್ನು
ಗೂಗೆ ಬಲ್ಲುದೆ ಹಗಲ ಹರಿದಾಟವ
ಜೋಗಿ ಬಲ್ಲನೆ ಮನೆಯೊಳಿಲ್ಲ ಉಂಟೆಂಬುದನು
ರೋಗಿ ಬಲ್ಲನೆ ಮೃಷ್ಟಾನ್ನದ ರುಚಿಯ ೪

ಹೇಡಿ ಬಲ್ಲನೆ ರಣದ ಸಾಹಸದ ಶೌರ್ಯವನು
ಕೋಡಗವು ಬಲ್ಲುದೆ ರತ್ನದ ಬೆಲೆಯ
ಬೇಡಿದುದ ಕೊಡಲು ಪುರಂದರವಿಠಲನಲ್ಲದೆ
ನಾಡ ದೈವಗಳೇನು ಕೊಡಬಲ್ಲವೂ

ಇಲ್ಲಿಯ ಕತ್ತೆ, ಹೇನು, ಶ್ವಾನ, ಮೀನು, ಬಾಳೆ, ಸೂಳೆ, ಕಾಗೆ, ಗೂಗೆ, ಜೋಗಿ, ರೋಗಿ, ಹೇಡಿ, ಕೋಡಗ ಹೀಗೆ ಜನ ಬಳಕೆಯಲ್ಲಿರುವ ಪದಗಳನ್ನು ಆಯ್ದುಕೊಂಡಿರುವುದನ್ನು ಕಾಣಬಹುದು. ಹಾಗೆಯೇ ಹಗಲು-ಹಗಲ, ಸವುಳು-ಸವಕಲು ಅಥವಾ ಸಪ್ಪೆಯಾಗಿರುವ ಎಂಬರ್ಥಗಳಿರುವ ಪರ್ಯಾಯ ಪದಗಳು ಬಳಕೆಯಾಗಿರುವುದು ವಿಶೇಷವೇ ಸರಿ.

ದಾಸರು ಸಂಸ್ಕೃತ ಪದಗಳನ್ನು ಬಳಸಿದರೂ ಹೆಚ್ಚಾಗಿ ಜನಾರಾಡುವ ಆಡುನುಡಿಯನ್ನು ಬಳಸಿದರು. ವ್ಯಾಕರಣದ ಶುದ್ಧತೆಗಿಂತ ಧರ್ಮದ ತತ್ವವು ಜನಸಾಮಾನ್ಯರ ಬಳಿಗೆ ಹೋಗಬೇಕೆಂಬುದಾಗಿತ್ತು. ಆದ್ದರಿಂದ ಭಾಷಾ ರಚನೆ ಸರಳಗೊಳಿಸಿದರು. ಹೀಗೆ ಸರಳಗೊಳಿಸುವ ಸಂದರ್ಭದಲ್ಲಿ ಕೇವಲ ಪದರಚನೆಯಲ್ಲಿ ಮಾತ್ರ ಬದಲಾವಣೆ ಆದುದಲ್ಲ. ಬದಲು ಸಂಸ್ಕೃತ ಭಾಷೆಯಿಂದ ಕನ್ನಡ ಭಾಷೆಗೆ ಬರುವಾಗ ಆದ ಪದಗಳ ಶಿಥಿಲರೂಪಗಳು, ದ್ವಿರುಕ್ತಿಗಳು, ಸಂಕ್ಷಿಪ್ತರೂಪಗಳು, ಸಂವಾದಿ ರೂಪಗಳು, ದ್ವಿತ್ವ ರೂಪಗಳು, ಕನ್ನಡ ದ್ವಿತ್ವರೂಪಗಳು, ಸಂಖ್ಯಾವಾಚಕಗಳು, ಅರಿಸಮಾಸ ಹೀಗೆ ಎಲ್ಲ ಬಗೆಗಳಲ್ಲೂ ದಾಸರಲ್ಲಾದ ಭಾಷಿಕ ರಚನೆಯ ವಿಶೇಷತೆಯನ್ನು ಕಾಣಬಹುದು.

ಶಿಥಿಲರೂಪಗಳು

ಸಂಸ್ಕೃತದ ಪದಗಳು ಹಲವು ಒತ್ತಕ್ಷರಗಳಿಂದ ಕೂಡಿದ ಒಂದು ನಿಯಮ ಬಂಧವಾಗಿದೆ. ಅಲ್ಲದೇ ಸಂಸ್ಕೃತ ಪದಗಳ ಬಳಕೆ ಕಡಿಮೆಯಾಗಿದ್ದರಿಂದ ಮೊದಲ ಬಾರಿಗೆ ಕೇಳುವಾಗ ಮತ್ತು ಆಡುವಾಗ ಉಚ್ಚರಿಸಲು ಬಾರದಷ್ಟು ಕಠಿಣವಾಗಿವೆ. ಈ ಸಂದರ್ಭದಲ್ಲಿ ಭಾಷಿಕರು ತಮಗೆ ಅನುಕೂಲ ಆಗುವ ಹಾಗೆ ರಚನೆ ಮಾಡಿಕೊಂಡು ಸಂವಹನ ಕ್ರಿಯೆಯಲ್ಲಿ ತೊಡಗುವುದು ಭಾಷೆಯ ನಿಯಮವಾಗಿದೆ. ಈ ಬಗೆಯಲ್ಲಿ ಅನೇಕ ಪದಗಳು ದಾಸ ಸಾಹಿತ್ಯದಲ್ಲಿ ಶಿಥಿಲರೂಪವನ್ನು ಪಡೆದುಕೊಂಡಿವೆ. ಈ ಸರಳೀಕರಣ ಪ್ರಕ್ರಿಯೆ ಹಿಂದೆಯೂ ಬಳಕೆಯಲ್ಲಿತ್ತು. ಉದಾ: ಶಕ್ತಿ, ಶಕುತಿ, ಮುಕುತಿ ಇತ್ಯಾದಿ

ಶಿಥಿಲರೂಪ	ಸಂಸ್ಕೃತರೂಪ
ತೀರುಥ	ತೀರ್ಥ
ತಪಿತ	ತಪ್ತ
ತಂತರ	ತಂತ್ರ
ಅದುಭುತ	ಅದ್ಭುತ
ಕಲಿಪಿಸು	ಕಲ್ಪಿಸು
ಉಕುತಿ	ಉಕ್ತಿ
ಇಂದರ	ಇಂದ್ರ
ತನುಮಯ	ತನ್ಮಯ
ಚಿನುಮಯ	ಚಿನ್ಮಯ
ಉತುಪತಿ	ಉತ್ಪತ್ತಿ
ಗುಪಿತ	ಗುಪ್ತ
ಗರಜನೆ	ಗರ್ಜನೆ
ಅಬ್ಬರ	ಅಭ್ರ
ಆತುಮ	ಆತ್ಮ
ಆದಿಮೂರುತಿ	ಆದಿಮೂರುತಿ
ಚಾರುವಾಕ	ಚಾರ್ವಾಕ
ಆರತ	ಆರ್ತ
ದರುಶನ	ದರ್ಶನ
ದುರಿಯೋಧನ	ದುರ್ಯೋಧನ
ದುರುಮತಿ	ದುರ್ಮತಿ

ನಿರುಮಾಲ್ಯ	ನಿರ್ಮಾಲ್ಯ
ಪರಿಯಂಕ	ಪರ್ಯಂಕ
ಭಸುಮ	ಭಸ್ಮ
ಮರಿಯಾದೆ	ಮರ್ಯಾದೆ
ಪರುವತ	ಪರ್ವತ
ಸ್ವಪನ	ಸ್ವಪ್ನ
ರತುನ	ರತ್ನ
ಸೂತರ	ಸೂತ
ಸಿರಿಕೃಷ್ಣ	ಶ್ರೀಕೃಷ್ಣ
ಭಕುತಿ	ಭಕ್ತಿ
ಪದ್ಮಮನಾಭ	ಪದ್ಮನಾಭ
ಸರುವಜ್ಞ	ಸರ್ವಜ್ಞ
ಸತುವ	ಸತ್ತ್ವ
ವಿರಕುತಿ	ವಿರಕ್ತಿ
ಸಕುತಿ	ಸಕ್ತಿ
ಸಂಚರಿ	ಸಂಚಾರಿ
ಸನುಮಾರ್ಗ	ಸನ್ಮಾರ್ಗ
ಸನ್ನುಮತಿ	ಸನ್ಮತಿ
ಲಕ್ಷಮಣ	ಲಕ್ಷ್ಮಣ
ಸಂದರುಶನ	ಸಂದರ್ಶನ
ಸವುಖ್ಯ	ಸೌಖ್ಯ
ಸಿರಿಲೋಲ	ಶ್ರೀಲೋಲ
ಚೂರಣ	ಚೂರ್ಣ
ಚತುರವಿಧ	ಚತುರ್ವಿಧ

ದ್ವಿರುಕ್ತಿಗಳು

ಒಂದೇ ಅರ್ಥವನ್ನು ನೀಡುವ ಶಬ್ದಗಳು ಏಕಕಾಲಕ್ಕೆ ಒಟ್ಟಿಗೆ ಸೇರಿ ಒಂದೇ ಶಬ್ದ ರೂಪದಲ್ಲಿ ಬಳಕೆಯಾಗುವುದನ್ನು ದ್ವಿರುಕ್ತಿ ಎನ್ನಬಹುದು. ಸಂಸ್ಕೃತ ಭಾಷೆಯ ಪದವೊಂದಕ್ಕೆ ಕನ್ನಡ ಭಾಷೆಯ ಪದವೊಂದು ಸೇರಿಕೊಂಡು ಪದಗಳು ರಚನೆಗಳಾಗುತ್ತವೆ. ಬಹುಷಃ ಈ ಬಗೆಯ ರಚನೆಗಳು ಸಂಸ್ಕೃತ ಭಾಷೆಯನ್ನು ಗ್ರಹಿಸುವುದಕ್ಕೆ ಅಥವಾ ಅರ್ಥ ಮಾಡಿಕೊಳ್ಳುವುದಕ್ಕೆ ರಚನೆಯ ಹಿನ್ನೆಲೆ ಇರಬಹುದು.

ಈ ಬಗೆಯ ಪದರಚನೆಗಳಲ್ಲಿ ಮೊದಲು ಸಂಸ್ಕೃತ ಪದವೂ ಬರಬಹುದು ಇಲ್ಲವೆ ಕನ್ನಡ ಪದವೂ ಬರಹುದು. ಇಲ್ಲವೆ ಎರಡು ಪದಗಳು ಸಂಸ್ಕೃತ ರೂಪದಲ್ಲಿರಬಹುದು.

ಸಂಸ್ಕೃತರೂಪ	ದ್ವಿರುಕ್ತಿ
ಅಂಧಂತಮಸ್ಸು	ಅಂಧಂತಮಸ್ಸು
ವಿತ್ತಭಾಗ್ಯ	ವಿತ್ತಭಾಗ್ಯ
ಮೃತ್ಯು	ಮೃತ್ಯುಮಾರಿ
ಮೂಲ	ಮೂಲಬೇರು
ವಸ್ತ್ರ	ಬಣ್ಣವಸ್ತ್ರ
ಪಂಚ	ಪಂಚೈವರು
ತರು	ತರುಮರ
ಛಿದ್ರ	ತುಂಡುಛಿದ್ರ

ಸಂಕ್ಷಿಪ್ತರೂಪಗಳು

ಭಾಷಿಕರು ದಿನ ನಿತ್ಯದ ಸಂವಹನ ಕ್ರಿಯೆಗಾಗಿ ಭಾಷೆಯನ್ನು ಸಂಕ್ಷಿಪ್ತಗೊಳಿಸಿ ಸಂಭಾಷಣೆ ಕ್ರಿಯೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಗ್ರಾಂಥಿಕ ಭಾಷೆಯೂ ಸಹ ಆಡುನುಡಿಯ ಸಂದರ್ಭದಲ್ಲಿ ಸಂಕ್ಷಿಪ್ತಗೊಳ್ಳುತ್ತದೆ. ಪ್ರಾದೇಶಿಕ ಉಪಭಾಷೆಯು ಸಹ ಒಂದಲ್ಲ ಒಂದು ರೀತಿಯಿಂದ ಸಂಕ್ಷಿಪ್ತಗೊಳಿಸುವ ಕ್ರಿಯೆಯಲ್ಲಿ ಪ್ರಭಾವ ಬೀರುತ್ತದೆ. ಸಂಕ್ಷಿಪ್ತ ರೂಪಗಳ ರಚನೆಯು ಮಾತಿನ ಸೌಲಭ್ಯಕ್ಕಾಗಿ ಸೃಷ್ಟಿಯಾಗುತ್ತವೆ.

ಸಂಸ್ಕೃತ ಅಥವಾ ಇನ್ನಿತರ ಯಾವುದೇ ಭಾಷೆಯ ಪದಗಳು ಕನ್ನಡ ಭಾಷಾ ವಲಯಕ್ಕೆ ಬಂದಾಗ, ಸಂಕ್ಷೇಪಗಳಾಗುತ್ತವೆ. ಮೂಲ ಪದದ ಕೆಲವೊಂದು ಅಕ್ಷರಗಳು, ದೀರ್ಘ ಅಥವಾ ಹ್ರಸ್ವಸ್ವರಗಳು ಲೋಪ ಹೊಂದುತ್ತವೆ. ಸಂಕೇತರೂಪದ ಒತ್ತಕ್ಷರಗಳು ಬಳಕೆಯಾಗುತ್ತವೆ. ಈ ಸಂದರ್ಭದಲ್ಲಿ ಪದಗಳ ರಚನೆಯು ಸಹ ಮೊಟಕಾಗಿ ಬಿಡುತ್ತವೆ. ದಾಸ ಸಾಹಿತ್ಯ ಸಂದರ್ಭದಲ್ಲಿ ನೋಡುವುದಾದರೆ ಸಂಕ್ಷಿಪ್ತ ರೂಪಗಳು ಹೀಗಿವೆ.

ಸಂಸ್ಕೃತರೂಪ	ಸಂಕ್ಷಿಪ್ತರೂಪ
ಅನ್ಯಾಯಕಾರಿ	ಅನ್ಯಕಾರಿ
ಪಾತಕಿಗಳು	ಪಾಕಿಗಳು
ವಸತಿ	ವಸ್ತಿ
ಸಂಧ್ಯಾಧ್ಯಾನ	ಸಂಧ್ಯಾನ
ವಸತಿಕಾರ	ವಸ್ತಿಗಾರ
ಬ್ರಹ್ಮಹತ್ಯಕಾರ	ಬ್ರಹ್ಮಹತ್ಯಗಾರ
ಬ್ರಾಹ್ಮಣ	ಬರ್ಮಣ/ಬ್ರಾಂಬರ

ಸಂವಾದಿರೂಪಗಳು

ಸಂಸ್ಕೃತದ ಕೆಲವು ಶಬ್ದಗಳಿಗೆ ಕನ್ನಡದಲ್ಲಿ ಪರ್ಯಾಯವಾದ ಕೆಲವು ಶಬ್ದಗಳನ್ನು ದಾಸರು ರಚನೆ ಮಾಡಿದ್ದಾರೆ. ಹಾಗೆ ರಚನೆ ಮಾಡುವುದರ ಮೂಲಕ ಕನ್ನಡದ ಶಬ್ದಗಳು ಹೊಸ ರೂಪ ಅಥವಾ ಹೊಸ ಅರ್ಥವನ್ನು ಪಡೆದುಕೊಂಡಿರುವುದನ್ನು ಕಾಣಬಹುದು.

ಸಂಸ್ಕೃತರೂಪ	ಸಂವಾದಿರೂಪ
ಸ್ತನ	ಅಮ್ಮಣಿ
ಶ್ರೇಷ್ಠಜ್ಞಾನಿ	ಅರಜಾಣ
ಶ್ರೀಮಂತಿಕೆ	ಉಂಟುತನ
ಸ್ತನ	ಎದೆಬದಿ
ಹಾವಿನಮಂಚ	ಕಣ್ಣುಮೂಗಿನಮಂಚ
ನರಸಿಂಹಾವತಾರ	ಕರುಳಹಾರ
ಪರಶುರಾಮ	ಕೊರಳಗೊಯಿಕ/ಗೊರಳಗೊಯ್ಕ
ಹಾವಿನಮಂಚ	ಗಾಳಿನುಂಗುವ ಮಂಚ
ಶಿವ	ತಲೆಗೊಯ್ಕ
ಪದ್ಮನಾಭ	ಪೊಕ್ಕಳಪೂವ
ಸಮೀಪಸ್ಥ	ಬದಿಗ
ಜನ್ಮಜನ್ಮ	ಬಸಿಬಸಿರು
ಸಾರಥಿ	ಭಂಡಿಬೋವ
ಮೋಕ್ಷ	ಭಾನುಮಂಡಲಮನೆ
ಕೂರ್ಮಾವತಾರ	ಮುಖ ಒಳಸೆಳೆವ
ತಾಪತ್ರಯ	ಮೂರುರಿ
ಗೋಕುಲ	ಮೊಲೆಯೂರು
ಗಂಗಾಜನಕ	ಹೊಳೆಯಜನಕ
ವಕ್ರಬುದ್ಧಿ	ಕಾಕುಬುದ್ಧಿ
ವಾದಬುದ್ಧಿ	ವಿವಾದಬೆಳೆಸುವ ಪ್ರವೃತ್ತಿ
ತಿಪ್ಪೆಗುಂಡಿ	ಕುರುಡುಶ್ವಾನನ ಕುಳಿ
ದುರ್ವಾದಿ	ದುಷ್ಟಮಾತು
ಭಾವೆಯಲು	ಹೆಂಡತಿ
ಚಿಕ್ಕನುಡಿ	ಸಣ್ಣಮಾತು

ಕುಂಟಸುದ್ದಿ	ಸುಳ್ಳುಸುದ್ದಿ
ಸಾಹ್ಯ	ಒಡನಾಟ
ಸ್ವಾದ	ರುಚಿ
ಖೋಡಿ	ಅಜ್ಞಾನಿ
ವಾಳಿ	ಬೇಸರ
ಕಲ್ಲಿ	ಚೀಲ
ಕಾಂಚಿ	ಡಾಬು
ಬೊಜ್ಜೆ	ಹೊಟ್ಟೆ
ಪೆಂಟಿ	ಮುದ್ದೆ
ಮರ್ಮ	ಗುಟ್ಟು
ಮುಸಲ	ಒನಕೆ
ಈಡಾಡಿ	ಬಿಸಾಡಿ
ಜತ್ತು	ಜೊತೆ
ಅನುವು	ಅವಕಾಶ
ಬವಣೆ	ತೊಂದರೆ

ದ್ವಿತ್ವರೂಪಗಳು

ಶಬ್ದದಲ್ಲಿ ಒಂದು ಅಕ್ಷರ ದ್ವಿತ್ವರೂಪವನ್ನು ತಾಳುವುದು ದಾಸ ಸಾಹಿತ್ಯದ ಒಂದು ವಿಶೇಷ.

ದ್ವಿತ್ವರೂಪ	ಸಂಸ್ಕೃತರೂಪ
ರಮ್ಮೇಶ	ರಮೇಶ
ಅತ್ಯಮ್ಮಲ	ಅತ್ಯಮಲ
ಕ್ಷಮ್ಮೆ	ಕ್ಷಮಾ
ರಮ್ಮೇದೇವಿ	ರಮಾದೇವಿ
ರಮ್ಮಿಸು	ರಮಿಸು
ಅನ್ನಂತ	ಅನಂತ
ಪಕ್ಷಿವಾಹನ್ನ	ಪಕ್ಷಿವಾಹನ
ಮನ್ನುಜ	ಮನುಜ
ರತ್ತುನ	ರತ್ನ
ಪ್ರಣಮ್ಮ	ಪ್ರಣಾಮ
ದೇವಕ್ಕಿ	ದೇವಕಿ
ಅನುಪಮ್ಮಚರಿತ	ಅನುಪಮಾಚರಿತ

ಉಮ್ಮೆ	ಉಮಾ
ಅಮ್ಮೋಘ	ಅಮೋಘ
ಕುಂಕುಮ್ಮ	ಕುಂಕುಮಾ
ಘನ್ನ	ಘನ
ಘನ್ನಮಹಿಮ	ಘನಮಹಿಮ
ದಿನ್ನದಿನ್ನ	ದಿನದಿನ
ತಿನ್ನುಮನ್ನ	ತನುಮನ
ಜಲ್ಲಜ	ಜಲಜ
ಜನ	ಜನ
ಘನ್ನಪಕಾರ	ಘನ್ನೋಪಕಾರ
ಅನ್ನುಪಮ	ಅನುಪಮ
ಅನ್ನೇಕ	ಅನೇಕ
ಅಮ್ಮರೇಶ	ಅಮರೇಶ
ಲಕ್ಕುಮಿ	ಲಕ್ಷ್ಮೀ
ಸುಮ್ಮನಸ	ಸುಮನಸ
ವನ್ನಜಾಕ್ಷ	ವನಜಾಕ್ಷ
ವತ್ಸಲ್ಲ	ವತ್ಸಲ
ಲಬ್ಭಿಸು	ಲಭಿಸು
ಸಮೀರ	ಸಮಿರ
ವಿಭೀಷಣ್ಣ	ವಿಭೀಷಣ
ವಜ್ಜರ	ವಜ್ರ
ವನ್ನ	ವನ
ವನ್ನಿತೆ	ವನಿತಾ
ವಿಜಯ್ಯ	ವಿಜಯ
ವಿಠಲ್ಲ	ವಿಠಲ

ದಾಸಸಾಹಿತ್ಯದಲ್ಲಿ ಕನ್ನಡ ಪದಗಳು ಸಹ ದ್ವಿತ್ವರೂಪಗಳನ್ನು ತಾಳುತ್ತವೆ.

ದ್ವಿತ್ವರೂಪ	ಕನ್ನಡಮೂಲರೂಪ
ಜೀಯ್ಯ	ಜೀಯ
ಸವ್ವಟು	ಸೌಟು
ರುವ್ವಿ	ರುವಿ

ಅನ್ನಿತು	ಅನಿತು
ಎಣ್ಣಿಸು	ಎಣಿಸು
ಮೊಲ್ಲ	ಮೊಲ
ಮೊನ್ನೆ	ಮೊನೆ
ಎನ್ನಿತು	ಎನಿತು
ತಲ್ಲೆಯೂರಿ	ತಲೆಯೂರಿ
ಚೆಲ್ಲುವೆ	ಚೆಲುವೆ
ಕಲ್ಲಿಸಿ	ಕಲಿಸಿ
ಒಲ್ಲಿದೆ	ಒಲಿದೆ
ಒಲ್ಲಿದು	ಒಲಿದು
ಬಲ್ಲಿದಾಗಲೆ	ಬಲ್ಲಿದಾಗಲೆ
ಅಂತಪ್ಪ	ಅಂತಹ
ಇಂತಪ್ಪ	ಇಂತಹ
ಎಂತಪ್ಪ	ಎಂತಹ

ಚತುರ್ಥಿ ವಿಭಕ್ತಿ ದ್ವಿತ್ವರೂಪವನ್ನು ಹೊಂದುತ್ತದೆ.

ದ್ವಿತ್ವರೂಪ	ಮೂಲರೂಪ
ನಾಲಿಗ್ಗೆ	ನಾಲಿಗೆಗೆ
ಬೇಸಿಗ್ಗೆ	ಬೇಸಿಗೆಗೆ

ದಾಸ ಸಾಹಿತ್ಯದಲ್ಲಿ ಚತುರ್ಥಿವಿಭಕ್ತಿ ದ್ವಿತ್ವರೂಪವನ್ನು ಹೊಂದುವುದಲ್ಲದೆ ಷಷ್ಠೀವಿಭಕ್ತಿಗಳು ಸಹ ದ್ವಿತ್ವರೂಪಗಳಾಗುತ್ತವೆ.

ದ್ವಿತ್ವರೂಪ	ಮೂಲರೂಪ
ಶ್ರೀಶನ್ನ	ಶ್ರೀಶನ
ಶೀಲನ್ನ	ಶೀಲನ
ಅನಲನ್ನ	ಅನಲವ
ಇಂದ್ರನ್ನ	ಇಂದ್ರನ
ಸಾಂದ್ರನ್ನ	ಸಾಂದ್ರನ
ಕಾಮನ್ನ	ಕಾಮನ
ವಿಭೀಷಣ್ಣನ್ನ	ವಿಭೀಷಣನ
ಚಂದ್ರನ್ನ	ಚಂದ್ರನ

ಜನಪಾಲನ್ನ	ಜನಪಾಲನ
ಭೇದನ್ನ	ಭೇದನ
ಜೀವನ್ನ	ಜೀವನ
ತಂದನ್ನ	ತಂದನ
ಮಾರನ್ನ	ಮಾರನ
ಮಾವನ್ನ	ಮಾವನ
ನೀಲನ್ನ	ನೀಲನ
ನುಡಿವನ್ನ	ನುಡಿವನ
ಬಾಲನ್ನ	ಬಾಲನ
ರಾವಣನ್ನ	ರಾವಣನ
ಲೋಲನ್ನ	ಲೋಲನ

ದಾಸಸಾಹಿತ್ಯದಲ್ಲಿ 'ಅಲ್ಲಿ' ಎಂಬ ವಿಭಕ್ತಿ ಪ್ರತ್ಯಯವು 'ಲಿ' ಎಂಬುದರ ಮೂಲಕ ಅಂತ್ಯವಾಗುತ್ತದೆ.

ದಾಸಸಾಹಿತ್ಯದಲ್ಲಿ	ಹೊಸಗನ್ನಡದಲ್ಲಿ
ಕೈಲಿ	ಕೈಯಲ್ಲಿ
ಸೌಟಲಿ	ಸೌಟಿನಲ್ಲಿ
ಸೃಷ್ಟಿಲಿ ಸೃಷ್ಟೀಲಿ	ಸೃಷ್ಟಿಯಲ್ಲಿ
ಗರುವಿಲಿ	ಗರುವದಲ್ಲಿ
ಭಕುತಿಲಿ	ಭಕುತಿಯಲ್ಲಿ
ಶ್ರೇಣೆಲಿ	ಶ್ರೇಣಿಯಲ್ಲಿ
ವೃತ್ತಿಲಿ	ವೃತ್ತಿಯಲ್ಲಿ
ಅಡವಿಲಿ	ಅಡವಿಯಲ್ಲಿ
ಕಣ್ಣೆಲಿ	ಕಣ್ಣಿನಲ್ಲಿ
ಅಬ್ಧಿಲಿ	ಅಬ್ಧಿಯಲ್ಲಿ
ಅರ್ಥಿಲಿ	ಅರ್ಥಿಯಲ್ಲಿ
ಒನಕೇಲಿ	ಒನಕೆಯಲ್ಲಿ
ಉಡುಪಿಲಿ	ಉಡುಪಿಯಲ್ಲಿ
ಉರ್ವಿಲಿ	ಉರ್ವಿಯಲ್ಲಿ
ಕೋರಿಲಿ	ಕೋರೆಯಲ್ಲಿ
ಕ್ಷೋಣೆಲಿ	ಕ್ಷೋಣಿಯಲ್ಲಿ
ತಿಪ್ಪೇಲಿ	ತಿಪ್ಪೆಯಲ್ಲಿ

ಭೂಮಿಲಿ	ಭೂಮಿಯಲ್ಲಿ
ಪ್ರೀತಿಲಿ	ಪ್ರೀತಿಯಲ್ಲಿ
ಭ್ರಾಂತಿಲಿ	ಭ್ರಾಂತಿಯಲ್ಲಿ
ಮಣ್ಣಿಲಿ	ಮಣ್ಣಿನಲ್ಲಿ
ಮನಸೀಲಿ	ಮನಸಿನಲ್ಲಿ
ರೂಢಿಲಿ	ರೂಢಿಯಲ್ಲಿ
ರೂಪಿಲಿ	ರೂಪದಲ್ಲಿ
ಕರದಲಿ	ಕರದಲ್ಲಿ
ಬಲೆಯಲಿ	ಬಲೆಯಲ್ಲಿ
ಮನೆಯಲಿ	ಮನೆಯಲ್ಲಿ
ಕಳದಲಿ	ಕಳದಲ್ಲಿ
ಅಸುರರಲಿ	ಅಸುರರಲ್ಲಿ
ಭಯದಲಿ	ಭಯದಲ್ಲಿ
ಇದರಲಿ	ಇದರಲ್ಲಿ
ಹತ್ತಿರದಲಿ	ಹತ್ತಿರದಲ್ಲಿ
ಧನುವಿನಲಿ	ಧನುವಿನಲಿ
ಕನಸೀಲಿ	ಕನಸಿನಲ್ಲಿ
ಕೋಪದಲಿ	ಕೋಪದಲ್ಲಿ
ಭೀತಿಯಲಿ	ಭೀತಿಯಲ್ಲಿ

ಸಂಖ್ಯಾವಾಚಕಗಳು

ಸಂಖ್ಯೆಯನ್ನು ಬಳಸುವುದರ ಮೂಲಕ ಕಾವ್ಯವನ್ನು ರಚಿಸುವ ಕ್ರಿಯೆಯೇ ಒಂದು ಬಗೆಯ ವಿಶೇಷವಾದದ್ದು. ಅಲ್ಲಿಯೂ ಗುಣಕಾರ, ಭಾಗಕಾರ, ಕೂಡುವ, ಕಳೆಯುವ ಕ್ರಿಯೆ ಇರುತ್ತದೆ. ದಾಸ ಸಾಹಿತ್ಯದಲ್ಲಿ ಸಂಖ್ಯಾವಾಚಕಗಳನ್ನು ಹೆಚ್ಚಾಗಿ ಬಳಸಲಾಗಿದೆ. ಅಲ್ಲದೆ ಬಳಕೆಯಾದ ಸಂಖ್ಯಾವಾಚಕಗಳು ಅಚ್ಚಕನ್ನಡದಲ್ಲಿರುವುದು ಇನ್ನೊಂದು ವೈಶಿಷ್ಟ್ಯ.

ಆರಾರು ಎರಡು ಸಾವಿರ ೬x೬=೩೬x೨=೭೨ ಸಾವಿರ

ಎಂಟೆರಡು

ಎಂಟೊಂರದು

ಎರಡಾರು

ಎರಡೀದೈದು

ಎರಡೊಂದು

ಐದುನಾಲ್ಕು

ಐದೆರಡು

ಐದೊಂದು

ಒಂದೆರಡು

ಮೂರಾರು

ಮೂರುಯೇಳು

ಮೂರೊಂದು

ಹತ್ತೆರಡೈದು

ಇ ಕಾರಾಂತ ಮತ್ತು ಎ ಕಾರಾಂತವಾದ ಸ್ತ್ರೀವಾಚಕ ಶಬ್ದಗಳು ಬಹುವಚನದಲ್ಲಿ ಏ ಕಾರವನ್ನು ತಾಳುತ್ತವೆ.

ಇಕಾರಾಂತಕ್ಕೆ

ಏಕವಚನ	ಬಹುವಚನ	ಏಕಾರಾಂತ
ಗರತಿ	ಗರತಿಯರು	ಗರತೇರು
ಗೋಪಿ	ಗೋಪಿಯರು	ಗೋಪೇರು
ಮಡದಿ	ಮಡದಿಯರು	ಮಡದೇರು
ದೇವಿ	ದೇವಿಯರು	ದೇವೈರು
ಚೆನ್ನಗಿತ್ತಿ	ಚೆನ್ನಗಿತ್ತಿಯರು	ಚೆನ್ನಗಿತ್ತೇರು
ದಾಸಿ	ದಾಸಿಯರು	ದಾಸೇರು
ಸತಿ	ಸತಿಯರು	ಸತೇರು
ಸೌತಿ	ಸೌತಿಯರು	ಸೌತೇರು
ಎ ಕಾರಂತಕ್ಕೆ		
ಕನ್ನೆ	ಕನ್ನೇಯರು	ಕನ್ನೇರು
ಭೂಕಾಂತೆ	ಭೂಕಾಂತೆಯರು	ಭೂಕಾಂತೇರು
ಮುಂಡೆ	ಮುಂಡೆಯರು	ಮುಂಡೇರು
ಸುಗುಣೆ	ಸುಗುಣೆಯರು	ಸುಗುಣೇರು
ಲಲನ	ಲಲನೆಯರು	ಲಲನೇರು
ವಿಂಗಡೆ	ವಿಂಗಡೆಯರು	ವಿಂಗಡೇರು
ದೂತೆ	ದೂತೆಯರು	ದೂತೇರು

‘ಒ’ ಕಾರ ‘ವಾ’ ಕಾರವಾಗುತ್ತದೆ

ಓಡೆ	ವಾಡೆ
ಓರಗೆ	ವಾರಗೆ
ಓರೆಗಣ್ಣು	ವಾರೆಗಣ್ಣು
ಓಲಗ	ವಾಲಗ

ಪದಮಧ್ಯದಲ್ಲಿ ಅನುಸ್ವಾರ ಅಧಿಕವಾಗಿ ಬರುತ್ತದೆ.

ನೆನಪು	ನೆಂಪು
ಜಿಹ್ವೆ	ಜಿಂಹ್ವೆ
ನಾರದ	ನಾರಂದ
ಉನ್ನತ	ಉನ್ನಂತ

ಪರಪದದ ಆದಿಯಲ್ಲಿರುವ ವ ಕಾರ ಸಂಧಿಯಾಗಿ ಒ ಕಾರವಾಗುತ್ತದೆ

ಕೃಷ್ಣನಾಮವಜ್ರ	ಕೃಷ್ಣನಾಮೋಜ್ರ
ಚಿತ್ತದವಲಭ	ಚಿತ್ತದೊಲ್ಲಭ
ಚಿನ್ನದವಸ್ತು	ಚಿನ್ನದೊಸ್ತು
ಜಗದವಲ್ಲಭ	ಜಗದೊಲ್ಲಭ
ನಿನ್ನವಶ	ನಿನ್ನೊಶ
ಬಣ್ಣದ ವಸನ	ಬಣ್ಣದೊಸನ
ಬಾಡದ ವನಮಾಲೆ	ಬಾಡದೊನಮಾಲೆ

ಪದದ ಆದಿಯ ಅಲ್ಪಪ್ರಾಣ ಕೆಲವು ಶಬ್ದಗಳಲ್ಲಿ ಮಹಾಪ್ರಾಣವಾಗುತ್ತದೆ.

ಗಕ್ಕನೆ	ಘಕ್ಕನೆ
ಗೂಟ	ಘೂಟ
ದೊರೆ	ದೊರೆ
ಜಾವ	ಝಾವ
ಗೂಟನಾಮ	ಘೂಟನಾಮ

ಪದದ ಆದಿಯ ವರ್ಣಕ್ಕೆ ಅನುಸಾರವಾಗಿ ಎರಡನೆಯ ಪದದ ಆದ್ಯಕ್ಷರವು 'ಗಿ' ಕಾರವಾಗುತ್ತದೆ. 'ಗಿ' ಎಂಬ ಪದಕ್ಕೆ 'ಇತ್ಯಾದಿ' ಎಂಬ ಅರ್ಥ ಬರುತ್ತದೆ.

ಸಂಚಿತ	ಸಂಚಿತಗಿಂಚಿತ
ವ್ಯಾಸಂಗ	ವ್ಯಾಸಂಗಿ ಗೀಸಂಗ
ಧರ್ಮ	ಧರ್ಮಗಿರ್ಮ
ಜನನ	ಜನನಗಿನನ
ಜಯ	ಜಯಗಿಯ
ನೇಮ	ನೇಮಗೀಮ
ಆಗಾಮಿ	ಆಗಾಮಿ ಗೀಗಾಮಿ
ಅಧ್ಯಾಯ	ಅಧ್ಯಾಯ ಗಿಧ್ಯಾಯ
ಮರಣ	ಮರಣ ಗಿರಣ
ದುಃಖ	ದುಃಖಗಿಖ್ಖ

‘ಯ’ ಕಾರಾದಿ ಪ್ರಶ್ನಾರ್ಥಕ ಸರ್ವನಾಮಗಳಾದ ಯಾವ, ಯಾವುದು, ಯಾರು, ಎಂಬ ಮಾತುಗಳು ‘ದ’ ಕಾರಾದಿಯಾಗುತ್ತವೆ.

ಯಾವ	ದಾವ
ಯಾವಗೆ	ದಾವಗೆ
ಯಾವುದು	ದಾವುದು
ಯಾರು	ದಾರು

‘ಆರು’ ಎಂಬ ಪದವು ಕೂಡ ‘ದಾರು’ ಎಂಬುದಾಗಿ ರೂಪ ಹೊಂದುತ್ತದೆ.

‘ಏ’ ಕಾರಾದಿಯಾದ ಶಬ್ದಗಳು ಆದಿಯಾದ ಶಬ್ದಗಳಾಗಿ ಪ್ರಯೋಗ ಹೊಂದುತ್ತವೆ.

ಕೇದಿಗೆ	ಕ್ಯಾದಿಗೆ
ಕೇಸಕ್ಕಿ	ಕ್ಯಾಸಕ್ಕಿ
ದೇವರು	ದ್ಯಾವರು
ಬೇಡ	ಬ್ಯಾಡ
ಬೇನೆ	ಬ್ಯಾನೆ
ಬೇಸರ	ಬ್ಯಾಸರ
ಮೇಲೆ	ಮ್ಯಾಲೆ
ಮೇಳ	ಮ್ಯಾಳ

ಸಂಸ್ಕೃತದ ವ್ಯಂಜನಾಂತವಾದ ಶಬ್ದಗಳು ‘ಉ’ ಅಥವಾ ‘ಅ’ ಕಾರದಿಂದ ಸ್ವರಾಂತವಾಗುತ್ತವೆ.

ಜಗತ್	ಜಗತು
ವಾಕ್	ವಾಕು
ಸರ್ವಭುಕ್	ಸರ್ವಭುಕು
ಮರನ್	ಮರ
ಆತ್ಮನ್	ಆತ್ಮ
ಕೃಷ್ಣನ್	ಕೃಷ್ಣ

ಸಹಜವಾದ ಕೆಲವು ಶಬ್ದಗಳು ದೀರ್ಘಾಕ್ಷರಗಳಾಗಿ ಬಳಕೆಯಾಗಿವೆ.

ಅರಣ್ಯ	ಆರಣ್ಯ
ಜಗದಂಕ	ಜಗದಾಂಕ
ಹತ್ತವತಾರ	ಹತ್ತಾವತಾರ
ಮೂಡಲದ್ರೀಶ	ಮೂಡಲಾದ್ರೀಶ
ಪಾಲಬ್ಧಿ	ಪಾಲಾಬ್ಧಿ
ನಿನ್ನಧೀನ	ನಿನ್ನಾಧೀನ
ಜಗದ್ದುದ್ಧಾರ	ಜಗದೋದ್ಧಾರ

ಮುಂದೆ 'ಬೇಕು' ಎಂಬ ಶಬ್ದ ಬಂದಾಗ ಹಿಂದಿನ ಕ್ರಿಯಾರೂಪಕ್ಕೆ 'ಅಲು' ಎಂಬ ಪ್ರತ್ಯಯ ಸೇರುತ್ತದೆ.

ಕಳೆಯಬೇಕು	ಕಳೆಯಲುಬೇಕು
ತುಳಿಯಬೇಕು	ತುಳಿಯಲುಬೇಕು
ಬಿಡಬೇಕು	ಬಿಡಲುಬೇಕು
ಪೊರೆಯಬೇಕು	ಪೊರೆಯಲುಬೇಕು
ಸುಖಿಸಬೇಕು	ಸುಖಿಸಲುಬೇಕು
ಎರಗಬೇಕು	ಎರಗಲುಬೇಕು
ಓದಬೇಕು	ಓದಲುಬೇಕು
ಅಳಿಯಬೇಕು	ಅಳಿಯಲುಬೇಕು

'ಉದು' ಎಂಬ ಕೃದಂತ ಭಾವನಾಮ ಪ್ರತ್ಯಯ 'ಓದು' ಎಂದಾಗುತ್ತದೆ.

ಆಗುವುದು	ಆಹೋದು
ಎಂಬುದು	ಎಂಬೋದು
ಎಂಬುದು	ಎಂಬೋದು
ನಂಬುವುದು	ನಂಬೋದು
ಬರುವುದು	ಬಾಹೋದು
ಕಾಂಬುವುದು	ಕಾಂಬೋದು

ದಾಸರ ಭಾಷಿಕ ರಚನೆಯನ್ನು ನೋಡಿದಾಗ ಅನೇಕ ವ್ಯಾಕರಣಾಂಶದ ನಿಯಮಗಳನ್ನು ಮೀರಿದ್ದಾರೆ. ದಾಸರಿಗೆ ಮುಖ್ಯವಾಗಿ ವ್ಯಾಕರಣದ ನಿಯಮವನ್ನು ಪಾಲಿಸುವುದಕ್ಕಿಂತ ಭಾಷೆ ಸರಳವಾಗಿ ಬಳಕೆಯಾಗಬೇಕು ಮತ್ತು ತತ್ತ್ವ ಸಿದ್ಧಾಂತಗಳು ಜನಸಾಮಾನ್ಯರ ಹತ್ತಿರ ಹೋಗಬೇಕು ಎಂಬುದಾಗಿತ್ತು. ಅಂತಲೇ ಇವರಲ್ಲಿ ಅರಿಸಮಾಸದ ರಚನೆಯುಕ್ತ ಪದಗಳು ಯಥೇಚ್ಛವಾಗಿ ಕಾಣಬಹುದು. ಹೀಗೆ ಒಂದು ಕಾಲದ ಭಾಷೆಯ ಅಸ್ತಿತ್ವವನ್ನು ಭಾಷಿಕ ರಚನೆಯಿಂದ ತಿಳಿಯಬಹುದಾಗಿದೆ.

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

ಅಧ್ಯಾಯ - ಐದು

ಹರಪನಹಳ್ಳಿ ಭೀಮವ್ವನವರ ಜೀವನ ಮತ್ತು ಸಾಧನೆ

ಅಧ್ಯಾಯ - ಐದು

ಹರಪನಹಳ್ಳಿ ಭೀಮವ್ವನವರ ಜೀವನ ಮತ್ತು ಸಾಧನೆ

ಭಾರತ ದೇಶ ಹಲವು ಧರ್ಮಗಳ ನೆಲೆಯಾಗಿದೆ. ಮಹಾಪುರುಷರ ಜನ್ಮ ಭೂಮಿಯಾಗಿದೆ. ಭಾರತದಲ್ಲಿ ಮಹಾಪುರುಷರು ಎಲ್ಲ ಮತ, ಪಂಥ, ಪ್ರದೇಶಗಳಲ್ಲಿ ಅಗಣಿತ ಸಂಖ್ಯೆಯಲ್ಲಿ ಜನ್ಮ ತಾಳಿದ್ದಾರೆ. ಅಧ್ಯಾತ್ಮದಲ್ಲಿ ತಮ್ಮನ್ನು ತಾವು ಏಕಚಿತ್ತದಿಂದ ತೊಡಗಿಸಿಕೊಂಡು ಸಮಾಜಕ್ಕೆ, ಧಾರ್ಮಿಕ ಕ್ಷೇತ್ರಕ್ಕೆ ಅತ್ಯಮೂಲ್ಯವಾದ ಕೊಡುಗೆ ನೀಡಿದ್ದಾರೆ. ಆದ್ದರಿಂದಲೇ ಅಧ್ಯಾತ್ಮದ ಮೂಲಬೇರುಗಳು ಭಾರತೀಯ ಸಂಸ್ಕೃತಿಯಲ್ಲಿ ಬೆರತು ಹೋಗಿವೆ. ಭಾರತ ದೇಶವನ್ನು ಅಧ್ಯಾತ್ಮದ ಮೂಲಕೇಂದ್ರವೆಂದರೂ ತಪ್ಪಾಗಲಾರದು. ಚಾರಿತ್ರಿಕ ಪರಂಪರೆಯಲ್ಲಿ ಧಾರ್ಮಿಕ ಮಹಾಪುರುಷರ ಸಾಧನೆ ಅನನ್ಯವಾದುದು.

ಮಹಾಪುರುಷರ ಜನನ ಪವಾಡ ಸದೃಶಗಳಿಂದ ಕೂಡಿರುತ್ತದೆ. ಆ ಪವಾಡಗಳೇ ಅವರ ವ್ಯಕ್ತಿತ್ವದ ಮಹಿಮೆಯನ್ನು ಕಟ್ಟಿಕೊಡುತ್ತವೆ. ಅವರು ಯಾವುದೇ ಕಾರಣರಹಿತರಾಗಿ ಜನ್ಮ ತಾಳುವುದಿಲ್ಲ. ಬದಲು ಅವರ ಜನ್ಮ ತಾಳುವಿಕೆಯ ಹಿಂದೆ ಯಾವುದೊ ಬಲವಾದ ದೈವ ಪ್ರೇರಣೆಯಿರುತ್ತದೆ. ಅಂತಲೇ ಅವರನ್ನು ದೈವಾಂಶ ಸಂಭೂತರೆಂದು ಕರೆಯಲಾಗುವುದು.

ಮಹಾಪುರುಷರ ಹುಟ್ಟು ಮತ್ತು ವ್ಯಕ್ತಿತ್ವವನ್ನು ಎರಡೂ ರೀತಿಯಿಂದ ಗುರುತಿಸಬಹುದು. ಒಂದನೆಯದಾಗಿ ಮಹಾಪುರಷರು ಜನಿಸುವ ಪೂರ್ವದಲ್ಲಿಯೇ ಮಹಾಪುರುಷರಾಗಿ ಹುಟ್ಟಿಬರುತ್ತಾರೆ. ಇಲ್ಲಿ ನಿರೀಕ್ಷೆ ಇರುತ್ತದೆ. ಶಕುನಗಳು ಶುಭವನ್ನು ನುಡಿಯುತ್ತಿರುತ್ತವೆ. ಎರಡನೆಯದಾಗಿ ಅವರು ಹುಟ್ಟಿದ ನಂತರ ಅವರ ನುಡಿ ನಡೆಯ ಮೂಲಕ ಮಹಾಪುರುಷರೆನಿಸುತ್ತಾರೆ. ಇಲ್ಲಿ ಅಂದರೆ ಜೀವನದಲ್ಲಿ ಬರುವ ಯಾವುದೇ ಕಷ್ಟಗಳಿಗೆ ಧೃತಿಗೆಡದೆ, ವ್ಯಾಕುಲಿತರಾಗದೆ ಜೀವನವನ್ನು ನಡೆಸುತ್ತಾರೆ.

ನಮ್ಮ ಪ್ರಾಚೀನ ಕನ್ನಡ ಕಾವ್ಯ ಸಾಹಿತ್ಯದಲ್ಲಿ, ಪುರಾಣಗಳಲ್ಲಿಯೂ ಸಹ ಮಹಾಪುರುಷರ ಜನನ ವಿಶೇಷತೆಯಿಂದ ಕೂಡಿದೆ. ನಿಸರ್ಗದ ಸಕಲ ಚರಾಚರ ವಸ್ತುಗಳು, ಜೀವಿಗಳು ಸಂಭ್ರಮಿಸುವ ಹಂತವನ್ನು ಕಾಣಬಹುದು. ಮಗು ಜನಿಸಿದ ಕೂಡಲೇ ಪುಷ್ಪ ವೃಷ್ಠಿಯಾಗುವುದು, ಶುಭಶಕುನಗಳು ಶುಭವನ್ನು ಹಾರೈಸುವುದು ಹೀಗೆ ಅನೇಕ ಸಂತೋಷಭರಿತವಾದ ಸಂಗತಿಗಳನ್ನು ಕಾಣಬಹುದು.

[illegible]

[illegible]

[illegible]

[illegible]

[illegible]

ರೂಪಕ ಸಾಮ್ರಾಜ್ಯ ಚಕ್ರವರ್ತಿ ಎನಿಸಿರುವ ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಮಹಾಪುರುಷನಾದ ಧರ್ಮರಾಯನ ಜನನವನ್ನು ಹೀಗೆ ವಿವರಿಸುತ್ತಾನೆ.

"ನಿರ್ಮಲಿನವಾಯ್ತುಖಿಲ ದೆಸೆ ದು
ಷ್ಕರ್ಮತತಿ ಬೆಚ್ಚಿದುದು ಸಾಕ್ಷಾತ್
ಧರ್ಮವೇ ಧರಣಿಯಲಿ ನೃಪರೂಪಾಗಿ ಜನಿಸಿತಲ
ದುರ್ಮಹಿಪರ ಹೊತ್ತ ಭಾರದ
ಕರ್ಮವೇದನೆ ಧಾತ್ರಿಗಿಳಿದುದು
ಧರ್ಮವಿನ್ನೆಮಗೆಹುದೆನುತ ಹೆಚ್ಚಿದುದು ಮುನಿನಿಕರ"[1]

ಧರ್ಮರಾಯನ ಜನನದಿಂದಾಗಿ ದಿಕ್ಕುಗಳು ಮಲಿನತೆಯಿಂದ ಮುಕ್ತಿ ಹೊಂದಿ ನಿರ್ಮಲಿನವಾದವು. ದುಷ್ಟರ ಸಮೂಹ ಭಯದ ಕಂಪನಕ್ಕೆ ಒಳಗಾಯಿತು. ಕಣ್ಣಿಗೆ ಕಾಣದಂತಿದ್ದ ಅಮೂರ್ತರೂಪದ ಧರ್ಮ ನರ ರೂಪವನ್ನು ಪಡೆದು ಧರ್ಮರಾಯನ ರೂಪದಲ್ಲಿ ಅವತರಿಸಿತು. ದುಷ್ಟರಾಜರ ಕೂಟದಿಂದ ಭೂಮಿ ಹಲವು ವ್ಯಸನಕ್ಕೆ ಬಲಿಯಾಗಿ ಭಾರವಾಗಿತ್ತು. ಧರ್ಮದಿಂದ ವಂಚಿತರಾಗಿದ್ದ ಋಷಿಗಳು ಧರ್ಮರಾಯನ ಜನನದಿಂದಾಗಿ ಧರ್ಮವೇ ತಮ್ಮ ಪಾಲಿಗೆ ಬಂದಿತೆಂದು ಸಂತಸಪಟ್ಟರು. ಹೀಗೆ ಮಹಾಪುರುಷರ ಜೀವನವು ವಿಶೇಷತೆಯಿಂದ ಕೂಡಿರುತ್ತದೆ ಎಂಬುದನ್ನು ತಿಳಿಯಬಹುದು.

ಭಕ್ತಿ ಪಂಥಕ್ಕೆ ಸೇರಿದ ಕವಯತ್ರಿಯರಲ್ಲಿ ಒಬ್ಬರಾದ ಹರಪನಹಳ್ಳಿ ಭೀಮವ್ವನವರು ಮಹಾಪುರುಷರ ಸಾಲಿಗೆ ಸೇರಿರುತ್ತಾರೆ. ಭೀಮವ್ವನವರು ಎರಡು ಬಗೆಯಿಂದ ಮಹಾಪುರುಷರೆನಿಸಿದ್ದಾರೆ. ಹುಟ್ಟುವಾಗಲೇ ಹಲವು ಪವಾಡಗಳ ಮೂಲಕ ಜನ್ಮ ತಾಳಿದ್ದು ಒಂದು ಬಗೆಯಾದರೆ, ಜೀವನದಲ್ಲಿ ಹಲವು ಕಷ್ಟಗಳನ್ನು ಎದುರಿಸಿ ನುಡಿದಂತೆ ನಡೆದು ಮಹಾಪುರುಷರೆನಿಸಿದ್ದು ಎರಡನೆಯ ಬಗೆ. ಭೀಮವ್ವನವರ ಕುರಿತಂತೆ ಹಲವಾರು ಕೃತಿಗಳು, ಲೇಖನಗಳು ಬಂದಿವೆ. ಅವುಗಳ ಸಹಾಯದಿಂದ ಭೀಮವ್ವನವರ ಜೀವನ, ದಾಂಪತ್ಯ ಜೀವನ, ಅವರ ಕಾವ್ಯ ಬದುಕು ಮುಂತಾದ ಮಾಹಿತಿಯುಕ್ತ ಅಂಶಗಳ ಮೂಲಕ ಈ ಅಧ್ಯಾಯವನ್ನು ವಿಸ್ತರಿಸಿ ಕೊಳ್ಳಲಾಗಿದೆ.

'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂಬ ಕವಿರಾಜಮಾರ್ಗಕಾರನ ನುಡಿಗಳು ನಮ್ಮ ಹರಪನಹಳ್ಳಿ ಭೀಮವ್ವನವರ ಜೀವನದಲ್ಲಿ ಅಕ್ಷರಶಃ ಸತ್ಯವಾಗಿವೆ. ಭೀಮವ್ವನವರಿಗೆ ಅಕ್ಷರ ಲೋಕ ತಿಳಿದಿರಲಿಲ್ಲ, ಆದರೆ ಅಕ್ಷರ ಲೋಕದ ಅಂತರ್ಮುಖಿ ಜ್ಞಾನವನ್ನೂ ಶ್ರವಣದಿಂದಲೇ ಗ್ರಹಿಸಿಕೊಂಡಿದ್ದರು. ಆ ಶ್ರವಣ ಶಕ್ತಿಯಿಂದಲೇ ಅನೇಕ ಹಾಡುಗಳನ್ನು ರಚಿಸಿದ್ದಾರೆ.

ಹರಪನಹಳ್ಳಿ ಭೀಮವ್ವನವರು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ನಾರಾಯಣ ದೇವರಕೆರೆ ಎಂಬ ಗ್ರಾಮದಲ್ಲಿ ಜನಿಸಿದರು. ಆದರೆ ಈ ಗ್ರಾಮ ಈಗ ಅಸ್ತಿತ್ವದಲ್ಲಿಲ್ಲ. ಅದು ಈಗಿರುವ ತುಂಗಭದ್ರಾ ಅಣೆಕಟ್ಟೆಯ ನೀರಿನಲ್ಲಿ ಮುಳುಗಡೆಯಾಗಿದೆ. ಭೀಮವ್ವನವರ ಪೂರ್ವಜರು ಕೌಂಡಿಣ್ಯ ಗೋತ್ರದ ಯಜುರ್ವೇದಿಗಳು. ಜೊತೆಗೆ ರಾಘವೇಂದ್ರ ಮಠದ ಅನುಯಾಯಿಗಳು. ಭೀಮವ್ವನವರು ಪಂಡಿತ

ಪರಂಪರೆಯಿಂದ ಬಂದವರು. ಭೀಮವ್ವನವರ ತಾತನವರಾದ ವೆಂಕಪ್ಪಾಚಾರ್ಯರು ಸಾತ್ವಿಕ ಮನೋಭಾವದ ದೊಡ್ಡ ವಿದ್ವಾಂಸರಾಗಿದ್ದರು. ಅಲ್ಲದೆ ದಾಸದೀಕ್ಷೆಯನ್ನು ಸಹ ಪಡೆದಿದ್ದರು. ವೆಂಕಪ್ಪಚಾರ್ಯರ ಮಗಳಾದ ರಾಘಮ್ಮನನ್ನು ರಘುನಾಥಾಚಾರ್ಯರಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ರಾಘಮ್ಮ ಮತ್ತು ರಘುನಾಥಾಚಾರ್ಯರ ಜೇಷ್ಠ ಸುಪುತ್ರಿಯಾಗಿ ಭೀಮವ್ವನವರು ಸ್ವಭಾನು ಸಂವತ್ಸರದ ಜೇಷ್ಠ ಬಹುಳ ೧೩ರಂದು ಅಂದರೆ ಕ್ರಿ.ಶ.೧೮೪೩ ಜುಲೈ ೬ ಭಾನುವಾರದಂದು ಜನ್ಮತಾಳಿದರು. ಇವರ ಜನ್ಮನಾಮ ಕಮಲಾಕ್ಷಿ. ಮನೆಯಲ್ಲಿ ಭೀಮವ್ವನವರನ್ನು ಭೀಮಬಾಯಿಯೆಂದು ಕರೆಯುತ್ತಿದ್ದರು. ಭೀಮವ್ವನವರ ಕುರಿತು ಹಲವಾರು ಕಥೆಗಳಿವೆ.

ಭೀಮವ್ವನವರು ಗರ್ಭದಲ್ಲಿರುವಾಗಲೇ ಅವರ ತಾತ ಬೇರೊಬ್ಬ ಪಂಡಿತನನ್ನು ಕರೆಸಿ ಕೇಳಿದರಂತೆ. ಗರ್ಭದಲ್ಲಿರುವ ಕೂಸು ಗಂಡೋ ಹೆಣ್ಣೋ ಅಂತ. ಆ ಪಂಡಿತನು ಹೆಣ್ಣು ಜನಿಸುವುದೆಂದು ಹೇಳಿದನು. ಜೊತೆಗೆ ಹುಟ್ಟುವ ಕೂಸಿಗೆ ಔಡಲ ಎಣ್ಣೆಯನ್ನು ಚೀಪಿಸುವ ಬದಲು ಎಳೆ ತೆಂಗಿನ ಕಾಯಿಯ ಸಿಹಿನೀರಿನಲ್ಲಿ ಔಡಲ ಎಣ್ಣೆಯನ್ನು ಬೆರೆಸಿ ಚೀಪಿಸಬೇಕೆಂದು ಹೇಳಿದನು. ಆ ರೀತಿ ಮಾಡುವುದರಿಂದ ಬುದ್ಧಿಮಾಂದ್ಯ ಬರಲಾರದೆಂದು ಹೇಳಿದ್ದನಂತೆ. ಅವರ ತಾತ ಅವನ ಹೇಳಿಕೆಯ ಪ್ರಕಾರವೇ ನಡೆದಿದ್ದರಂತೆ.

ಭೀಮವ್ವನವರು ಜನಿಸಿದ ಮೇಲೆ ದೇಹದ ತುಂಬೆಲ್ಲಾ ಚಕ್ರಗಳು ಗೋಚರಿಸುತ್ತಿದ್ದವು. ಅವರಿಗೆ ಮೂರುವರ್ಷ ತುಂಬುವವರೆಗೂ ಎರಡೂ ಕಾಲಿನ ಅಂಗಾಲುಗಳಲ್ಲಿ ಪದ್ಮ ಗುರುತಿನ ಸಂಕೇತಗಳು ಕಾಣುತ್ತಿದ್ದವು. ಒಂದು ವರ್ಷವೂ ತುಂಬಿದ ಕೂಸಿಗೆ ಈ ಎಲ್ಲಾ ಸಂಗತಿಗಳು ವಯಸ್ಸಿನ ಪ್ರಜ್ಞೆ ಬಂದ ಮೇಲೆ ಸ್ಫುಟವಾಗಿ ನೆನಪಿನಲ್ಲಿದ್ದವು. ಪ್ರಜ್ಞೆ ಬರುವುದಕ್ಕಿಂತ ಪೂರ್ವದಲ್ಲಿ ನಡೆದು ಹೋದ ಘಟನೆಗಳು ನೆನಪಿನಲ್ಲಿ ಬರುವುದು ಅಸಾಧ್ಯ. ಆದರೆ ಆ ಅಸಾಧ್ಯತೆಗಳು ಹರಪನಹಳ್ಳಿ ಭೀಮವ್ವನವರ ಜೀವನದಲ್ಲಿ ಸಾಧ್ಯವಾಗಿವೆ.

ಭೀಮವ್ವನಿಗೆ ಒಂದು ವರ್ಷ ತುಂಬಿತ್ತು. ಮಗುವಿಗೆ ಸ್ನಾನ ಮಾಡಿಸಿ ತೊಟ್ಟಿಲಲ್ಲಿ ಮಲಗಿಸಿ ಮನೆಯವರು ತಮ್ಮ ದಿನವಹಿ ಕೆಲಸದಲ್ಲಿ ಮಗ್ನರಾದರು. ಇವರ ತಂದೆ ತೊಟ್ಟಿಲಿನ ಅನತಿ ದೂರದಲ್ಲಿ ಕುಳಿತಿದ್ದರು. ಆಗ ಜಂತಿಯಿಂದ ದೊಡ್ಡದೊಂದು ಹಾವು ಇಳಿದುಬಂದು ಕೂಸಿನ ಮೇಲೆ ಮಲಗಿತು. ಇದನ್ನು ಗಮನಿಸಿದ ಭೀಮವ್ವನವರ ತಂದೆ ಭಯವಿಹ್ವಲರಾಗಿ ಹೋದರು. ಹೊರಗೆ ಬಂದು ಸುತ್ತಮುತ್ತಲಿನ ಜನರನ್ನು ಕರೆದು ಬರುವುದರೊಳಗೆ ಆ ಕಾಳಿಂಗ ಸರ್ಪವು ಮಲಗಿದ ಸ್ಥಳದಿಂದ ಅದೃಶ್ಯವಾಗಿತ್ತು. ಕೂಸಿಗೆ ಏನಾದರೂ ಅಪಾಯ ಸಂಭವಿಸಿರಬಹುದೇನೊ ಎಂಬ ಆತಂಕದಿಂದ ನೋಡಿದಾಗ ಮಗು ಸುಖ ನಿದ್ರೆಯಲ್ಲಿ ತಲ್ಲೀನವಾಗಿತ್ತು. ಆದರೂ ಜನರು ಸದ್ದು ಗದ್ದಲ ಮಾಡುತ್ತಾ ಮಗುವನ್ನು ತೊಟ್ಟಿಲಿನಿಂದ ಎತ್ತಿಕೊಂಡರಂತೆ. ಈ ಮೇಲಿನ ಎಲ್ಲಾ ಘಟನೆಗಳು ಹರಪನಹಳ್ಳಿ ಭೀಮವ್ವನವರಿಗೆ ನೆನಪಿನಲ್ಲಿದ್ದವು.

ಒಂದು ಸಾರಿ ಭೀಮವ್ವನವರ ತಾಯಿ ತವರು ಮನೆಯಾದ ನಾರಾಯಣದೇವರಕೆರೆಗೆ ಬಂದಿದ್ದರಂತೆ. ಅವರ ಜೊತೆಗೆ ಒಂದೂವರೆ ವರ್ಷದ ಮಗುವಾಗಿದ್ದ ಭೀಮವ್ವನವರು ಸಹ ಬಂದಿದ್ದರು. ನಾರಾಯಣ

ದೇವರ ಕೆರೆಗೆ ಬಂದಾಗ ಯಾರೋ ಪ್ರೀತಿಯಿಂದ ಒಂದು ಅತ್ತಿ ಹಣ್ಣನ್ನು ಕೊಟ್ಟರು. ಮಗುವಾಗಿದ್ದ ಭೀಮವ್ವನವರು ಆ ಅತ್ತಿ ಹಣ್ಣನ್ನು ಜೋಪಾನವಾಗಿ ಒಂದು ಭರಣಿಯಲ್ಲಿ ಇಡಿಸಿದರು. ಮತ್ತೆ ಅವರ ತಾಯಿ ಹರಪನಹಳ್ಳಿಗೆ ಹೋದರು. ಸುಮಾರು ಆರು ತಿಂಗಳ ನಂತರ ಪುನಃ ನಾರಾಯಣ ದೇವರ ಕೆರೆಗೆ ಬಂದಾಗ ಅತ್ತಿ ಹಣ್ಣಿನ ಸಂದರ್ಭ ನೆನಪಾಗಿ ಮನೆಯವರಲ್ಲಿ ಕೊಡಲು ಕೇಳಿದಾಗ ಮನೆಯವರು ಆಶ್ಚರ್ಯಚಕಿತರಾದರು. ಯಾವ ಅತ್ತಿಹಣ್ಣು, ಯಾವಾಗ ಇರಿಸಿದ್ದು ಎಂದು ಮುಂತಾದ ಹಲವು ಪ್ರಶ್ನೆಗಳನ್ನು ಕೇಳಿದಾಗ ಭೀಮವ್ವನವರು ಅತ್ತಿ ಹಣ್ಣು ಇರಿಸಿದ್ದ ಭರಣಿಯನ್ನು, ಜಾಗವನ್ನು ತೋರಿಸಿದರು. ಆಶ್ಚರ್ಯವೆಂಬಂತೆ ಆ ಅತ್ತಿ ಹಣ್ಣು ಒಣಗದೆ, ಕೆಡದೆ ಹಾಗೆ ಉಳಿದಿತ್ತಂತೆ.

ಭೀಮವ್ವನವರಿಗೆ ಎರಡು ವರ್ಷ ತುಂಬಿದಾಗ ಹುಟ್ಟುಹಬ್ಬಕ್ಕೆಂದು ಬಂಗಾರದ ಮಂದಾಲಿ ಹೂವನ್ನು ಮಾಡಿಸಿದ್ದರಂತೆ. ಆ ದಿನ ರಾತ್ರಿ ಮನೆಯವರೆಲ್ಲ ಸೇರಿ ಭೀಮವ್ವನವರಿಗೆ ಆ ಮಂದಾಲಿ ಹೂವನ್ನು ಮುಡಿಸಿ ಆರತಿ ಬೆಳಗಿ ಸಂತಸಪಟ್ಟರಂತೆ. ಸಂಭ್ರಮದ ತರುವಾಯ ಊಟ ಮಾಡಿ ಮಲಗಿಕೊಂಡಿದ್ದರಂತೆ. ಸುಮಾರು ಹೊತ್ತಾದ ಬಳಿಕ ಭೀಮವ್ವ ಚೇಳು ಬಂದಿದೆ ಚೇಳು ಎಂದು ಕೂಗಿದರಂತೆ. ಮನೆಯವರು ಲಗುಬಗೆಯಿಂದ ದೀಪದ ಸಹಾಯ ಪಡೆದು ಸುತ್ತಮುತ್ತ ಹುಡುಕಿದರಂತೆ. ಆ ಚೇಳು ಕಾಣಲಿಲ್ಲವಂತೆ. ಆಗ ಮನೆಯವರು ಭೀಮವ್ವರನ್ನು ಚೇಳು ಎಲ್ಲಿದೆ? ಎಂದು ಕೇಳಿದರಂತೆ. ಅದಕ್ಕೆ ಭೀಮವ್ವನವರು ನನ್ನ ತಲೆಯಲ್ಲಿದೆ ಎಂದು ಹೇಳಿದಾಗ ಹೆರಳನ್ನು ಕೆದರಿ ನೋಡಿದರಂತೆ. ಆ ಚೇಳು ಮತ್ತೆ ಕಾಣದೆ ಹೋಯಿತು. ಚೇಳು ಮಂದಾಲಿ ಹೂವಿನ ಕೆಳಗೆ ಇದೆ ಎಂದು ಹೇಳಿದಾಗ ಚೇಳು ಮಂದಾಲಿ ಹೂವಿನ ಕೆಳಗೆ ಕೊಂಡಿ ಆಡಿಸುತ್ತಾ ಕುಳಿತಿತ್ತಂತೆ. ಅದು ಅಲ್ಲಿಯ ತನಕ ಕಚ್ಚಿರಲಿಲ್ಲವಂತೆ. ಅದಲ್ಲದೆ ಆ ಚೇಳು ಮಂದಾಲಿ ಹೂವಿನೊಳಗೆ ಕುಳಿತಿತ್ತು ಎಂಬ ಸಂಗತಿ ಮೊದಲೇ ಭೀಮವ್ವನವರಿಗೆ ಗೊತ್ತಿತ್ತಂತೆ.

ಭೀಮವ್ವನವರ ತಾತ ವೆಂಕಪ್ಪಾಚಾರ್ಯರು ದ್ವಾದಶಿ ದಿನದಂದು ದೇವರ ಸ್ಮರಣೆ ಮಾಡುತ್ತಾ ಮೊಮ್ಮಗಳ ಜೊತೆ ಕುಳಿತಿದ್ದರಂತೆ. ಆಗ ಇದ್ದಕ್ಕಿದ್ದಂತೆ ಪ್ರಕಾಶಮಾನವಾದ ದಿವ್ಯ ಪ್ರಭೆಯೊಂದು ಕಾಣಿಸಿಕೊಂಡಿತಂತೆ. ಆ ದಿವ್ಯ ಪ್ರಭೆಯ ಕಿರಣಗಳು ಆ ಇರ್ವರ ದೇಹದ ಮೇಲೆ ಬೀಳಲಾಗಿ ಭೀಮವ್ವ ಅಚ್ಚರಿಗೊಂಡಳು. ಆಗ ಅವರ ತಾತ ವೇದವ್ಯಾಸರು ಬಂದಿದ್ದಾರೆ ಎಂದು ಹೇಳಿದರು. ಆದರೆ ಅದು ಆ ಬಾಲ್ಯ ವಯಸ್ಸಿಗೆ ತಿಳಿಯದೆ ಹೋಯಿತು. ಆದರೆ ಭೀಮವ್ವನಲ್ಲಿ ಅನೇಕ ಬಲಾವಣೆಯಾದವು. ವಯೋಮಾನ ಸಹಜ ಆಟದ ಬಯಕೆಯೇ ಇಲ್ಲವಾಯಿತು. ದೇವರ ಕಡೆಗೆ ಒಲವು ಮೂಡಿತು. ಅತಿಹಾಸ್ಯ, ಅತಿಕೋಪ ಮುಂತಾದ ತಾಮಸ ಗುಣಗಳು ಇಲ್ಲವಾದವು.

ಭೀಮವ್ವನವರು ಎಳೆಯ ವಯಸ್ಸಿನಿಂದಲೇ ದೇವರ ಅನುಗ್ರಹಕ್ಕೆ ಪಾತ್ರರಾದವರು. ಭೀಮವ್ವ ಸುಮಾರು ೮ ತಿಂಗಳಿನ ಕೂಸಾಗಿರುವಾಗ ತೊಟ್ಟಿಲಿನಲ್ಲಿ ಹಾಕಿ ತೂಗುತ್ತಿದ್ದಾಗ ಮಾಮೂಲಿ ಹಾಡುಗಳಿಗೆ ಅಳು ನಿಲ್ಲಿಸುತ್ತಿರಲಿಲ್ಲವಂತೆ. ದೇವರನಾಮದ ಹಾಡುಗಳನ್ನು, ಕೀರ್ತನೆಗಳನ್ನು ಹಾಡುತ್ತಿದ್ದರೆ ಮಾತ್ರ ಭೀಮವ್ವ ಸುಮ್ಮನೆ ಇರುತ್ತಿದ್ದರಂತೆ. ಮನೆಯವರಿಗೆ ಈ ಕೂಸಿನ ವಿಶೇಷ ಗೊತ್ತಾಗಿ ಇತರೆ ಹಾಡುಗಳನ್ನು ಹಾಡುವ ಬದಲು ದೇವರನಾಮವುಳ್ಳ ಹಾಡುಗಳನ್ನು ಹಾಡುತ್ತಿದ್ದರಂತೆ.

[illegible]

ಭೀಮವ್ವನವರು ಎಲ್ಲೇ ಪ್ರವಚನ ಆದರು ಕೇಳುವುದಕ್ಕೆ ಹೋಗುತ್ತಿದ್ದರು. ಬೇರೆಯವರು ಅನ್ಯವಿಷಯಗಳ ಕಡೆಗೆ, ಪ್ರವಚನ ಎಂಬುದನ್ನು ಕಾಲಹರಣ ಮಾಡುವುದಕ್ಕೆ ಬಳಸಿಕೊಂಡರೆ ಭೀಮವ್ವನವರು ತದೇಕ ಚಿತ್ತದಿಂದ ತಲ್ಲೀನರಾಗಿ ಕೇಳುತ್ತಿದ್ದರಂತೆ. ಕೃಷ್ಣ ಸತ್ಯಭಾಮೆಯನ್ನು ಬಿಟ್ಟುಹೋದಾಗ, ನಳ ದಮಯಂತಿಯನ್ನು ಕಾಡಿನಲ್ಲಿ ಬಿಟ್ಟು ಹೋದ ಸನ್ನಿವೇಶವನ್ನು ಕೇಳಿದಾಗ ತುಂಬಾ ಜೋರಾಗಿ ಅಳುತ್ತಿದ್ದರಂತೆ.

ಭೀಮವ್ವನವರ ಕುರಿತು ಬಂದಿರುವ ಮೇಲಿನ ಎಲ್ಲಾ ಕಥೆಗಳು ಭೀಮವ್ವನವರ ಜೀವನವನ್ನು ಅದರಲ್ಲೂ ವಿವಾಹ ಪೂರ್ವದ ಬದುಕನ್ನು ವಿವರಿಸುತ್ತವೆ. ಸಂಪೂರ್ಣ ಭಕ್ತಿಯ ಹಿನ್ನೆಲೆಯಲ್ಲಿ ಬಂದ ಭೀಮವ್ವ ಮುಂದೆಯೂ ಸಹ ಭಕ್ತಿಯಲ್ಲಿಯೇ ಲೀನವಾದರು. ಚಿಕ್ಕವಯಸ್ಸಿನಲ್ಲಿಯೇ ಅಗಾಧವಾದ ಸ್ಮರಣ ಶಕ್ತಿಯನ್ನು ಹೊಂದಿದ್ದರು. ವೇದವ್ಯಾಸರ ಅನುಗ್ರಹಕ್ಕೆ ಪಾತ್ರರಾದ ಮೇಲೆ ಸಂಪೂರ್ಣವಾಗಿ ದೇವರ ಕುರಿತು ಚಿಂತಿಸತೊಡಗಿದರು. ದೇವರನ್ನು ಸ್ತುತಿಸುವುದನ್ನೇ ತಮ್ಮ ಜೀವನದ ಪರಮ ಧ್ಯೇಯವೆಂದು ನಂಬಿದರು. ಜೀವನದಲ್ಲಿ ವೈಧವ್ಯ ಪ್ರಾಪ್ತವಾದಾಗಲೂ ದೇವರನ್ನು ಭಜಿಸುವುದನ್ನು ಬಿಡಲಿಲ್ಲ. ದೇವರ ವಿಷಯದಲ್ಲಿ ಆರಂಭದಿಂದ ಹಿಡಿದು ಅಂತಿಮ ತನಕ ಒಂದೇ ರೀತಿಯಲ್ಲಿಯೇ ಇದ್ದರು.

ಅಂದಿನ ಕಾಲದ ನಡೆಯಂತೆ ಹೆಣ್ಣುಮಕ್ಕಳಿಗೆ ಬೇಗ ಮದುವೆ ಮಾಡುತ್ತಿದ್ದರು. ಭೀಮವ್ವನವರಿಗೆ ಹನ್ನೊಂದು ವರ್ಷ ತುಂಬುತ್ತಲೇ ವಿವಾಹದ ಯೋಗ್ಯವಯಸ್ಸು ಎಂಬ ಭಾವನೆಯಿಂದ ಮುನಿಯಪ್ಪ ಎಂಬುವರಿಗೆ ಮದುವೆ ಮಾಡಿಕೊಡಲಾಯಿತು. ಮುನಿಯಪ್ಪನವರ ಪೂರ್ವಜರು ಸಹ ವೈಷ್ಣವ ಮತಾವಲಂಬಿಗಳು. ರಾಯದುರ್ಗ ತಾಲೂಕಿನ ಹಿರೇ ಸಮುದ್ರ ಗ್ರಾಮದ ಕುಲಕರ್ಣಿಗಳಾಗಿದ್ದರು. ಮುನಿಯಪ್ಪನವರು ಏಳನೇ ವಯಸ್ಸಿನಲ್ಲಿದ್ದಾಗ ತಂದೆ ತಾಯಿಯನ್ನು ಕಳೆದುಕೊಂಡು ದೊಡ್ಡಪ್ಪನ ಆಶ್ರಯದಲ್ಲಿ ಬೆಳೆದರು. ಅವರು ಸಹ ಭಗವದ್ಭಕ್ತರಾಗಿದ್ದರು. ಮುನಿಯಪ್ಪನವರನ್ನು ವಿವಾಹ ಮಾಡಿಕೊಂಡು ಗಂಡನ ಮನೆಗೆ ಬಂದಾಗ ಭೀಮವ್ವನವರನ್ನೆ ಅತ್ತೆಯ ಮನೆಯಲ್ಲಿ ಕೃಷ್ಣಾಬಾಯಿ ಎಂದು ಕರೆಯುತ್ತಿದ್ದರು.

ಮುನಿಯಪ್ಪನವರು ತೀರಿಕೊಂಡಾಗ ಭೀಮವ್ವನವರಿಗೆ ಮೂವತ್ತೈದು ವರ್ಷ ವಯಸ್ಸಾಗಿತ್ತು. ಪತಿ ವಿಯೋಗದ ಬಳಿಕ ಭೀಮವ್ವನವರಲ್ಲಿ ಅನೇಕ ಬದಲಾವಣೆಗಳಾದವು. ಮನೆಯಲ್ಲಿನ ಸಂಪತ್ತು ಕಳ್ಳರ ಪಾಲಾಯಿತು. ಕುಲಪದ್ಧತಿಯಂತೆ ಕೇಶ ಮುಂಡನವನ್ನು ಮಾಡಿಸಿಕೊಂಡು ಮಡಿಯಾದರು. ಒದಗಿದ ವೈಧವ್ಯದಿಂದ ವ್ಯಾಕುಲಿತರಾಗದೆ ಆಧ್ಯಾತ್ಮ ಕ್ಷೇತ್ರದಲ್ಲಿ ಮುಳುಗಿದರು. ಚಿಕ್ಕಂದಿನಿಂದಲೂ ಮನದಲ್ಲಿ ಮನೆಮಾಡಿದ್ದ ಭಕ್ತಿ ತೀವ್ರ ಸ್ವರೂಪವನ್ನು ಪಡೆದುಕೊಂಡಿತು.

ದಿನವಹಿ ಕೆಲಸಗಳನ್ನು ಮುಗಿಸಿಕೊಂಡು ಹರಟೆಗೆ ಮನಕೊಡದೆ ದಿನದ ಬಹು ಭಾಗವನ್ನು ಭಗವಂತನ ಕುರಿತು ಧೇನಿಸುತ್ತಿದ್ದರು. ಅವರ ಅಂತರ್ಮುಖಿ ಚಿಂತನೆಗಳೇ ಗಾಢವಾಗಿ ದೇವರ ಕುರಿತು ಚಿಂತಿಸುವಂತೆ ಮಾಡಿತ್ತು. ಆದ್ದರಿಂದ ಅವರಿಗೆ ಬೀಳುತ್ತಿದ್ದ ಕನಸುಗಳು ಸಹ ದೈವಿಕ ವಿಷಯದಿಂದ ಕೂಡಿರುತ್ತಿದ್ದವು.

ಭೀಮವ್ವನವರ ಕಾವ್ಯ ಕೃಷಿ ಆರಂಭವಾಗುವುದಕ್ಕೂ ಒಂದು ಕತೆಯಿದೆ. ಒಂದು ದಿನ ಭೀಮವ್ವನವರ ಕನಸಿನಲ್ಲಿ ನಾರದರು ಮತ್ತು ಕೃಷ್ಣ ಸರ್ಪದ ದರ್ಶನವಾಯಿತು. ನಾರದರ ಅಪ್ಪಣೆಯ ಮೇರೆಗೆ ಆ ಕೃಷ್ಣ ಸರ್ಪವು ಭೀಮವ್ವನವರ ನಾಲಿಗೆಯ ಮೇಲೆ ಮೂರು ಅಕ್ಷರಗಳನ್ನು ಬರೆಯಿತು. ನಂತರ ನಾರದರು ಅನುಗ್ರಹಿಸಿ ಅದೃಶ್ಯರಾದರು. ಇಲ್ಲಿಂದಲೇ ಭೀಮವ್ವನವರ ಕಾವ್ಯ ಕಲೆ ಚಿಗುರೊಡೆಯುವುದಕ್ಕೆ ಪ್ರಾರಂಭವಾಯಿತು.

ಭೀಮವ್ವನವರು ಉತ್ತಮ ಕಂಠವನ್ನು ಹೊಂದಿದ್ದರು. ಅವರು ರಾಗ ಬದ್ಧವಾಗಿ, ತಾಳಬದ್ಧವಾಗಿ ಹೇಳುತ್ತಿದ್ದ ಹಾಡುಗಳನ್ನು ಬರೆದಿಡಲಾಗುತ್ತಿತ್ತು. ಸ್ವಪ್ನದಲ್ಲಿ ಕಾಣುತ್ತಿದ್ದ ವಿಷಯಗಳು ಅಥವಾ ಸಂಗತಿಗಳು ಮರುದಿನ ಹಾಡಿನ ಸ್ವರೂಪವನ್ನು ಪಡೆದುಕೊಳ್ಳುತ್ತಿದ್ದವು. ನಿರರ್ಗಳವಾಗಿ ಹಾಡುತ್ತಿದ್ದ ಭೀಮವ್ವ ತಾನು ರಚಿಸಿದ ಹಾಡುಗಳನ್ನು ಯಾರ ಮುಂದೆಯೂ ಹಾಡಿ ತೋರಿಸುತ್ತಿರಲಿಲ್ಲ. ಅದಕ್ಕೆ ಒಂದು ಕಾರಣವೂ ಇತ್ತು.

ಹರಪನಹಳ್ಳಿಯಲ್ಲಿ ವೆಂಕಟರಾಯ ಎಂಬುವನ್ನೊಬ್ಬನಿಗೆ ಕಾವ್ಯ ರಚಿಸುವ ಗೀಳಿತ್ತು. ಅವನು ತುಂಬ ಶ್ರಮಪಟ್ಟು ಕವಿತೆಗಳನ್ನು ತಿದ್ದಿ ತೀಡಿ ಬರೆಯುತ್ತಿದ್ದನಂತೆ. ಅವನ ಕವನ ಕಟ್ಟುವ ಹುಚ್ಚು ವಿಪರೀತಕ್ಕೆ ಹೋಗಿ ಕೊನೆಗೆ ಹುಚ್ಚನಾದನಂತೆ. ಆತ ಹುಚ್ಚನಂತೆ ತಿರುಗುತ್ತಾ ಮೈ ಮೇಲೆ ಅರಿವು, ಅರಿವೆ ಇಲ್ಲದೆ ತಿರುಗುತ್ತಿದ್ದ. ಆತನಿಂದ ಜನರಿಗೆ ತೊಂದರೆಯಾಗಬಹುದೆಂದು ಊಹಿಸಿ ಕಂಬಕ್ಕೆ ಕಟ್ಟಿಹಾಕುತ್ತಿದ್ದರು. ಇದೆಲ್ಲವನ್ನೂ ಗಮನಿಸಿದ ಭೀಮವ್ವನವರ ಮನೆಯವರು ಕಾವ್ಯ ರಚಿಸುತ್ತೇನೆಂದು ಹೇಳಿದಾಗ ಹೆದರಿ ಹೋದರಂತೆ. ನೀನೇನು ಹಾಡುಕಟ್ಟುವುದು ಬೇಡ. ಹುಚ್ಚಿಯಾಗಿ ತಿರುಗಾಡುವುದು ಬೇಡ. ಹಾಗೇನಾದರೂ ನಡೆದುಹೋದರೆ ಮನೆತನದ ಗೌರವ ಉಳಿಯುವುದಿಲ್ಲವೆಂದು ಹೇಳಿದರಂತೆ.

ವೆಂಕಟರಾಯನ ಸ್ಥಿತಿ, ಮನೆಯವರ ನಿಷ್ಠುರದ ತಾಕೀತು ಭೀಮವ್ವನವರಿಗೆ ಹೆದರಿಕೆಯುಂಟಾಯಿತು. ಆ ಬಗೆಯ ಹೆದರಿಕೆ ಹಾಡು ಕಟ್ಟಲು ಹಿಂಜರಿಯುವಂತೆ ಮಾಡಿತ್ತು. ಕವಿ ಮನೋಭಾವ ಹೊಂದಿದ ಭೀಮವ್ವನವರ ಮನಸ್ಸು ಹಾಡು ಕಟ್ಟಲು ತವಕಿಸುತ್ತಿತ್ತು. ಆದರೆ ರಚಿಸುವುದಕ್ಕೆ ಪ್ರೋತ್ಸಾಹದ ಬೆಂಬಲವಿರಲಿಲ್ಲ. ಹಾಡು ಹೇಳದಿದ್ದರೆ ಒಂದು ಬಗೆಯ ಉದರ ಶೂಲೆ, ತಲೆಶೂಲೆ, ಕಳವಳ ಮುಂತಾದ ಆಂತರಿಕ ಅಶಾಂತಿಗಳು ಕಾಡತೊಡಗಿದವು. ಇದರಿಂದ ಬೇಸತ್ತು ದೇವರನ್ನು ನೆನೆದು ಮಲಗಿದಾಗ, ನಾರದರೇ ಸ್ವತಃ ಬಂದು ನೀನು ಯಾರ ಭಯವೂ ಇಲ್ಲದೆ ಹಾಡು ರಚಿಸಬಹುದೆಂದು ಹೇಳಿದರು. ಜೊತೆಗೆ ನಾರದರೇ ದಾಸರ ಸ್ವರೂಪದಲ್ಲಿ ದರ್ಶನ ನೀಡಿ 'ಭೀಮೇಶ ಕೃಷ್ಣ' ಎಂಬ ಅಂಕಿತವನ್ನು ಅನುಗ್ರಹಿಸಿದರಂತೆ. ನಾರದರಿಂದ ಅನುಗ್ರಹ ಮತ್ತು ಮುದ್ರಿಕೆ ದೊರೆತ ಮೇಲೆ ಆಂತರಿಕ ವೇದನೆಗಳು ದೂರವಾದವು. ನಿರ್ಭಯವಾಗಿ ಹಾಡಲು ಹಾಡು ರಚಿಸಲು ಮುಂದಾದರು.

ಭೀಮವ್ವನವರ ಕಾವ್ಯ ಕ್ರಿಯೆಯೇ ಒಂದು ಬಗೆಯಲ್ಲಿ ವಿಶೇಷವಾದದ್ದು. ಅವರು ಸುಮ್ಮನೆ ಹಾಡುಗಳನ್ನು ಕಟ್ಟುತ್ತಿರಲಿಲ್ಲ. ರಚಿಸಿದ ಒಂದೊಂದು ಹಾಡುಗಳಿಗೂ ಒಂದೊಂದು ಬಗೆಯ ಕಥೆಯುಂಟು. ಹಾಡು ಕಟ್ಟುವ ಪೂರ್ವದಲ್ಲಿ ಭೀಮವ್ವನವರಿಗೆ ಭೀಮೇಶಕೃಷ್ಣನ ಸಂಪೂರ್ಣವಾದ ಅನುಗ್ರಹ

ದೊರೆಯಬೇಕಾಗಿತ್ತು. ಹಾಡಿನ ರೂಪದಲ್ಲಿ ಒಳಗಾಗಬಹುದಾದ ಸಂಗತಿಗಳು ಕನಸಿನಲ್ಲಿ ಕಾಣಬೇಕು. ಕನಸಿನಲ್ಲಿ ಮೂಡಿಬಂದ ಬಳಿಕವೇ ಹಾಡುಗಳಿಗೆ ವಸ್ತುಗಳಾಗುತ್ತಿದ್ದವು. ಆ ಹಿನ್ನೆಲೆಯಿಂದ ರಚಿತವಾದ ಅನೇಕ ಹಾಡುಗಳನ್ನು ಇಲ್ಲಿ ಗಮನಿಸಬಹುದು.

ಒಂದು ರಾತ್ರಿ ಕನಸಿನಲ್ಲಿ ಭೀಮವ್ವನವರು ದೇವರ ಮನೆಯಲ್ಲಿರುವಾಗ ತಂಬೂರಿಯೊಂದಿಗೆ ನಾರದರು ಆಗಮಿಸಿದರು. ಭಕ್ತಿಯಿಂದ ನಾರದರ ಚರಣಗಳಿಗೆ ನಮಸ್ಕರಿಸಿ ನೀವು ಯಾಕೆ ಬಂದಿರಿ ಎಂದು ಕೇಳಿದಳು. ಆಗ ನಾರದರು ನಾನು ದ್ವಾರಕಪಟ್ಟಣಕ್ಕೆ ಹೋಗಿದ್ದೆ, ಅಲ್ಲಿ ಕೃಷ್ಣನು ಅಷ್ಟ ಮಹಾಮಹಿಷಿಯರ ಮನೆಯಲ್ಲಿಯೂ ೧೬,೦೦೦ ಹೆಂಡರ ಮನೆಯಲ್ಲಿಯೂ ಇದ್ದುದನ್ನು ನೋಡಿದೆ ಎಂದು ಹೇಳಿದರು. ಆ ಕೃಷ್ಣನ ಮಹಿಮೆಯನ್ನು ಈ ವಾರ್ತೆಯನ್ನು ನಿನ್ನ ಮುಂದೆ ಹೇಳಬೇಕೆಂದೆನಿಸಿತು. ಅದಕ್ಕೆ ಬಂದೆ ಎಂದು ಹೇಳಿದರಂತೆ. ಮರುದಿನ ಆ ಸಂಗತಿ ಈ ಕೆಳಗಿನ ಹಾಡಿನ ರೂಪವನ್ನು ಪಡೆಯಿತು.

"ಪಕ್ಷಿವಾಹನ ಸತ್ಯಭಾಮೆ ಸದನದ್ವಾರದಿ
ನಿಂತು ಸದನ ದ್ವಾರದಿ
ಮಿತ್ರೆ ಎನಗೆ ಕದವ ತೆಗೆಯ ಬರುವೆ ತೀವ್ರದಿ..."[೨]

ಮುಯ್ಯದ ಹಾಡು ರಚಿಸುವಾಗಲೂ, ಸುಭದ್ರ ಕಲ್ಯಾಣ ರಚಿಸುವಾಗಲೂ ಹಾಗೆಯೇ ಇನ್ನಿತರ ಹಾಡುಗಳನ್ನು ರಚಿಸುವಾಗ ಮೊದಲು ಸ್ವಪ್ನದಲ್ಲಿ ಕಂಡುಕೊಂಡು ಮರುದಿನ ಹಾಡುಗಳನ್ನು ಕಟ್ಟುತ್ತಿದ್ದರು. ಕನಸುಗಳು ಬೀಳದ ಹೊರತು ಹಾಡುಗಳನ್ನು ರಚಿಸುತ್ತಿರಲಿಲ್ಲ. ಹಾಡಿನ ನಡುವೆ ಕಾಣಬಹುದಾದ ಅಲಂಕಾರದ ವರ್ಣನೆ ಇರಬಹುದು, ಊಟೋಪಚಾರದ ವರ್ಣನೆ ಇರಬಹುದು, ಅವೆಲ್ಲವನ್ನೂ ಅವರು ಸ್ವಪ್ನದಲ್ಲಿ ಕಂಡುಕೊಂಡಿದ್ದಾರೆ.

ಜೀವನದುದ್ದಕ್ಕೂ ದೇವರ ಕುರಿತು ಚಿಂತನ, ಮಂಥನ ಕೈಗೊಂಡ ಹರಪನಹಳ್ಳಿ ಭೀಮವ್ವನವರು ಶಾಲಿವಾಹನ ಶಕ ೧೮೭೪ನೇ ಶುಭಕೃತನಾಮ ಸಂವತ್ಸರ ಪುಶ್ಯ ಶುದ್ಧ ೧೩, ಭಾನುವಾರ ಮುಕ್ಕೋಟಿ ದ್ವಾದಶಿ ಮಧ್ಯಾಹ್ನ ೨೧/೨ ಗಂಟೆಗೆ ವೈಕುಂಠವಾಸಿಯಾದರು.

ಸಾಹಿತ್ಯ ಜೀವನ

ಹರಪನಹಳ್ಳಿ ಭೀಮವ್ವನವರು ಭೀಮೇಶಕೃಷ್ಣ ಎಂಬ ಅಂಕಿತನಾಮದಿಂದ ೧೪೩ ಕೀರ್ತನೆಗಳನ್ನು ೬ ದೊಡ್ಡಹಾಡು ಅಥವಾ ಕಥನ ಕವನಗಳನ್ನು ರಚಿಸಿದ್ದಾರೆ. ಇನ್ನುಳಿದ ಹರಿದಾಸರಂತೆ ಭೀಮವ್ವನವರು ಸಹ ಸುಳಾದಿ, ಉಗಾಭೋಗವನ್ನೂ ರಚಿಸಿದ್ದಾರೆ. ಸುಳಾದಿ, ಉಗಾಭೋಗಗಳು ಸಂಖ್ಯೆಯಲ್ಲಿ ಗೌಣವಾಗಿವೆ. ಕೇವಲ ಎರಡು ಸುಳಾದಿಗಳು ಒಂದು ಉಗಾಭೋಗವನ್ನು ಮಾತ್ರ ಕಾಣಬಹುದು.

ಭೀಮವ್ವನವರು ರಚಿಸಿರುವ ಕೀರ್ತನೆಗಳ ಸ್ವರೂಪ ಒಂದೇ ಬಗೆಯಾಗಿಲ್ಲ. ಸಣ್ಣ ರೂಪದ ರಚನೆಯಿಂದ ಹಿಡಿದು ದೀರ್ಘ ರೂಪದ ಕೀರ್ತನೆಗಳನ್ನು ಕಾಣಬಹುದು. ಕೆಲವೊಂದು ಕೀರ್ತನೆಗಳು ಪಲ್ಲವಿ ಸಹಿತವಾಗಿಯೂ ರಹಿತವಾಗಿಯೂ ಮೂಡಿ ಬಂದಿವೆ. "ಅವ್ವನ ಹಾಡುಗಳಲ್ಲಿ ಉಳಿದ ಹರಿದಾಸರ ರಚನೆಗಳಲ್ಲಿರುವಂತೆ ಅನುಪಲ್ಲವಿ ಇಲ್ಲವೆಂಬುದು ಗಮನಾರ್ಹವಾದ ಅಂಶ."[೩] ದೀರ್ಘವಾದ

ಹಾಡುಗಳ ಪೈಕಿ ಸುಭದ್ರಾ ಕಲ್ಯಾಣ, ನಳಚರಿತ್ರೆ, ಮುಯ್ಯದ ಹಾಡು, ಮುಂತಾದವು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ. ಈ ಎಲ್ಲಾ ಹಾಡುಗಳಲ್ಲಿ ಭಕ್ತಿಯ ಸೆಲೆ ಅಧಿಕವಾಗಿದೆ. ಪ್ರತಿಯೊಂದು ಪಾತ್ರದ ಮನದ ಒಳತೋಟಿಯೂ ಭಗವಂತನನ್ನು ಸೇರುವುದೇ ಆಗಿದೆ. ದೀರ್ಘರೂಪದ ಹಾಡುಗಳನ್ನು ಸಹಜವಾಗಿ ರಚನೆ ಮಾಡಿದ್ದಾರೆ. ಹೆಚ್ಚು ಶ್ರಮವಹಿಸದೆ, ಭಾಷೆಯನ್ನು ಬಿಗಿ ಗೊಳಿಸದೆ, ಪದಗಳಿಗಾಗಿ, ತಿಣುಕಾಡದೆ ಸುಲಭವಾಗಿ ಅರ್ಥವಾಗುವಂತೆ ರಚಿಸಿದ್ದಾರೆ. ಭೀಮವ್ವನವರ ಕಾವ್ಯದಲ್ಲಿ ಮಾತುಗಳು ಹಾಡುಗಳಾಗಿವೆ. ಸರಳಭಾಷೆಯನ್ನು ಬಳಸುವುದರ ಮೂಲಕ ಎಲ್ಲಿಯೂ ರಸಭಂಗವಾಗದಂತೆ ರಚಿಸಿರುವುದು ಅಚ್ಚರಿ ವಿಷಯವೆ.

ಸುಭದ್ರ ಕಲ್ಯಾಣ

ಸುಭದ್ರ ಕಲ್ಯಾಣದಲ್ಲಿ ಅರ್ಜುನ ಸನ್ಯಾಸಿಯ ವೇಷದಲ್ಲಿ ಬಂದು ಸುಭದ್ರೆಯನ್ನು ವರಿಸುವ ಸಂಗತಿಯೇ ಕಥಾವಸ್ತುವಾಗಿದೆ. ಬಲರಾಮನಿಗೆ ಸುಭದ್ರೆಯನ್ನು ದುರ್ಯೋಧನನಿಗೆ ಕೊಟ್ಟುವಿವಾಹ ಮಾಡಬೇಕು ಎಂಬ ಬಯಕೆಯಿತ್ತು. ಆದರೆ ಕೃಷ್ಣ ಅರ್ಜುನನಿಗೆ ಕೊಟ್ಟು ವಿವಾಹ ಮಾಡಬೇಕೆಂಬ ಬಯಕೆಯುಳ್ಳವನಾಗಿದ್ದಾನೆ. ಸುಭದ್ರೆ ಕೂಡ ಅರ್ಜುನನನ್ನೇ ವರಿಸಬೇಕೆಂಬ ಬಯಕೆ ಹೊಂದಿದ್ದಾಳೆ. ಬಲರಾಮನನ್ನು ಎದುರು ಹಾಕಿಕೊಳ್ಳದೆ ಉಪಾಯವಾಗಿ ಅರ್ಜುನ ಮತ್ತು ಸುಭದ್ರೆಯ ವಿವಾಹ ಮಾಡಿದ್ದು ತುಂಬ ಸೊಗಸಾಗಿ ಮೂಡಿಬಂದಿದೆ.

"ಕಣ್ಣಿಗೆ ನಿದ್ರೆ ಬಾರದೆ ಕಳವಳಿಸುತ
ಸಣ್ಣ ಸುಭದ್ರೆ ಸಂತಾಪದಿಂದ
ಅಣ್ಣಯ್ಯಗೆನ್ನಲಂತಃಕರಣಗಳಿಲ್ಲ
ಟೊಣ್ಯಕೌರವಗೆ ಒಪ್ಪಿಸಿಕೊಡುವನೆಂದು"[೪]

ಬಲರಾಮನ ಮನದ ಇಂಗಿತ ಕೇಳಿದ ಮೇಲೆ ಸುಭದ್ರೆ ದುಃಖದಿಂದ ಪರಿತಪಿಸುತ್ತಿದ್ದಾಳೆ. ಕೌರವನನ್ನು ವರಿಸಲು ಆಕೆಗೂ ಇಷ್ಟವಿಲ್ಲ. ಆದರೆ ಈ ವಿಷಯವನ್ನು ಅಷ್ಟು ಸುಲಭವಾಗಿ ಬಲರಾಮನ ಬಳಿ ಹೇಳುವಂತಿಲ್ಲ. ತಂಗಿಯ ತಳಮಳವನ್ನು ಅರಿತ ಕೃಷ್ಣ ಅರ್ಜುನನಿಗೆ ಸಹಾಯ ಮಾಡುತ್ತಾನೆ. ಅರ್ಜುನ, ಸನ್ಯಾಸಿ ರೂಪವನ್ನು ತಾಳಿ ದ್ವಾರಕಾಪುರಿಗೆ ಬರುತ್ತಾನೆ. ಬಲರಾಮನಿಗೆ ಈ ತಂತ್ರ ಗೊತ್ತಾಗುವುದಿಲ್ಲ. ಸನ್ಯಾಸಿಯನ್ನು ಅರಮನೆಗೆ ಕರೆದುಕೊಂಡು ಬರುತ್ತಾನೆ. ಕೃಷ್ಣ ಸನ್ಯಾಸಿಯನ್ನು ನೋಡಿ ನಿಜವಾದ ಸನ್ಯಾಸಿಯಲ್ಲ. ಕಪಟ ಸನ್ಯಾಸಿ ಎಂದು ಹೇಳಿದರೂ ಬಲರಾಮ ಒಪ್ಪದೆ ಕುಚೋದ್ಯ ನುಡಿಗಳೆಂದು ಸುಮ್ಮನಾಗಿ ಬಿಡುತ್ತಾನೆ. ಅಲ್ಲದೆ ಸನ್ಯಾಸಿಯನ್ನು ನೋಡಿಕೊಳ್ಳಲು ತಂಗಿ ಸುಭದ್ರೆಯನ್ನು ನೇಮಿಸುತ್ತಾನೆ.

ಅರ್ಜುನನು ತೀರ್ಥಯಾತ್ರೆಯನ್ನು ಕೈಗೊಂಡಿರುವ ಸಂಗತಿ ಸುಭದ್ರೆಗೂ ತಿಳಿದಿರುತ್ತದೆ. ಆದರೆ ಯಾವ ಭಾಗದಲ್ಲಿದ್ದಾನೆಂದು ನಿಖರವಾಗಿ ತಿಳಿದಿರುವುದಿಲ್ಲ. ಬಹುಶಃ ಈ ಸನ್ಯಾಸಿಗೆ ತಿಳಿದಿರಬಹುದೇ ಎಂದು ಯೋಚಿಸುತ್ತಾಳೆ. ಅರ್ಜುನ ಎಲ್ಲಿದ್ದಾನೆಂದು ಕೇಳಿದರೆ ಈ ದೊಡ್ಡವರು ಏನಾದರೂ ಅಭಾಸ

ಮಾಡಿಕೊಳ್ಳುವರೆ, ನನ್ನ ಕುರಿತು ಕೀಳುಭಾವನೆ ಮೂಡೀತೆ ಎಂದು ಹಲವು ವಿಧದಲ್ಲಿ ಕಳವಳಕ್ಕೆ ಒಳಗಾಗುತ್ತಾಳೆ. ಇಲ್ಲಿ ಸುಭದ್ರೆಯ ಮನಸ್ಸಿನ ಒಳತೋಟಿಯನ್ನು ಸಶಕ್ತವಾಗಿ ಕಟ್ಟಿಕೊಡುತ್ತಾರೆ.

"ಏನೆಂಬೋರೊ ಯತಿಗಳು ಇದಕೆ
ನಾನ್ಹೋಗೆರಗಲವರ ಪಾದಕೆ ಮ
ತ್ತೇನೆಂಬೋರೊ ಯತಿಗಳು ಇದಕೆ ||ಪ||
ಒಬ್ಬರಿದ್ದಲ್ಲಿ ಹೋಗೆಬ್ಬಿಸಿ ಕೇಳಲು
ನಿರ್ಭಯದ್ಹೆಣ್ಣಿವಳೆಂಬುವರೊ ||೧||
ಮಿಟಿ ಮಿಟಿ ನೋಡುತ ಮುಖವು ಭಾಳ
ಗಟವಾಣಿ ಸೆಟವಿ (ಇ) ವಳೆಂಬೋರೋ ||೨||
ಗುಪ್ತ ಕುಚೋದ್ಯದಿಂದಪಹಾಸ್ಯ ಮಾಡೋರೊ
ಹೊತ್ತಲ್ಲ್ಹೊಂದಕೆ ನಡೆಯೊಬೋರೋ ||೩||
ಈ ನಡು ರಾತ್ರಿಯಲ್ಲೇನು ರಾ (ರಹ?) ಸ್ಯಗಳೆಂದು
ಹೀನ ಮಾತುಗಳ ಕಲ್ಪಿಸಿಕೊಂಬರೊ ||೪||
ಭೀಮೇಶಕೃಷ್ಣನ ಭಿಡಿಯದಿಂದೆನ್ನನು
ಬಾರೆಂದು ಕರೆದ್ಯಾರ್ತೆ ಹೇಳುವರೊ ||೫||"[೫೫]

ಸುಭದ್ರೆ ತನ್ನ ವಿಕ್ಷಿಪ್ತ ಮನಸ್ಸಿನಿಂದ ಸನ್ಯಾಸಿಯನ್ನು ಕೇಳಿಯೇ ಬಿಡುತ್ತಾಳೆ. ಆಗ ಸನ್ಯಾಸಿ ಅರ್ಜುನನ್ನು ಕಂಡಿರುವುದಾಗಿಯೂ, ಅವನು ದ್ವಾರಕಾಪುರಿಯಲ್ಲಿ ಇರುವುದಾಗಿಯೂ ತಿಳಿಸುತ್ತಾನೆ. ಸುಭದ್ರೆ ಹರ್ಷಚಿತ್ತಳಾಗುತ್ತಾಳೆ. ಅರ್ಜುನ ಸತಾಯಿಸಿ ಸನ್ಯಾಸಿ ರೂಪದಲ್ಲಿರುವನು ನಾನೇ ಎಂದು ಹೇಳಿದಾಗ ಸುಭದ್ರೆಗೆ ನಾಚಿಕೆ ಆವರಿಸಿಕೊಳ್ಳುತ್ತದೆ. ಅರ್ಜುನನನ್ನು ನೋಡಿದಾಗ ರೋಮಾಂಚನದಿಂದ ಪುಲಕಿತಗೊಂಡು ಮೈ ತುಂಬ ಬೆವರ ಹನಿಗಳು ಆ ಕ್ಷಣಾರ್ಧದಲ್ಲಿಯೇ ಮೂಡಿಬಿಡುತ್ತವೆ.

"ತಿದ್ದಿದ ಮುಂಗುರುಳನು ನ್ಯಾವರಿಸಿ ಸು
ಭದ್ರೆಯ ಮುಖ ಬೆವರುಗಳನು ಒರೆಸಿ
ಬಿದ್ದಮಲ್ಲಿಗೆ ಮಾಲೆಗಳನ್ನು ಮುಡಿಸಿ ಜಾರಿ
ಬಿದ್ದಂಥ ಜನರ (ರಿಯ) ಸೆರಗನು ಹೊದಿಸಿ ಬಾರೆ ಬಾರೆ"[೬]

ಭೀಮವ್ವನವರದು ಕವಿಯ ಮನಸ್ಸು ಎನ್ನುವುದಕ್ಕೆ ಇಂಥ ಸಾಲುಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ಯಾಕೆಂದರೆ ಸಣ್ಣ ಸಣ್ಣ ಸಂಗತಿಗಳನ್ನು ಸಹ ಕೈಯ ಬಿಡದಂತೆ ರಸವತ್ತಾಗಿ ಹೇಳಿರುವುದು ಕಾವ್ಯಕ್ಕೆ ಮೆರಗು ತಂದಿದೆ.

ಕಾವ್ಯದ ಕೊನೆಯಲ್ಲಿ ಶ್ರೀ ಕೃಷ್ಣನೇ ಮುಂದೆ ನಿಂತು ವಿವಾಹ ಕಾರ್ಯವನ್ನು ಮುಗಿಸಿ, ತಾನು ಕೊಡುವಂಥ ರಥಗಳನ್ನು ತರಿಸಿ, ಅದಕ್ಕೆ

"ಮೇಘ ಪುಷ್ಪಕ ಸುಗ್ರೀವನೆಂಬೊ

ಶ್ರೇಘ್ಯ ಬಲಾಕನೆಂಬೋ ದಿವ್ಯ

ವೇಗ ಶಾಲಿಯು ನಾಲ್ಕು ತೇಜಿಗಳನ್ನು ಕಟ್ಟಿ

ಬ್ಯಾಗೇರಿಸಿದ ಸತಿಪತಿಯರನು"[೭]

ದಿವ್ಯವೂ, ವೇಗದಿಂದ ಕೂಡಿದ ಕುದುರೆಗಳನ್ನು ಕಟ್ಟಿಸಿ ಮದುಮಕ್ಕಳನ್ನು ಬಿಳ್ಕೊಟ್ಟನು.

ಕಥಾವಸ್ತು ಹಳೆಯದಾದರೂ ಹೇಳುವ ರೀತಿ ವಿಭಿನ್ನವಾಗಿದೆ. ಅರ್ಜುನ ಸುಭದ್ರೆಯ ವಿವಾಹವನ್ನು ವರ್ಣಿಸುವಾಗ, ಸುಭದ್ರೆಯ ಸಿಂಗಾರವನ್ನು ವರ್ಣಿಸುವಾಗ, ಮದುವೆಯ ಹಿಂದಿನ ದಿನ ಭೂಮದೂಟಕ್ಕೆ ಕುಳಿತಾಗ, ಮದುವೆಯ ನಂತರ ಉರಟಣೆ ಮಾಡುವಾಗ; ಅರ್ಜುನ ಮತ್ತು ಸುಭದ್ರೆಯ ವಿವಾಹ ವೃತ್ತಾಂತವನ್ನು ಕೇಳಿ ಬಲರಾಮ ಕೆಂಡಾಮಂಡಲವಾದ ದೃಶ್ಯ; ಎಲ್ಲ ಘಟನೆಗಳಿಗೂ ಕಾರಣವಾಗಿ 'ತೋರಿ ತೋರದಲೆ' ಇರುವಂತಹ ಕೃಷ್ಣನ ಜಾಣ್ಮೆಯ ಮಾತುಗಳು; ಹೀಗೆ ಅನೇಕ ಸಂದರ್ಭಗಳಲ್ಲಿ ಸಂಗತಿಗಳನ್ನು ಅವ್ವ ಮನೋಜ್ಞವಾಗಿ ಕಟ್ಟಿಕೊಡುತ್ತಾರೆ.

ನಳಚರಿತ್ರೆ

ಪುರಾಣದಲ್ಲಿ ನಳ ದಮಯಂತಿಯರ ಕಥೆ ಬಹು ಪ್ರಸಿದ್ಧವೂ ಜನಜನಿತವೂ ಆಗಿದೆ. ಈ ನಳೋಪಾಖ್ಯಾನವು ಮಹಾಭಾರತ ಕೃತಿಗಿಂತಲೂ ಪ್ರಾಚೀನವಾದದು. ಯಾಕೆಂದರೆ ನಳನ ಉಲ್ಲೇಖ ಅರಣ್ಯ ಪರ್ವದಲ್ಲಿ ಕಾಣಸಿಗುತ್ತದೆ. ಸಂಸ್ಕೃತ ವಾಙ್ಮಯದಲ್ಲಿ ಮಹಾಭಾರತ ಕೃತಿಯನ್ನು ಬಿಟ್ಟರೆ ಈ ನಳೋಪಾಖ್ಯಾನವು 'ಗುಣಾಢ್ಯನ ಬೃಹತ್ಕಥೆ' 'ಸೋಮದೇವನ ಕಥಾ ಸರಿತ್ಸಾಗರ' 'ಶತಪಥ ಬ್ರಾಹ್ಮಣ' ಎಂಬ ಬೃಹತ್ ಗ್ರಂಥದಲ್ಲಿ ಕಂಡುಬರುತ್ತದೆ. ಕನ್ನಡದಲ್ಲಿ 'ಚೌಂಡರಸನ ನಳಚರಿತ್ರೆ', 'ಕುಮಾರವ್ಯಾಸನ ಕರ್ಣಾಟಭಾರತ ಕಥಾಮಂಜರಿ' 'ಕನಕದಾಸರ ನಳಚರಿತ್ರೆ', 'ಹರಪನಹಳ್ಳಿ ಭೀಮವ್ವನವರ ನಳಚರಿತ್ರೆ'ಯಲ್ಲಿ ನಳದಮಯಂತಿಯರ ಪ್ರಸಂಗವನ್ನು ಕಾಣಬಹುದು. 'ಚೌಂಡರಸನ ನಳಚರಿತ್ರೆ' ಪ್ರಾಚೀನ ಕೃತಿಯಾದರೂ ಅಷ್ಟು ಪ್ರಸಿದ್ಧಿಯನ್ನು ಪಡೆದಿಲ್ಲ. ಕುಮಾರವ್ಯಾಸನು ತನ್ನ ಕೃತಿಯಲ್ಲಿ ನಳನ ಕಥೆಯನ್ನು ಕೇವಲ ಎರಡೇ ಎರಡು ಷಟ್ಪದಿಯಲ್ಲಿ ವಿವರಿಸಿಬಿಡುತ್ತಾನೆ. ನಳನ ಕಥೆ ದೀರ್ಘಸ್ವರೂಪ ಪಡೆಯುವುದು ಕನಕದಾಸರ ಮತ್ತು ಹರಪನಹಳ್ಳಿ ಭೀಮವ್ವನವರ ಕೃತಿಗಳಲ್ಲಿ.

ಕನಕದಾಸರು ನಳನ ಚರಿತ್ರೆಯನ್ನು ಒಂಭತ್ತು ಸಂಧಿ ಹಾಗೂ ೪೮೧ ಭಾಮಿನಿ ಷಟ್ಪದಿಗಳಿಂದ ರಚನೆ ಮಾಡಿದ್ದಾರೆ. ಆದರೆ ಹರಪನಹಳ್ಳಿ ಭೀಮವ್ವನವರು ೧೧೦೫ ಧ್ವನಿಗಳಿಂದಲೂ ೧೧೦೪ ವಚನಗಳಿಂದಲೂ ನಳಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಮೂಲ ನಳೋಪಾಖ್ಯಾನ ಕೃತಿಯಲ್ಲಿ ವಿಧಿಯ ಮೇಲುಗೈ ಇರುವಂತೆ ಇವರ ಕೃತಿಗಳಲ್ಲಿಯೂ ಸಹ ವಿಧಿಯ ಚಿತ್ರಣವನ್ನು ಕಾಣಬಹುದು.

ಭೀಮವ್ವನವರ ನಳಚರಿತ್ರೆಯಲ್ಲಿ ಕನಕದಾಸರ ಪ್ರಭಾವವನ್ನು ಗುರುತಿಸಬಹುದು. ಭೀಮವ್ವನವರು ಕಥೆಯ ವಿಸ್ತಾರದಲ್ಲಿ ಕನಕದಾಸರನ್ನು ಅನುಸರಿಸಿದ್ದರೂ ಭಾಷಾ ಶೈಲಿಯಿಂದ ಕಾವ್ಯ ಶೈಲಿಯಿಂದ ಭಿನ್ನರೆನಿಸಿದ್ದಾರೆ. ಗ್ರಾಮ್ಯಪದಗಳ ಬಳಕೆ, ಗಾದೆಗಳು, ನುಡಿಗಟ್ಟುಗಳ ಸಹಾಯದಿಂದ ಭೀಮವ್ವನವರು

ಸಹಜವಾಗಿ, ನಿರರ್ಗಗಳವಾಗಿ ರಚಿಸಿದ್ದಾರೆ. ಮೂಲದಲ್ಲಿ ನಳನ ಚರಿತ್ರೆಯನ್ನು ಬೃಹದಶ್ವಮುನಿಯು ಧರ್ಮರಾಯನಿಗೆ ಹೇಳುತ್ತಾನೆ. ಆದರೆ ಕನಕದಾಸರಲ್ಲಿ ನಳಚರಿತ್ರೆಯನ್ನು ರೋಮಶಮುನಿ ಧರ್ಮರಾಯನಿಗೆ ಹೇಳಿದ್ದಾನೆಂದಿದೆ. ಈ ವಿಷಯದಲ್ಲಿ ಭೀಮವ್ವನವರು ಮೂಲದಲ್ಲಿರುವ ಹಾಗೆಯೇ ಬೃಹದಶ್ವಮುನಿಯು ಧರ್ಮರಾಯನಿಗೆ ನಳಕಥೆಯನ್ನು ಹೇಳಿದ್ದಾರೆಂದು ಕೃತಿಯಲ್ಲಿ ಚಿತ್ರಿಸಿದ್ದಾಳೆ. 'ಧ್ವನಿ', 'ವಚನಗಳು' ಅವ್ವನ ಸ್ವಂತ ಸೃಷ್ಟಿ ಎಂಬುದನ್ನು ಕಡೆಗಣಿಸುವಂತಿಲ್ಲ. ದಾಸ ಸಾಹಿತ್ಯಕ್ಕೆ ರಚನೆಯ ದೃಷ್ಟಿಯಿಂದ ನೀಡಿದ ಹೊಸ ಕೊಡುಗೆ ಎನ್ನಬಹುದು.

"ಕನಕದಾಸರು 'ಕಮಲನಾಭನ ಕೃಪೆಯ ಕವಚ ವರಪುರದ ಚೆನ್ನಿಗರಾಯ ಸಲಹಿದನವರ ಕರುಣದಲಿ, ವೇದಗೋಚರ ಕೃಷ್ಣವರ ಪುರದಾದಿ ಕೇಶವನಮರ ವಂದಿತನಾದಿ ನಾರಾಯಣನು ಸಲಹುವನಖಿಳ ಸಜ್ಜನರ ಎಂದು ಹೇಳುವ ಮೂಲಕ ಇದು ಕೃಷ್ಣನ ಮಹಿಮೆ ಎಂದು ಸಾರಿದ್ದಾರೆ. ದಾಸ ದೀಕ್ಷೆಯನ್ನು ಪಡೆದಿದ್ದ ಹರಪನಹಳ್ಳಿ ಭೀಮವ್ವನವರು ಇದನ್ನು ಭೀಮೇಶಕೃಷ್ಣ ಕೃಪೆ' ಎಂದು ಕರೆಯುತ್ತಾರೆ. ನಳರಾಯನಾಖ್ಯಾದಲಿ ಕಲಿಬಾಧೆಯಿಂದ ಕಡೆಗಾಗುವರು ಜನರೆಲ್ಲ ಬಲರಾಮನನುಜನನುಗ್ರಹದಿಂದ ಎಂಬುದು ಭೀಮವ್ವನವರ ಅಭಿಪ್ರಾಯ."[೮]

ಕೌರವನ ದ್ಯೂತ ಪಾಂಡವರ ವನವಾಸಕ್ಕೆ ಕಾರಣವಾಯಿತು. ಪಾಂಡವರು ಕಾಡಿನಲ್ಲಿರುವಾಗ ನಿಷಧ ದೇಶಾಧಿಪತಿ ಆದ ನಳನ ಚರಿತ್ರೆಯನ್ನು ಕೇಳುತ್ತಾರೆ. ಭೀಮವ್ವನವರು ನಳನ ವ್ಯಕ್ತಿತ್ವವನ್ನು, ಭೀಮೇಶ ಕೃಷ್ಣನ ಭಕ್ತನೆಂಬುದನ್ನು ಸುಂದರವಾಗಿ ಹೇಳಿದ್ದಾರೆ.

"ಸತ್ಯ ಪ್ರತಿಜ್ಞೆಯ ಮೀರುವವನಲ್ಲ ನಳರಾಯ
ಕೊಟ್ಟ ಭಾಷೆಗಳ ತಪ್ಪುವನಲ್ಲವೊ
ಅತ್ಯಂತ ಹರುಷಾದಿಂದಾಗ ಭೀಮೇಶ
ಕೃಷ್ಣನ್ನ ಭಜಿಸಿ ಭಕ್ತಿಯಲ್ಲಿದ್ದನು
ಗುಣದಲ್ಲಿ ಗಂಭೀರ ಮಣಿಯಂತೆ ಮೈ ಬಣ್ಣ
ಕಳೆಯು ಚೆಲ್ವಿಕೆಯು ಕಾಮನ ಪೋಲ್ವುದು
ನಳರಾಯನಲ್ಲೀ ಗುಣಗಳ ಕೇಳಿ ದಮಯಂತಿ
ಮರುಳಾಗಿ ಮನಸ್ಸಿಟ್ಟಳಾನಲ್ಲೆ"[೯]

ನಳನು ಸಾತ್ವಿಕ ಮಾರ್ಗದಲ್ಲಿ ಬೆಳೆದು ಬಂದವನು. ಅವನು ಎಂದಿಗೂ ಅನ್ಯಾಯದ ಮಾರ್ಗವನ್ನು ತುಳಿದವನಲ್ಲ. ನಳನ ರೂಪ, ವ್ಯಕ್ತಿತ್ವವನ್ನು ನೋಡದೆ ಕೇಳಿಯೇ ದಮಯಂತಿ ಮೋಹಿತಳಾಗಿದ್ದಾಳೆ. ದಮಯಂತಿಯು ವಿದರ್ಭ ದೇಶದ ಧೀರಜನಾದ ಭೀಮರಾಯನಿಗೆ 'ದಮಯ' ಎಂಬ ಋಷಿಯ ಅನುಗ್ರಹದಿಂದ ಜನಿಸಿದ್ದಳು. ಆದ್ದರಿಂದ ಆಕೆಗೆ ದಮಯಂತಿ ಎಂಬ ಹೆಸರನ್ನು ಇಡಲಾಗಿತ್ತು. ದಮಯಂತಿಯೂ ಸಹ ಸುರ ಸುಂದರಳು. ಆಕೆಯ ರೂಪ ಶ್ರೀಮಂತಿಕೆಯನ್ನು ಹೃದ್ಯವಾಗುವಂತೆ ವರ್ಣಿಸಲಾಗಿದೆ.

"ಎರಡು ಪಾದಗಳು ಎಳೆಯ ಮಾವಿನ ತಳಿಲಂತೆ
ನಡೆದರಾಗಜ ನೋಡಿ ನನಗೆ ಮಿಗಿಲೆಂಬುವುದು
ನಡುವ ನೋಡುತ ಸಿಂಹ ನಾಚಿ ಬೆರಗಾಗುವುದು
ಕಡಗಬಳೆಕರ ಬಾಳೆದಿಂಡಿನಂತೆ ತೋರುವುದು
ಜಡೆಯ ನೋಡುತ ಸರ್ಪ ಮಡುವ ಸೇರ್ವುದು ಪೋಗಿ
ಉಡುರಾಜ ನೋಡಿ ಮುಖಕಾಂತಿಗೆ ಕಪ್ಪಾದ
ಬಿಳಿ ಮುತ್ತು ಪುಟ್ಟ ಕರಡಿಗೆಯಂಥ ಬಾಯಿಂದ
ನುಡಿದ ಮಾತಿಗೆ ಮರುಳುಗೊಂಡುವಾ ಗಿಳಿವಿಂಡು
ಒಡೆದ ದಾಳಿಂಬ್ರ ಬಾಯ್ಬಿಡಲು ದಂತಕೆ ಹವಳ
ಕುಡಿಯಂತೆ ತುಟಿಕೆಂಪು ಕದಪು ಕನ್ನಡಿಯಂತೆ
ಮುಡಿಯು ಸಂಪಿಗೆ ತೆನೆಯು ಮೂಗು ಮಾಟಕೆ ಬಾಡೆ
ಕಡೆಗಣ್ಣು ಕಮಲದೆಸಳಂತೆ ತಿದ್ದಿದ ಹುಬ್ಬು
ಕಡಲಂತೆ ಗುಮಕ್ಕೊಂದು ಕಡಿಮ್ಯಿಲ್ಲದ್ಹಾಗಿರಲು
ಕಡುಮುದ್ದು ಕಾಮನವ್ವಲ್ಲಭೆಗೆಸಮ ಚೆಲ್ಲಿಕೆಯ
ಸಡಗರದ ಶುಭ ಲಕ್ಷಣವ ಕೇಳಿ ನಳರಾಯ
ಮಡದ್ಯಾಗಲೆನುತ ಮನಸಿಟ್ಟು ದಮಯಂತಿಯಲಿ
ಬಿಡದೆ ಭೀಮೇಶ ಕೃಷ್ಣನ ಬೇಡಿಕೊಳ್ಳುತ್ತಿದ್ದನು"[೧೦]

ಪುಷ್ಕರನು ನಳನನ್ನು ಜೂಜಿಗೆ ಆಹ್ವಾನಿಸುತ್ತಾನೆ. ನಳನು ಕೂಡ ಹಿಂದು ಮುಂದು ನೋಡದೆ ಜೂಜು ಆಡಲು ಸಿದ್ಧನಾಗುತ್ತಾನೆ. ಆದರೆ ದಮಯಂತಿ ನಳನನ್ನು ಜೂಜಿಗೆ ಹೋಗಬೇಡವೆಂದು ತಡೆಯುತ್ತಾಳೆ. ಹಳ್ಳಿಯ ಹೆಂಗಸೊಬ್ಬಳು ಕೆಟ್ಟದಾರಿ ಹಿಡಿದಿರುವ ಅಥವಾ ಹಿಡಿಯುತ್ತಿರುವ ತನ್ನ ಗಂಡನನ್ನು ಸರಿಪಡಿಸುವಂತೆ ಇಲ್ಲಿನ ದಮಯಂತಿ ಕಾಣಿಸುತ್ತಾಳೆ. ಆಕೆ ಪರಿಪರಿಯಾಗಿ ಬೇಡುವುದು ನೋಡಿದರೆ ಪುರಾಣದ ವಸ್ತು ಎನಿಸುವುದಿಲ್ಲ. ಬದಲು ಗ್ರಾಮೀಣ ಜೀವನದ ಬಡಕುಟುಂಬಗಳ ಬದುಕು ನೆನಪಾಗುತ್ತವೆ.

"ಕಾಂತ ಕೇಳು ಗುಣಶಾಂತ ಶ್ರೀಮಂತ ಈ ಪಗಡೆಪಂಥ
ನಿಂತು ಪೇಳುವೆ ಬ್ಯಾಡೋ ಬಲವಂತ ||ಪ||
ಆಡುತಿರಲಾ ಸ್ನೇಹಿತ ಜನರು ಬೇಡೆಂದು ಪೇಳೆ
ನೋಡಲಾರದೆ ಪೋಗೆ ಸಜ್ಜನರು
ಮಾಡಬಾರದ ಕಾರ್ಯವಿದು ಎನುತ ದುರ್ಜನರು ನಗುತ ||೧||
ಪಾಸಿಯಲ್ಲಿ ಪರಮ ಕಷ್ಟವು ಇದರೊಳಗೆ ಒಂದು

[illegible]

ಸಾಸಿವೆಷ್ಟು ಸುಖವು ಹುಟ್ಟದು
ದೇಶಭ್ರಷ್ಟನಾಗಿ ತಿರುಗುವುದು ಲೇಸೆಂದು ತಿಳಿಯೊ ||೨||
ಅಕ್ಕರದಲ್ಲಿ ನೀನು ಹಡೆದಂಥ ಈ ಚಿಕ್ಕಮುದ್ದು
ಮಕ್ಕಳನ್ನು ನೋಡೋ ದಯವಂತ
ದುಃಖ ಭಾಳಾಸ್ವಕ್ತವಾಗುವುದೇ ಕರುಣ್ಣುಟ್ಟದ್ಯೋಯ್ತೊ ||೩||
ಬಲಿಯ ಯಜ್ಞದಿ ಬಂದು ವಾಮನನು ಮೂರ್ಹೆಜ್ಜೆದಾನ
ಕೊಡುವೆನೆನುತಲಿ ಪೇಳ್ದದಾನವನು
ಗುರುವು ಶುಕ್ರಾಚಾರಿ ಮಾತು ಕೇಳದಲೆ ಬಲಿ ಬಲು ಭಂಗಬಟ್ಟನೊ ||೪||
ಮಂದಬುದ್ಧಿ ಹುಟ್ಟಿತೊ ನಿಮಗೆ ಈ ಸೆರಗನೊಡ್ಡಿ
ಬಂದು ಬೇಡಿ ಕೊಂಬೆನೋ ನಿಮಗೆ
ಬಂದು ಭೀಮೇಶ ಕೃಷ್ಣನು ಹೀಗೆಂದು ನಿಮಗಿದ ಪ್ರೇರಿಸಿದನೊ ||೫||"[೧೧]

ದಮಯಂತಿ ಜೂಜಿನ ದುಷ್ಪ್ರತ್ಯವನ್ನು ಹೇಳಿದರೂ ನಳನು ಪುಷ್ಕರನೊಂದಿಗೆ ಆಡಲು ಪ್ರಾರಂಭಿಸುತ್ತಾನೆ. ದಮಯಂತಿಗೆ ದಿಕ್ಕೇ ತೋಚದಂತಹ ಪರಿಸ್ಥಿತಿ ನಿರ್ಮಾಣವಾಗಿಬಿಡುತ್ತದೆ. ನಳನು ಪಗಡೆಯ ಆಟದಲ್ಲಿ ಒಂದೊಂದೇ ಸಂಪತ್ತನ್ನು ಕಳೆದುಕೊಳ್ಳುತ್ತಾನೆ. ಕಳೆದುಕೊಂಡು ವಸ್ತುಗಳನ್ನು ವರ್ಣಿಸುವ ರೀತಿ ಸರಳವಾಗಿದ್ದರೂ ಸುಂದರವಾಗಿ ಮೂಡಿಬಂದಿದೆ. ಏನೆಲ್ಲಾ ಸೋತ ಎಂಬುದನ್ನು ಪಟ್ಟಿಯೇ ನೀಡುತ್ತಾಳೆ. ಮನೆಯ ಸಾಮನಿನಿಂದ ಹಿಡಿದು ವಜ್ರದ ಕಿರೀಟದ ತನಕ ಸೋಲುವುದನ್ನು ಮಾರ್ಮಿಕವಾಗಿ ಕಟ್ಟಿಕೊಡುತ್ತಾಳೆ.

"ಹಂಡ್ಯ ಭಾಂಡ್ಯಗಳೆಲ್ಲ ಸೋತ
ಹಿಂಡು ಗೋವತ್ಸಗಳನ್ನು ಸೋತ
ದಂಡು ಮಾರ್ಬಲ ಸಹಿತ ಕೋಟಿ
ಖಂಡುಗ ಧನ ಧಾನ್ಯವ ಸೋತ ||೧||

ಬೆಳ್ಳಿ ಬಂಗಾರವನು ಸೋತ
ಒಳ್ಳೆ ವಸ್ತ್ರಾಭರಣವ ಸೋತ
ಹಳ್ಳಿಪಳ್ಳಿ ಸಹಿತವಾಗಿ
ಎಲ್ಲ ನಿಷಧ ದೇಶವ ಸೋತ ||೨||

ರಾಜ್ಯ ಲಕ್ಷ್ಮಿಯನ್ನು ಸೋತ
ತೇಜಿ ಗಜ ರಥಗಳನ್ನು ಸೋತ
ರಾಜ ಹಿಡಿವೋ ಛತ್ರಛಾಮರ
ಜೂಜಿನ ಪಟಕಿಟ್ಟು ಸೋತ ||೩||

ಉಪ್ಪರಿಗ್ಯರಮನೆಯ ಸೋತ
ಹತ್ತುವೋ ಸಿಂಹಾಸನ ಸೋತ
ಕಪ್ಪ ಖಜಾನೆಗಳ ಏಳು
ಕೊಪ್ಪರೀಗ್ಹಣ ಹೊನ್ನು ಸೋತ ||೪||

ಕಂಠಿ ಕಂಠಾಭರಣವ ಸೋತ
ಟೊಂಕದುಡಿದಾದುಂಗುರ ಸೋತ
ಒಂಟಿ ಮುತ್ತು ಕರ್ಣ ಕುಂಡಲ
ಕಂಕಣ ಕರಭೂಷಣ ಸೋತ ||೫||

ಹೊದ್ದ ಜರದ ಛಾದರ ಸೋತ
ಮುದ್ರೆಮೋ ಮೊಹ ರುಂಗುರವನು ಸೋತ
ವಜ್ರಬಿಗಿದ ಮುತ್ತಿನ
ಮುಂಡಾಸವ ಪಟಕ್ಕಿಟ್ಟು ಸೋತ ||೬||"[೧೨]

ನಳನು ತನ್ನ ಸಮಸ್ತ ಆಸ್ತಿಯನ್ನು ಜೂಜಿನಲ್ಲಿ ಸೋತ ನಂತರ ಉಟ್ಟಬಟ್ಟೆಯಲ್ಲಿ ದಮಯಂತಿ ನಳ ಕಾಡಿಗೆ ಬಂದರು. ಕಾಡಿನಲ್ಲಿ ಅನೇಕ ಕಷ್ಟಗಳನ್ನು ಎದುರಿಸುತ್ತಿರುವಾಗ ನಳನಿಗೆ ಒಂದು ಉಪಾಯ ಹೊಳೆಯಿತು. ನಾನೊಬ್ಬನೇ ಕಷ್ಟ ಅನುಭವಿಸಬೇಕು ಎಂಬ ತೀರ್ಮಾನಕ್ಕೆ ಬರುತ್ತಾನೆ. ಈ ಕಾಡಿನಲ್ಲಿ ದಮಯಂತಿಯನ್ನು ಒಬ್ಬಂಟಿಯಾಗಿ ಬಿಟ್ಟು ಹೋದರೆ ಅವಳು ತನ್ನ ತವರು ಮನೆಯನ್ನು ಸೇರುತ್ತಾಳೆ ಎಂಬ ಭಾವನೆಯಿಂದ ಹೊರಡಲು ಸಿದ್ಧನಾಗುತ್ತಾನೆ. ಆದರೆ ಮನಸ್ಸು ಡೋಲಾಯಮಾನ ಸ್ಥಿತಿಗೆ ಬರುತ್ತದೆ. ಅವನ ಚಂಚಲ ಚಿತ್ತವನ್ನು ಭೀಮವ್ವನವರು ಸುಂದರ ರೂಪಕದ ಮುಖಾಂತರ ಕಟ್ಟಿಕೊಡುತ್ತಾರೆ.

"ಅತ್ತ ಪೋಗುವ ಇತ್ತಬರುವೋನು ಭರದಿಂದ ಕೋಮಲಾಂಗಿ
ತೊಟ್ಟಿಲು ತೂಗುವಂದದಿ ತಿರುಗ್ಯಾಡುವ ಕೋಮಲಾಂಗಿ"[೧೩]

ತೊಟ್ಟಿಲಿನ ಚಲನೆಯಂತೆ ನಳನು ಮನಸ್ಸು ಆಚೀಚೆ ತುಯ್ಯದಾಡುತ್ತಿದೆ. ಈ ರೀತಿಯ ಸರಳ ರೂಪಕಗಳು ಪಾತ್ರಗಳ ಆಂತರ್ಯವನ್ನು ಅರಿಯಲು ಸಹಾಯಕವಾಗಿವೆ.

ನಳನು ಕಾರ್ಕೋಟಕನಿಗೆ ಸಹಾಯ ಮಾಡಲು ಹೋಗಿ ಅದರಿಂದ ಕಚ್ಚಿಸಿಕೊಂಡು ವಿಕಾರ ರೂಪ ಪಡೆದದ್ದು, ಋತುಪರ್ಣನ ರಾಜ್ಯದಲ್ಲಿ ಬಾಹುಕನಾಗಿ ಕೆಲಸಕ್ಕೆ ಸೇರಿದ್ದು, ನಳದಮಯಂತಿಯರ ಪುನರ್ಮಿಲನದ ಸಂದರ್ಭಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಕುಮಾರವ್ಯಾಸನು ಹೇಗೆ ತನ್ನ ಭಾರತವನ್ನು ಅಧ್ಯಯನ ಮಾಡುವುದರಿಂದ ಹಲವು ಫಲಗಳು ಬರುತ್ತವೆಯೋ ಹಾಗೆಯೇ ನಳಚರಿತ್ರೆಯನ್ನು ಅಧ್ಯಯನದ ಜೊತೆಗೆ ಕೇಳುವುದರಿಂದ ಅನೇಕ ಫಲಗಳು ಬರುತ್ತವೆ ಎಂಬುದನ್ನು ಭೀಮವ್ವನವರು ಸಹ ಹೇಳುತ್ತಾರೆ.

"ಅನ್ನ ಗೋವು ದಾನ ಕನ್ಯಾದಾನ ತೀರ್ಥಯಾತ್ರೆ ಫಲವು
ಇನ್ನು ಈ ಕಥೆ ಕೇಳಿದರೆ ಮನ್ನಿಸಿ ಕೊಡುವನು ಹರಿಯು
ಕಷ್ಟದುರಿತ ಬಂದ್ಹರಿಂದಕಟ್ಟಿಸುತಲಿನ್ನು ಬೇಡಿ
ದಿಷ್ಟ ಫಲವ ಕೊಡುವ ನಳ ಚರಿತ್ರೆಯ ಕೇಳಿದರಿನ್ನು
ಕಲಿಯ ಬಾಧೆಯೊಂಬೋದೇಳು ಜನುಮಜನುಮಕ್ಕು ಬಾರದು
ನಳಕಥೆ ಕೇಳಿದರೆ ಒಲಿವನು ಭೀಮೇಶಕೃಷ್ಣ"[೧೪]

"ಶ್ರೀಹರಿಯ ದಯದಿಂದ ಒಂದುಗೂಡಿದ ನಳದಮಯಂತಿಯರ ಕಥೆಯನ್ನು ಭಕ್ತಿಯಿಂದ ಕೇಳಿದರೆ ಕೆಟ್ಟ ಕಲಿಬಾಧೆ ಬರದು ನಾಶವಾಗುವುದು ಎಂಬ ಫಲಸ್ತುತಿಯೊಡನೆ ಹಾಡು ಮುಗಿಯುತ್ತದೆ. ಈ ನಂಬಿಕೆ ಇಂದಿಗೂ ಅವ್ವನ ಮನೆತನದವರಲ್ಲಿದೆ ಕಷ್ಟ ಬಂದಾಗ ದೇವರಿಗೆ ತುಪ್ಪದ ದೀಪಹಚ್ಚಿಟ್ಟು ನಳಚರಿತ್ರೆ ಹಾಡನ್ನು ಹಾಡುತ್ತಾರೆ."[೧೫]

ಮೂಲ ಕಥೆಗೂ ಭೀಮವ್ವನವರು ರಚಿಸಿದ ಕಥೆಗೂ ಅನೇಕ ವ್ಯತ್ಯಾಸಗಳಿವೆ ಎಂಬುದನ್ನು ಸರಿತಾ ಕುಸುಮಾಕರ ದೇಸಾಯಿಯವರು ಗುರುತಿಸಿದ್ದಾರೆ. ಅವು ಹೀಗಿವೆ.

೧. ದೇವತೆಗಳು ನಳನಿಗೆ ಅದೃಶ್ಯರೂಪಿನಲ್ಲಿ ದಮಯಂತಿಯ ಅರಮನೆಯನ್ನು ಪುಗುವ ವರವನ್ನು ಕರುಣಿಸಿದ ವಿಚಾರವನ್ನು ಅವ್ವನವರು ಕೈಬಿಟ್ಟಿದ್ದಾರೆ.
೨. ದಮಯಂತಿ ಸರಸ್ವತಿಯ ಪೂಜಿಸಿ ತನ್ನ ಪತಿಯ ಗುರತನ್ನು ಅರಿಯದೇ ಸುರರ ಚರಣಕ್ಕೆರಗಿ ಸುಕನ್ಯೆಯ ಕಥೆಯನ್ನು ಹೇಳಿದಳೆಂಬುದು ನಳಚರಿತ್ರೆಯಲ್ಲಿ ಇರುವುದಿಲ್ಲ. ಇದು ಅವ್ವನವರ ಕಲ್ಪನೆ.
೩. ನಳಚರಿತ್ರೆಯಲ್ಲಿ ದಮಯಂತಿ ಗಂಡನಿಗೆ ಬುದ್ಧಿವಾದ ಹೇಳುವ ಪ್ರಸಕ್ತಿ ಇಲ್ಲ. ಆದರೆ ಅವ್ವನವರಲ್ಲಿ ಬುದ್ಧಿ ಮಾತುಗಳು ಸಶಕ್ತವಾಗಿ ಮೂಡಿಬಂದಿವೆ.
೪. ಸಮಾಜದಲ್ಲಿ ಗಂಡ ಅಡ್ಡದಾರಿಯನ್ನು ಹಿಡಿದನೆಂದರೆ ಮೊದಲು ವಿರೋಧಿಸುವಳು ಅವಳ ಹೆಂಡತಿ. ಇಲ್ಲಿಯೂ ಸಹ ದಮಯಂತಿಯು ಗಂಡನಿಗೆ ಎಚ್ಚರದ ನುಡಿಗಳನ್ನು ಹೇಳುತ್ತಾಳೆ. ಸಂಸಾರದ ಭಾರ ಗಂಡನಿಗೆ ತಿಳಿಯದಷ್ಟು ಹೆಂಡತಿಗೆ ಅಥವಾ ಹೆಣ್ಣಿಗೆ ತುಂಬಾ ತಿಳಿದಿರುತ್ತದೆ.

ನಳಚರಿತ್ರೆಯ ಮುಖಾಂತರ ತಿಳಿದು ಬರುವುದೇನೆಂದರೆ ಮೂಲ ಕಥೆಯನ್ನು ನೇರವಾಗಿ ತೆಗೆದುಕೊಂಡರೂ ಮರುರೂಪಣೆಯ ಸಂದರ್ಭದಲ್ಲಿ ಆಗಿರುವ ಹಲವು ಮಾರ್ಪಾಟುಗಳು. ಕವಿಯು ತನ್ನ ಸೃಜನಶೀಲತೆಯನ್ನು ಪಾತ್ರಗಳ ಮೂಲಕ ತರುತ್ತಾನೆ ಎಂಬುದಕ್ಕೆ ಭೀಮವ್ವನವರ ನಳನ ಹೆಂಡತಿಯೇ ಸಾಕ್ಷಿ.

ದುಷ್ಯಂತ ಶಕುಂತಲೆಯರ ಹಾಡು

ಭೀಮವ್ವನವರು ಈ ದೀರ್ಘಹಾಡನ್ನು ರಚಿಸುವುದಕ್ಕೂ ಒಂದು ಹಿನ್ನೆಲೆಯಿದೆ. "ಒಮ್ಮೆ ಶಾಕುಂತಲಾ ಎಂಬ ಕಂಪನಿ ನಾಟಕವನ್ನು ನೋಡಿದ ಅವ್ವನನ್ನು ಮನೆಯಲ್ಲಿ ಯಾರೋ ಅವ್ವ ನೀನೇಕೆ

[illegible]

ಅವರ ಮೇಲೆ ಹಾಡು ಮಾಡಬಾರದು ಎಂದು ಕೇಳಿದ ಮರುದಿನವೇ ಅವ್ವನಿಗೆ ಈ ಹಾಡು ಬಂದಿತೆಂದು ಅವ್ವನ ಮರಿಮಕ್ಕಳಾದ ಶ್ರೀವಿಜಯರಾಯರು ತಿಳಿಸಿರುತ್ತಾರೆ."[೧೬] ಮಹಾಭಾರತದ ಶಾಕುಂತಲೋಪಾಖ್ಯಾನದ ಕಥೆಯೇ ಭೀಮವ್ವನವರಲ್ಲಿ ಶಕುಂತಲೆ ದುಷ್ಯಂತ ಮಹಾರಾಜನ ಹಾಡು ಎಂಬುದಾಗಿ ಮೂಡಿಬಂದಿದೆ. ಭೀಮವ್ವನವರು ೬೧ ಧ್ವನಿಗಳಲ್ಲಿ ದುಷ್ಯಂತ ಶಕುಂತಲೆಯರ ಪ್ರೇಮ, ಶಕುಂತಲೆಯ ಆಶ್ರಮದ ಬದುಕು, ಕಣ್ವರು ಮಗಳನ್ನು ದುಷ್ಯಂತನಲ್ಲಿಗೆ ಕಳಿಸಿಕೊಡುವಾಗ ಸಖಿಯರ ಅಗಲಿಕೆಯ ನೋವು, ದೂರ್ವಾಸರ ಶಾಪ, ನಿಷ್ಠುರ ಮಾತುಗಳಿಂದ ಜರ್ಜರಿತಳಾದ ಶಕುಂತಲೆಯ ಮನಸ್ಥಿತಿ, ಉಂಗುರದ ನೆನಪು ಬಂದು ಮತ್ತೆ ಶಕುಂತಲೆಯನ್ನು ವರಿಸುವ ತನಕ ಅವ್ವ ತನ್ನದೇ ಆದ ಶೈಲಿಯಲ್ಲಿ ರಚಿಸಿದ್ದಾಳೆ. ಭೀಮವ್ವನವರ ಹಾಡಿಗೆ ನಾಟಕದ ಪ್ರಭಾವ ಇರಬಹುದು. ಆದರೆ ಭೀಮವ್ವನವರ ಸ್ವಂತಿಕೆ ಇಲ್ಲವೆನ್ನಲಾಗದು.

ವಿಶ್ವಾಮಿತ್ರ ಮತ್ತು ಮೇನಕೆಯರ ತತ್ಕ್ಷಣದ ಪ್ರೇಮಕ್ಕೆ ಹುಟ್ಟಿದ ಕೂಸೇ ಶಕುಂತಲೆ. ಇಬ್ಬರೂ ಕೂಡ ಹುಟ್ಟಿದ ಕೂಸನ್ನು ಕಾಡಿನಲ್ಲಿಯೇ ಬಿಟ್ಟು ಹೊರಟು ಹೋಗುತ್ತಾರೆ. ನಿಸರ್ಗವೇ ಅನಾಥ ಕೂಸನ್ನು ಸಂತೈಸುವ ಚಿತ್ರಣ ಪರಿಣಾಮಕಾರಿಯಾಗಿ ಮೂಡಿಬಂದಿದೆ.

"ಹಡೆದವರು ಬಿಟ್ಹೋಗೆ ಅಡವಿ ಅರಣ್ಯದಲಿ
ಒಡಲ್ಹಸ್ತು ಒಣಗಿ ಬಾಯಿ ಬಿಡುತ ಸಂತಾಪದಲಿ
ಗಡಗಡನೆ ತಾನಾಗ ಹುಡಿಯಲ್ಲಿ ಹೊರಳುತಲಿ
ದಡದಡನೆ ಕಣ್ಣೀರ ಸುರಿಸುತಲಿ ಅಳುತಿರಲು
ಗಿಡಗಿಡದಿ ಕುಳಿತ ಪಕ್ಷಿಗಳಲ್ಲಿ ನೋಡುತಲಿ
ಹಿಡಿದು ಜೇನುತುಪ್ಪ ತಂದು ಬಾಯೊಳಗ್ಹಾಕಿ
ಗುಡಿಗಟ್ಟಿ ನಿಂತವಾ ಬಿಸಿಲು ಬೀಳದೆ (ದಂತೆ) ಶಿಶುವಿಗೆ"[೧೭]

ಪ್ರಕೃತಿಯ ಮಾನವೀಯ ದೃಶ್ಯವನ್ನು ನೋಡುತ್ತಿದ್ದರೆ ಲಕ್ಷ್ಮೀಶನ ಜೈಮಿನಿ ಭಾರತದ ಸಾಲುಗಳು ನೆನಪಾಗುತ್ತವೆ. ಅಲ್ಲಿಯೂ ಸಹ ಅಣ್ಣನ ಮಾತಿಗೆ ಲಕ್ಷ್ಮಣ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬರುತ್ತಾನೆ. ಸೀತೆಯ ಕಷ್ಟವನ್ನು ನೋಡಿದ ನಿಸರ್ಗ ದುಃಖಭರಿತವಾಗುತ್ತದೆ.

"ಬೀಸಿದುವು ಬಾಲದಿಂ ಚಮರಿಗಳ್ ಚಮರಮಂ
ಪಾಸಿದುವು ಕರಿಗಳೆಳೆದಳಿರ ಮೃದುತಲ್ಪಮಂ
ಸೂಸಿದುವು ಸಾರಸಂಗಳ್ ತಮ್ಮ ಗುರಿಗಳಂ ತೋದು ತಂದಂಬುಗಳನು
ಆ ಸಿರಿಮೊಗಕ್ಕೆ ಬಿಸಿಲಾಗದಂತಾಗಸದೊ
ಳೋಸರಿಸದಂಚೆಗಳೆರಂಕೆಯನಗಲ್ಚಿ ನೆಳ
ಲಾಸೆಗೈದುವು ರಾಘವನ ರಾಣಿ ದುಃಖಸಂತಪ್ತೆಯಾಗಿರುತಿರಲ್ಕೆ"[೧೮]

ಶಕುಂತಲೆಯು ಕಣ್ವರ ಆಶ್ರಮದಲ್ಲಿ ಬೆಳೆಯುತ್ತಾಳೆ. ಕಣ್ವರು ಸಹ ಅಷ್ಟೇ ಪ್ರೀತಿಯಿಂದ, ಮಮತೆಯಿಂದ ಸಾಕುತ್ತಾರೆ. ಶಕುಂತಲೆಯು....

"ದಿನದಿನ ಚಂದ್ರನಂದದಿ ಬೆಳೆಯುತಲಿದ್ದ

ಮಗಳ ನೋಡುತ್ತ ಮಹಾಮುನಿಯು

ಸುಗುಣೆ ನಿನಗೆ ಸುಂದರನಾದ ವರನೆ (ನ ಎ?) ಲ್ಲಿ

ಹುಡುಕಲ್ಯಾಗೆಂದು ಮಿಡುಕುತ"[೧೯]

ಕಡು ರೂಪವತಿಯಾಗಿ ಬೆಳೆಯುತ್ತಿದ್ದಾಳೆ. ಇಂಥ ಚೆಲುವಿಯಾದ ಶಕುಂತಲೆಗೆ ಸುಂದರನಾದ ವರನನ್ನು ಎಲ್ಲಿಂದ ತರುವುದು ಎಂಬುದಾಗಿ ಕಣ್ವರು ಸಹ ಚಿಂತಿತರಾಗಿದ್ದಾರೆ.

ಇತ್ತ ದುಷ್ಯಂತರಾಜನು ಬೇಟೆಯಾಡುತ್ತಾ ಬರುತ್ತಿದ್ದಾನೆ. ಆಗ ಚಿಗರೆಯೊಂದು ಪ್ರಾಣಾಪಾಯದಿಂದ ತಪ್ಪಿಸಿಕೊಳ್ಳಲು ದಿಕ್ಕೆಟ್ಟು ಓಡುತ್ತದೆ. ಭೀಮವ್ವನವರು ಆ ಸಂದರ್ಭವನ್ನು ಸಶಕ್ತವಾಗಿ ಸೆರೆಹಿಡಿಯುತ್ತಾರೆ.

"ಅಡವಿಯಲ್ಲಾಭರ್ಟಿಸುತ ಒಂದು ಚಿಗರಿಯು

ಹೊಡೆವೋನೆನುತ ತಾನು ಎದೆಯೊಡೆದು ಓಡಿತು

ಅರ್ಧದೇಹದೊಳಗೆ ಅರ್ಧದೇಹ ಅಡಗಿಸಿ

ಉಬ್ಬಿಸೆದೆಯ ಅಗಲ ಮಾಡಿಕೊಂಡು ಓಡುತು

ಹುಲ್ಲುತಿಂದು ತಿರುಗಿ ಬಾಯಲ್ಲಿ ಜಗಿಯದೆ

ಅಲ್ಲಿಳುತ ಉಗುದಲ್ಲೆ ನೋಡುತ ಓಡಿತು"[೨೦]

ಕಥೆಯ ವಿಸ್ತಾರಕ್ಕೆ ಬೇಕಾದ ಸಣ್ಣ ಸಣ್ಣ ವಿವರಗಳನ್ನು ಸಹ ಭೀಮವ್ವನವರು ಅತ್ಯಂತ ಜಾಗರೂಕತೆಯಿಂದ ವರ್ಣಿಸುತ್ತಾರೆ.

ಹೀಗೆ ಶಕುಂತಲೆಯು ಸಖಿಯರೊಂದಿಗೆ ವನಕ್ಕೆ ಬರುವುದಕ್ಕೂ, ದುಷ್ಯಂತ ಬೇಟೆಯಾಡುತ್ತ ಶಕುಂತಲೆ ಇದ್ದ ಸ್ಥಳಕ್ಕೆ ಬರುವುದಕ್ಕೂ ಸರಿಯಾದ ಸಮಯ ಕೂಡಿಬರುತ್ತದೆ. ಶಕುಂತಲೆಯ ರೂಪವನ್ನು ಕಂಡು ಮೋಹಿತನಾಗುತ್ತಾನೆ. ಅಲ್ಲಿಯೇ ಅವಳನ್ನು ಗಾಂಧರ್ವ ವಿವಾಹ ಆಗುತ್ತಾನೆ. ಅವರೀರ್ವರ ಪ್ರೇಮದ ಫಲವಾಗಿ ಕೂಸೊಂದು ಜನಿಸುತ್ತದೆ. ಆ ಕೂಸಿಗೆ ಭರತನೆಂದು ನಾಮಕರಣ ಮಾಡುತ್ತಾರೆ. ಕಣ್ವರು ಸಾಕು ಮಗಳಾದ ಶಕುಂತಲೆಯನ್ನು ದುಷ್ಯಂತನ ರಾಜ್ಯಕ್ಕೆ ಕಳುಹಿಸಿಕೊಡುತ್ತಾರೆ.

ದೂರ್ವಾಸರ ಶಾಪದಿಂದಾಗಿ ದುಷ್ಯಂತ ಎಲ್ಲವನ್ನು ಮರೆಯುತ್ತಾನೆ. ಶಕುಂತಲೆಯು ಪರಿಪರಿಯಾಗಿ ಬೇಡಿದರೂ ಸಹ ಅವನು ಸ್ವೀಕರಿಸುವುದಿಲ್ಲ. ನೀನು ಶಕುಂತಲೆ ಎಂಬುದಕ್ಕೆ ಗುರುತು ಏನೆಂದು ಕೇಳುತ್ತಾನೆ. ಪ್ರೇಮದ ಸಂದರ್ಭದಲ್ಲಿ ಕೊಟ್ಟಿದ್ದ ಉಂಗುರವನ್ನು ಕಳೆದುಕೊಂಡಿರುತ್ತಾಳೆ. ಸಂವಾದ ನಡೆಯುವ ಸಂದರ್ಭದಲ್ಲಿ ಜಾಲಗಾರನೊಬ್ಬ ತನಗೆ ದೊರೆತ ಉಂಗುರವನ್ನು ತಂದುಕೊಡುತ್ತಾನೆ. ಆ ಉಂಗುರದ ದೆಸೆಯಿಂದಾಗಿ ಹಿಂದಿನ ವೃತ್ತಾಂತವೆಲ್ಲ ನೆನಪಿಗೆ ಬರುತ್ತದೆ. ಆದರೆ ಶಕುಂತಲೆಯು ಸಿಟ್ಟುಮಾಡಿಕೊಂಡು ತನ್ನ ದುಸ್ಥಿತಿಯನ್ನು ಹಳಿಯುತ್ತಾಳೆ. ಜೊತೆಗೆ ಭೀಮೇಶ ಕೃಷ್ಣನಲ್ಲಿ ಅನುನಯದಿಂದ ಬೇಡಿಕೊಳ್ಳುತ್ತಾಳೆ.

"ಸಿಟ್ಟಿನಿಂದೆದ್ದ [ಳು] ಶಕುಂತಲೆ ತನ್ನ
ಹೊಟ್ಟೆಯೊಳಗೆ ರೋಷ ಹುಟ್ಟಿತು ಭಾಳ ||ಪ||

ದೊರೆಗೆ ಕರುಣಬಾರದ್ಹೋಯಿತು ನಮ್ಮ ಸ
ರ್ವ ಋಷಿಗಳ ದಯ ತಪ್ಪಿತು ನಮಗೆ
ಕರೆದು ಮನ್ನಿಸುವೋರ್‍ಯಾರಿಲ್ಲೀಗ
ಸುರದೇವತೆಗಳು ಸುಮ್ಮನೆ ನೋಡುತಿಹರು ||೧||

ತಂದೆ ಮಂದಿರಕೆ ನಾ ಹೋದರೆ ಇನ್ನು
ಸಂದೇಹ ಹುಟ್ಟಿ ಏನೆಂಬನೊ ತಾನು
ಮುಂದೆ ಕಾನನಕೆ ಪೋಗುವೋಣ ಅಗ್ನಿ
ಕೊಂಡವ ಮಾಡಿ ಬಿಡುವೊಣೇ ಪ್ರಾಣವನು ||೨||

ಕಾಮಮೋಹಗಳಿಂದ ಎನ್ನ ಮಾಡಿಕೊಂಡಾ
ಪತಿಯೆ ತಾನು ಮರೆತನೊ ಇನ್ನಾ
ಭೀಮೇಶಕೃಷ್ಣ ಮುನ್ನ ತಾ
ದಯಮಾಡಿ ಸಲಹಬೇಕೊ ಎನ್ನ"[೨೧] ||೩||

ತನ್ನ ಗಂಡನೇ ನಂಬುತ್ತಿಲ್ಲವೆಂದು ಗೋಳಿಡುತ್ತಾಳೆ. ತನಗೆ ಯಾರು ದಿಕ್ಕು ಎಂದು ಯೋಚಿಸುವ ಸಂದರ್ಭದಲ್ಲಿ ಅಶರೀರವಾಣಿಯು ದುಷ್ಯಂತ ರಾಜನಿಗೆ ಹೀಗೆ ಹೇಳುತ್ತದೆ.

"ಪೊಡವಿಗೊಡೆಯನೆ ದುಷ್ಯಂತನೆ ಕೇಳು ನಿನ್ನ
ಮಡದಿ ಹೌದೀಕೆ ನೀ ಮಾಡಿಕೊಂಡದ್ದ್ಹೌದು
ಪಡೆದ ಸುತ ಹೌದು ನೀ ಕೊಡು ರಾಜ್ಯ ಪಟ್ಟವನು
ದೃಢವಾದ ವಾಕ್ಯ ದೇವತೆಗಳೆಲ್ಲರು ಸಾಕ್ಷಿ
ನುಡಿದ ಆಕಾಶವಾಣಿಯು ಕೇಳುತ್ತಾ ರಾಜ
ಕಡು ಹರುಷದಿಂದೆದ್ದನು"[೨೨]

ಫಲಸ್ತುತಿಯೊಂದಿಗೆ ಹಾಡು ಮುಗಿಯುತ್ತದೆ. "ಕಣ್ವರಿಗೆ ಶಕುಂತಲೆಯ ವಿವಾಹವಾಗಿ ಆಕೆ ಗರ್ಭಿಣಿಯಾಗಿರುವ ವೃತ್ತಾಂತ ಆಕಾಶವಾಣಿಯ ಮೂಲಕ ತಿಳಿಯುವುದು, ದುಷ್ಯಂತನಿಂದ ತಿರಸ್ಕೃತಳಾದ ಶಕುಂತಲೆಯನ್ನು ಮೇನಕೆ ಕರೆದೊಯ್ಯುವುದು, ಶಕುಂತಲೆಯ ಮಗನಿಗೆ ಸರ್ವದಮನನೆಂದು ಹೆಸರಿಸುವುದು, ದುಷ್ಯಂತ ಶಕುಂತಲೆಯರ ಪುನರ್ಮಿಲನ ಮಾರೀಚಾಶ್ರಮದಲ್ಲಿ ಆಗುವುದು ಈ ಕೆಲವು ಕಾಳಿದಾಸನ ನಾಟಕದ ಕೆಲವು ಅಂಶಗಳನ್ನು ಅವ್ವ ಕೈ ಬಿಟ್ಟಿದ್ದಾಳೆ. ಅದರಿಂದ ಅವ್ವನ ಕಥಾ ನಿರೂಪಣೆ ಇನ್ನೂ ಸರಳ ಸುಲಭ ನೇರವಾಗಿ ಪರಿಣಮಿಸಿದರೂ ಸೊಗಸು ಕುಂದಿದೆ"[೨೩] ಎನ್ನುವ ಟಿ.ಎಸ್.ನಾಗರತ್ನ ಅವರ

ವಿಚಾರವನ್ನು ತಳ್ಳಿ ಹಾಕಲಾಗದು. ಆದರೆ ಇಡೀ ಹಾಡಿನಲ್ಲಿ ಭೀಮವ್ವನವರ ಸ್ವಂತಿಕೆ ಪ್ರಭೆ ಪ್ರಖರವಾಗಿಯೇ ಮೂಡಿಬಂದಿದೆ. ಪ್ರಕೃತಿಯ ಚಿತ್ರಣವಂತೂ ಬಹು ಸೊಗಸಾಗಿ ಮೂಡಿಬಂದಿದೆ. ಅವ್ವನ ಈ ಕಾವ್ಯದಲ್ಲಿ ಮಿತಿಯಿರಬಹುದು. "ಸೊಗಸು ಕುಂದಿದೆ" ಎನ್ನುವ ಮಾತು ಸಲ್ಲದು.

ಮುಯ್ಯದ ಹಾಡು

ಮುಯ್ಯ ಅಥವಾ ಉಡುಗೊರೆ ನೀಡುವುದು ಅಭಿಮಾನದ ಸಂಕೇತ. ಮುಯ್ಯ ನೀಡುವುದು ಏಕಮುಖ ಕ್ರಿಯೆಯಲ್ಲ. ಹೆಣ್ಣಿನ ಕಡೆಯವರು ಗಂಡಿಗೆ, ಗಂಡಿನ ಕಡೆಯವರು ಹೆಣ್ಣಿಗೆ ಮದುವೆ ಸಂದರ್ಭದಲ್ಲಿ ಉಡುಗೊರೆ ನೀಡುವುದು ವಾಡಿಕೆ. ಸ್ನೇಹಿತರು, ಬಂಧು-ಬಾಂಧವರು, ಪರಿಚಿತರು ಮುಯ್ಯ ಕೊಡುವ ಮತ್ತು ತೆಗೆದುಕೊಳ್ಳುವ ಬಗೆಯನ್ನು ಕಾಣಬಹುದು. ವಯಸ್ಸಿನ ಮಿತಿಯಿಲ್ಲ ಅಭಿಮಾನದ ಆಧಾರವೇ ಇಲ್ಲಿ ಮುಖ್ಯವೆನಿಸುತ್ತದೆ. ಅಂಥ 'ಮುಯ್ಯ'ದ ಕ್ರಿಯೆಗೆ ಈ ಹಾಡು ಸಂಬಂಧಿಸಿದೆ. ಕೃಷ್ಣನ ಹೆಂಡತಿಯರು ಕುಂತಿಯ ಸೊಸೆಯರಿಗೆ ಮುಯ್ಯ ಕೊಡುವ, ತೆಗೆದುಕೊಳ್ಳುವ ಸಂದರ್ಭವೇ ಈ ಹಾಡಿನ ವಸ್ತುವಾಗಿ ಮೂಡಿಬಂದಿದೆ.

೮೨ ಧ್ವನಿಗಳಲ್ಲಿ ಈ ಹಾಡು ಮೂಡಿದ್ದು, ಕೃಷ್ಣನ ಸಹಿತ ರಾಣಿಯರು ಹಸ್ತಿನಾವತಿಗೆ ಬರುವುದರ ತನಕ ವೈಯಾರ, ಗುರುಡನ ಅಲಂಕಾರ, ಗಂಧರ್ವರ ಗಾಯನ, ಗಜದ ಮೇಲೇರಿ ಬರುವ ಹಣ್ಣು ಹಂಪಲುಗಳು, ಭಕ್ಷಭೋಜ್ಯಗಳ ಎಲ್ಲ ವಿವರಗಳು ಸೊಗಸಾಗಿ ಮೈದಾಳಿವೆ.

ಮುಯ್ಯದ ಹಾಡಿನಲ್ಲಿ ಬಹುಮುಖ್ಯವಾದ ಅಂಶವೆಂದರೆ ಮಾತಿನ ವಾಗ್ವಾದ. ಮಾತಿನ ವಾಗ್ವಾದ ನಿಂದನೆಯಾಗಿ ಮೂಡಿದ್ದರೂ ಪಾತ್ರ-ಪಾತ್ರಗಳ ನಡುವಿನ ಬಾಂಧವ್ಯವನ್ನು ತೋರಿಸಿಕೊಡುತ್ತದೆ.

ದ್ರೌಪದಿ ದೇವಿಯರು ರುಕ್ಮಿಣಿ ಮತ್ತು ಸತ್ಯಭಾಮೆಯನ್ನು ಛೇಡಿಸುವುದು ಹೃದ್ಯವಾಗಿದೆ. ಘಟಿಸಿ ಹೋದ ಘಟನೆಗಳ ಹಿನ್ನಲೆಯಲ್ಲಿ ಛೇಡಿಸುವ ಸಂದರ್ಭವನ್ನು ಕಾಣಬಹುದು.

"ಶತ್ರು ಮರ್ದಕನ ನೀ ಕೊಟ್ಟೆಯ ದಾನವ
ಪಟ್ಟದರಸಿ ಮನದಿಷ್ಟವೆ ಸಖಿಯ
ಪಟ್ಟದರಸಿ ಮನೋಭೀಷ್ಟವೆ ರುಕ್ಮಿಣಿ
ಸಿಟ್ಟು ಮಾಡದೆ ನಿನ್ನ ಬಿಡುವೋಳೆ ಸಖಿಯ ||೧||

ಅರಿಯ ಮರ್ದಕ ನರಹರಿಯ ದಾನವಕೊಟ್ಟೆ
ಸರ್ವಜನರ ಸನ್ಮತವೇನೆ ಸಖಿಯ
ಸರ್ವಜನರ ಸನ್ಮತವೇನೆ ರುಕ್ಮಿಣಿ
ತಿರುಗಿ ಕೋಪಿಸದೆ ಬಿಡುವಲೆ ಸಖಿಯ ||೨||

ಭರಣಭಂಡಾರ ತಕ್ಕಡಿಲಿಟ್ಟು ತೂಗುತ
ಶರಣರಕ್ಷಕ ನೀಲವರಣನ ಸರಿಯೆ

ಶರಣರಕ್ಷಕ ನೀಲ ವರಣನ ಸರಿಗೆ ಸು
ವರಣವು ನಿನಗೆ ದೊರೆಯದೆ ಸಖಿಯೆ ||೩||

ಒಂದು ತುಳಸೀದಳ ತಂದು ತಕ್ಕಡಿಲಿಟ್ಟ
ಬಂದಿತೆ ನಿನಗೆ ಅಪಕೀರ್ತಿ ಸಖಿಯೆ
ಬಂದಿತೆ ನಿನಗೆ ಅಪಕೀರ್ತಿ ನಾರದ ಈ
ನ್ನೆಂದು ನಿಮ್ಮದಾನ ಹಿಡಿಯನೆ ಸಖಿಯೆ"[೨೪] ||೪||

ಕೃಷ್ಣನು ಪ್ರೀತಿಯಿಂದ ಅರ್ಜುನನ್ನು ಛೇಡಿಸುತ್ತಾನೆ. ಇಲ್ಲಿ ಛೇಡಿಸುವ ಭಾಷೆಯು ಕೂಡ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಆದರೂ ಅರ್ಜುನ ಮತ್ತು ಕೃಷ್ಣರಲ್ಲಿ ಅಭೇದ್ಯವಾದ ಬಾಂಧವ್ಯವಿದೆ.

"ತಂಗಿ ದ್ರೌಪದಿಯಂಥ ಗುಣವು ಲೋಕದೊಳಿಲ್ಲ
ಷಂಡ ನಿನ್ನಂಥ ಪುರುಷಿಲ್ಲ ಸುಮ್ಮನೆ ನಿಲ್ಲೊ
ಷಂಡ ನಿನ್ನಂಥ ಪುರುಷರಿಲ್ಲೆನುತಲಿ
ಕೊಂಡಾಡಿ ಜನರು ನಗುತಾರೆ ಸುಮ್ಮನೆ ನಿಲ್ಲೊ
ಅತ್ತೆಯ ಉದರದಲ್ಹುಟ್ಟತಕ್ಕವನಲ್ಲ
ಕೃಷ್ಣೆಸುಭದ್ರೆಗ್ವರನಲ್ಲ ಸುಮ್ಮನೆ ನಿಲ್ಲೊ
ಕೃಷ್ಣೆ ಸುಭದ್ರೆಗ್ವರನಲ್ಲ ಬ್ರಹ್ಮನು ನಿನ್ನ
ಸೃಷ್ಟಿ ಮಾಡಿದನು ನಮಗಾಗೆ ಸುಮ್ಮನೆ ನಿಲ್ಲೊ"[೨೫]

ಕೃಷ್ಣನ ಮಾತಿಗೆ ಮರುನುಡಿಯಾಗಿ ಅರ್ಜುನ ಹೀಗೆ ಹೇಳುತ್ತಾನೆ.

"ಪಂಥವ್ಯಾತಕೊ ಕೃಷ್ಣ ಪಂಥವ್ಯಾತಕೊ
ಪಂಥವ್ಯಾತಕಯ್ಯ ನಿಮಗೆ ಪಂಚಪಾಂಡವರ ಕೂಡ
ನಿಂತುಗೋವ್ಗಳನ್ನು ಕಾಯುವಂಥ ಗೋಪಾಲಕರಿಗೆಲ್ಲ
ಪಂಥವ್ಯಾತಕೊ ಕೃಷ್ಣ ಪಂಥವ್ಯಾತಕೊ
ಆವುಪಾಲ ಗೋವುಪಾಲ ಆಕಳಪಾಲಕರು
ನಮ್ಮ ಕುಲಕ್ಕೆ ಸರಿಯೆ ನೀವು ಗೋಕುಲದ ಗೊಲ್ಲಕೃಷ್ಣ
ಹಾಸಿಕೆಲ್ಲಹ್ವಾ (ದೆ ಹಾ?) ವಿನಲಿ ಸಾಸಿರ ಫಣೆಣೆಯಲಿ ಶಯನ
ಬೇಸರದೆ ಭೀಮೇಶಕೃಷ್ಣ ನೀ ಸಮುದ್ರವಾಸ ಮಾಡಿದಿ"[೨೬]

ಬಹುಹೊತ್ತಿನ ತನಕ ಇಬ್ಬರಲ್ಲಿಯೂ ಅವರವರ ಗುಣಾವಳಿಗೆ ತಕ್ಕಂತೆ ಮೂದಲಿಕೆಯ ಕಾರ್ಯಕ್ರಮ ನಡೆಯುತ್ತದೆ. ಮುಯ್ಯದ ಕಾರ್ಯಕ್ರಮ ನೋಡಲು ಬಂದವರು ಸಹ ಮುಯ್ಯದ ವಸ್ತುಗಳಲ್ಲಿ ಪಾಲು ಪಡೆಯುತ್ತಾರೆ. ಮುಯ್ಯದ ವಸ್ತುಗಳು ಬಹು ಸಿರಿತನದಿಂದ, ಸೊಗಸಿನಿಂದ ಕೂಡಿವೆ ಎನ್ನುವುದಕ್ಕೆ ಈ ಕೆಳಗಿನ ಪದ್ಯಗಳ ಉದಾಹರಣೆಗಳೇ ಸಾಕ್ಷಿ. ಪಾಂಡವರು ಕೃಷ್ಣನ ಕಡೆಯವರಿಗೆ ಕೊಡುವ ಸಂದರ್ಭ.

“ಜಾಂಬೂನದಂಬರ ನಿನಗೆ ತಂದೆವು ಸ್ವಾಮಿ
ಜಾಂಬವಂತೀಶ ಉಡುಬಾರೊ
ಜಾಂಬವಂತೀಶ ಉಡುಬಾರೊ ನಮಗಿನ್ನು
ಇಂಬು ವೈಕುಂಠದಲ್ಲಿ ಕೊಡುಬಾರೊ ಕೃಷ್ಣ ||೧||

ವಜ್ರಮಾಣಿಕ್ಯದ ಹೊಸವಂಕಿ ಕಂಕಣ ಚೊಡ್ಯ
ಪ್ರಜ್ವಲಿಸುತಿರುವಂಥ ಹರಳುಪಂಜರದ್ವಾಲೆ
ಹೆಚ್ಚಿಗಲೆವೊ ಪೀತಾಂಬರವು ಗೆಜ್ಜೆ ಸರಪಳಿ
ರುಕ್ಮೀಣಿ ದೇವೇರಿಗುಡುಗೊರೆ ಕೃಷ್ಣ ||೨||

ಪಚ್ಚ ಮಾಣಿಕ್ಯದ ಹೊಸವಂಕಿ ಬಾಜೂಬಂದು
ಅಚ್ಚ ಮುತ್ತಿನ ದಂಡೆ ರತ್ನ ಪಂಜರದ್ವಾಲೆ
ಪಟ್ಟೆಗ್ಹೊಳೆವಂಥ ಜರತಾರಿ ಪೀತಾಂಬರವು
ಸತ್ಯಭಾಮ್‌ದೇವಿಗುಡುಗೊರೆ ಕೃಷ್ಣ ||೩||

ರತ್ನಮಯವಾದ ರಾಗಟೆ ಚೌರಿ ಕ್ಯಾದಿಗೆಯು
ಅಚ್ಚಮುತ್ತಿನ ದಂಡೆ ಅರೆಚಂದ್ರ ಶಿಸಪೂವು (?)
ಜತ್ತಾದ ಜಡೆಯಬರಿಗಾರ ಪೀತಾಂಬರವು
ಅಷ್ಟಮ ಸತಿಯರಿಗುಡುಗೊರೆ ಕೃಷ್ಣ ||೪||

ಜರ ಕಮಲದ್ವೊಡ್ಯಾಣ ಚೆಲುವ ತಾಯಿತ ಮುತ್ತು
ಸರಿಗೆ ಕಟ್ಟಾಣಿ ನಾಗಮುರಿಗೆಗೊಪ್ಪುವ ಕುಬುಸ
ವರವಜ್ರಧಾಭರಣ ಹರಿಯ ಹದಿನಾರು ಸಾ
ವಿರ ಮಂದಿ ಸತಿಯರಿಗುಡುಗೊರೆ ಕೃಷ್ಣ”[೨೭] ||೫||

ಭೀಮವ್ವನವರ ಕಥನ ಶಕ್ತಿ ಅಥವಾ ನಿರೂಪಣ ಶಕ್ತಿ ದೊಡ್ಡದೆಂಬುದಕ್ಕೆ ಈ ಮುಯ್ಯದ ಹಾಡೇ ಸಾಕ್ಷಿ. ಮುಯ್ಯ ಕೊಡುವ ಕ್ರಿಯೆಯನ್ನು ಲಘುವಾಗಿ ಮುಗಿಸಬಹುದಿತ್ತು. ಆದರೆ ಮುಯ್ಯ ಕೊಡುವ ಮತ್ತು ತೆಗೆದುಕೊಳ್ಳುವ ನೆವದಲ್ಲಿ ಪಾತ್ರಗಳ ಮನಸ್ಸಿನ ಚಿತ್ರಣ, ದಶಾವತಾರದ ಚಿತ್ರಣ, ಆಭರಣ, ಉಡುಗೆ-ತೊಡುಗೆಯ ವಿವರಗಳನ್ನು ಸಹಜವಾಗಿ ಹೇಳಿದ್ದಾಳೆ. ಇಲ್ಲಿನ ಮುಯ್ಯ ಬಾಂಧವ್ಯದ ಆತ್ಮೀಯತೆಯ ಸಂಕೇತವಾಗಿದೆ.

ಪತಿದಾನ ಕೊಟ್ಟಹಾಡು

ಹರಿವಂಶ ಪುರಾಣದಲ್ಲಿರುವ ಕೃಷ್ಣದಾನವ್ರತ ಕತೆಯನ್ನು ಭೀಮವ್ವ ‘ಪತಿದಾನ ಕೊಟ್ಟಹಾಡು’ ಎಂಬುದಾಗಿ ರಚಿಸಿದ್ದಾಳೆ. ಸತ್ಯಭಾಮೆಗೆ ಕೃಷ್ಣನ ಮೇಲೆ ಹುಸಿಗೋಪವಿದೆ. ರುಕ್ಮಿಣಿಯ ಸದನದಲ್ಲಿಯೇ

ವಾಸವಾಗಿರುತ್ತಾನೆಂದು. ಆದ್ದರಿಂದ ಕೃಷ್ಣ ಯಾವಾಗಲೂ ತನ್ನ ಬಳಿಯಲ್ಲಿಯೆ ಇರಬೇಕೆಂಬುದಾಗಿ ಯೋಚಿಸಿ ಕೃಷ್ಣನನ್ನು ನಾರದರಿಗೆ ದಾನವಾಗಿ ನೀಡುತ್ತಾಳೆ. ಆದರೆ ರುಕ್ಮಿಣಿಯು ಅಲ್ಲಿಗೆ ಬಂದು ಕೇವಲ ಒಂದು ದಳ ತುಳಸೀದಳವನ್ನು ನಾರದರಿಗೆ ಕೊಟ್ಟು ಪುನಃ ಕೃಷ್ಣನನ್ನು ಪಡೆಯುತ್ತಾಳೆ. ಈ ಸಂದರ್ಭದಲ್ಲಿ ನಾರದರ ತುಂಟತನ, ತಾಯಿ ದೇವಕಿಯ ಕಳವಳ ಸಂದರ್ಭೋಚಿತವಾಗಿ ಮೂಡಿಬಂದಿದೆ.

ಸತ್ಯಭಾಮೆ ಸಿಂಗರಿಸಿಕೊಂಡು ಕೃಷ್ಣನನ್ನು ಹುಡುಕುತ್ತಾ ಬರುತ್ತಿರುವಾಗ ರುಕ್ಮಿಣಿ ಮತ್ತು ಕೃಷ್ಣ ಪಗಡೆಯಾಡುತ್ತಾ ಕುಳಿತಿರುವುದನ್ನು ನೋಡಿ ಮುನಿಸಿಕೊಳ್ಳುತ್ತಾಳೆ. ರುಕ್ಮಿಣಿಯನ್ನು ಹಳಿಯುವುದರ ಮುಖಾಂತರ ಕೃಷ್ಣನಿಗೂ ಮಾತಿನ ಪೂಜೆ ಮಾಡುತ್ತಾಳೆ.

"ದಿಟ್ಟೆ ರುಕ್ಮಿಣಿ ಮಂದಿರ ಬಿಟ್ಟು ಬರುವುದಕೆ
ಹುಟ್ಟಲೊಲ್ಲದುಯೇನೊ ಮನಸು ಮಾಧವನೆ
ಹೆಚ್ಚಿನರಸಿಯು ಈಗ ಮೆಚ್ಚು ಮಾಡಿದಳೊ
ಹುಚ್ಚು ಹಿಡಿಸಿದೆಳೇನೊ ಅಚ್ಯುತ ನಿನಗೆ
ಅತ್ತಿತ್ತ ಪೋಗದಂದದಲಿ ರುಕ್ಮಿಣಿಯು
ಮತ್ತೇನು ತೈಲ ನಿನ ನೆತ್ತಿಗೂರಿದಳೊ
ಓಲೆ ಬರೆದೊಲಿಸಿಕೊಂಡವರಲ್ಲಿ ಸ್ನೇಹ
ಮಾಡಿದಿರೆ ಜನರೆಲ್ಲ ನೋಡಿ ನಗುವರು
ಅಣ್ಣ ರುಕುಮನ ಮೋರೆಗೆ ಪನ್ನಿಚಿತ್ರವನು ಈಕೆ
ಬಣ್ಣ ಗಾರ್ತಿ ನೋಡೊ ಭಾಳ ಸಂಪನ್ನೆ
ವಲ್ಲಿ ಸೆರಗಲಿ ಕಟ್ಟಿಸಿ, ಬೆಲ್ಲ ಜೀರಿಗೆಯ ಈಕೆ
ಒಲ್ಲದೆ ಶಿಶುಪಾಲನ ಓಡಿ ಬಂದವಳು
ಒತ್ತೆಯಿಟ್ಟವರ್‍ಯಾರೀ ವನಜಾಕ್ಷಿಗೆ ನಿನ್ನ
ಕೊಟ್ಟೀಗ್ಹಣಗಳ ನಾನು ಬಿಡಿಸಿಕೊಂಬುವೆನು
ಮಾರುಗೊಂಡತೀಕೆಯ ಮನೆ ಸೇರಿದಿ ಮತ್ತೆ ಹದಿ
ನಾರು ಸಾವಿರ ಮಂಡ್ಯೊದರುವೋರೀಕೆಯ ಸುತ್ತ"[೨೮]

ಹೀಗೆ ಕೃಷ್ಣ, ರುಕ್ಮಿಣಿಯರಿಗೆ ಬೈಯುತ್ತಾ ಸತ್ಯಭಾಮೆಯು ತನ್ನ ಸದನಕ್ಕೆ ಬಂದಳು. ಸತ್ಯಭಾಮೆಯು ಹೋದ ಬಿರುಸನ್ನು ಕಂಡ ಕೃಷ್ಣ ಭಯಭೀತನಾಗಿದ್ದಾನೆ. ಏನು ಮಾಡುವುದೆಂದು ತೋಚದೆ ಮಲಗಿದ್ದಾನೆ. ಅಲ್ಲಿಗೆ ನಾರದರು ಬಂದು ಎಲ್ಲರ ಯೋಗಕ್ಷೇಮವನ್ನು ವಿಚಾರಿಸಿದರು. ಜೊತೆಗೆ 'ಕ್ಷೇಮವೇ ರಂಗ ಕ್ಷೇಮವೆ' ಎಂದು ಕೃಷ್ಣನನ್ನು ಸಹ ವಿಚಾರಿಸಿದ. ರುಕ್ಮಿಣಿ ಮತ್ತು ತಾನು ಆಟ ಆಡುತ್ತಿರುವಾಗ ಸತ್ಯಭಾಮೆ ಬಂದ ವಿಷಯ, ಅವಳ ಮನೋ ಇಂಗಿತದ ಭಾವವನ್ನು ಹೇಳುತ್ತಾನೆ. ಆಕೆಯು ಮತ್ತೆ ನನಗೆ ಸಿಗುವಂತೆ ಮಾಡು ಎಂದು ನಾರದರಲ್ಲಿ ದೈನ್ಯದಿಂದ ಬೇಡಿಕೊಳ್ಳುತ್ತಾನೆ.

"ಬೇಡಿದ್ದು ಕೊಡುವೆ ನಿನಗೆ ಹಣ ಹೊನ್ನು
ಭಾಳ ಮಾಣಿಕ್ಯ ರತ್ನಾಭರಣಗಳನ
ವ್ಯಾಳ್ಯ ಮಾಡಲಾಗದು ಎನ್ನ ಮಾತೆಂದು
ಹೇಳಿಕೊಂಡನು ಭೀಮೇಶ ಕೃಷ್ಣನು ಬಂದು"[೨೯]

ಸತ್ಯಭಾಮೆಯ ವರ್ತನೆ ಕೃಷ್ಣನಲ್ಲಿ ಕಂಗೆಡುವಂತೆ ಮಾಡಿದೆ. ಆದ್ದರಿಂದ ಕೃಷ್ಣನು ಸಂಪೂರ್ಣವಾಗಿ ನಾರದರಿಗೆ ಮೊರೆ ಹೋಗಿದ್ದಾನೆಂದು ತಿಳಿಯಬಹುದು.

ನಾರದರು ಸತ್ಯಭಾಮೆಯ ಸದನಕ್ಕೆಬಂದು, ಕುಶಲೋಪರಿಗಳನ್ನು ವಿಚಾರಿಸಿದರು. ಕೃಷ್ಣನನ್ನು ವಶೀಕರಿಸಿಕೊಳ್ಳುವ ಉಪಾಯವೊಂದು ಹೇಳುತ್ತೇನೆಂದು ಕೃಷ್ಣನನ್ನು ದಾನ ಮಾಡಿಬಿಡು ಎಂದು ಹೇಳಿದನು. ಕೃಷ್ಣನ ಮೇಲಿನ ಅತಿ ವ್ಯಾಮೋಹಕ್ಕೆ ಬಿದ್ದು ದಾನ ನೀಡಲು ಒಪ್ಪುತ್ತಾಳೆ. ಕೃಷ್ಣನನ್ನು ಅಲಂಕರಿಸಿ ದಾನ ನೀಡಲು ಮುಂದಾಗುತ್ತಾಳೆ. ಮೊದಲಿಗೆ ಬ್ರಾಹ್ಮಣರನ್ನು ಕರೆದು ಕೃಷ್ಣನನ್ನು ದಾನರೂಪದಲ್ಲಿ ಸ್ವೀಕರಿಸಿ ಎಂದು ಕೇಳಿಕೊಳ್ಳುತ್ತಾಳೆ. ಆಗ ಬ್ರಾಹ್ಮಣರು ಹೀಗೆ ಹೇಳಿದರು.

"ಮುಪ್ಪಿನವರು ನೋಡೆ ನಾವು ಚಿ
ಕ್ಕ ಪ್ರಾಯದ ಸತಿಯು ನಮಗೆ
ಮತ್ತೆ ನಿನ್ನ ಪತಿಯ ಒಯ್ದು
ಭ್ರಷ್ಟರಾದೇವಲ್ಲೆ ನಾವು
ಹಿರಿಯರಿಂದ ನೆಡೆದು ಬಂದ
ಕರಿಯ ಕಲ್ಲು ಸಾಕು ನಮಗೆ
ವರ ವೈಕುಂಠ ಪತಿಯ ಪೂಜೆ
ತರವೆ ಶಕ್ತಿ ಸಾಲದು ನಮಗೆ"[೩೦]

ಒಬ್ಬೊಬ್ಬರು ಒಂದೊಂದು ಕುಂಟು ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದರು. ಆಗ ಸತ್ಯಭಾಮೆಯು ಕೃಷ್ಣನನ್ನು ನಾರದರಿಗೆ ದಾನವಾಗಿ ನೀಡುತ್ತಾಳೆ. ಈ ಸುದ್ದಿಯನ್ನು ಕೇಳಿದ ತಾಯಿ ದೇವಕಿಯು ಕೋಪೋದ್ರಿಕ್ತಳಾಗಿ ಸತ್ಯಭಾಮೆಯನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ತಾಯಿ ಮನಸ್ಸಿನೊಳಗೆ ಇರುವ ಮಗನ ಮೇಲಿನ ಅವ್ಯಕ್ತ ಪ್ರೀತಿ ವ್ಯಕ್ತವಾಗುತ್ತದೆ. ಅದು ಸತ್ಯಭಾಮೆಗೆ ಬೈಯುವುದರ ಮುಖಾಂತರ.

"ಇದು ಏನು ಮಾಡಿದೆಯೋ ಚೆದುರೆ ಭಟಾರಿ
ಯದುನಿಂಥ[ನ]ಲ್ಲಿ ಕಳುಹಿಸಿದೆಯೆ ವೈಯಾರಿ
ದಾರಿಗೆಕೊಟ್ಟ ದಾನವನು ಗಯ್ಯಾಳಿ
ದಾರು ಕಲಿಸಿದರ್ಹೇಳೆ ನಿನಗಿಂಥ ಬಾಳಿ
ಕೊಂದು ಹಾಕುವ ಕಂಸನೆಂದು ಕೃಷ್ಣನ್ನ
ಅಂದು ಗೋಕುಲದಿ ಬಚ್ಚಿಟ್ಟೆ ನಾ ಇನ್ನು

ನಂದ ಯಶೋದೆಕಂದನ ಕೊಟ್ಟೆ ದಾನ

ಇಂದು ನಿನ ಮನಕಾಯಿತೇನೆ ನಿಧಾನ

ದಂಗುಡಿ ಹೆಣ್ಣೆ ನಿನ್ನುಂಗುಡಿ ಬಾಳೆ

ಮಂಗಳಾಂಗನ ಎಲ್ಲಿ ಮಾರಿದಿ ಹೇಳೆ"[೩೧]

ಹೀಗೆ ದೇವಕಿಯು ಸತ್ಯಭಾಮೆಯನ್ನು ಧಕ್ಕಡಿಗಿತ್ತಿ, ಹೊಯ್ಯಾಳಿ, ಎಂದು ಬೈಯುತ್ತಾಳೆ. ಹಾಡಿನ ಕೊನೆಯಲ್ಲಿ ರುಕ್ಮಿಣಿಯ ಸಹಾಯದಿಂದ ಮತ್ತೆ ಕೃಷ್ಣನನ್ನು ಪಡೆಯುವುದರೊಂದಿಗೆ 'ಪತಿದಾನ ಕೊಟ್ಟ ಹಾಡು' ಮುಗಿಯುತ್ತದೆ.

ಭೀಮವ್ವನವರ ಕಲ್ಪನಾ ಶಕ್ತಿ ತುಂಬಾ ದೊಡ್ಡದು. "ಇಷ್ಟ ಫಲ ಭೀಮೇಶ ಕೃಷ್ಣ ಕರುಣಿಸುತ್ತಿರುವ ಈ ಹಾಡುಗಳಲ್ಲಿ ವೇದೋಪನಿಷತ್ತುಗಳು ಪುರಾಣ ಪುಣ್ಯಕಥೆಗಳ ರಾಯಾಯಣ ಭಾರತ ಭಾಗವತ ಮಹಾಕಾವ್ಯಗಳ ಒಳಗೆ ಹಾಸು ಹೊಕ್ಕಾಗಿರುವ ವೈಷ್ಣವ ಧರ್ಮದ ಬಗೆ ಬಗೆಯ ಬೆಡಗುಗಳನ್ನು ಇಹ ಜೀವನದಲ್ಲಿನ ಶ್ರದ್ಧೆ ತೀವ್ರ ನಂಬಿಕೆಗಳನ್ನೂ ಹಾಗೂ ಆತ್ಮ ಸಾಕ್ಷಾತ್ಕಾರದ ಅದಮ್ಯವಾದ ಹಂಬಲವನ್ನೂ ನಾವು ಅವ್ವನವರ ಈ ರಚನೆಯಲ್ಲಿ ಸ್ಪಷ್ಟವಾಗಿ ಕಾಣಬಹುದು."[೩೨]

ರತಿಕಲ್ಯಾಣ

ರತಿಕಲ್ಯಾಣ ಕೃತಿಯು ರತಿ ಮನ್ಮಥರ ವಿವಾಹದ ಹಿನ್ನೆಲೆಯನ್ನು ಒಳಗೊಂಡಿದೆ. ಭಾಗವತದಲ್ಲಿ ಈ ಕಥೆಯನ್ನು ಕಾಣಬಹುದು. ಭೀಮವ್ವನವರು ತಮ್ಮ ವರ್ಣನಾ ಕೌಶಲ್ಯದಿಂದ ೬೧ ಧ್ವನಿಗಳ ಮುಖಾಂತರ ವಿಸ್ತಾರವಾಗಿ ವಿವಾಹದ ವಿವರಗಳನ್ನು ಕಟ್ಟಿಕೊಟ್ಟಿದ್ದಾರೆ.

ಈ ಕೃತಿಯಲ್ಲಿ ಮುಖ್ಯವಾಗಿ ಎರಡು ಕಥೆಗಳನ್ನು ಕಾಣಬಹುದು. ರತಿ ಮನ್ಮಥರ ವಿವಾಹ ಒಂದು ಕಡೆಯಾದರೆ 'ದ್ರೌಪದಿಯ' ಶಕ್ತಿಯ ಕುರಿತು, ಇನ್ನೊಂದು ಬಗೆಯಲ್ಲಿ ಮೂಡಿಬಂದಿದೆ. ಆದ್ದರಿಂದಲೇ ಭೀಮವ್ವನವರು ಹಾಡಿನ ಪ್ರಾರಂಭದಲ್ಲಿಯೇ

"ಅಷ್ಟು ದೇವತೆಗಳಿಗೆ ವಂದಿಸಿ

ಇಷ್ಟ ಫಲಗಳ ಬೇಡಿ ಭೀಮೇಶ

ಕೃಷ್ಣನನುಜೆ ಕೃಷ್ಣೆ ಮಹಿಮೆಯ ಪೇಳ್ವೆನೀಗ"[೩೩]

ಕೃಷ್ಣನ ತಂಗಿ ದ್ರೌಪದಿಯ ಮಹಿಮೆಯನ್ನು ಕೂಡ ಹೇಳುತ್ತೇನೆಂದು ಹೇಳಿರುವುದನ್ನು ಕಾಣಬಹುದು.

ಮನ್ಮಥನು ಪತ್ನಿಯಾದ ರತಿಯನ್ನು ಕಳೆದುಕೊಂಡು ದುಃಖಿತನಾಗಿದ್ದಾನೆ. ಇದನ್ನು ಗಮನಿಸಿದ ರುಕ್ಮಿಣಿಯು ಕೃಷ್ಣನಿಗೆ ಮನ್ಮಥನ ಸ್ಥಿತಿಯನ್ನು ಹೇಳುತ್ತಾಳೆ. ಆಗ ಕೃಷ್ಣನು ಒಂದು ವಾರದಲ್ಲಿಯೇ ಮನ್ಮಥನಿಗೆ ತಕ್ಕುದಾದ, ಸರಿಯಾದ ಕನ್ಯೆಯನ್ನು ತಂದು ಮದುವೆ ಮಾಡಿಸುತ್ತೇನೆಂದು ಪ್ರತಿಜ್ಞೆ ಗೈಯುತ್ತಾನೆ. ಎಷ್ಟು ಕಡೆ ಹುಡುಕಿದರೂ ಕನ್ಯೆಯು ಸಿಕ್ಕುವುದಿಲ್ಲ. ಕೃಷ್ಣ ಕನ್ಯೆಯನ್ನು ಹುಡುಕುವಲ್ಲಿ ವಿಫಲನಾಗುತ್ತಾನೆ. ಕೃಷ್ಣನು ನಾರದರ ಮಾತನ್ನು ಮನ್ನಿಸಿ ದ್ರೌಪದಿಯನ್ನು ಕಳುಹಿಸುತ್ತಾನೆ. ಆ ಸಂದರ್ಭದಲ್ಲಿ ದ್ರೌಪದಿಯ ವರ್ಣನೆಯನ್ನು ಭೀಮವ್ವನವರು ಮನಮುಟ್ಟುವಂತೆ ವರ್ಣಿಸಿದ್ದಾರೆ.

ನಾರದರು ಬಂದು ಕೃಷ್ಣನಿಗೆ ಕನ್ಯೆ ಇರುವ ಜಾಗವನ್ನು ಮತ್ತು ಕನ್ಯಾದಾನ ಕೇಳಲು ದ್ರೌಪದಿಯನ್ನು ಕಳುಹಿಸಬೇಕು ಎಂದು ಹೇಳುತ್ತಾನೆ.

"ಪೃಥಿವಿಗೊಡೆಯ ಕಮಲಾವತಿ ರಾಜಗೆ
ಸುತೆಯಾಗ್ಹುಟ್ಟಿಹಳತಿ ಗುಣವಂತೆ
ಅಂಗನಾಮಣಿ ಅರವಿಂದ ಲೋಚನೆ ಅ
ನಂಗಗೆ ತಕ್ಕ ಕನ್ನಿಕೆ ನೋಡುವಳು"
ನಡೆದರೆ ನವಯೌವನೆ ಬಳುಕ್ಯಾಡೋಳು
ಕಡು ಚೆಲ್ವಿಕೆ ಪುತ್ಥಳಿಗೊಂಬ್ಯವಳು
ಬಂಗಾರದ ಬಾಳೆ ಸುಳಿಯಂತ್ಹೊಳೆವಳು
ಚಂದ್ರವದನೆ ರತಿ ಸುಂದರಿ ಸುಗುಣೆ
ನಳಿನಮುಖಿ ನಗುತ ಅಪ್ಪಣೆಗೊಂಡು ತಾ ಘುಮ್ಮ
ಘಳಿರೆನುತಲ್ಯಾ ಬಾಳೆ ಸುಳಿಯಂತೆ ಹೊಳೆಯುತಲಿ
ತಳಿಲು ಮಾವಿನಪತ್ರ ಪೋಲ್ವ ಕೋಮಲ ಚರಣ
ಸುಳಿಯು ಕಾಲುಂಗುರದ ಸೂಕ್ಷ್ಮದ್ಹೆಜ್ಜೆಯ ನಿಡುತ
ರುಳಿಗೆಜ್ಜೆ ಪೆಂಡೆ ಪೈಜಣ ಧ್ವನಿಗಳಾಗುತಿರೆ ೨
ಬಳೆ ಭಾರಿ ಕಂಕಣವು ಬೆರಳ ಹೊನ್ನುಂಗರವು
ಗಿಳಿ ಕಮಲದ್ವಾರ್ಯ ಮುಂದ್ಹರಡಿ ಹಸ್ತಕಡಗ
ನಳಿತೋಳಿನ್ವಂಕಿ ನಾಗಮುರಿಗೆಯು ಗೆಜ್ಜೆ
ಎಳೆಯು ಕಟ್ಟಾಣಿ ಮ್ಯಾಲೆ ಸರಿಗೆ ಅಡ್ಡಿಕೆ ಮುತ್ತು ಕೊ
ರಳ ಪುತ್ಥಳಿ ಚಂದ್ರಸರ ಏಕಾವಳಿ ಪದಕ ಹ
ರಳಿನಾಲ್ವೆಯು ಬುಗುಡಿ ಹೊಸ ಚಂದ್ರಬಾಳ್ಯಗಳು"[೩೪]

ಬಹುಶಃ ಇಷ್ಟು ಬಗೆಯ ಆಭರಣಗಳನ್ನು ಬೇರೆ ದಾಸರ ಕೀರ್ತನೆಯಲ್ಲಿ ಕಾಣಲಾಗದು. ಆದರೆ ಭೀಮವ್ವನವರು ವರ್ಣಿಸುವ ಅವಕಾಶವನ್ನು ಎಂದು ತಪ್ಪಿಸಿಕೊಳ್ಳುವುದಿಲ್ಲ. ವರ್ಣಿಕೆಯ ಸಿರಿವಂತಿಯನ್ನು ಸಶಕ್ತವಾಗಿ ತುಂಬುತ್ತಾರೆ.

ಮನ್ಮಥನಿಗಾಗಿ ದ್ರೌಪದಿಯು ಕಮಲರಾಜನಲ್ಲಿಗೆ ಬಂದು ಹೆಣ್ಣು ಕೇಳುತ್ತಾಳೆ. ಆಗ ಕಮಲರಾಜ ಕುಪಿತನಾಗಿ, ಕೃಷ್ಣನ ಮನೆತನಕ್ಕೆ ಕೊಡುವುದಿಲ್ಲ ಮತ್ತು ಗೋವಳ ಎಂದು ನಿಂದಿಸುತ್ತಾನೆ. ದ್ರೌಪದಿ ಬಂದಿದ್ದ ವಿಷಯ, ತಂದೆಯ ವಿರೋಧದ ನುಡಿ ರತಿಗೆ ಎಲ್ಲವೂ ತಿಳಿಯುತ್ತದೆ. ತಂದೆಯ ಕಟು ಧೋರಣೆಯನ್ನು ತಿಳಿದು ರತಿಯು ಭೂಮಿಯ ಮೇಲೆ ಬಿದ್ದು ಹೊರಳಾಡುತ್ತಾಳೆ ಜೊತೆಗೆ ಸಾವಿನ ಬೆದರಿಕೆಯನ್ನು ಸಹ ಹಾಕುತ್ತಾಳೆ. ಇದರಿಂದ ಕಂಗಾಲನಾದ ಕಮಲರಾಜನು ದ್ರೌಪದಿಯನ್ನು ಕರೆಯಿಸಿ

ರತಿಯನ್ನು ಮನ್ಮಥನಿಗೆ ಕೊಡುವುದಾಗಿ ಹೇಳುತ್ತಾನೆ. ಮೊದಲು ತನ್ನ ಅಕ್ಕನ ಮಗನಾದ ಕೌಂಡ್ರಿಕನಿಗೆ ಮಗಳನ್ನು ಕೊಡಬೇಕೆಂದಿದ್ದ ವಿಷಯವನ್ನು ತಿಳಿಸುತ್ತಾ ಅವನ ದುಷ್ಟತನವನ್ನು ನಿವಾರಿಸಬೇಕೆಂದು ಕೇಳಿಕೊಳ್ಳುತ್ತಾನೆ.

ರತಿ-ಮನ್ಮಥರ ವಿವಾಹದ ಸಿದ್ಧತೆಗಳು ಭರದಿಂದ ನಡೆಯುತ್ತಿದ್ದವು. ಸಂಪ್ರದಾಯಿಕ ಪೂಜೆಗಳು ನಡೆಯುವ ವೇಳೆಗೆ ಕೌಂಡ್ರಿಕನು ಅಲ್ಲಿಗೆ ಬಂದು ರತಿಯನ್ನು ಅಪರಿಸುತ್ತಾನೆ. ಕಮಲರಾಜನ ಸೈನ್ಯ ಹಿಂಬಾಲಿಸಿ ಹೋದರೂ ಕೌಂಡ್ರಿಕನ ಬಲದ ಮುಂದೆ ಸೋತು ಮೂರ್ಛಾಗತರಾಗಿ ಬೀಳುತ್ತಾರೆ. ಆಗ 'ಭೂಪರೈವರ ಮಡದಿ ದೀಪದಂತ್ಹೊಳೆಯುವ' ದ್ರೌಪದಿ ಕನಲಿಕೆಂಡವಾಗಿ ಅವನನ್ನು ಹತ್ತಿಕ್ಕಲು ತಾನೇ ಹೊರಡುತ್ತಾಳೆ. ಹೆಣ್ಣು ಕೇಳಲು ಹೋದ ಸೌಂದರ್ಯವತಿ ದ್ರೌಪದಿ ಇವಳೆಯೇನು ಎನ್ನುವ ಅನುಮಾನ ಮೂಡುವಂತೆ ರೌದ್ರತೆಯನ್ನು ಭೀಮವ್ವನವರು ಭೀಕರವಾಗಿ ಚಿತ್ರಿಸಿದ್ದಾರೆ.

"ಉಟ್ಟಳು ಬಿಳಿಯ ಪತ್ತಲವ ಮ್ಯಾಲೆ
ತೊಟ್ಟು ಕುತ್ತನಿಯ ಕುಪ್ಪಸವ
ಪಟ್ಟೆ ಕುಂಕುಮ ಹಚ್ಚಿನೊಸಲೊಳು ಇಂಥ
ದುಷ್ಟನ ಮ್ಯಾಲೆ ಸಾಹಸವೊ ಅಷ್ಟಭುಜ
ಅಷ್ಟಾಯುಧಂಗಳ ಕತ್ತಿ ಖಡ್ಗದ ಪಿಡಿದು ತಿರುಗುತ
ಕೆಟ್ಟ ಕೌಂಡ್ರಿಕನ್ನ ಎದೆಯ ಮೆಟ್ಟಿ ಸೀಳುವೆನೆನುತಲಾಗ
ಆಲಯದಂಥ ಕಿವಿಗಳು ಬಂಡಿ
ಗಾಲಿಯಂಥ (ಹ) ರಳಿನ್ವಾಲೆಗಳು
ಜೋಲು ಬಿದ್ದಂಥ ತುಟಿಗಳು ದೊಡ್ಡ
ಭೇರಿಯಂತಿದ್ದ ಸ್ತನಗಳು ಕಾಮನ
ಬಿಲ್ಲೊಡಿದಂತೆ ನೀಲವೇಣಿಯ ಹುಬ್ಬುಗಳು ವಿ
ಶಾಲನೇತ್ರದಿ ಕಿಡಿಗಳು ಹೂಬಾಣದಂತಾಗ್ಯಾರುತಿರಲು ೩
ರಥ ಚಕ್ರದಂಥ ನೇತ್ರಗಳು ತಿರು
ಗುತಲಿದ್ದ ಕಣ್ಣು ಗುಡೆಗಲು ಉ
ನ್ನತವಾದ ಮೂಗು ಮಾಟಗಳು ಪ
ರ್ವತದಂತೆ ಹೊಟ್ಟೆ ಬೆನ್ನುಗಳು
ಮಿತಿಯುಯಿಲ್ಲದೆ ತೆರೆದು ಬಾಯರ್ಭಟದಿ ಕೋರೆಹಲ್ಲು ನಾಲಿಗೆ
ಶತಯೋಜನ ಪರಿಯಂತ್ರ ಚಾಟಿ ಅತಿ ಭಯಂಕರವಾಗಿ ತೋರ್ಪಳು ೪
ಬಡಬಡನ್ನಲ್ಲ ಕರಿಯುತಲಿ
ಘುಡಿ ಘುಡಿಸುವ ಘನ ಘೋಷದಲಿ

ಘುಡ ಘುಡನ್ನಲ್ಲ ಮುರಿಯುತಲಿ ಧಡ

ಧಡ ರಥದಿಂದ ಕೆಡೆಯುತಲಿ ಛಡಛಡನೆ

ಸಿಡಿಲಂತೆ ಗರ್ಜಿಸಿ ಒಡಲು ಬಗೆದು ಕಿತ್ತುಕರುಳ

ಹಿಡಿದು ಸೂರ್‍ಯಾಡುತಲಿ ರಕ್ತವ ಅಡವಿಲ್ಲಾರ್ಭಟ ಮಾಡುತ"[೩೫] ||೭||

ಹೀಗೆ ರೌದ್ರ ರೂಪತಾಳಿ ದುಷ್ಟ ಕೌಂದ್ರಿಕನನ್ನು ಸದೆಬಡಿದು ರತಿ-ಮನ್ಮಥರ ವಿವಾಹಕ್ಕೆ ಅನುವುಮಾಡಿಕೊಡುತ್ತಾಳೆ. ದ್ರೌಪದಿಯ ಸಾಹಸವನ್ನು ಮೆಚ್ಚಿ ದೇವತೆಗಳು ಪುಷ್ಪವೃಷ್ಟಿ ಮಾಡುತ್ತಾರೆ. ಶೌರ್ಯವಂತನೂ ಬಲವಂತನೂ ಆದ ಭೀಮನು ಸಹ ಬೆರಗಾಗಿ ಹಿಡಿಂಬಿರಾಕ್ಷಸಿಗಿಂತಲೂ ಮೀರಿದವಳು ಎಂದು ಉದ್ಗಾರ ತೆಗೆಯುತ್ತಾನೆ.

ನಂತರ ಅತಿ ವಿಜೃಂಭಣೆಯಿಂದ ರತಿ-ಮನ್ಮಥರ ವಿವಾಹ ಜರಗುತ್ತದೆ. ಆ ಸಂದರ್ಭದಲ್ಲಿ ಕಮಲರಾಜನ ಸಾಮ್ರಾಜ್ಯ ಸಂಭ್ರಮದಿಂದ ತುಂಬಿಹೋಗುತ್ತದೆ. ಹಲವು ವಿಧದ ಸಾಲು ದೀವಿಗೆಗಳು, ತಳಿರು ತೋರಣಗಳು, ಬಣ್ಣ ತುಂಬಿದ ರಂಗವಲ್ಲಿಗಳು ವಿವಾಹ ಮಹೋತ್ಸವಕ್ಕೆ ಹೆಚ್ಚಿನ ಕಳೆಯನ್ನು ತಂದುಕೊಡುತ್ತವೆ. ಊಟದ ಸಂಭ್ರಮವಂತೂ ಹೇಳತೀರದು. ಈ ಮೊದಲೇ ತಿಳಿಸಿದಂತೆ ಉಟೋಪಚಾರ ಮತ್ತು ಅಲಂಕಾರ, ಉಡಗೆ ತೊಡುಗೆಯ ವಿಷಯಗಳಲ್ಲಿ ಭೀಮವ್ವನವರು ಒಂದು ಕೈಯ ಜಾಸ್ತಿ ಎಂಬಂತೆ ಚಿತ್ರಿಸುತ್ತಾರೆ. ಚಿನ್ನದ ಬಾಳೆಲೆ ಬಟ್ಟಲುಗಳಿಟ್ಟು, ಉಪ್ಪು, ಚಟ್ನಿಣಿ ರಸವು, ಕೋಸಂಬರಿ, ಎಪ್ಪತ್ತು ಬಗೆಯ ಶಾಖವು, ಚಿತ್ರಾನ್ನ, ದಧ್ಯನ್ನ, ಕೇಸರಿಭಾತು, ಹಪ್ಪಳ, ಸಂಡಿಗೆ, ಅಪ್ಪಾಲತಿರಸ, ಆಂಬೋಡೆ, ಶಾವಿಗೆ, ಬಟ್ಟವಿ, ಗೌಲಿ, ಮಾಲತಿ, ಪರಡಿ, ಪಾಯಸಂಗಳು, ಮಂಡಿಗೆ, ಬೂರಿದ್ಯಲಾಡು, ಘದರ ಫೇಣಿ ಶಿಖಿಯದುಂಡೆ ಹೂರಣಗಡುವು, ಚೂರ್ಮಲಾಡು, ಬೇಸರಿ, ಸಾರು, ಸಾಂಬಾರಗಳು, ಕಾಸಿದ

ಪಳದ್ಯ, ಕಲಸು ಮೇಲೋಗರವು, ಬಾಗಿ ಮಾಡಿದ ಸಣಕ್ಕಿ ಶಾಲ್ಯಾನ್ನ, ಬ್ಯಾಳೆಯ ತೊವ್ವೆ, ನಿಂಬೆ, ಮಾವಿನುಪ್ಪಿನಕಾಯಿ ಮುಂತಾದವುಗಳನ್ನು ತಂದು ಬಡಿಸುತ್ತಾರೆ. ಎಲ್ಲಾ ವಿಧದದಲ್ಲಿಯೂ ವಿಜೃಂಭಣೆಯಿಂದ, ವೈಭವದಿಂದ ಮದುವೆ ನಡೆಯುತ್ತದೆ.

"ಅತಿ ಭಕ್ತಿಯಿಂದ ದ್ರೌಪದಿಯು ಮನ್ಮಥಗೆ ತಾ

ರತಿ ತಂದು ಲಗ್ನ ಮಾಡಿದ ಕಥೆಯ ಕಲ್ಯಾಣ

ಹಿತದಿಂದ ಹೇಳಿ ಕೇಳಿದ ಜನರಿಗೆಲ್ಲ ಶ್ರೀ

ಪತಿ ಒಲಿದು ಕೊಡುವ ಕಾಮಿತ ಫಲವ ಕರುಣದಿಂದ"[೩೬]

ಎಂಬ ಫಲಸ್ತುತಿಯೊಂದಿಗೆ 'ರತಿಕಲ್ಯಾಣ' ಮುಗಿಯುತ್ತದೆ. ಭೀಮವ್ವನವರು ಕಥೆಯನ್ನು ಕೇಳಿರಬಹುದು. ಆದರೆ ಕೇಳಿದ ಕಥೆಗೆ ಲಯ ನೀಡುವುದು ಬಹು ಮುಖ್ಯವಾದುದು. ದ್ರೌಪದಿಯ ಅಂದ-ಚಂದವನ್ನು ಹೊಗಳುವಾಗ, ರೌದ್ರತೆಯನ್ನು ಹೇಳುವಾಗ ಆಡುನುಡಿಯ ಭಾಷಾ ಬಂಧದಲ್ಲಿ ಕಟ್ಟಿಕೊಟ್ಟಿರುವುದು ವಿಶೇಷವೆ ಸರಿ.

ಸುಧಾಮನ ಹಾಡು

ಶ್ರೀಮದ್ಭಾಗವತ ದಶಮಸ್ಕಂಧ ಉತ್ತರಾರ್ಧದ ೯೮-೯೯ನೇ ಅಧ್ಯಾಯಗಳಲ್ಲಿರುವ 'ಕುಚೇಲೋಪಾಖ್ಯಾನ'ವನ್ನು ಭೀಮವ್ವ ೧೯೩ ನುಡಿಗಳಿಂದ 'ಸುಧಾಮನ ಹಾಡು' ಎಂಬ ಸುದೀರ್ಘ ಹಾಡಾಗಿ ಪರಿವರ್ತಿಸಿದ್ದಾಳೆ. "ಸಂಸ್ಕೃತ ಭಾಗವತದಲ್ಲಿ ಈ ಉಪಾಖ್ಯಾನವು ಸರಳ ಭಾಷೆಯಲ್ಲಿ ಹಿತಮಿತವಾದ ವಿವರಗಳಿಂದ ಕೂಡಿ ೭೭ ಅನುಷ್ಟುಪ ಶ್ಲೋಕಗಳಲ್ಲಿ ರಚಿತವಾಗಿದೆ. ಈ ಕತೆಯು ಬಹು ಜನಪ್ರಿಯವಾದುದು. ಅಯಾಚಿತ ವೃತ್ತಿಯಿಂದ (ಇತರನನ್ನು ಬೇಡದೆ, ನರಸೇವೆ ಮಾಡದೆ, ದೈವದತ್ತವಾಗಿ ಬಂದ ವಸ್ತುಗಳಲ್ಲಿ) ತೃಪ್ತನಾಗಿದ್ದ ಕುಟುಂಬಿಯಾದ ಬಡ ಬ್ರಾಹ್ಮಣನೊಬ್ಬನು ತನ್ನ ಹೆಂಡತಿಯ ಸೂಚನೆಯಂತೆ ದ್ವಾರಕೆಗೆ ಬಂದು ಕೃಷ್ಣನನ್ನು ಕಂಡು ಸತ್ಕೃತನಾಗಿ ತಾನು ತಂದ ಅವಲಕ್ಕಿಯನ್ನು ಕೊಡಲಾರದೆ ಸಂಕೋಚದಿಂದ ಇದ್ದಾಗ ಕೃಷ್ಣನೇ ಸಲಿಗೆಯಿಂದ ಅದನ್ನು ಸ್ವೀಕರಿಸಿ ಅಕ್ಷಯ ಸಂಪತ್ತನ್ನಿತ್ತ"[೩೭] ಎಂಬ ಕಥಾವಸ್ತು ಮೂಲದಲ್ಲಿದೆ.

ಪುರಂದರದಾಸರ 'ಸುಧಾಮ ಚರಿತೆ' ಎಂಬ ಹೆಸರಿನ ದೀರ್ಘಹಾಡನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪುರಂದರದಾಸರು ಕೇವಲ ೩೬ ನುಡಿಗಳಲ್ಲಿ ಸುಧಾನ ಚರಿತೆಯನ್ನು ಕಟ್ಟಿಕೊಟ್ಟಿದ್ದಾರೆ. ಭೀಮವ್ವನವರಿಗೆ ಹೋಲಿಸಿದರೆ ತೀರ ಚಿಕ್ಕದು. ವಿವರಗಳು ಅಷ್ಟಾಗಿ ಮೂಡಿಬಂದಿಲ್ಲ. ಭೀಮವ್ವನವರಲ್ಲಿ ಕಥೆಯ ವಿವರಗಳು ದಟ್ಟವಾಗಿ ಮೂಡಿಬಂದಿವೆ.

ಮೂಲ ಕಥೆಯಲ್ಲಿ ಮಕ್ಕಳ ಪ್ರಸ್ತಾಪ ಬರುವುದಿಲ್ಲ. ಆದರೆ ಭೀಮವ್ವನವರು ಮಕ್ಕಳ ಪ್ರಸ್ತಾಪ ಮಾಡುತ್ತಾಳೆ. ಮಕ್ಕಳ ಸ್ಥಿತಿಗತಿಯ ಮೂಲಕ ಸುಧಾಮನ ಕುಟುಂಬವನ್ನು ಪರಿಚಯಿಸುತ್ತಾಳೆ.

"ಅಶನವಿಲ್ಲ ವಸನವಿಲ್ಲ ಹಸಿದ ಮಕ್ಕಳನ್ನು ನೋಡಿ
ವ್ಯಸನದಿಂದ ಪತಿಯ ಪಾದಕ್ಕೆರಗಿ ನಿಂತಳು"[೩೮]

ಹೆಂಡತಿ ಸುಧಾಮನಿಗೆ 'ನಿಮಗೆ ಬಂಧು-ಬಳಗ ಮಿತ್ರರು ಯಾರಿಲ್ಲವೆ?' ಎಂದು ಕೇಳುತ್ತಾಳೆ. ಬಂಧು-ಬಳಗದವರು ಇದ್ದರೂ ಯಾರು ಕೂಡ ಸನೀಹದಲಿಲ್ಲ. ಎಲ್ಲರೂ ಬಹುದೂರದಲ್ಲಿದ್ದಾರೆ. ಹತ್ತಿರದಲ್ಲಿ ಇರುವವನೆಂದರೆ ಮಿತ್ರ ಶ್ರೀ ಕೃಷ್ಣಮಾತ್ರ ಎಂದು ಹೇಳುತ್ತಾನೆ.

ಮೂಲದ ಕಥೆಯಲ್ಲಿ ಸುಧಾಮ ಕೃಷ್ಣನನ್ನು ನೋಡಲು ನೇರವಾಗಿ ದ್ವಾರಕ ಪುರಿಗೆ ಹೋದರೆ ಭೀಮವ್ವನವರಲ್ಲಿ ಪ್ರಯಾಣದ ಸಂದರ್ಭದಲ್ಲಿ ನಡೆದ ಘಟನೆಗಳನ್ನು ಕಟ್ಟಿಕೊಡುತ್ತಾಳೆ.

"ಹಾದಿಲ್ಹರಿವೊ ಜಲವ ಕಂಡು ಸ್ನಾನವನ್ನು ಮಾಡಿಕೊಂಡು
ವೇದ ಪುಸ್ತಕವ ಹಿಡಿದು ಓದಿಕೊಳ್ಳುತಲಿ"[೩೯]

ಸುಧಾಮ ಬಡತನ ಬೇಗೆಗೆ ಸಿಲುಕಿ ಬಳಲಿ ಹೋಗಿದ್ದಾನೆ. ಅವನ ಬಾಹ್ಯ ರೂಪವೇ ಅವನ ಸ್ಥಿತಿ-ಗತಿಯನ್ನು ತೋರಿಸಿಕೊಡುತ್ತದೆ.

"ಹುಟ್ಟು ಮೊದಲೆ ಅನ್ನ ತನ್ನ ಹೊಟ್ಟೆಗುಂಡ ಮನುಜನಲ್ಲ
ಗಟ್ಟಿಗಾಳಿ ಬರಲೀಗ್ಹಾರುವಂತೆ ತೋರುವ ೧೯

ಅಸ್ಥಿ ಚರ್ಮ ಆತನಂಗಕ್ಹತ್ತಿಕೊಂಡ ಹೊಟ್ಟೆಬೆನ್ನು
ಮತ್ತೆ ನಡೆಯಲಾರ ಮಾತನಾಡಲಾರನು"[೪೦]

ಕೃಷ್ಣ ಮತ್ತು ಸುಧಾಮರ ಸ್ನೇಹ ಬಾಂಧವ್ಯ ಅಪೂರ್ವವಾದುದು. ಸುಧಾಮನ ಆಗಮನವನ್ನು ದ್ವಾರಪಾಲಕರಿಂದ ತಿಳಿದು ಕೃಷ್ಣನು ಸಡಗರದಿಂದ, ಸಂಭ್ರಮದಿಂದ ತಾನೇ ಎದ್ದು ಸುಧಾಮನನ್ನು ಸ್ವಾಗತಿಸುತ್ತಾನೆ. ಪ್ರಾಂಜಲವಾದ ಸ್ನೇಹದ ಮುಂದೆ ಬಡತನ-ಸಿರಿತನ ಸುಳ್ಳು ಎಂಬುದಕ್ಕೆ ಸುಧಾಮ ಮತ್ತು ಕೃಷ್ಣರ ಸ್ನೇಹವೇ ಸಾಕ್ಷಿ ಸುಧಾಮ ಬಡವನೆಂದು ಅಲಕ್ಷ್ಯ ಮಾಡದೆ ಆತಿಥ್ಯದಲ್ಲಿ ಒಂದು ಚೂರೂ ಕೊರತೆಯಾಗದಂತೆ ನೋಡಿಕೊಳ್ಳುತ್ತಾನೆ. ಭೀಮವ್ವ ಆ ಸಂದರ್ಭವನ್ನು ಸಶಕ್ತವಾಗಿ ಚಿತ್ರಿಸುತ್ತಾಳೆ.

"ಮಡಿಯ ಜರದ ಮ್ಯಾಲೆ ಮುತ್ತಿನುಡಿದಾರವನೆ ಕಟ್ಟಿ ವಜ್ರ
ಕಡಗ ಕಂಕಣವ ತಂದು ಕರದಲ್ಲಿಟ್ಟರು ೬೪
ಪಚ್ಚೆದ್ಹರಳು ಕೆತ್ತಿದೊಂಟಿ ಮುತ್ತು ಕಿವಿಯ ಬಾವುಲಿ
ರತ್ನದುಂಗುರವ ತಂದು ಬೆರಳಲ್ಲಿಟ್ಟರು ೬೫
ಪುತ್ಥಳಿ ಹಾರ ಹರಳು ಕೆತ್ತಿಸಿದ ಪದಕ ಆಣಿ
ಮುತ್ತಿನ ಕಂಠಿ ಕೊರಳಿಗ್ಹಾಕುತ್ತಿದ್ದರು. ೬೬
ಬಂಗಾರದ ಮಣೆಯ ಮ್ಯಾಲೆ ಶೃಂಗಾರದಿ ಕುಳ್ಳಿರಿಸಿ
ಮುಂದೆ ಮುತ್ತಿನ್ಹೂಜಿ ಥಾಲಿ ತಂದುಕೊಡುವೋರು ೬೭
ಕುಡಿಯ ಬಾಳೆಯೆಲೆಯ ಹಾಕಿ ನಡುವೆ ಜ್ಯೋತಿ ತಂದಿರಿಸಿ
ಕಡಲೆ ಕೋಸಂಬ್ರಿ ಉಪ್ಪುಕಾಯಿ ಶಾಕವು ೬೮
ಹಪ್ಪಳ ಸಂಡಿಗೆ ಕರ್ಪುರದ ಎಣ್ಣೋರಿಗೆ
ಮಿತ್ರೆ ಕಾಳಿಂದಿ ತಂದು ಬಡಿಸುತ್ತಿದ್ದರು."[೪೧]

ಹೀಗೆ ವಿವಿಧ ಬಗೆಯ ರುಚಿಕಟ್ಟಾದ ಆಹಾರ ಪದಾರ್ಥವನ್ನು ಪ್ರೀತಿಯಿಂದ ಸುಧಾಮನಿಗೆ ಬಡಿಸುತ್ತಿದ್ದರು. ಬಹುಶಃ ಆಗಿನ ಕಾಲದಲ್ಲಿ ಅಪರೂಪದ ಆತ್ಮೀಯರು ಬಂದಾಗ ಈ ರೀತಿಯ ಅತಿಥಿ ಸತ್ಕಾರ ಸಹಜವಾಗಿತ್ತೇನೊ. ಇಲ್ಲಿಗೇ ಅತಿಥಿ ಸತ್ಕಾರ ಮುಗಿಯುವುದಿಲ್ಲ.

"ಕರ್ಪುರದ ತಾಂಬೂಲ ಅರ್ತಿಯಿಂದ ಮೆಲ್ಲುತ
ವಿಪ್ರಗಾಗ ತನ್ನ ಅರಮನೆಯ ತೋರಿದ ೭೪
ಜಂತದ್ಹಲಿಗೆ ಮಂಚದಲ್ಲಿ ಸಂಪಿಗ್ಹೂವಿನ್ಹಾಸಿಕ್ಯಲ್ಲಿ
ಮುಂಚೆ ಸುಧಾಮ ಇಲ್ಲಿ ಪವಡಿಸೆಂದನು"[೪೨]

ಈ ವಿವರಗಳು ಭೀಮವ್ವನವರ ಸೃಜನಶೀಲತೆಯನ್ನು ಎತ್ತಿ ತೋರಿಸುತ್ತವೆ. ಸೃಜನಶೀಲತೆಯಿದ್ದಲ್ಲಿ ಸಣ್ಣ ಸಣ್ಣ ಸಂಗತಿಗಳು ಸಹ ಕೈ ತಪ್ಪಿ ಹೋಗುವುದಿಲ್ಲ ಎನ್ನುವುದಕ್ಕೆ ಈ ಬಗೆಯ ಸಾಲುಗಳೇ ಸಾಕ್ಷಿಯಾಗುತ್ತವೆ. ಸುಧಾಮನನ್ನು ಆದರಿಸುವುದನ್ನು ಕಂಡಾಗ ಇಡೀ ಕಾವ್ಯವೇ ಸಂತೋಷದ ಮಡುವಿನಲ್ಲಿ

ತೋರಿದ ಹಾಗೆ ತೋರುತ್ತದೆ. ಕಾವ್ಯದ ಆಸ್ವಾದಕರಿಗೆ ಈ ಬಗೆಯ ಸೂಕ್ಷ್ಮತೆಗಳು, ಜಾಣ್ಮೆಗಳು, ವಿಶೇಷ ರೀತಿಯ ಆನಂದವನ್ನು ತಂದುಕೊಡುತ್ತವೆ.

ಕಥೆ ಒಂದೇ ಆದರೂ ಕಾಲದಿಂದ ಕಾಲಕ್ಕೆ ಭಿನ್ನ ರೂಪ ತಳೆಯುತ್ತದೆ. ಆಯಾ ಕಾಲದ ಒತ್ತಡ, ಪರಿಸರದ ಪ್ರಭಾವ, ಕವಿಯ ಮನೋಧರ್ಮ ಎಲ್ಲವೂ ಕಾವ್ಯದಲ್ಲಿ ಒಳಗೊಳ್ಳುತ್ತವೆ. ಹಾಗೆ ಒಳಗೊಂಡಾಗಲೇ ಕಾವ್ಯದಲ್ಲಿ ವಿಶೇಷತೆ ಮೂಡಿಬರಲು ಸಾಧ್ಯ. ಹಾಗೆಯೇ ಸುಧಾಮನ ಮೂಲ ಕಥೆಯಲ್ಲಿ ಸುಧಾಮ ಒರ್ವ ಪರಮ ವೈರಾಗ್ಯ ಮೂರ್ತಿ ಅಸಾಮಾನ್ಯಪುರುಷ. ಆಯಾಚಿತ ವೃತ್ತಿಯನ್ನು ಕೈಗೊಂಡವನು. ಆದರೆ ಭೀಮವ್ವನವರಲ್ಲಿ ಸುಧಾಮ ಸಾಮಾನ್ಯ ಪುರುಷ. ಅವನು ಸಹ ಬಡತನದ ಹೊಡೆತಕ್ಕೆ ನಲುಗಿದ್ದಾನೆ. ವೈರಾಗ್ಯ ಕಳೆದುಹೋಗಿದೆ. ಕುಟುಂಬದ ಹಿನ್ನೆಲೆಯಿಂದ ಬಯಕೆಯುಳ್ಳವನಾಗಿದ್ದಾನೆ. ಅವನಿಗೂ ಅವನದೇ ಆದ ಮಹತ್ತರ ಬಯಕೆಗಳಿವೆ. ಹೇಳಲಾಗದ ಕನಸುಗಳಿವೆ. ಹೇಳಲೂ ಆಗದೆ ಮುಚ್ಚಿಡಲೂ ಆಗದೆ ತೊಳಲಾಡುತ್ತಿರುವ ಸುಧಾಮನನ್ನು ಕಾಣಬಹುದು.

“ಅಚ್ಚುತಾನಂತ ಕೊಟ್ಟ ವಸ್ತ್ರ ಆಭರಣವೆಲ್ಲ
ಬಿಚ್ಚಿಕೊಂಡು ಬಿಳಿಯ ಕೋರಿ ಹಚ್ಚಿ ಕಳುಹಲು ೮೭
ಎತ್ತಹೋದರೆನ್ನ ಪ್ರಾರಬ್ಧ ಬ್ಯಾರೆ ಆಗುವೋದೆ
ಸತ್ಯವಾದ ಬ್ರಹ್ಮಬರೆಹ ತಪ್ಪದೆಂದನು ೮೮
ಮಕ್ಕಳೆಲ್ಲ ಬಂದು ನಮ್ಮಪ್ಪ ಏನು ತಂದಿಯೆಂದು ಅ
ಪ್ಪಿಕೊಂಡು ಕೇಳಿದರಿನ್ನೇನು ಹೇಳಲಿ ೮೯
ಸಡಗರದ ಸತ್ಯಭಾಮೆ ಉಡುವೋದ್ಹಳೆಯ ಸೀರೆಯೊಂದು
ಕೊಡಬಾರದೆ ತಾನು ಎನ್ನ ಮಡದಿಗೆಂದನು ೯೦
ಭಾಗವಂತರಲ್ಲಿ ನಿರ್ಭಾಗ್ಯ ಬಂದರೇನು ಫಲವು
ರುಕ್ಮಿಣಿಗೆ ಕರುಣ ಹುಟ್ಟುದ್ಹೋಯಿತೀಗಲೆ ೯೧
ಭಾಳ ಬಡವನೆಂದುಯೆನ್ನ ವೇಳ್ಯ ಮಾಡಿದ್ಯಾಕೊ ಸ್ವಾಮಿ
ಕೇಳಿಬಲ್ಲೆನಿನ್ನ ಸಂಸಾರ ಸುಖವನು ೯೨”[೪೩]

ಸುಧಾಮ ಕೇಳುವುದಕ್ಕೆ ಮುಂಚಿತವಾಗಿಯೇ ಶ್ರೀ ಕೃಷ್ಣನು ಸಕಲ ಸಂಪತ್ತನ್ನು ನೀಡಿದ್ದಾನೆ. ಆದರೆ ಸುಧಾಮನ ಅನುಭವಕ್ಕೆ ಬಂದಿಲ್ಲ. ಮನೆಯನ್ನು ತಲುಪುತ್ತಿದ್ದಂತೆ ದಿಗ್ಭ್ರಮೆಗೆ ಒಳಗಾಗುತ್ತಾನೆ. ಹಳೆ ಮನೆಯ ಜಾಗದಲ್ಲಿ ಹೊಸ ಮನೆ ನಿರ್ಮಾಣವಾಗಿದೆ. ಹೆಂಡತಿ ಹೊಸ ವಸ್ತ್ರಾದಿ ಆಭರಣಗಳಿಂದ ಶೋಭಿಸುತ್ತಿದ್ದಾಳೆ. ಸುಧಾಮ ತನ್ನ ಕಣ್ಣುಗಳನ್ನು ತಾನೇ ನಂಬದಾದ. ಆಗ ಸುಧಾಮನ ಹೆಂಡತಿ ಶ್ರೀಕೃಷ್ಣನ ಪವಾಡವನ್ನು ಹೇಳುತ್ತಾಳೆ. ಸುಧಾಮ ಕೃಷ್ಣನ ಮಹಿಮೆಗೆ ರೋಮಾಂಚನಗೊಂಡು ಪುಳಕಿತನಾಗುತ್ತಾನೆ.

“ಕೆರೆಯ ನೀರ ಕೆರೆಗೆ ಚೆಲ್ಲಿ ವರಗಳ ಪಡೆವೆನೆಂದು
ಹರಿಯು ಕೊಟ್ಟ ಭಾಗ್ಯ ಹರಿಗೆ ಅರ್ಪಿಸಿದನು”[೪೪]

[illegible]

[illegible]

[illegible]

ಒಟ್ಟಾರೆಯಾಗಿ ಹೇಳುವುದಾದರೆ "ಸಂಸ್ಕೃತ ಭಾಗವತದ ಭಾವವನ್ನು ಚೆನ್ನಾಗಿ ಹೀರಿದ ಭೀಮವ್ವನವರ ಹಾಡಿನ ಮುಂದಿನ ಭಾಗದಲ್ಲಿ ಬರುವ ವಿಶೇಷಗಳು ವಸ್ತುವಿನಲ್ಲಿ ಭಿನ್ನವಾಗದೆ ವರ್ಣನೆಯಲ್ಲಿ ಭಾವಸೂಕ್ಷ್ಮಗಳನ್ನು ಅಳವಡಿಸುವ ಮೂಲಕ ವಿಶಿಷ್ಟವಾಗುತ್ತವೆ."[೪೫]

ಭೀಮವ್ವನವರು ರಚಿಸಿರುವ ದೀರ್ಘ ಹಾಡುಗಳು ಕೌಶಲದಿಂದ, ವರ್ಣನೆಯಿಂದ ಕೂಡಿವೆ. ಸರಳ ಭಾಷೆಯ ಬಳಕೆ ಓದುಗರ ಮನಸ್ಸನ್ನು ಸೆಳೆಯುತ್ತದೆ. ಅದಕ್ಕೂ ಮುಖ್ಯವಾಗಿ ಕೃತಿಯಲ್ಲಿನ ಪಾತ್ರಗಳ ಜೀವನ, ಯೋಚನೆ ಒಂದಕ್ಕೊಂದು ಭಿನ್ನವಾಗಿವೆ. ಪುರಂದರದಾಸರು ಸುಧಾಮನ ಹಾಡನ್ನು ಕೆಲವೇ ಕೆಲವು ಅಂದರೆ ೩೬ ನುಡಿಗಳಲ್ಲಿ ಮುಗಿಸುತ್ತಾರೆ. ಆದರೆ ಭೀಮವ್ವನವರು ಅದೇ ಕಥಾ ವಸ್ತುವುಳ್ಳ ಹಾಡನ್ನು ೧೯೩ ನುಡಿಗಳಲ್ಲಿ ಸುಧಾಮನ ಜೀವನ, ಕೃಷ್ಣನ ಕರುಣೆಯನ್ನು ಸೆರೆಹಿಡಿದಿದ್ದಾರೆ. ಹೀಗೆಯೇ 'ಪತಿದಾನಕೊಟ್ಟ ಹಾಡು', 'ದುಷ್ಯಂತ-ಶಕುಂತಲೆಯ ಹಾಡು', 'ರತಿಕಲ್ಯಾಣ' ಇನ್ನೂ ಮುಂತಾದ ದೀರ್ಘದ ಹಾಡುಗಳ ವಸ್ತು, ಅದನ್ನು ಸಶಕ್ತವಾಗಿ ಬೆಳೆಸುವ ರೀತಿ ಮನೋಜ್ಞವಾಗಿದೆ.

ನವವಿಧ ಭಕುತಿಯಲ್ಲಿ 'ಕೀರ್ತನೆ'ಯೂ ಒಂದಾಗಿದೆ. ಭಗವಂತನ ಮಹಿಮೆಯನ್ನು, ಅನಂತತೆಯನ್ನು ಕೊಂಡಾಡುವುದು ದಾಸರಿಗೆ ಹೆಮ್ಮೆಯ ವಿಷಯ. ಹರಿದಾಸ ಸಾಹಿತ್ಯದಲ್ಲಿ ಭಗವಂತನ ಅವತಾರಗಳನ್ನು ಚಿತ್ರಿಸಿದ 'ದಾಸರೇ' ಇಲ್ಲವೆನ್ನಬಹುದು. ತಮ್ಮ ಗ್ರಹಿಕೆಗೆ ಅನುಗುಣವಾಗಿ ಚಿತ್ರಿಸಿದ್ದಾರೆ. ಹಾಗೆ ಚಿತ್ರಿಸುವುದು ಕೂಡ ಪರಂಪರೆಯಾಗಿದೆ ಎಂದರೆ ತಪ್ಪಾಗಲಾರದು. ಆದ್ದರಿಂದ ದಶಾವತಾರ ಸ್ತುತಿಗಳು ಹರಿದಾಸ ಸಾಹಿತ್ಯದಲ್ಲಿ ಹೇರಳವಾಗಿ ಮೂಡಿವೆ. ಭೀಮವ್ವನವರಲ್ಲಿ ಸಹ ಹೇರಳವಾಗಿ ದಶಾವತಾರ ಸ್ತುತಿಗಳನ್ನು ಕಾಣಬಹುದು. "ದಶಾವತಾರ ಸ್ತುತಿಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬರೆದಿರುವ ಹರಪನಹಳ್ಳಿ ಭೀಮವ್ವ ಅವಕಾಶವಾದಗಲೆಲ್ಲ ದಶಾವತಾರವನ್ನು ನಿರೂಪಿಸುತ್ತಾಳೆ. ಸ್ವತಂತ್ರವಾದ ಹಾಡಾಗಿರಬಹುದು. ಅಥವಾ ಹಾಡಿನ ಒಂದು ಭಾಗವಾಗಿರಬಹುದು. ಹರಿಸ್ತುತಿ ಬಂದ ಕಡೆಯಲೆಲ್ಲ ದಶಾವತಾರ ಪ್ರಸ್ತಾಪ ಮಾಡಿರುವುದು ಭೀಮವ್ವನ ಸಂಪ್ರದಾಯ. ಗೋಪನಾರಿಯರ ವಿಲಾಪದಲ್ಲಿ, ದ್ರೌಪದಿಯ ಮೊರೆಯಲ್ಲಿ, ಉದಯರಾಗದಲ್ಲಿ, ಕೃಷ್ಣಸ್ತುತಿಯಲ್ಲಿ, ಕೃಷ್ಣಸತ್ಯಭಾಮೆಯರ ಸರಸ ಸಂಭಾಷಣೆಯಲ್ಲಿ, ಮಂಗಳದ ಹಾಡುಗಳಲ್ಲಿ ಹೀಗೆ ದಶಾವತಾರವನ್ನು ಅನೇಕ ಸಂದರ್ಭಗಳಲ್ಲಿ ನಿರೂಪಿಸುತ್ತಾಳೆ."[೪೬]

ದಶಾವತಾರದ ಕಲ್ಪನೆ ಅವ್ವನ ಹಾಡಿಗೆ ಇಂಬು ನೀಡಿದೆ. ಆತ್ಮೀಯ ಭಾವದಿಂದ ಹರಿಯನ್ನು ತೃಪ್ತಿಯಾಗುವಷ್ಟು ಕೀರ್ತನೆಗಳಲ್ಲಿ ಮನಸೋ ಇಚ್ಚೆ ಕೊಂಡಾಡಿದ್ದಾಳೆ. ಹಾಗೆ ಕೊಂಡಾಡುವಾಗ ಎಲ್ಲಿಯೂ ಕ್ಲಿಷ್ಟತೆ ಇಲ್ಲ ಸರಳತೆ ಸೌಂದರ್ಯದಲ್ಲಿ ಮುಳುಗಿ ಹೋಗಿದೆ. ಆಡು ನುಡಿಯ ಭಾಷೆ, ಸರಳತೆ, ಸೌಂದರ್ಯ ಪರಸ್ಪರವಾಗಿ ಕೂಡಿಕೊಂಡು ಕೀರ್ತನೆಗೆ ಮೌಲ್ಯದ ಹೆಚ್ಚುಗಾರಿಕೆಯನ್ನು ತಂದುಕೊಟ್ಟಿವೆ. ಉದಾ

"(ಮತ್ಸ್ಯ) ವಾರಿಧಿಯೊಳಗೆ ಓಡ್ಯಾಡಿ ನಾರುವುದೇನೊ ಮಂ

(ಕೂರ್ಮ) ದರವ ಹೊತ್ತು ನೀ ಧರನಾ (ಧರೆಯೇ) ಹೊರುವುದೇನು (ವರಾಹ)

(ನಾರಸಿಂಹ) ಊರು (ಉರ) ಬಗೆದು ಕರುಳ್ಹಾರ ಹಾಕುವುದೇನು
(ವಾಮನ) ದೂರ ಬೆಳೆದು ಸುಳ್ಳ (ಸುಳ್ಳೆ?) ಪೋರನೆನಿಪುದೇನು
(ಭಾರ್ಗವ) ದೂರಾಗಿ ಜನನಿಕೊಂದ ಸ್ವಾರಸ್ಯಗಳೇನು
(ರಾಮ) ನಾರುಟ್ಯಾರಣ್ಯದಿ ನಾರಿಬಿಡುವುದೇನು ಅ
(ಕೃಷ್ಣ) ಪಾರ ಹೆಂಡಿರ ಸಂಸಾರ ಘೋರವಿದೇನು
(ಬುದ್ಧ) ಜಾರಾಗಿ ಜನಕೆ ಶರೀರ ತೋರುವುದೇನು
(ಕಲ್ಕಿ) ಕ್ರೂರ ಕಲಿಗಳ ನೀ ಸಂಹಾರ ಮಾಡುವುದೇನು
ಧೀರ ನಮ್ಮೆದುರು ನಿಲ್ಲಬಾರದೇನು

ಭೀಮವ್ವನವರ ದಶಾವತಾರದ ಹಾಡುಗಳಲ್ಲಿ "ಸಖ್ಯ ಭಾವದಿಂದ ಹರಿಯನ್ನು ಆರಾಧಿಸುವದಲ್ಲಿ ದಶಾವತಾರಗಳ ಆವಿರ್ಭಾವವಿದೆ."[೫೭] ಭೀಮವ್ವನವರು ರಚಿಸಿದ ದಶಾವತಾರ ಸ್ತುತಿಗಳು ಹರಿದಾಸ ಸಾಹಿತ್ಯದಲ್ಲಿ ವಿಶೇಷವಾಗಿ ಮೂಡಿಬಂದಿವೆ.

ಭೀಮವ್ವನವರ ಸಂಗ್ರಹಗಳಲ್ಲಿ ಪ್ರತ್ಯೇಕ ನಿಂದಾಸ್ತುತಿಯನ್ನು ಕಾಣಲಾಗದು. ನಿಂದಾಸ್ತುತಿಗಳೇನಿದ್ದರೂ ದಶಾವತಾರದ ವರ್ಣನೆಯ ಹಿನ್ನೆಲೆಯಲ್ಲಿಯೇ ಮೂಡಿಬಂದಿವೆ. ಬಳಕೆಯಾಗಿರುವ ನಿಂದೆ ಹರಿಯ ಮಹಿಮೆಯನ್ನು ಇನ್ನಷ್ಟು ವಿವರವಾಗಿ ವಿಸ್ತಾರವಾಗಿ ಹೇಳಲು ಪೂರಕವಾಗಿವೆ.

"ನೀರೊಳಗೆ ಮೀನಾಗ್ಕೊಳನು ನಾರು ತಿದ್ದಿ ಬೆಟ್ಟದ
ಹೇರೆ ಭಾರಕ್ಕಂಜಿ ಮೋರೆ ಕೆಳಗೆ ಮಾಡಿದ್ಯೊ
ಬೇರು ತಿಂದು ಗುಡ್ಡ ಗಹ್ವರ ತಿರುಗಿ ಕಂಬದೊಳಗೆ
ಸೇರಿ ಕರುಳ ಹಾರಕ್ಕಾಗಿ ತೆರೆದು ಬಾಯನು
ನೀನು ನನ್ನಂತೆ ಬಡವನಾಗಿ ಬೇಡಿಕೊಂಡು ಕಾಮ
ಧೇನುವನ್ನು ಕಟ್ಟಿ ಕಾಲ ಕಳೆಯಲಿಲ್ಲವೆ.
ನಾರುನುಟ್ಟು ನಾರಿ ಬಿಟ್ಟು ಘೋರ ಅರಣ್ಯ ತಿರುಗಿ
ಚೋರ ತನವ ಮಾಡಿ ಬೈಸಿ ಕೊಳ್ಳಲಿಲ್ಲವೆ."[೫೮]

ಇತರ ಪುರುಷ ಮತ್ತು ಮಹಿಳಾ ಕೀರ್ತನ ಕಾರರಲ್ಲಿ 'ಆತ್ಮನಿವೇದನೆ'ಯುಳ್ಳ ಅನೇಕ ಕೀರ್ತನೆಗಳನ್ನು ಕಾಣಬಹುದು. ಆದರೆ ಭೀಮವ್ವನವರಲ್ಲಿ ಗೌಣವಾಗಿವೆ. ಬಹುಶಃ ಭೀಮವ್ವನವರು ತಮಗೆ ಒದಗಿಬಂದ ಕಷ್ಟಗಳ ಕುರಿತು ಗಾಢವಾಗಿ ಚಿಂತಿಸದೆ ಸಂಪೂರ್ಣವಾಗಿ ಭಕ್ತಿಯಲ್ಲಿ ತೊಡಗಿಸಿಕೊಂಡಿದ್ದರಿಂದ ಆತ್ಮ ನಿವೇದನೆ ಅಷ್ಟಾಗಿ ಮೂಡಿ ಬಂದಿಲ್ಲದಿರಬಹುದು. ಅಂದ ಮಾತ್ರಕ್ಕೆ ಉಳಿದ ದಾಸರಲ್ಲಿ 'ಭಕ್ತಿ' ಗಾಢವಾಗಿ ಇಲ್ಲವೆನ್ನಲಾಗದು.

"ಅಪ್ಪ ವೆಂಕೋಬನ ನೇತ್ರದಲಿ ನೋಡಿ ಪವಿತ್ರಳಾದೆನೋ ಇಂದಿಗೆ
ತಪ್ಪುಗಳೆಲ್ಲ ನಿನಗರ್ಪಿಸುವೆ ನಾನೀಗ

ಒಪ್ಪಿಕೋಬೇಕೊ ತಿಮ್ಮಪ್ಪ ಕರುಣಾ ನಿಧಿಯ.
ಸಾಕು ನರಹರಿ ಭವದ ಬವಣೆಂ
ದ್ಯಾಕೆ ಬಳಲಿಸುವೆ ಹರಿ ಹರಿ
ಶ್ರೀ ಕಮಲಾಪತಿ ಶರಣ ಜನರೊಳ
ಗ್ಯಾಕಿ ಪೊರೆಯನ್ನರಿಹರಿ"[೪೯]

ಕೀರ್ತನೆಗಳಲ್ಲಾಗಲೀ, ದೀರ್ಘಹಾಡಿನ ಪಾತ್ರಗಳ ಮುಖಾಂತರವಾಗಲಿ ಆತ್ಮ ನೀವೇದನೆಯನ್ನು ತೋಡಿಕೊಂಡವರಲ್ಲ. ಆತ್ಮ ನಿವೇದನೆ ಗಾಢವಾಗಿ ಇಲ್ಲದ ಭೀಮವ್ವ ಪ್ರಶ್ನಾತೀತವಾಗಿಯೇ ಉಳಿಯುತ್ತಾಳೆ.

ಭೀಮವ್ವನವರು ತಮ್ಮ ಜೀವನದ ಅತಿ ಹೆಚ್ಚಿನ ಸಮಯವನ್ನು ಭಗವಂತನ ಸೇವೆ ಮತ್ತು ವಿವಿಧ ಸಂಪ್ರದಾಯ ಆಚರಣೆಗಳಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದ್ದರು. "ಭೀಮವ್ವ ಸಂಪ್ರದಾಯ ಪ್ರಿಯಳೆಂಬುದು ಅವಳ ಹಾಡುಗಳಿಂದ ಸ್ಪಷ್ಟವಾಗುತ್ತದೆ. ಮನಸ್ಸಿಗೆ ಒಂದು ನೈತಿಕ ಬಲ ದೃಢತೆಗಳನ್ನು, ಪಡೆಯಲು ಸಹಾಯಕವಾಗುವ ವ್ರತ-ಕಥೆಗಳಿಗೆ ಅವಳ ಹಾಡುಗಳಲ್ಲಿ ಸಿಂಹಪಾಲು. ಶುಕ್ರವಾರದ ಹಾಡು, ಶನಿವಾರದ ಹಾಡು, ಬುಧ ಬೃಹಸ್ಪತಿ ಹಾಡು, ಲಕ್ಷ್ಮಿದೇವಿಹಾಡು, ಕೃಷ್ಣ ದಾನವ್ರತದ ಹಾಡು ಮೊದಲಾದುವನ್ನು ಉದಾಹರಿಸಬಹುದು. ಅವ್ವನ ಕಾಲದ ಬ್ರಾಹ್ಮಣ ಕುಟುಂಬಗಳ ಹೆಣ್ಣುಮಕ್ಕಳು ಆಚರಿಸುತ್ತಿದ್ದ ಬಗೆ ಬಗೆಯ ವ್ರತಗಳು ಅವುಗಳನ್ನಾಚರಿಸುವ ಉದ್ದೇಶ, ಕ್ರಮ, ಫಲಾಫಲಗಳ ಕಲ್ಪನೆಗಳು ಮೇಲಿನ ಎಲ್ಲ ಹಾಡುಗಳಲ್ಲಿಯೂ ನಿರೂಪಿತವಾಗಿವೆ. ಸಾಮಾನ್ಯವಾಗಿ ಎಲ್ಲ ವ್ರತಾಚರಣೆಯ ಉದ್ದೇಶವೂ ಮುತ್ತೈದೆತನ ಹಾಗೂ ಸಂತಾನ, ಸೌಭಾಗ್ಯಗಳ ಪ್ರಾಪ್ತಿ ಕಟ್ಟಿದ 'ಮಾಂಗಲ್ಯ ಕುಂಕುಮ ಗಾಜಿನ ಬಳೆ ಮುತ್ತೈದೆತನ ಸಂಪತ್ತು ಸಂತಾನಕ್ಕೆ' ಬೇಡಿಕೆ ಭಗವಂತನ ಕರುಣೆ ಪ್ರಸಾದಗಳಿಂದ ಮಾತ್ರ ಅವು ದೊರೆಯುವುದೆಂಬ ನಂಬಿಕೆಯೇ ಅವುಗಳ ಹಿನ್ನೆಲೆ."[೫೦]

ಮೇಲಿನ ಸಂಪ್ರದಾಯ ಆಚರಣೆಗಳನ್ನಲ್ಲದೆ ದಿವಸೀ ಗೌರಿ, ಮಂಗಳಗೌರಿ, ಸ್ವರ್ಣಗೌರಿ, ವರಮಹಾಲಕ್ಷ್ಮೀ, ಮುಂತಾದ ಹಬ್ಬ ಮತ್ತು ವ್ರತಗಳನ್ನು ಕುರಿತು ಕೀರ್ತನೆಯನ್ನು ಸಹ ರಚಿಸಿದ್ದಾರೆ.

ವಿವಾಹದ ಸಂದರ್ಭದಲ್ಲಿ ಮಾಡಲಾಗುವ ಅನೇಕ ಆಚರಣೆಗಳಾದ ಹಸೆಗೆ ಕರೆಯುವುದು, ಆರತಿ ಎತ್ತುವುದು, ಆರ್ಶೀವಾದ ಮಾಡುವುದು, ಬಾಗಿಲುಕಟ್ಟುವುದು, ಉರುಟಣೆ ಮಾಡುವುದು, ಜೋಗುಳ ಕುರಿತ ಹಾಡುಗಳು ಮಾರ್ಮಿಕವಾಗಿವೆ. ಒಂದು ಜನ ಸಮುದಾಯದ ಸಂಸ್ಕೃತಿಯನ್ನು ಈ ಹಾಡುಗಳಲ್ಲಿ ಹಿಡಿದಿಡಲಾಗಿದೆ. ಬಾಗಿಲು ಕಟ್ಟುವ ಹಾಡುಗಳಲ್ಲಿ ಬರುವ ಸಂಭಾಷಣೆ ಸಂಗತಿಗಳು ಹಾಸ್ಯಭರಿತವಾಗಿವೆ. ಭೀಮವ್ವನವರ ಸುಪ್ತ ಪ್ರತಿಭೆ ಇಲ್ಲಿ ಹೊರ ಹೊಮ್ಮಿದೆ. ಈ ಹಾಡುಗಳು ಪ್ರಶ್ನೆಗೆ ಉತ್ತರ ಎಂಬಂತೆ ಮೂಡಿ ಬಂದಿವೆ. 'ಪಾರ್ವತಿದೇವಿ ಮತ್ತು ಪರಮೇಶ್ವರನ' ಮಧ್ಯೆ ಮೂಡಿಬಂದ ಬಾಗಿಲು ಕಟ್ಟುವ ಹಾಡಿನಲ್ಲಿ ಪಾರ್ವತಿಯ ಜಾಣ್ಮೆ ಉತ್ತರ ಬಹು ಸುಂದರವಾಗಿದೆ. ಪಾರ್ವತಿಯ ಜಾಣ್ಮೆಯ ಮಾತುಗಳಿಗೆ ಪರಮೇಶ್ವರನು ಸೋತು ಹೋಗುವುದರೊಂದಿಗೆ ಕೀರ್ತನೆ ಮುಗಿದು ಹೋಗುತ್ತದೆ.

[illegible]

ಇಂದುವದನೆ ಪಾರ್ವತಿಯೆ ನಾ ಇಲ್ಲಿಗೆ
ಬಂದೆನು ಬಾಗಿಲು ತೆಗೆಯ ಜಾಣೆ
ಬಂದೆನು ಬಾಗಿಲು ತೆಗೆಯ ||೧||

ಬಂದವರ್‍ಯಾರೀ ವ್ಯಾಳ್ಯಾದಿ ಬಾಗಿಲು
ಬಂದು ತೆಗೆಯೋರ್‍ಯಾರಿಲ್ಲ ಈಗ
ಬಂದು ತೆಗೆಯೊರ್‍ಯಾರಿಲ್ಲ ||೨||

ಕುಸುಮಲೋಚನೆ ಕೇಳೆ ಪಶುಪತಿನಾ ಬಂದೆ
ಕುಶಲದಿ ಬಾಗಿಲು ತೆಗೆಯೆ ಜಾಣೆ
ಕುಶಲದಿ ಬಾಗಿಲು ತೆಗೆಯೆ ||೩||

ಪಶುಗಳೆಲ್ಲ ಪತಿಯಾದರೆ ನಿನಕೊಂಬು
ಹಸನಾಗಿ ತೋರಿಸೊ ಎನಗೆ ಕೊಂಬು
ಹಸನಾಗಿ ತೋರಿಸೊ ಎನಗೆ ||೬||

ಸರ್ಪಶರೀರದಲ್ಲೆತ್ತಿಕೊಂಡಿರುವಂಥ
ಶ್ರೇಷ್ಠ ಶಿವನು ನಾ ಬಂದೀನೆ ಜಾಣೆ
ಶ್ರೇಷ್ಠ ಶಿವನು ನಾ ಬಂದಿದ್ದೇನೆ ||೭||

ಸರ್ಪಸೇರಿರುವಂಥ ಹುತ್ತ ನೀನಾದರೆ
ಇತ್ತ ಬರುವೋದುಚಿತಲ್ಲ ಪೋಗೊ
ಇತ್ತ ಬರುವೋದು ಚಿತಲ್ಲ ||೮||

ಕಾಂತೆ ಪಾರ್ವತಿ ನೀಲಕಂಠ ನಾ ಬಂದೀನಿ
ಸಂತೋಷದಿ ಬಾಗಿಲು ತೆಗೆಯೆ
ಸಂತೋಷದಿ ಬಾಗಿಲು ತೆಗೆಯ ||೯||

ಕಂಠದೊಳಗೆ ಕಪ್ಪಿದ್ದರೆ ನೀ ನವಿ
ಲಂತೆ ಕುಣಿದು ತೋರಿಸೆನೆಗೆ ನವಿ
ಲಂತೆ ಕುಣಿದು ತೋರಿಸೆನಗೆ"[೫೧] ||೧೦||

ಈ ರೀತಿಯ ಮನಮೋಹಕ ಸಂಭಾಷಣೆಯನ್ನು ಕೃಷ್ಣ-ರುಕ್ಮಿಣಿ, ಕೃಷ್ಣ-ಸತ್ಯಭಾಮ, ಅರ್ಜುನ-ದ್ರೌಪದಿಯರ ಬಾಗಿಲು ಕಟ್ಟುವ ಹಾಡುಗಳಲ್ಲಿ ಗಮನಿಸಬಹುದು. ಆ ಹಾಡುಗಳಲ್ಲಿಯೂ ಕೂಡ ಗಂಡು-

ಹೆಣ್ಣಿನ ನಡುವೆ ನಡೆಯುವ ಮಧುರ ಸಂಭಾಷಣೆಯನ್ನು ನೋಡಬಹುದು. ಪ್ರಶ್ನೆಗೊಂದು ಉತ್ತರ ಎಂಬ ಧಾಟಿಯಲ್ಲಿ ಮೂಡಿಬಂದಿರುವ ಹಾಡುಗಳು ಚಿತ್ತಾಕರ್ಷಕವಾಗಿವೆ. ಬಾಗಿಲು ಕಟ್ಟುವ ಹಾಡುಗಳಲ್ಲಿ ಗಂಡಿನ ಪಾತ್ರಗಳು ಹೆಣ್ಣಿನ ಪಾತ್ರದ ವಿರುದ್ಧ ಸೋಲುತ್ತವೆ. ಹೆಣ್ಣಿನ ಜಾಣ್ಮೆಯ ಉತ್ತರಗಳಿಗೆ ಗಂಡು ಪ್ರಶ್ನೆಯನ್ನು ಎಸೆಯುವಲ್ಲಿ ವಿಫಲನಾಗುತ್ತಾನೆ. ಆ ಬಾಗಿಲು ಕಟ್ಟುವ ಹಾಡುಗಳಲ್ಲಿ ಗಂಡಿಗಿಂತ ಹೆಣ್ಣು ಸೃಜನಾತ್ಮಕವಾಗಿ ಕಾಣಬರುತ್ತಾಳೆ. ಸೃಜನಾತ್ಮಕತೆಯು ಕಲೆ, ಸಂಪ್ರದಾಯದ, ಆಚರಣೆಯಲ್ಲಿ, ಹೆಚ್ಚಾಗಿ ಭಾಗವಹಿಸುವುದರಿಂದ ಬರದಿರಬಹುದು. ಇಂದಿಗೂ ಕೂಡ ಅನೇಕ ಆಚರಣೆಯಲ್ಲಿ ಹೆಣ್ಣು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾಳೆ.

ಭೀಮವ್ವನವರು ಮೂಲತಃ ವೈಷ್ಣವ ಸಂಪ್ರದಾಯದ ಹಿನ್ನೆಲೆಯಲ್ಲಿ ಬೆಳೆದು ಬಂದವರು. ಜೊತೆಗೆ ಸುತ್ತಮುತ್ತಲಿನ ಪರಿಸರವೂ ಕೂಡ ಮಧ್ವ ಸಂಪ್ರದಾಯದಿಂದ ಕೂಡಿತ್ತು. ಕೇವಲ ಪ್ರವಚನದಿಂದ ಆಲಿಸಿದ ಮಧ್ವ ಮತದ ತತ್ವವನ್ನು ಸಶಕ್ತವಾಗಿ ನಿರೂಪಣೆ ಮಾಡಿದ್ದಾಳೆ. 'ಸ್ತುತಿಮಣಿ ಮಾಲಿಕೆ' ಕೃತಿಯಂತೂ ಸಂಪೂರ್ಣವಾಗಿ ಮಧ್ವಮತ ತತ್ವದ ಹಿನ್ನೆಲೆಯಲ್ಲಿಯೇ ಮೂಡಿಬಂದಿದೆ ಎಂದರೆ ತಪ್ಪಾಗಲಾರದು. ಮಧ್ವಮತ ತತ್ವವನ್ನು ಗಂಭೀರವಾಗಿ ಸ್ವತಃ ಅಧ್ಯಯನ ಮಾಡದೆ ಚರ್ಚಿಸದೆ ಎಲ್ಲಿಯೂ ಚ್ಯುತಿಗೆ ಒಳಗಾಗದಂತೆ ಆಡುನುಡಿಯಲ್ಲಿ ಕಟ್ಟಿಕೊಟ್ಟಿದ್ದು ಭೀಮವ್ವನವರ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ.

'ಸುತ್ತಿಮಣಿ ಮಾಲಿಕಾ' ಕೃತಿಯ ಪೂರ್ವದಲ್ಲಿ ಮರೆಯದೆ ಸಲಹೆನ್ನೆನು ಎಂಬ ಹಾಡಿನಲ್ಲಿ ಮಧ್ವಚಾರ್ಯರ ಧೀಮಂತ ವ್ಯಕ್ತಿತ್ವವನ್ನು ಒಂದು ನುಡಿಯಲ್ಲಿ ಪರಿಚಯಿಸುತ್ತಾಳೆ.

"ಮಧ್ಯಗೇಹರಲ್ಲಿ ಜನಿಸಿ ಸುಜನರಿಗೆ
ಶುದ್ಧ ಶಾಸ್ತ್ರದ ಬೋಧಿಸಿ
ಗೆದ್ದು ಮಾಯಾವಾದಿಗಳ ವಾದಪ್ರ
ಸಿದ್ಧನೆನಿಸಿದೆ ಮಧ್ವಮುನಿ
ಮುದ್ದು ಭೀಮೇಶಕೃಷ್ಣನ ಪ್ರ
ಸಿದ್ಧಿ ಮಾಡಿದೆ ಪರಮ ಗುರುವೆ"[೫೨]

ಜೀವನವು ಭದ್ರಬುನಾದಿಯ ಮೇಲೆ ರಚಿತವಾದುದಲ್ಲ. ಅದು ಅಸ್ವಾತಂತ್ರದಿಂದ ಕೂಡಿದ್ದು, ಇಂಥ ಜೀವನಕ್ಕೆ ಹರಿಯೇ ಆಧಾರ. ಅವನು ಸರ್ವ ವ್ಯಾಪ್ತನು ಹರಿಯ ನಿರ್ದೇಶನವಿಲ್ಲದೆ ಏನೂ ಮಾಡಲಾಗದು. ಜೀವನದಲ್ಲಿ ನಮ್ಮ ಅಸ್ತಿತ್ವವನ್ನು ದಿನನಿತ್ಯದ ಪರಿಕರದೊಂದಿಗೆ ಹೋಲಿಸಿ ಹರಿಯ ಪಾರಮ್ಯವನ್ನು ಹೇಳಿರುವುದು ಹೃದಯ ವೇದ್ಯ ಸಂಗತಿ.

"ಅಡುಗೆ ಮಾಡುವವ ಕೈ ಹಿಡಿದ ಹುಟ್ಟಿನಂತೆ
ನಡೆಯದೋ ನಮ್ಮ ಸ್ವಾತಂತ್ರ/ಸ್ವಾತಂತ್ರ ಮೂರ್ಲೋಕ
ದೊಡೆಯ ನೀ ಕರ್ತೃ ಜಗಕ್ಕೆಲ್ಲಾ ಇಳ"[೫೩]

ಶ್ರೀಮಧ್ವಾಚಾರ್ಯರು ಬೋಧಿಸಿದ ಅಥವಾ ಪ್ರತಿಪಾದಿಸಿದ ಪಂಚಭೇದ ತತ್ವಗಳನ್ನು ಒಂದೇ

ನುಡಿಯಲ್ಲಿ ಚಿಕ್ಕದಾಗಿ, ಚೊಕ್ಕದಾಗಿ ಹೇಳಿದ್ದಾಳೆ. ಯಾವುದೇ ಗೊಂದಲವಿಲ್ಲದೆ ಸುಲಭವಾಗಿ ಅರ್ಥವಾಗುವಂತೆ ಹೇಳಿರುವುದು ಅಚ್ಚರಿಯೆ ಸರಿ.

"ಜೀವ ಜೀವಕು ಭೇದ ಜೀವ ಜಡಕೂ ಭೇದ
ಜಡಜಡಕೆ ಭೇದ ನಿನಗಿನ್ನು ನಿನಗೆ ಭೇದಾದರ್‍ಯೆನ್ನೊಳು
ಭೇದಬುದ್ಧಿ ಬ್ಯಾಡಿನ್ನು ೬೭"[೫೪]

ಭಗವಂತನ ಅಸ್ತಿತ್ವವನ್ನು ಗಾತ್ರದಲ್ಲಿ ಹಿಡಿಯಲಾಗದು. ಅದು ಮಿತಿಗೆ ಸಿಲುಕದ ವ್ಯಕ್ತಿತ್ವ. ಸಾಮಾನ್ಯ ದೃಷ್ಟಿಗೆ ತೋರಿ ತೋರದಲೆ ಹಾಗೆ ಇದ್ದಾನೆ. ಸ್ಥಾವರದಂತಿದ್ದರೂ ಜಂಗಮನಾಗಿದ್ದಾನೆ. ಜಂಗಮನಂತಿದ್ದರೂ ಸ್ಥಾವರದಂತಿದ್ದಾನೆ. ಅವನ ಇರುವಿಕೆಯನ್ನು ಭೀಮವ್ವನವರು ಚೆನ್ನಾಗಿ ಶೋಧಿಸಿದ್ದಾರೆ.

"ಎಂಬತ್ತು ಕೋಟಿ ನಾಲ್ಕುಲಕ್ಷ ಜೀವಿಗ
ಳಿಂಬ್ಯಾಗೆ ನಿನಗೆ ದೊರಕಿತೊ ದೊರಕಿತೊ ಸ್ಥಾವರ
ಜಂಗಮದಲ್ಯಾಗಿರುವೆಯೊ ೬೯"[೫೫]

ಭಗವಂತನಿಗೆ ಜನನ-ಮರಣದ, ಸುಖ ದುಃಖದ ಭಾದೆಗಳಿಲ್ಲ ಮುಪ್ಪಿನ ಹಿಡಿತದಿಂದ ಹೊರಗಾಗಿದ್ದಾನೆ.

"ಜನನ ಮರಣವು ಶುಕ್ಲ ಶೋಣಿ ಸಂಬಂಧ ಜರೆ
ಜನ್ಮ ಕರ್ಮಗಳು ನಿನಗಿಲ್ಲ ನಿನಗಿಲ್ಲ ಸಂಸಾರ ಬವಣೆ
ನಿನಗುಂಟೆ ಬಹುದೂರ."[೫೬]

"ಲಕ್ಷ್ಮೀದೇವಿಯ ಹಿರಿಮೆಯನ್ನು ಸಾರುವ ಸೂಕ್ತಿಗಳು ಎರಡು. ಒಂದು ಅಂಭೃಣೀ ಸೂಕ್ತ ಮತ್ತು ಶ್ರೀ ಸೂಕ್ತಗಳು. ಅಂಭೃಣೀ ಎಂಬುದು ಮಹಾಲಕ್ಷ್ಮಿಯ ಪ್ರಮುಖ ರೂಪಗಳಲ್ಲಿ ಒಂದು ಎಂಬುದು ಶ್ರೀಮದಾನಂದ ತೀರ್ಥ ಭಗವತ್ಪಾದರು ತಮ್ಮ ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಉದಾಹರಿಸಿರುವ

"ಶ್ರೀ ಭೂ ದುರ್ಗಾಂ ಭೃಣೀ ಹ್ರೀಶ್ಚಮಹಾ ಲಕ್ಷ್ಮೀಶ್ಚ ದಕ್ಷಿಣಾ"[೫೭]

ಎಂಬ ಪೈಂಗಿ ಶೃತಿಯ ಮಾತಿನಿಂದ ತಿಳಿಯುತ್ತದೆ ಎನ್ನುತ್ತಾರೆ ಶ್ರೀಯುತ ಡಾ.ಪ್ರಭಂಜನಾಚಾರ್ಯರು. ಹರಿಕಥಾಮೃತಸಾರದ ಬೃಹತ್ತಾರತಮ್ಯ ಸಂಧಿಯಲ್ಲಿ ಶ್ರೀಜಗನಾಥ ದಾಸರು

"ಗುಣತ್ರಯಗಳ ಮಾನಿ ಶ್ರೀ ಕುಂ
ಭಣಿ ಮಹಾ ದುರ್ಗಾಂಭೃಣೀ ರು
ಕ್ಮಿಣಿಯು ಸತ್ಯ ಶಾಂತಿ ಕೃತಿಜಯ ಮಹಾಲಕುಮಿ
ಜನಕಜಾ ಕಮಲಾಲಯಾದ
ಕ್ಷಿಣಿಯ ಪದ್ಮಾ ತ್ರಿಲೋಕೇಶ್ವರಿ"[೫೮]

ಅಣು ಮಹತ್ತಿನೊಳಿದ್ದು ಉಪಮಾ ರಹಿತಳೆನಿಸುವಳು ಎಂದು ಸ್ತುತಿಸಿದ್ದಾರೆ. ಅವ್ವನವರ ಕೃತಿಯೊಂದರಲ್ಲಿ ಇದೇ ವರ್ಣನೆಯನ್ನು ಕಾಣಬಹುದು.

"ದುರ್ಗೆ ಪ್ರಳಯ ಜಲಧಿ ಭೂ ದೇವಿ
ಪ್ರಜ್ವಲಿಸುವ ಆಲದೆಲೆಯು ತಾನಾಗಿ
ನಿದ್ರೆಹಸಿವು ಬಿಟ್ಟು ನಿರುತದಿ ಆತನ
ಲಿದ್ದ ಳಂಭ್ರಣಿ ಸೂಕ್ತದಲಿ ಭೂದೇವಿ."[೫೯]

ಗುರುಗುಣಸ್ತವನದಲ್ಲಿ ಶ್ರೀ ಶ್ರೀ ವಾದೀಂದ್ರ ತೀರ್ಥ ಶ್ರೀಪಾದಂಗಳವರು

"ಶ್ರೀ ಭೂ ದುರ್ಗಾದ್ಯಗರಿತ ಪ್ರಚಯ ಪರಿಚಯೋದಾರ ಕಿರ್ಮೀರ ಭಾವಃ"

ಅಂದರೆ ಶ್ರೀಹರಿಯು ಲಕ್ಷ್ಮಿದೇವಿ ಭೂ ದೇವಿ ಮತ್ತು ದುರ್ಗಾದೇವಿಯರ ಕಡೆಗಣ್ಣು ನೋಟದಿಂದ ಉತ್ಪಪ್ನವಾದ ಕಾಂತಿಯುಳ್ಳವನಾಗಿದ್ದಾನೆ ಎಂದು ಶ್ರೀ ಹರಿಯನ್ನು ವರ್ಣಿಸುತ್ತಾರೆ. ಅವ್ವನವರು ಈ ಭಾಗವನ್ನು

"ಲಕ್ಷ್ಮಿ ಎರಡಕ್ಷ ಸಾಲದಲೆ ಶ್ರೀ ಭೂದುರ್ಗಾ
ಸಾಕ್ಷಾತ್ ಮೂರು ರೂಪಾಗಿ ರೂಪಾಗಿನಿಂತು ಆ
ರಕ್ಷದಲಿ ನೋಡುತಿರುವೊಳು"[೬೦]

ಎಂದು ಆಡುಭಾಷೆಯಲ್ಲಿ ಅತ್ಯಂತ ಸರಳವಾಗಿ ಚಿತ್ರಿಸಿದ್ದಾ.

ಭೀಮವ್ವನವರು ಅನಕ್ಷರಸ್ಥರಾಗಿದ್ದರೂ ಬೌದ್ಧಿಕತೆಯಲ್ಲಿ ಸಿರಿವಂತರು, ಮೇಲಿನ ಎಲ್ಲಾ ಉದಾಹರಣೆಗಳನ್ನು ನೋಡಿದಾಗ ಭೀಮವ್ವನವರ ಗ್ರಹಣ ಶಕ್ತಿ ತುಂಬಾ ಹಿರಿದಾಗಿದೆ ಎಂದೆನಿಸುತ್ತದೆ. ಹೀಗೆ ಸಂಸ್ಕೃತದ ಸಾಹಿತ್ಯದ ತತ್ವವನ್ನು, ಶ್ರೀಮಧ್ವಾಚಾರ್ಯರ ದ್ವೈತವಿಚಾರವನ್ನು, ದಾಸವರೇಣ್ಯರ ಚಿಂತನೆಗಳನ್ನು ಉತ್ತಮ ರೀತಿಯಲ್ಲಿ ಗ್ರಹಿಸಿಕೊಂಡು ಆಡು ನುಡಿಯಲ್ಲಿ ಆ ಎಲ್ಲಾ ವಿಚಾರಗಳನ್ನು ಹೇಳಿರುವುದು ಭೀಮವ್ವನವರಲ್ಲಿದ್ದ ಪ್ರಾಂಜಲ ಭಕ್ತಿಯಿಂದ ಸಾಧ್ಯವಾಗಿದೆ.

"ಮಧ್ವರ ಸಂದೇಶವನ್ನು ಬಿತ್ತರಿಸಿದ ಅನೇಕ ಯತಿವರೇಣ್ಯರನ್ನೂ, ದಾಸವರೇಣ್ಯರನ್ನೂ ಅವ್ವನವರು ತಮ್ಮ ಹಾಡುಗಳ ಮೂಲಕ ಕೊಂಡಾಡಿದ್ದಾರೆ. ಉದಾಹರಣೆಗೆ ಅವ್ವನವರು ಶ್ರೀ ಜಯ ತೀರ್ಥ ಪೂಜ್ಯಚರಣರನ್ನು ಶ್ರೀ ಶ್ರೀಪಾದರಾಜರನ್ನು, ಶ್ರೀ ವ್ಯಾಸರಾಜರು, ಶ್ರೀವಾದಿರಾಜರನ್ನು, ಶ್ರೀರಾಘವೇಂದ್ರ ತೀರ್ಥ ಶ್ರೀ ಪಾದರಿಗಳವರನ್ನು, ಶ್ರೀ ಸತ್ಯಬೋಧರು ಮುಂತಾದ ಯತಿಗಳನ್ನು ಪುರಂದರದಾಸರು, ಶ್ರೀ ವಿಜಯದಾಸರು, ಶ್ರೀ ಗೋಪಾಲದಾಸರು, ಶ್ರೀ ಜಗನ್ನಾಥ ದಾಸರು, ಶ್ರೀ ಮೊದಲಕಲ್ ಶೇಷದಾಸರು ಮುಂತಾದ ದಾಸರಾಯರುಗಳನ್ನು ಸ್ತುತಿಸಿದ್ದಾರೆ. ಕವಯತ್ರಿಯರಲ್ಲಿ ಬಹುಶಃ ಮಧ್ವ ಸಾಹಿತ್ಯವನ್ನು ಇಷ್ಟು ವಿಸ್ತೃತವಾಗಿ ಚಿತ್ರಿಸಿರುವವರಲ್ಲಿ ಅವ್ವನವರೇ ಪ್ರಪ್ರಥಮರು ಮಾತ್ರವಲ್ಲ ಅಗ್ರಮಾನ್ಯರೆಂದರೆ ಅತಿಶಯೋಕ್ತಿಯೇನಲ್ಲ!"[೬೧]

ಸುಳಾದಿ ದಾಸರೆಂದೆ ಖ್ಯಾತನಾಮರಾದ ವಿಜಯದಾಸರು ಒಂದು ಕಡೆಯಲ್ಲಿ ಹರಿಯ ಪಾರಮ್ಯವನ್ನು ಕೀರ್ತನೆಯೊಂದರಲ್ಲಿ ಸುಂದರವಾಗಿ ಹೇಳಿದ್ದಾರೆ. ಜೀವನದ ಪ್ರತಿಯೊಂದು ಕ್ಷಣವು ಅತ್ಯಮೂಲ್ಯವಾದುದು. ಆ ಕ್ಷಣಗಳೆಲ್ಲವೂ ದೈವಚಿಂತನೆಯಿಂದ ಕೂಡಿದವಾಗಿರಬೇಕು. ಭಗವಂತನ ನೆನೆಯದ ಕ್ಷಣಗಳೇ ಇರಬಾರದು. ಖ ಕೀರ್ತನೆ ಹೀಗಿದೆ.

"ಹರಿಯ ನೆನಸಿದ ದಿವಸ ಶುಭಮಂಗಳ
ಹರಿಯ ನೆನಸದ ದಿವಸ ಅವಮಂಗಳ ಪ
ಹರಿಯ ನೆನಸಿದ ನಿಮಿಷ ಆವಾಗಲೂ ಹರುಷ
ಹರಿಯ ನೆನಸದ ನಿಮಿಷ ದುರ್ಮಾನಸ
ಹರಿಯ ನೆನಸಿದ ಘಳಿಗೆ ಮುಕ್ತಿಯ ಬೆಳವಣಿಗೆ
ಹರಿಯ ನೆನಸದ ಘಳಿಗೆ ಅದು ಯಮನಬಳಿಗೆ ||೧||

ಹರಿಯ ನೆನಸಿದ ಪ್ರಹರ ಕುಲಕೋಟಿ ಉದ್ಧಾರಾ
ಹರಿಯ ನೆನಸದ ಪ್ರಹರ ಹೀನಾಚಾರ
ಹರಿಯ ನೆನಸಿದ ಹಗಲು ಮುಕ್ತಿಗೆ ಬಲುಮಿಗಿಲು
ಹರಿಯ ನೆನಸದ ಹಗಲು ನರಕಕ್ಕೆ ತೊಗಲು ||೨||

ಹರಿಯ ನೆನಸಿದ ದಿನವು ನರನಿಗೆ ಸುದಿನವು
ಹರಿಯ ನೆನಸದ ದಿನವು ದುರ್ದಿನವು
ಹರಿಯ ನೆನಸಿದ ನರನು ಅವನೇ ಕೃತಕರ್ಮನು
ಹರಿಯ ನೆನಸದ ನರನು ಜನ್ಮ ವ್ಯರ್ಥನು ||೩||

ಹರಿಯ ನೆನಸಿದ ರಾತ್ರಿ ತೀರ್ಥ ಕ್ಷೇತ್ರಯಾತ್ರೆ
ಹರಿಯ ನೆನಸದ ರಾತ್ರಿ ಮದ್ಯ ಪಾತ್ರೆ
ಪುರಂದರ ಪ್ರಿಯನದಿ ವಿಜಯ ವಿಠ್ಠಲನಂಘ್ರಿ
ಮರೆಯದಲೆ ತಾನಿತ್ಯ ನೆನದವನೇ ಮುಕ್ತ"[೨೨] ||೪||

ಬಹುಶಃ ಭೀಮವ್ವನರಿಗೆ ವೈಧವ್ಯ ಪ್ರಾಪ್ತಿಯಾದ ಮೇಲೆ ಭಕ್ತಿಯ ವಿಷಯದಲ್ಲಿ ಅಂತರ್ಮುಖಿಯಾದರು. ಮೇಲಿನ ಕೀರ್ತನೆಯ ಎಲ್ಲಾ ಲಕ್ಷಣಗಳು ಭೀಮವ್ವನವರಲ್ಲಿ ಮನೆ ಮಾಡಿದ್ದವು. ಸಂಪ್ರದಾಯದ ಹಾಡುಗಳನ್ನು ರಚಿಸುವಾಗಲೂ ಆಚರಣೆಗೆ ಸಂಬಂಧಿಸಿದ ಹಾಡುಗಳನ್ನು ರಚಿಸುವಾಗಲೂ ದೇವರನ್ನು ನೆನೆಯುವುದು ಬಿಟ್ಟಿಲ್ಲ, ಭೀಮವ್ವನವರು ತಮ್ಮ ಜೀವಿತಾವಧಿಯಲ್ಲಿ ಅನೇಕ ತೀರ್ಥಯಾತ್ರೆಗಳನ್ನು ಕೈಗೊಂಡಿದ್ದಾರೆ. ಆ ಅವಧಿಯಲ್ಲಿಯೂ ಕೂಡ ಅಂತರ್ಮುಖಿಯಾಗಿ ದೈವದ ಚಿಂತನೆ ನಡೆಸಿದ್ದಾರೆ. ಅಂತಲೇ ಅವರು ಗಂಗಾನದಿ, ಗೋದಾವರಿ ನದಿಯ ಕಂಡು ಆರ್ದ್ರರಾಗಿದ್ದಾರೆ. ಸಾಮಾನ್ಯರ ದೃಷ್ಟಿಯಲ್ಲಿ ಸದಾ ಹರಿಯುವ ದೊಡ್ಡ ನದಿ ಅಷ್ಟೆ, ಆದರೆ ಭೀಮವ್ವನವರು ಗಂಗಾನದಿಯ ಜನನ, ವಾಸ, ಮಹಿಮೆ ಎಲ್ಲವನ್ನು ನೆನೆಯುತ್ತಾರೆ.

[illegible]

“ವಾಮನನಖದಿಂದ ಒಡೆದು ಬ್ರಹ್ಮಾಂಡ
ಬಹಿರಾವರಣದಿಂದಿಳಿದೆಯೆ
ಬಹಿರಾವರಣದಿ ಇಳಿದು ನಿರಂಜನ
ಆಲಯದೊಳು ಬಂದೆ ಭರದಿಂದೆ ||೧||

ಹರಿಸಾದೋದಕವಾಗಿ ಹರಿದು ಬಂದೆಯೆ ನೀನು
ಹರನ ಜಟೆಯಲ್ವಾಸವ ಮಾಡಿ
ಹರನ ಜಟೆಯಲ್ವಾಸವ ಮಾಡಿ ನೀ
ಮೇರು ಗಿಯಲ್ಲಿ ನಾಲ್ಕು ಸೀಳಾದೆಯ್ತೆ ||೨||

ಯುಮುನಾ ಸರಸ್ವತಿ ಕೂಡಿ ಗಮನ ಮಾಡುವ ಗಂಗಾ
ಸಮನಾಗಿ ಹರಿದೆ ಸಂಗಮಳಾಗಿ
ಸಮನಾಗಿ ಹರಿದೆ ಸಂಗಮಳಾಗಿ ತ್ರಿವೇಣಿ
ಯುಗಳ ಪಾದಗಳಾರು ತೋರಿಸೆ”[೬೩] ||೬||

ಭೀಮವ್ವನವರ ಹೆಚ್ಚಿನ ಕೀರ್ತನೆಗಳಲ್ಲಿ ‘ದಶಾವತಾರ’ವೇ ವಿರಾಟ್ ಸ್ವರೂಪದಲ್ಲಿ ಮೂಡಿ ಬಂದಿದೆ. ಅವಕಾಶ ದೊರೆತಾಗ ಮತ್ತು ಅವಕಾಶ ಮಾಡಿಕೊಂಡು ದಶಾವತಾರದ ಮಹಿಮೆಯನ್ನು ಕೊಂಡಾಡಿದ್ದಾಳೆ. ಕೀರ್ತನೆಯಲ್ಲಿ ಬಳಕೆಯಯಾಗಿರುವ ಗಾದೆಗಳು ಕೀರ್ತನೆಯ ಹಿರಿಮೆಯನ್ನು ಹೆಚ್ಚಿಸಿವೆ. ಜೊತೆಗೆ ಕೀರ್ತನೆಯ ವಿಶಾಲ ಅರ್ಥಕ್ಕೆ ಪೂರಕವಾಗಿದೆ.

ಭೀಮವ್ವನವರ ಗ್ರಹಣ ಶಕ್ತಿ ಇಂದಿನ ಯುವ ಪೀಳಿಗೆಗೆ ಸ್ಫೂರ್ತಿದಾಯಕ. ಭೀಮವ್ವನವರನ್ನು ಅನುಕರಿಸುವುದು ಅಸಾಧ್ಯದ ಮಾತು. ಯಾಕೆಂದರೆ ಚಿಕ್ಕವಯಸ್ಸಿನಲ್ಲಿಯೇ ಹಲವಾರು ದುಃಖಗಳಿಗೆ ಎದುರಾಗಿ, ತಾರುಣ್ಯದಲ್ಲಿಯೇ ವೈಧವ್ಯ ಪ್ರಾಪ್ತಿಯನ್ನು ಅನುಭವಿಸಿದವರು. ತಮ್ಮ ದುಃಖ ಭರಿತ ಜೀವನಕ್ಕೆ ಕಳವಳಿಸದೆ ಭಕ್ತಿಗೆ ತಮ್ಮನ್ನು ಅರ್ಪಿಸಿಕೊಂಡರು. ಲೌಕಿಕದ ಸುಖವನ್ನು ದೂರಮಾಡಿ ಅಲೌಕಿಕ ಕಡೆಗೆ ಮುಖಮಾಡಿ ಜೀವನದ ಪ್ರತಿಯೊಂದು ಕ್ಷಣವನ್ನು ದೇವರ ಚಿಂತನೆಗೆ ಬಳಸಿಕೊಂಡರು. ಜೀವನದಲ್ಲಿ ಸಾಧನೆ ಕೈ ಕೊಂಡು ಶಿಸ್ತನ್ನು ಪಾಲಿಸಲು ಕಠಿಣವಾದ ವ್ರತ, ನಿಯಮ, ಉಪವಾಸಗಳನ್ನು ನಿಷ್ಠೆಯಿಂದ ಅನುಷ್ಠಾನ ಮಾಡಿ ಸಂಪ್ರದಾಯ ಬದ್ಧ ಜೀವನ ನಡೆಸಿದಳು.

ಭೀಮವ್ವನವರ ಬೌದ್ಧಿಕ ಜ್ಞಾನ ಇವತ್ತು ಜೀವಂತವಾಗಿ ಉಳಿಯುವಂತೆ ಮಾಡಿದೆ. ಅವರ ರಚನೆಗಳು ಪಂಡಿತರು ಅಚ್ಚರಿ ಪಡುವಷ್ಟು ಪ್ರಬುದ್ಧವಾಗಿವೆ. “ಸಾಮಾನ್ಯವಾದ ಹಳ್ಳಿಯ ಹೆಂಗಸರೂ ಸಹ ಬದುಕನ್ನು ಸಾರ್ಥಕ ಪಡಿಸಿಕೊಂಡು ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ ದಾರಿಯತ್ತ ಸಾಗಬಹುದೆಂಬುದನ್ನು ತೋರಿದ ಹರಪನಹಳ್ಳಿ ಭೀಮವ್ವ ಕನ್ನಡದ ಸಂತ ಕವಿಯತ್ರಿಯರ ಅಗ್ರಸ್ಥಾನದಲ್ಲಿ ನಿಂತಿದ್ದಾಳೆ.”[೬೪]

‘ಅಚ್ಯುತನ ಕರುಣೆಂಬೊ ನಿಚ್ಚಣಿಕೆಯನೆ ಮಾಡಿ
ಹತ್ತೋ ಹರಿದಾಸರವರಂತೆ ಅವರಂತೆ ಜೀರಿಗೆ
ಯಷ್ಟು ದಯ ನೀಡೊ ಎನ್ನಲಿ’[೬೫]

ಎಂದು ಧ್ವನಿಸುತ್ತಾ "ಯಾವ ವಿಧವಾದ ಸದ್ದು-ಗದ್ದಲವಿಲ್ಲದೆ ಹಣತೆಯ ದೀಪದಂತೆ ಶಾಂತವಾಗಿ ಭಕ್ತಿಯ ಬೆಳಕನ್ನು ಸುತ್ತು ಮುತ್ತು ಪಸರಿಸಿ ಕನ್ನಡಿಗರು ಎಂದೆಂದಿಗೂ ಮರೆಯದಂತಹ ಹೆಮ್ಮೆಯ ಕವಿಯಿತ್ರಿಯಾಗಿ ಉತ್ತಮ ಸಾಹಿತ್ಯ ಕೃತಿಗಳನ್ನು ನೀಡಿ ಹರಿದಾಸ ಸಾಹಿತ್ಯ ನಭೋ ಮಂಡಲದಲ್ಲಿ ಉಜ್ವಲ ತಾರೆಯಾಗಿ ಭೀಮವ್ವ ಸೇರ್ಪಡೆಯಾದಳು."[೬೬]

ಭೀಮವ್ವನವರು ರಚಿಸಿರುವ ಹಲವು ಹಾಡುಗಳಲ್ಲಿ ಜಲಕ್ರೀಡೆ ಅಥವಾ ಹಲವು ಸೀರೆಯ ಪ್ರಸ್ತಾಪವಿರುವ ಹಾಡು ಬಹುಮುಖ್ಯವಾಗಿದೆ. ಭೀಮವ್ವನವರಲ್ಲಿ ಅಂತರ್ಗತವಾದ ಕಲ್ಪನಾಶಕ್ತಿ ಮತ್ತು ವರ್ಣನಾ ಶಕ್ತಿಯ ದ್ಯೋತಕವಾಗಿ ಈ ಜಲಕ್ರೀಡೆ ಹಾಡುಮೂಡಿಬಂದಿದೆ.

ಗೋಕುಲದ ಗೋಪಿಯರು ಒಂದು ದಿನ ಮಾತನಾಡಿಕೊಂಡು ಯಮುನಾ ನದಿಯಲ್ಲಿ ನೀರಾಟವಾಡಿ, ಬೇಕಾದ ಮೃಷ್ಟಾನ್ನ ಭೋಜನವನ್ನು ಸವಿದು ಬರಬೇಕೆಂದು ಯೋಜನೆ ಹಾಕಿಕೊಂಡು ಬರುತ್ತಾರೆ. ಹಲವು ವಿಧದಲ್ಲಿ ಸಿಂಗರಿಸಿಕೊಂಡು ಕಾಡಿಗೆ ಬರುತ್ತಾರೆ. ಕಾಡಿನ ಅಂದ ಚಂದವನ್ನು ಆಸ್ವಾದ ಮಾಡುತ್ತಾರೆ. ಕಾಡಿನಲ್ಲಿರುವ ಅನೇಕ ಪ್ರಾಣಿ-ಪಕ್ಷಿಗಳನ್ನು ನೋಡಿ ಸುಖಿಸುತ್ತಾರೆ. ಗೋಕುಲದ ಬೇಸರಿಕೆಯನ್ನು ಕಾಡಿನ ಸೌಂದರ್ಯವನ್ನು ಆಸ್ವಾದಿಸುತ್ತಾ ದೂರಮಾಡಿದರು.

"ಉಟ್ಟ ಸೀರೆಗಳನ್ನು ಬಿಟ್ಟು ಕುಪ್ಪಸ ಕಟ್ಟಿ
ಇಟ್ಟರು ಉಸುರಿನ ಮಿಟ್ಟಿಯಲ್ಲೇ ತಾವು
ಮಿತ್ರೆಯರೆಲ್ಲ ತಮ್ಮ ಸ್ತನಗಳ್ಹಿಡಕೊಂಡು
ಥಟ್ಟನೆ ಇಳಿದರು ನದಿಯೊಳಗೆ"[೬೭]

ಒಬ್ಬೊರಿಗೊಬ್ಬರು ಬೊಗಸೆಯಿಂದ ನೀರು ಚೆಲ್ಲುತ್ತಾ, ಉಗ್ಗುತ್ತಾ ನಾನಾಬಗೆಯಲ್ಲಿ ಮನ ತಣಿವಷ್ಟು ಆಟವಾಡುತ್ತಿದ್ದಾರೆ. ನೀರು ಹರಿಯುವಂತೆ ಮನದಲ್ಲಿ ಸಂತೋಷ ಹರಿದಿದೆ. ಮೈಮೇಲೆ ಬಟ್ಟೆಯ ಪರಿವೇ ಇಲ್ಲದೆ ಆಟವಾಡುವ ಸ್ಥಳಕ್ಕೆ "ಲಲನೆಯರಾಡುವೋ ಜಲಕ್ರೀಡೆ ನೋಡುತ್ತಾ ಜಲಜನಾಭನು ಕೃಷ್ಣಕಳ್ಳನಂತೆ ಬಂದ." ಇವರಿಗೆ ಶಿಕ್ಷೆ ವಿಧಿಸಬೇಕು ಎಂದು ಅವರ ಬಟ್ಟೆ ಬರೆಗಳನ್ನು ಅಪಹರಿಸುತ್ತಾನೆ. ಲಲನೆಯರು ನೀರಾಟಮುಗಿಸಿಕೊಂಡು ಬಟ್ಟೆ ಇಟ್ಟದ್ದ ಸ್ಥಳಕ್ಕೆ ಬರುತ್ತಾರೆ ಬಟ್ಟೆಗಳು ಮಾಯವಾಗಿವೆ.

"ಗದಗ್ಗುಟ್ಟಿ ನಡುಗುತ ಎದೆ ಭುಗಲೆನ್ನುತ
ಬದಲೊಂದು ಬಟ್ಟೆಯ ತರಲಿಲ್ಲವೆನಾವು
ಸದನಕ್ಕೆ ಹೋದರೆ ಕದನ ಭಾಳಾಗೋದು
ನದಿ ಆಟ ನಮಗೆಲ್ಲ ಮಿರ್ತಾಯತೆ"[೬೮]

ನದಿಯ ನೀರಾಟ ನಮಗೆ ಸಂಕಷ್ಟಕ್ಕೆ ಈಡು ಮಾಡಿತೆ ಎಂದು ದುಃಖಿಸುತ್ತಾರೆ. ಬರುವಾಗ ತರಹೆವಾರಿ ಸೀರೆಯುಟ್ಟುಕೊಂಡು ಬಂದಿದ್ದರು. ಅಲ್ಲದೆ ಅವು ಬಹು ಮೌಲ್ಯದಿಂದ ಕೂಡಿದ್ದವು. ಆದರೆ ಅಂಥ ಮೌಲ್ಯಯುತ ಸೀರೆಗಳು ಕಳುವಾಗಿವೆ. ನಾವು ಹೀಗೆ ಹೋದರೆ ನಮಗೆ ಉಳಿಗಾಲವೇ ಎಂದು ಚಿಂತಾಕ್ರಾಂತರಾಗಿದ್ದಾರೆ. ಹಾಗೆಯೇ ತಮ್ಮ ತಮ್ಮ ಸೀರೆಗಳ ಸ್ಮರಣೆ ಬರುತ್ತದೆ.

ಸಾರಾವಳಿ ಸೀರೆ, ರಾಗಾವಳಿ ಸೀರೆ, ದ್ವಾರಮುನಿ ಸೀರೆ, ಗೋಧಿಮಗ್ಗಿ ಸೀರೆ, ಗುಬ್ಬಿ ಕಣ್ಣಿನ ಸೀರೆ, ಬಾಳೆಪಟ್ಟಿ ಸೀರೆ, ಬದನೆ ಬಣ್ಣದ ಸೀರೆ, ಸುರುತಿ ಸುಗುತಿ ಬಣ್ಣದ ಸೀರೆ, ಕಾಡಿಗ್ಗಣ್ಣಿನ ಸೀರೆ, ಸಾಸ್ವೆಚುಕ್ಕೆ ಸೀರೆ, ಸರಪಳ್ಯಂಚಿನ ಸೀರೆ, ರೇಷ್ಮೆ ಚುಕ್ಕಿ ಸೀರೆ, ಕರಿಯ ಮಧುರೆ ಸೀರೆ, ಕವಳೆ ಹೂವಿನ ಸೀರೆ, ಕುರುಡ್ಡುವಿನ ಸೀರೆ, ಕಡ್ಡಿ ಪೈಡಣಿ ಸೀರೆ, ಕವಳೆ ಹೂವಿನ ಸೀರೆ, ಊದಿ ಬಣ್ಣದ ಸೀರೆ, ಪಪ್ಪಳಸೀರೆ, ಮಾವಿನಗೆರಿ ಸೀರಿ, ಬಂಗಾರದ ಗೆರಿ ಸೀರೆ, ಚದುರಂಗಮನೆ ಸೀರೆ, ಪದುಮದ್ದುವಿನ ಸೀರೆ, ಮುತ್ತಿನ ಬಟ್ಟಿನ ಸೀರೆ, ಹಾಲ್ಲಿಕ್ಕೆ ಸೀರೆ, ಗುಲಾಬಿಚಿಕ್ಕಿ ಸೀರೆ, ಉಗುರುಚುಕ್ಕೆ ಸೀರೆ, ಕಿಜಡಿ ಬಣ್ಣದ ಸೀರೆ, ಹಸುರು ಬಣ್ಣದ ಸಿಲಾರಿ ಸೀರೆ, ಲಾಡ್ನಾಪುರ ಸೀರೆ, ಕರಿಯ ಮಿರಾಣಿ ಸೀರೆ, ಜೋಡುಪಕ್ಕೆ ಸೀರೆ, ಕುಂಕುಮಗೆರೆ ಸೀರೆ, ಮೋತಿಚೂರಿನ ಸೀರೆ, ಕೋಲುಬ್ರ ಪೈಠಣಿ ಕೋರ್‍ನಾಡ ಸೀರೆ, ಮೆಂತ್ಯಸಾಲಿನ ಸೀರೆ, ಚಿಂತಾಕು ಪೈಠಣ ಸೀರೆ, ಮಗಿ ಸೀರೆ, ಪುಠಾಣ್‌ಪೈಠಣಿ ಸೀರೆ, ಪಂಚ ಪೈಠಣಿ ಸೀರೆ, ಪಗಡೆ ಮನೆ, ಅಂಡೆ ಪೈಡಣಿ ಸೀರೆ, ಬುಟ್ಟಡಾಟರಿ ಸೀರೆ, ಬನಾರಸ ಸೀರೆ, ಬಿಂದರ ಸೀರೆ, ತಬಕ್ಹೂವಿನ ಸೀರೆ, ಜಗನ್ಮೋಹಿನಿ ಸೀರೆ, ಆಕಳ್‌ಕರಳೀ ಸೀರೆ, ಸಭಾಲಂಕಾರ ಸೀರೆ, ಕಂಬಾವತಿ ಸೀರೆ, ನಿಂಬಾವಳಿ ಸೀರೆ, ಜಾಂಬೂನಾಜರದ ಸೀರೆ, ಹೊಂಬಣ್ಣದ ಹಳದಿ ಸೀರೆ, ಪೀತಾಂಬರ ವಸ್ತ್ರಗಣಿಕೆ ಸೀರೆ, ರತ್ನದ ಪಪ್ಪಳಿ ಸೀರೆ, ಕೋಸಂಬಿ ಸೀರೆ, ಹೀಗೆ ಬಗೆ ಬಗೆಯ ಸೀರೆಗಳನ್ನು ಪಟ್ಟಿಮಾಡಿಕೊಡುತ್ತಾಳೆ. ಅಲ್ಲದೆ ಅವುಗಳ ಹಿನ್ನೆಲೆಯನ್ನು ಸಹ ಹೇಳುವುದು ಅಚ್ಚರಿ ಮೂಡಿಸುತ್ತದೆ. ಕೇವಲ ಸೀರೆಯು ಪ್ರಸ್ತಾಪ ಇಷ್ಟಕ್ಕೆ ಮುಂದುವರೆಯುವುದಿಲ್ಲ. ಸೀರೆಯನ್ನು ಯಾವಾಗ, ಯಾರಿಗೆ, ಹೇಗೆ ಕೊಟ್ಟರೆಂದು, ಸೀರೆ ಉಟ್ಟುಕೊಂಡಾಗ ಮನೆಯ ಗಂಡನಲ್ಲಿ ಆಗುತ್ತಿದ್ದ ಬದಲಾವಣೆಯನ್ನು ಸಹ ಭೀಮವ್ವ ಹೇಳುತ್ತಾಳೆ. ಮಾವ ಕೊಡಿಸಿದ ಸೀರೆ, ಗಂಡ ಕೊಡಿಸಿದ ಸೀರೆ, ಅತ್ತೆ ಕೊಡಿಸಿದ ಸೀರೆ, ಮಾವ ತಂದುಕೊಟ್ಟಸೀರೆ, ಉದ್ರಿಮಾಡಿ ತಂದ ಸೀರೆ, ಪ್ರಸ್ತದಲ್ಲಿ ತಂದ ಸೀರೆ, ಮೈ ನೆರೆದಾಗ ಕೊಟ್ಟ ಸೀರೆ, ಗಂಡನ ನಲ್ಮೆಯ ಸೀರೆ, ನೆರೆಹೊರೆಯವರಿಗೆ ಹೊಟ್ಟೆಕಿಚ್ಚು ಬರಿಸುವ ಸೊಬಗಿನ ಸೀರೆ, ಬಡ್ಡಿ ಸಾಲನ ಮಾಡಿ ತಂದಿದ್ದ ಸೀರೆ, ಕುದ್ರಿಗೋಡಿ ನೆಗಣಿಕುದಿವೋ ಸೀರೆ, ಯಮುನಾ ನದಿಯು ಎಷ್ಟು ವಿಸ್ತಾರವಾಗಿದೆಯೋ ಸೀರೆಗಳ ಪ್ರಸ್ತಾಪದ ವಿಷಯವೂ ಕೂಡ ಅಷ್ಟೇ ವಿಶಾಲವಾಗಿದೆ.

ಕೊನೆಯಲ್ಲಿ ಕೃಷ್ಣ ಅವರ ಬೇಡಿಕೆಯನ್ನು ಮನ್ನಿಸಿ ಅವರವರ ಸೀರೆ ಕರುಣಿಸಿವುದರೊಂದಿಗೆ ಹಾಡು ಮುಗಿಯುತ್ತದೆ.

ಈಗಾಗಲೇ ಹೇಳಿದಂತೆ ಮೇಲಿನ ದೀರ್ಘ ಕಥನ ಕವನಗಳೇ ಅಲ್ಲದೆ ಭೀಮವ್ವ ರಚಿಸಿರುವ ೧೪೩ ಕೀರ್ತನೆಗಳಲ್ಲಿಯು ಸಹಾ ಭಾಗವತ ಭಾರತದ ಕಥೆಗಳು ಅಥವಾ ಅವುಗಳ ಉಲ್ಲೇಖ ಮೂಡಿ ಬಂದಿರುವುದನ್ನು ಕಾಣಬಹುದು. ಕೀರ್ತನೆಗಳಲ್ಲಿ ವಿಷಯಗಳು ಪುನರಾರ್ವನೆಯಾದಂತೆ ಕಂಡುಬಂದರೂ ಶೈಲಿಯಲ್ಲಿ ಅಥವಾ ಹೇಳುವ ರೀತಿಯಲ್ಲಿ ವೈವಿಧ್ಯವಿದೆ.

ಅಡಿಟಿಪ್ಪಣಿ

೧. ಕರ್ನಾಟಕ ಭಾರತ ಕಥಾಮಂಜರಿ, ಪು-೧೧

೨. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೧೭೧

೩. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೬

೪. ಅದೇ, ಪುಟ-೫೮೩

೫. ಅದೇ, ಪುಟ-೫೮೫,

೬. ಅದೇ, ಪುಟ-೫೯೦

೭. ಅದೇ, ಪುಟ-೫೯೬

೮. ಲೇ: ಸರಿತಾ ಕುಸುಮಾಕರ ದೇಸಾಯಿ, ಹರಪನಹಳ್ಳಿ ಭೀಮವ್ವನವರ ಹಾಡುಗಳ ಒಂದು ಅಧ್ಯಯನ, ಪುಟ-೧೨೬

೯. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೨೯೫

೧೦. ಅದೇ, ಪುಟ-೨೯೫

೧೧. ಅದೇ, ಪುಟ-೩೧೨

೧೨. ಅದೇ, ಪುಟ-೩೧೩

೧೩. ಅದೇ, ಪುಟ-೩೨೦

೧೪. ಅದೇ, ಪುಟ-೩೫೯

೧೫. ಅದೇ, ಪುಟ-xxi

೧೬. ಅದೇ, ಪುಟ-xxv

೧೭. ಅದೇ, ಪುಟ-೪೮೮

೧೮. ಡಾ.ರಾಮೇಗೌಡ, ಬಿ.ಎಸ್.ಸಣ್ಣಯ್ಯ (ಸಂ), ಲಕ್ಷ್ಮೀಶನ ಜೈಮಿನಿ ಭಾರತ, ಪು-೧೯೦

೧೯. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೪೮೯

೨೦. ಅದೇ, ಪುಟ-೪೯೦

೨೧. ಅದೇ, ಪುಟ-೫೧೮

೨೨. ಅದೇ, ಪುಟ-೫೧೮

೨೩. ಲೇ: ಸರಿತಾ ಕುಸುಮಾಕರ ದೇಸಾಯಿ, ಹರಪನಹಳ್ಳಿ ಭೀಮವ್ವನವರ ಹಾಡುಗಳ ಒಂದು ಅಧ್ಯಯನ, ಪುಟ-೧೦೬

೨೪. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೪೦೭

೨೫. ಅದೇ, ಪುಟ-೪೦೮

೨೬. ಅದೇ, ಪುಟ-೪೧೯

೨೭. ಅದೇ, ಪುಟ-೪೨೫

೨೮. ಅದೇ, ಪುಟ-೪೪೬

೨೯. ಅದೇ, ಪುಟ-೪೫೦

೩೦. ಅದೇ, ಪುಟ-೪೬೭

೩೧. ಅದೇ, ಪುಟ-೪೬೯

೩೨. ಲೇ: ಸರಿತಾ ಕುಸುಮಾಕರ ದೇಸಾಯಿ, ಹರಪನಹಳ್ಳಿ ಭೀಮವ್ವನವರ ಹಾಡುಗಳ ಒಂದು ಅಧ್ಯಯನ, ಪುಟ-೧೪೧

೩೩. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೫೨೧

೩೪. ಅದೇ, ಪುಟ-೫೨೯

೩೫. ಅದೇ, ಪುಟ-೫೫೧

೩೬. ಅದೇ, ಪುಟ-೫೫೬

೩೭. ಮಾನಕರಿ ಶ್ರೀನಿವಾಸ ಆಚಾರ್; ಶ್ರೀಮಧ್ಭಾಗವತ ಋಣ ಮತ್ತು ವೃದ್ಧಿ, ಪು-೨೪೦

೩೮. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೨೪೭

೩೯. ಅದೇ, ಪುಟ-೨೪೮

೪೦. ಅದೇ, ಪುಟ-೨೪೮

೪೧. ಅದೇ, ಪುಟ-೨೫೨

೪೨. ಅದೇ, ಪುಟ-೨೫೩

೪೩. ಅದೇ, ಪುಟ-೨೫೪

೪೪. ಅದೇ, ಪುಟ-೨೬೨

೪೫. ಮಾನಕರಿ ಶ್ರೀನಿವಾಸ ಆಚಾರ್; ಶ್ರೀಮಧ್ಭಾಗವತ ಋಣ ಮತ್ತು ವೃದ್ಧಿ, ಪು-೨೪೭

೪೬. ಹತ್ತೊಂಬತ್ತನೆಯ ಶತಮಾನದ ಹರಿದಾಸ ಸಾಹಿತ್ಯ ಲೆ; ಪುಟ-೭೪

೪೭. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-xvi

೪೮. ಅದೇ, ಪುಟ-೪೮

೪೯. ಅದೇ, ಪುಟ-೨

೫೦. ಅದೇ, ಪುಟ-xiv

೫೧. ಅದೇ, ಪುಟ-೨೭

೫೨.ಅದೇ, ಪುಟ-೨೦೯

೫೩. ಅದೇ, ಪುಟ-೬೬

೫೪. ಅದೇ, ಪುಟ-೭೦

೫೫. ಅದೇ, ಪುಟ-೭೧

೫೬. ಅದೇ, ಪುಟ-೭೧

೫೭. ಲೇ: ತಟ್ಟಿವೆಂಕೋಬರಾವ್, ಮರೆಯದೆ ಸಲಹೆನ್ನನು, ಪು-೩೬

೫೮. ಲೇ: ತಟ್ಟಿವೆಂಕೋಬರಾವ್, ಮರೆಯದೆ ಸಲಹೆನ್ನನು, ಪು-೩೬

೫೯. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೭೮

೬೦. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೬೮

೬೧. ಲೇ: ತಟ್ಟಿವೆಂಕೋಬರಾವ್, ಮರೆಯದೆ ಸಲಹೆನ್ನನು, ಪುಟ-೪೦

೬೨. ಎ.ವಿ.ನಾವಡ (ಸಂ), ಸಾವಿರಾರು ಕೀರ್ತನೆಗಳು, ಪುಟ-೩೬೩

೬೩. ಅದೇ, ಪುಟ-೧೩೦

೬೪. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೭೫

೬೫. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೬೬

೬೬. ಲೇ: ಜಯಸಿಂಹ, ಹರಪನಹಳ್ಳಿ ಭೀಮವ್ವ, ಪುಟ-೩

೬೭. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೧೦೩

೬೮. ಹರಪನಹಳ್ಳಿ ಭೀಮವ್ವನವರ ಹಾಡುಗಳು, (ಸಂ) ಟಿ.ಎನ್.ನಾಗರತ್ನ, ಪುಟ-೧೦೫

ಅಧ್ಯಾಯ - ಆರು

ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಭಾಷಾ ಸ್ವರೂಪ

ಅಧ್ಯಾಯ - ಆರು

ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಭಾಷಾ ಸ್ವರೂಪ

'ನಿಚ್ಚಂ ಪೊಸತು ಅರ್ಣವಂಬೊಲ್ ಅತಿಗಂಭೀರಂ ಕವಿತ್ವಂ' ಎನ್ನುವ ಪಂಪನ ಮಾತುಗಳು ಅಕ್ಷರಶ ನಿಜ. ಕಾವ್ಯ ಯಾವಾಗಲೂ ನಿತ್ಯ ನೂತನವಾಗಿರುತ್ತದೆ. ಕಾವ್ಯ ಪ್ರಾಚೀನದ ಸಾಲಿಗೆ ಸೇರಿದ್ದರೂ ಆಯಾಯ ಕಾಲಕ್ಕೆ ಹೊಸ ಹೊಸ ಅರ್ಥವನ್ನು ಸ್ಫುರಿಸುವ ಶಕ್ತಿ ಯುಕ್ತಿ ಎರಡನ್ನೂ ಹೊಂದಿರುತ್ತದೆ. ಅದರಂತೆಯೇ ಭಾಷೆ ನಿತ್ಯ ಹೊಸತನದೊಂದಿಗೆ ಬಳಕೆಗೊಳ್ಳುತ್ತಿರುತ್ತದೆ. ಸೃಜನಶೀಲ ಕವಿಯಲ್ಲಿ ಭಾಷಾ ಬಳಕೆ ಯಾವಾಗಲೂ ನವ ನವೀನವಾಗಿರುತ್ತದೆ. ಕವಿಯಾದವನು ಸಹ ಅಷ್ಟೇ. ತನ್ನ ಕಾವ್ಯ ಕೂಡ ಹೊಸತನದಿಂದ ಕೂಡಿರಬೇಕು, ಹಲವು ಸಹೃದಯರ ಮೆಚ್ಚುಗೆಗೆ ಪಾತ್ರವಾಗಬೇಕೆಂದು ಬಯಸುತ್ತಿರುತ್ತಾನೆ. ನಮ್ಮ ಪ್ರಾಚೀನ ಕವಿ ಪುಂಗವರು ಸಹ ತಮ್ಮ ಕಾವ್ಯದ ಮಹತ್ವವನ್ನು ಹೇಳಿದ್ದಾರೆ. ತಾವು ಇತರ ಕವಿಗಳಿಗಿಂತ ಹೇಗೆ ಭಿನ್ನರಾದವರೆಂದು, ತಮ್ಮ ಕಾವ್ಯ ಸ್ವರೂಪ ಯಾವ ಬಗೆಯದೆಂದು ಹೇಳಿದ್ದಾರೆ. ತಾವು ಆಯ್ದುಕೊಂಡ ವಸ್ತುವಿನ ಕುರಿತು ಸಹ ಹೇಳಿದ್ದಾರೆ. ಈ ಮೂಲಕ ತಿಳಿದು ಬರುವುದು ಇಷ್ಟೇ. ಕವಿಗಳು ರಚಿಸಿದ ಕಾವ್ಯಗಳು ಒಬ್ಬರಿಗಿಂತ ಒಬ್ಬರಲ್ಲಿ ಭಿನ್ನವಾಗಿವೆ. ಕಾಲದ ಒತ್ತಡ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಅನೇಕ ಕಾವ್ಯಗಳು ಮೂಡಿಬಂದಿವೆ. ಕಾವ್ಯದ ನಡಿಗೆಗಳು ಸಹ ಭಿನ್ನವಾಗಿವೆ. ನಮ್ಮ ಪ್ರಾಚೀನ ಕವಿಗಳ ಕಾವ್ಯದಲ್ಲಿ ಭಾಷೆ ಕುರಿತು ಪ್ರತ್ಯೇಕ ಚಿಂತನೆಯನ್ನು ಕಾಣದಿರಬಹುದು. ಆದರೆ ಕಾವ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಭಾಷಾ ದೃಷ್ಟಿಯಿಂದಲೇ ಭಿನ್ನತೆಯ ಅಂಶಗಳನ್ನು ಕಾಣಬಹುದು. ಈ ಭಿನ್ನತೆಗಳೇ ಕವಿಯ ಭಾಷಾ ಸ್ವರೂಪವನ್ನು ಹೇಳುತ್ತವೆ. ಷಟ್ಪದಿ ಬ್ರಹ್ಮ ಕವಿ ರಾಘವಾಂಕನು ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ಕಾವ್ಯದ ಮಹತ್ವ ಕುರಿತು ಈ ರೀತಿ ಹೇಳಿದ್ದಾನೆ.

"ಪರರೊಡೆವೆಯಂ ಕೊಂಡು ಕೃತಿಯ ಪೇಳದ ಭಾಷೆ
ಪರರ ಕಾವ್ಯಾರ್ಥಗಳಂ ವಿಧ್ರಿಸದ ಭಾಷೆ
ಪರರ ದೈವವ ನುತಿಸದಿಪ್ಪ ಭಾಷೆ ಪರರ ಕ್ಲೇಶ ವೀಕ್ಷಿಸದ ಭಾಷೆ

[illegible]

[illegible]

[illegible]

[illegible]

ಪರರ ನಿಂದಿಸಿ ತನ್ನ ಹೊಗಳಿಕೊಳ್ಳದ ಭಾಷೆ

ಪರರ ವಧುವಂ ಕಂಡು ಮನವೆಳಸದಿಹ ಭಾಷೆ

ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು ರಾಘವಾಂಕಗೆ ಸಂದುದು"[೧]

ರಾಘವಾಂಕನ ಈ ಷಟ್ಪದಿಯ ಮೂಲಕ ಭಾಷೆಗೆ ಇರುವ, ಇರಬಹುದಾದ ಮಹತ್ವವನ್ನು ತಿಳಿಯಬಹುದು.

ಪ್ರತಿಯೊಬ್ಬ ಕವಿಯೂ ತನ್ನದೇ ಆದ ಕಾವ್ಯದ ಶೈಲಿಯನ್ನು ರೂಢಿಸಿಕೊಂಡಿರುತ್ತಾನೆ. "ಶೈಲಿಯಿಲ್ಲದಿದ್ದರೆ ಬರವಣಿಗೆ ನೀರಸವಾಗುತ್ತದೆ. ಅಲ್ಲಿ ಕಾವ್ಯಗುಣವಿರುವುದಿಲ್ಲ. ಅಂದ ಮೇಲೆ ಆನಂದ ಸೊನ್ನೆಯೇ ಸಾಹಿತ್ಯ ಶೈಲಿಗೆ ಸಂಬಂಧ ಸಾಮಿಪ್ಯ ಬಹಳ ಶೈಲಿಯೇ ಸಾಹಿತ್ಯವೆಂದು ಹೇಳುವುದುಂಟು. ಶೈಲಿಯ ಹೆಗ್ಗುರುತು ವ್ಯಕ್ತಿತ್ವಕ್ಕೆ ಹೇಳಬೇಕಾದ ವಿಷಯವನ್ನು ದೈವಿಕವಾಗಿ ಭಾವೋತ್ಕರ್ಷದಿಂದ ಉದ್ರೇಕಾವಸ್ಥೆಯಲ್ಲಿ ಮೇಲ್ಮೆಗೊಳಿಸಿ ರೂಪಾಂತರ ಪಡಿಸುವುದರಿಂದ ಬರವಣಿಗೆಗೆ ಗಾಂಭೀರ್ಯವೂ, ವೈಶಿಷ್ಟ್ಯವೂ ಕೂಡಿಕೊಂಡು ಅದೇ ಶೈಲಿಯೆನಿಸಿಕೊಳ್ಳುತ್ತದೆ."[೨] ಕಾಲದ ಬದಲಾವಣೆಯ ಅನುಗುಣವಾಗಿ ಶೈಲಿ ಹೊಸ ಹೊಸ ರೂಪವನ್ನು ಪಡೆಯುತ್ತಿರುತ್ತದೆ. ಪಂಪಾದಿ ಕವಿಗಳ ಕಾಲ ಘಟ್ಟದಲ್ಲಿ ಚಂಪೂ ಶೈಲಿ ಪ್ರಧಾನವಾಗಿತ್ತು. ಸಂಸ್ಕೃತ ಪದಗಳ ಬಳಕೆ ಸಹಜವಾಗಿತ್ತು. ಇನ್ನೂ ಮುಂದುವರೆದು ಹೇಳುವುದಾದರೆ ಸಂಸ್ಕೃತ ಭಾಷೆಯೇ ಹೆಚ್ಚಿನ ಪ್ರಾಬಲ್ಯ ಹೊಂದಿತ್ತು. ಜೊತೆಗೆ ರಾಜಮಾನ್ಯ, ಪಂಡಿತಮಾನ್ಯ ಭಾಷೆ ಆಗಿ ರೂಪು ತಳೆದಿತ್ತು. ಕವಿಗಳು ಶಾಸ್ತ್ರದ ಹಿನ್ನೆಲೆಯಲ್ಲಿ ಬಂದವರಾಗಿದ್ದುದರಿಂದ ಭಾಷಾ ಪ್ರೌಢಿಮೆಯನ್ನು ಕಾಣಬಹುದು.

ಹನ್ನೆರಡನೆಯ ಶತಮಾನದಲ್ಲಿ ಶಿವಶರಣ ಶರಣೆಯರು ಬಳಸಿದ ಭಾಷೆಯೇ ಭಿನ್ನವಾಗಿತ್ತು. ಸಂಸ್ಕೃತ ಭಾಷೆಗೆ ಮೊರೆ ಹೋಗದೆ ಆಡು ನುಡಿಯ ಭಾಷೆಯನ್ನು, ವೃತ್ತಿ ಸಂಬಂಧಿತ ಭಾಷೆಯನ್ನು ವಚನ ಸಾಹಿತ್ಯದಲ್ಲಿ ಬಳಸಿಕೊಂಡರು. ಆಡು-ನುಡಿಗೆ ಹೊಸ ಸ್ಪರ್ಶವನ್ನು ನೀಡಿದರು. ಜೀವನದಲ್ಲಿ ತಾವು ಎದುರಿಸಿದ ಕಷ್ಟಗಳನ್ನು ಅನುಭವಿಸಿದ ನೋವುಗಳನ್ನು, ಕಣ್ಣೆದುರಿಗಿದ್ದ ಅನೇಕ ಸಮಸ್ಯೆಗಳ ವಿರುದ್ಧ ಧ್ವನಿಯೆತ್ತಿದರು. ಸರಳವಾಗಿ, ಸುಲಲಿತವಾಗಿ ಭಾಷೆಯನ್ನು ಪ್ರಯೋಗ ಮಾಡಿ ಸಾಹಿತ್ಯವನ್ನು ಜನ ಸಾಮಾನ್ಯನಿಗೆ ತಲುಪಿಸಿದರು. ಜೀವನದ ಅನುಭವ ಸಂಕಥನದಿಂದಲೇ ಸಾಹಿತ್ಯವನ್ನು ನಿರ್ಮಿಸಬಹುದು ಎಂಬ ದಾರಿಯನ್ನು ತೋರಿಸಿದರು.

ವಚನಕಾರರ ನಂತರ ಬಂದ ಹರಿದಾಸರು ಭಕ್ತಿಯ ಕಡೆಗೆ ಮುಖ ಮಾಡಿದರೂ ಸಮಾಜ ಸುಧಾರಣೆಗೆ ಪ್ರಯತ್ನ ಪಟ್ಟರು. ವಚನಕಾರರು ಬಳಸಿದಂತೆಯೇ ಹರಿದಾಸರು ಕೂಡಾ ಕನ್ನಡದ ಆಡು ಭಾಷೆಯನ್ನು ಬಳಸಿದರು. ಸಂಸ್ಕೃತದ ವಾಙ್ಮಯ ಬಲ್ಲವರಾಗಿದ್ದರೂ ಸಹ ಭಾಷಾ ಬಳಕೆಯನ್ನು ಕ್ಲಿಷ್ಟಗೊಳಿಸದೆ ಗೇಯತೆಯ ಭಾವವನ್ನು ತಂದುಕೊಟ್ಟರು. ದ್ವೈತ ಸಿದ್ಧಾಂತವನ್ನು ಸರಳವಾಗಿ ಪರಿಚಯಿಸಿದರು. ದ್ವೈತ ತತ್ತ್ವ ಜನಸಾಮಾನ್ಯರಿಗೆ ಎಟುಕುವಂತಾಗಬೇಕಾದರೆ ಕನ್ನಡ ಭಾಷೆಯಲ್ಲಿಯೇ ಹೇಳುವ ಸ್ಥಿತಿ ನಿರ್ಮಾಣವಾಯಿತು. ಆದ್ದರಿಂದ ಹರಿದಾಸರು ಕೀರ್ತನೆಯ ಸಾಹಿತ್ಯ ಸೃಷ್ಟಿಯನ್ನು ಸರಳಗೊಳಿಸಿದರು. ಈ ಸಂದರ್ಭದಲ್ಲಿ ನೇರವಾಗಿ ಸಂಸ್ಕೃತ ಪದಗಳನ್ನು ಸ್ವೀಕರಿಸದೆ ಬದಲಾವಣೆಯ ರೂಪದಲ್ಲಿ ಸ್ವೀಕಾರ

[illegible]

ಮಾಡಿದರು. ಕನ್ನಡ ಭಾಷಾ ರಚನೆಯ ಜಾಯಮಾನಕ್ಕೆ ಒಗ್ಗುವ ಹಾಗೆ ಸಂಸ್ಕೃತ ಪದಗಳನ್ನು ಬಳಸಿದರು. ಹರಿದಾಸರು ಸರಳ ರೀತಿಯಲ್ಲಿ ದೇವರು ಕಾಣಸಿಗುವಾಗ ಆಡಂಬರವೇಕೆ ಎಂಬ ನಿರಾಡಂಬರದ ಮನಸ್ಸಿನವರು. ಭಗವಂತನನ್ನು ಏಕೋಭಾವದಿಂದ ಕೊಂಡಾಡಿದರು. ಮನಸ್ಸಿಗೆ ತೃಪ್ತಿ ಎನಿಸುವಷ್ಟು ದೇವರನ್ನು ಸ್ತುತಿಸಿದರು. ತಮ್ಮ ಅಂತರ್ಯದಲ್ಲಿದ್ದ ಭಕ್ತಿಯ ಪರಾಕಾಷ್ಠೆಯನ್ನು ಕೀರ್ತನೆ, ಸುಳಾದಿ, ಉಗಾಭೋಗ, ಗುಂಡಕ್ರಿಯೆ, ದಂಡಕ, ವೃತ್ತನಾಮ, ಷಟ್ಪದಿ, ಸಾಂಗತ್ಯ, ಮುಂಡಿಗೆಗಳು, ಮುಂತಾದ ಪ್ರಕಾರಗಳಲ್ಲಿ ಬಿತ್ತರಿಸಿದರು. ಈ ಎಲ್ಲಾ ಪ್ರಕಾರಗಳಲ್ಲಿ ಹರಿಸಿದ್ದು ಭಕ್ತಿಯೇ. ಭಕ್ತಿಯ ಹೊರತು ಬೇರೇನೂ ಅಭಿವ್ಯಕ್ತಿಸುವುದಕ್ಕೆ ಮುಂದಾಗಲಿಲ್ಲ. ಭಕ್ತಿಯೇ ಅವರ ಪರಮ ಕೇಂದ್ರ ಬಿಂದುವಾಗಿತ್ತು.

ಹರಿದಾಸರಿಗೆ ದೇವರು ಸುಲಭವಾಗಿ ದೊರೆಯುವಾಗ ತಮ್ಮ ಮನದೊಳಗಿನ ಭಕ್ತಿಯ ಭಾವಾಭಿವ್ಯಕ್ತಿಯನ್ನು ಕೀರ್ತನ ಪ್ರಕಾರದಲ್ಲಿಯೇ ಧಾರೆ ಎರೆದರು. ನವವಿಧ ಭಕುತಿಯಲ್ಲಿ 'ಕೀರ್ತನ' ಭಕ್ತಿಯೂ ಒಂದಾಗಿದೆ. 'ಕೀರ್ತನೆ' ಎಂದರೆ ಕೀರ್ತಿಸುವುದು ಎಂದರ್ಥ. ಇಲ್ಲಿ ಭಗವಂತನ ಮಹಿಮೆಯನ್ನು ಅತ್ಯುನ್ನತವಾಗಿ ಕೀರ್ತಿಸುವುದು ಜೊತೆಗೆ ಕೊಂಡಾಡುವುದು. ಕರ್ನಾಟಕ ಸಂಗೀತದ ಪಿತಾಮಹ ಎನಿಸಿದ ಪುರಂದರದಾಸರು ಕೀರ್ತನೆಯೊಂದರಲ್ಲಿ 'ಪುರಂದರವಿಠಲ'ನೆ ಅಂತಿಮ ಎಂಬುವಂತೆ ಚಿತ್ರಿಸಿದ್ದಾರೆ.

"ಈ ಪರಿಯ ಸೊಬಗಾವ ದೇವರಲಿ ನಾಕಾಣೆ ಪ
ಗೋಪಿಜನ ಪ್ರಿಯ ಗೋಪಾಲನಲ್ಲದೆ. ಅ.ಪ
ದೊರೆಯತನದಲಿ ನೋಡೆ ಧರಣಿದೇವಿಗೆ ರಮಣ
ಸಿರಿಯತನದಲಿ ನೋಡೆ ಶ್ರೀ ಕಾಂತನು
ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ
ಗುರುವುತನದಲಿ ನೋಡೆ ಜಗದಾದಿ ಗುರುವು ೧
ಪಾವನತ್ವದಿನೋಡೆ ಅಮರ ಗಂಗಾಜನಕ
ದೇವತ್ವದಲಿ ನೋಡೆ ದಿವಿಜರೊಡೆಯ
ಲಾವಣ್ಯದಲಿ ನೋಡೆ ಲೋಕಮೋಹಕನಯ್ಯ
ಆವ ಧೈರ್ಯದಿ ನೋಡೆ ಅಸುರಾಂತಕ ೨
ಗಗನದಲಿ ಸಂಚರಿಪ ಗರುಡದೇವನೆ ತುರುಗ
ಜಗವಧರಿಸಿದ ಶೇಷ ಪರಿಯಂತ ಶಯನ
ನಿಗಮಗೋಚರ ಪುರಂದರಧರ ವಿಠಲಗಲ್ಲದೆ
ಮಿಗಿಲಾದ ದೈವಗಳಿಗೀ ಭಾಗ್ಯ ಉಂಟೆ"[೩] ೩

ಭಾಗವತ, ಪುರಾಣ, ಮಹಾಭಾರತ, ರಾಮಾಯಣ, ವೇದ, ಉಪನಿಷತ್ತಿನಲ್ಲಿ ಭಗವಂತನ ಕುರಿತು ಇರುವ ವ್ಯಾಪಕತ್ವದ ಅತೀತತೆಯನ್ನು ಕೀರ್ತನೆಯಲ್ಲಿ ಸ್ತುತಿಸಿದ್ದಾರೆ. ಭಗವಂತನ ಕುರಿತು ಸ್ತುತಿಸುವುದು ಹರಿದಾಸರಿಗೆ ನೆಪವಷ್ಟೇ. ಭಗವಂತನ ಶಕ್ತಿಯನ್ನು ಕೀರ್ತಿಸುವುದೇ ಕೀರ್ತನೆ ಅಂತರ್ಯದ ಸ್ವರೂಪವಾಗಿದೆ.

[illegible]

[illegible]

[illegible]

ಕೀರ್ತನೆಗಳನ್ನು ರಚನಾ ದೃಷ್ಟಿಯಿಂದ ನೋಡಿದಾಗ ಪಲ್ಲವಿ, ಅನುಪಲ್ಲವಿ, ಚರಣ, ಕೊನೆಯಲ್ಲಿ ರಚನಕಾರನ ಅಂಕಿತನಾಮವಿರುತ್ತದೆ. ತಮ್ಮ ಅನುಭವದ ಭಾವಾಭಿವ್ಯಕ್ತಿಯನ್ನು ಪಲ್ಲವಿ ಅನುಪಲ್ಲವಿಯಲ್ಲಿ ಹೇಳಿದರೆ ಅದರ ಸಮರ್ಥನೆಯನ್ನು ಚರಣದಲ್ಲಿ ಕಟ್ಟಿಕೊಡುತ್ತಾರೆ. ಕೀರ್ತನೆ ಹಾಡುಗಬ್ಬವಾಗಿದೆ. ಆದಿಪ್ರಾಸಗಳು ಸಹಜವಾಗಿ ಮೂಡಿಬರುತ್ತವೆ. ಇವೆಲ್ಲಕ್ಕಿಂತ ಮುಖ್ಯವಾಗಿ ಕೀರ್ತನೆ ದೇಸಿರೂಪದ ಒಂದು ಛಂದೋ ಪ್ರಕಾರವಾಗಿದೆ. ಕೀರ್ತನೆಯ ಉಗಮ ಮತ್ತು ವಿಕಾಸದ ಕುರಿತು ಹಲವಾರು ಚರ್ಚೆಗಳಿವೆ. ಕೀರ್ತನೆಯನ್ನು ಬಳಸುವ ಪೂರ್ವದಲ್ಲಿ ವಚನಕಾರರಲ್ಲಿ ಸ್ವರವಚನ ಎಂಬ ಪ್ರಯೋಗವಿತ್ತು. ಸ್ವರವಚನ ಪ್ರಕಾರವು ಕೀರ್ತನೆಯ ಸ್ವರೂಪವನ್ನು ಬಹುಮಟ್ಟಿಗೆ ಹೋಲುತ್ತಿತ್ತು ಎಂಬ ವಾದವೂ ಇದೆ.

"ಕನ್ನಡದ ಕೀರ್ತನೆ ಅಥವಾ ಪದ ಎಂಬುದೇನೂ ಹೊಸದಲ್ಲ. ವೈದಿಕ ಪರಂಪರೆಯಿಂದ ಅದು ಬಂದದ್ದೆಂಬುದು ದೂರದ ಮಾತು ಕನ್ನಡದ ಮಟ್ಟಿಗೆ ಪಾಡು, ಮೇಲ್ಪಾಡು, ಭಾಜನೆ ಗಬ್ಬಗಳಿದ್ದವು. ಆ ಮೇಲೆ ಶರಣರದಲ್ಲಿ ಕೆಲವರು ಪದಗಳನ್ನು ಹಾಡಿದರು. ಅದೇ ಹರಿದಾಸರ ಬಾಯಲ್ಲಿ ಕೀರ್ತನೆ ಎಂದು ಹರಿಸ್ತುತಿ ಪರವಾದ ಹಾಡಾಯಿತು."[೪] ಎಂದು ರಂ.ಶ್ರೀ.ಮುಗಳಿಯವರು ಅಭಿಪ್ರಾಯ ಪಡುತ್ತಾರೆ. "ಶಿವ ಶರಣರು ಬರೆದ ಈ ಹಾಡುಗಳು ಪಲ್ಲವಿಯಿಂದ ಕೂಡಿ ಬೇರೆ ಬೇರೆ ರಾಗಗಳಲ್ಲಿ ಹಾಡಲು ಅನುವರಿತು ರಚಿತವಾದ ಗೇಯ ಕೃತಿಗಳು, ಹರಿದಾಸರ ಕೀರ್ತನೆ ಪ್ರಕಾರವೂ ಮೂಲವೂ ಮಾದರಿಯೂ ಆಗಿತ್ತೆಂದು"[೫] ಡಾ.ಎಲ್.ಬಸವರಾಜುರವರ ಹೇಳಿಕೆಯಾಗಿದೆ.

"ಸ್ವರವಚನ ಮತ್ತು ಕೀರ್ತನೆ ಸ್ವರೂಪಗಳನ್ನು ಅಭ್ಯಸಿಸಿ ಹೇಳಬಹುದಾದರೆ ಶರಣರ ಸ್ವರವಚನದ ಮುಂದಿನ ಬೆಳವಣಿಗೆಯೇ ದಾಸರ ಕೀರ್ತನೆಯ ಎನ್ನುವುದು ಹೆಚ್ಚು ಸೂಕ್ತ. ಸ್ವರವಚನ ಸಾಹಿತ್ಯ ಹನ್ನೆರಡನೆಯ ಶತಮಾನದಲ್ಲಿಯೇ ಹುಟ್ಟಿಕೊಂಡಿದ್ದರೂ ಕೂಡ ಆ ರೂಪದ ಸಾಧ್ಯತೆಗಳನ್ನು ವಿಸ್ತರಿಸಿದವರು ದಾಸರೆಂಬುದು ಒಪ್ಪಲೇ ಬೇಕಾಗುತ್ತದೆ."[೬]

ಹರಿದಾಸರ ಕಾಲದಲ್ಲಿ ಕೀರ್ತನೆ ಸಾಹಿತ್ಯ ವಿಪುಲವಾಗಿ ಬೆಳೆದುಬಂತು. ಪುರಂದರದಾಸರು ಮತ್ತು ಕನಕದಾಸರ ಕಾಲ ಘಟ್ಟದಲ್ಲಿ 'ಕೀರ್ತನೆ' ಉಚ್ಛ್ರಾಯ ಸ್ಥಿತಿ ಮುಟ್ಟಿತ್ತು. ಪುರಂದರದಾಸರೊಬ್ಬರೇ ಸುಮಾರು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚನೆಮಾಡಿದ್ದಾರೆ ಎನ್ನಲಾಗಿದೆ. ಹರಿದಾಸರು ಎಂದಕೂಡಲೇ 'ಕೀರ್ತನೆ' ಎಂಬ ಪದ ನೆನಪಿಗೆ ಬರುತ್ತದೆ. "ಪ್ರತಿಯೊಬ್ಬ ಹರಿದಾಸರ ರಚನೆಗಳಲ್ಲಿಯೂ ಆತ್ಮಾನು ಸಂಧಾನದ ವಿವಿಧ ಹಂತಗಳನ್ನು ತಮ್ಮ ಬದುಕಿನ ಆಗು ಹೋಗಿನ ವಿವಿಧ ಅಂಶಗಳನ್ನು ಮೆಟ್ಟಿಲು ಮೆಟ್ಟಿಲಾಗಿ ಹೇಳಿರುವುದರಿಂದ ಅವು ಅವರ ಆತ್ಮಗೀತೆಗಳಂತಿವೆ. ಅವರ ಭಕ್ತಿಯ ವೈವಿಧ್ಯ ಗಹನವಾದ ವಿಷಯಗಳನ್ನು ಸರಳವಾಗಿ ಹೇಳುವುದು ಆಯಾ ಸಂದರ್ಭದಲ್ಲಿ ಅವರಲ್ಲಿ ಭಾವಾವೇಶಕ್ಕೆ ತಕ್ಕಂತೆ ಅವರ ಅಭಿವ್ಯಕ್ತಿಯಲ್ಲಿ ವ್ಯಕ್ತವಾಗುವ ಭಾಷೆಯ ಬೆಡಗು ವೈಭವಗಳು ಈ ರಚನೆಗೆ ಸಾಹಿತ್ಯ ಸ್ವಾರಸ್ಯವನ್ನು ತಂದುಕೊಟ್ಟಿವೆ."[೭]

ಹರಿದಾಸರು ಆಡುನುಡಿಯ ಭಾಷೆಯಲ್ಲಿನ ಸರಳ ಲಯವನ್ನು ಮಾಧುರ್ಯದೊಂದಿಗೆ ಕೀರ್ತನೆಯಲ್ಲಿ ಬಳಸಿದರು. ಕೀರ್ತನೆಗಳು ಸರಳತೆಯನ್ನು ಮೈಗೂಡಿಸಿಕೊಂಡರೂ ಶುಷ್ಕವೆನಿಸಲಿಲ್ಲ. ಬದಲು ಗೂಢಾರ್ಥವನ್ನು

ಗಾಂಭೀರ್ಯವನ್ನು ಪಡೆದುಕೊಂಡವು. ಗೇಯತೆಯ ಗುಣವನ್ನು ಹೊಂದಿರುವುದರಿಂದ ನೆನಪಿಡಲು ಸಹಾಯಕವಾಯಿತು.

ಉಗಾಭೋಗ

ದಾಸಸಾಹಿತ್ಯದಲ್ಲಿ ಕಂಡುಬರುವ ಮತ್ತೊಂದು ರೂಪ ಉಗಾಭೋಗ, ಉಗಾಭೋಗದ ಲಕ್ಷಣವನ್ನು ಮೊದಲ ಬಾರಿಗೆ ಸುಮಾರು ಕ್ರಿ.ಶ. ೧೨೧೦ ರಿಂದ ೧೨೪೦ರ ಶಾರ್ಙ್ಗದೇವನ ಕಾಲದಲ್ಲಿ ಕಾಣುತ್ತೇವೆ. ಇಲ್ಲಿಂದಲೇ ಉಗಾಭೋಗವು ಬೆಳೆದು ಬಂದಿತು. ಇದು ಮುಕ್ತ ಛಂದಸ್ಸಿನಿಂದ ಕೂಡಿದೆ. ಈ ಪದದ ಅರ್ಥದ ಬಗ್ಗೆ ಮತ್ತು ನಿಷ್ಪತ್ತಿಯ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಉದ್ಗ್ರಾಹ, ಮೇಲಾಪಕ, ಧ್ರುವಾ, ಅನಂತಭೋಗ, ಆಭೋಗ ಈ ಪಂಚಧಾತುಗಳ ಆದ್ಯಂತ ಪದಗಳನ್ನು ಸೇರಿಸಿ

ಉದ್ಗ್ರಾಹ ಭೋಗ ಎಂಬುದರ ಸಂಸ್ಕೃತದ ರೂಪ ಹುಟ್ಟಿ ಕನ್ನಡದಲ್ಲಿ ಉಗಾಭೋಗವಾಯಿತು ಎಂಬ ಅಭಿಪ್ರಾಯವಿದೆ. ಉಗಾಭೋಗ ನೋಡುವುದಕ್ಕೆ ಸಂಸ್ಕೃತ ಶ್ಲೋಕದ ಮಾದರಿಯನ್ನು ಹೋಲುತ್ತದೆ. ನಿರ್ದಿಷ್ಟವಾದ ರಾಗ, ತಾಳ, ನಿಯಮಗಳಿಗೆ ಒಳಪಡದಿದ್ದರೂ ಗೇಯ ಗುಣವನ್ನು ಹೊಂದಿವೆ. ದೊರೆತ ಹೆಚ್ಚಿನ ಉಗಾಭೋಗಗಳೆಲ್ಲವೂ ದ್ವಿತೀಯ ಪ್ರಾಸಾಕ್ಷರದಿಂದ ಕೂಡಿದ್ದೂ ಶ್ರಾವ್ಯವಾಗಿ ಹಾಡುವ ಪರಂಪೆಯನ್ನು ಇಂದಿಗೂ ಗುರುತಿಸಬಹುದು. "ಅನುಭವ ಹೆಚ್ಚಿದಂತೆ ಮಾತು ಮಿತವಾಗುತ್ತದೆಂಬಂತೆ ದಾಸರ ಅನುಭವದ ಆಳ ಹೆಚ್ಚಿದಂತೆ ಆರಿಸಿದ ಅಣಿ ಮುತ್ತುಗಳಂತಹ ಕೆಲವೇ ಮಾತುಗಳಿಂದ ಒಂದೊಂದು ಉಗಾಭೋಗವು ಸಿದ್ಧವಾಗಿವೆ. ಆ ಘನೀಭೂತವಾದ ರಸಗಟ್ಟಿಗಳಲ್ಲಿ ದಾಸರ ಜ್ಞಾನಾನುಭವಗಳು ಶೇಖರವಾಗಿವೆ."[೮]

ಹರಪನಹಳ್ಳಿ ಭೀಮವ್ವನವರು ಸಹ ಒಂದು ಉಗಾಭೋಗವನ್ನು ರಚನೆಮಾಡಿದ್ದಾರೆ.

"ನಿಗಮಗೋಚರ ಸ್ವಾಮಿ ನಿಂತು ನೋಡುತ ಎನ್ನ
ನಿಗಮಚೋರನ ಕೊಂದ ನೀರಜಾಕ್ಷನೆ ಕೃಷ್ಣ
ನಗವ ಧರಿಸಿದ ಸಾಗರವ ಕಡೆದು ಬಂದ
ಜಗವ ಮೋಹಿಸುವಂಥ ಖಗವಾಹನನೆ ಕೃಷ್ಣ
ಉರುಟು ನೇತ್ರನ ಕೊಂದು ಪುಣ್ಯಭೂಮಿಯ ತಂದ
ಕಿರೀಟಸಾರಥಿ ಕೃಷ್ಣಗೊಲಿದೋದ್ಧಾರಕ ಕೃಷ್ಣ
ಕನಕ ಕಶ್ಯಪನ ತಾ ಕೊಂದು ಕರುಳ ಮಾಲೆ ಧರಿಸಿ
ದಾನವ ಶತ್ರು ಎನಿಸಿದ್ದಾತನೆ ಕೃಷ್ಣ
ಹೆಜ್ಜೆತ್ರಯವ ಬೇಡಿ ಮೂರ್ಜಗ ವ್ಯಾಪಿಸಿಕೊಂಡಾ
ವಜ್ರಪಾಣಿಗೆ ಒಲಿದ ನಿರ್ಜರೇಶನೆ ಕೃಷ್ಣ
ದಿನಕರವಂಶದಿ ಪುಟ್ಟಿ ಜನಕಾತ್ಮಜಳ ಕೂಡಿ
ವನದೊಳಾಡುತ ಕಪಿಸೇನಾನಾಯಕ ಕೃಷ್ಣ

ಒರಳನೆಳೆದು ಪೋಗಿ ವಿಮಳಾರ್ಜುನರ ಕಿತ್ತು
ಆಕಳ ಕಾಯ್ದು ಕರಡಿಗೆ ಅಳಿಯಾದಾತನೆ ಕೃಷ್ಣ
ಇಷ್ಟದಾಯಕನೆ ಉತ್ಕೃಷ್ಟ ಜ್ಞಾನಾನಂದ
ಉಟ್ಟ ವಸ್ತ್ರವ ತೊರೆದುಬಿಟ್ಟಿದ್ದಾತನೆ ಕೃಷ್ಣ
ಕಾಮಧೇನನ (ನುವ) ಕದ್ದು ಭೂಮಿಪಾಲರ ಗೆದ್ದು
ತಾ ಮಹಾ ತಪಸಿಲಿದ್ದ ಮಹಾತ್ಮನೆ ಕೃಷ್ಣ
ಕುಜನ ಕಲಿಗಳನ್ನೆಲ್ಲ ವಧೆಯ ಮಾಡುತಲಿದ್ದ
ಸುಜನರಕ್ಷಕ ನಮ್ಮ ಸಲಹೊ ಭೀಮೇಶಕೃಷ್ಣ"[೯]

ಹರಿಯ ದಶಾವಾತಾರವನ್ನು ಸರಳವಾಗಿ ನಿರೂಪಿಸಿದ್ದಾರೆ.

ಸುಳಾದಿ

ಹರಿದಾಸ ಸಾಹಿತ್ಯದ ಮತ್ತೊಂದು ವಿಶಿಷ್ಟ ಪ್ರಕಾರ ಸುಳಾದಿ. 'ಸುಳಾದಿ' ಪದದ ಬಗೆಗೆ ಹಲವಾರು ಚರ್ಚೆಗಳಿವೆ. 'ಸೂಡ' ಎಂಬ ಶಬ್ದವು ಸಂಸ್ಕೃತದ 'ಶುದ್ಧ' ಎಂಬ ಪದದ ಅಪಭ್ರಂಶ ರೂಪವಾಗಿದೆ. ಸುಡಾದಿ ಪದವೇ ಪರ್ಯಾಯವಾಗಿ ಸುಳಾದಿ ಎಂಬ ಪದ ಬಳಕೆಯಾಗುತ್ತಿದೆ. ಸುಳಾದಿ ದೇಶಿಯ ಮಟ್ಟು. "ಸುಳುವಾದ ಹಾದಿ ಸುಲಲಿತವಾದ, ಸುಲಭವಾದ, ಜ್ಞಾನಗಳಿಗೆ ಸುಲಭವಾಗಿ ಮನಸ್ಸಿಗೆ ಬೋಧೆಯಾಗುವ, ಹೊಳೆಯುವ ವಿಷಯವನ್ನು ಸಮಾಧಿಯಲ್ಲಿ ಯಥಾರ್ಥವಾಗಿ ವಿವರಿಸುವುದೇ ಸುಳಾದಿ. ಆದಿಯಲ್ಲಿ ಸುಳಿದಿದ್ದು (ಪ್ರಕಾಶಿಸಿದ್ದು) ಸುಳಾದಿ."[೧೦]

ಧ್ರುವ, ಮಠ್ಯ, ರೂಪಕ, ಝಂಪಕ, ತ್ರಿಪುಟ, ಅಡ್ಡತಾಳ, ಏಕತಾಳ ಎಂಬ ಏಳುತಾಳಗಳ ಸಂಸರ್ಗದಿಂದ ಉದಿಸಿ ಬಂದದ್ದೇ ಸುಳಾದಿ. ಈ ಲಕ್ಷಣಗಳನನುಸರಿಸಿ ಮೊದಲಬಾರಿಗೆ ಶ್ರೀಪಾದರಾಜರು ಸುಳಾದಿಯನ್ನು ರಚಿಸಿದರು.

"ಸುಳಾದಿಗಳಲ್ಲಿ ಸಾಮಾನ್ಯವಾಗಿ ಆದಿಪ್ರಾಸ ಕಂಡುಬರುತ್ತದೆ. ಅಲ್ಲಲ್ಲಿ ಅಂತ್ಯ ಪ್ರಾಸದ ಸೊಗಸನ್ನು ಕಾಣಬಹುದು. ಸುಳಾದಿಗಳು ಮೇಲ್ನೋಟಕ್ಕೆ ಸರಳ ರಗಳೆಯನ್ನು ಹೋಲುತ್ತವೆ. ಕೀರ್ತನೆಗಳಿಗಿಂತ ಬಿಗಿಯಾದ ಬಂಧವನ್ನಿಲ್ಲಿ ಕಾಣುತ್ತೇವೆ. ಹಿರಿಯತತ್ವಗಳನ್ನು ಸಂಗೀತದ ಹಿನ್ನೆಲೆಯಲ್ಲಿ ಸಾಹಿತ್ಯಿಕ ಚೌಕಟ್ಟಿನಲ್ಲಿ ಆಧ್ಯಾತ್ಮಿಕ ಮಹತ್ವದೊಂದಿಗೆ ಬಿತ್ತರಿಸುವ ಈ ಸುಳಾದಿ ಪ್ರಕಾರ ನಿಜಕ್ಕೂ ಕನ್ನಡ ಸಾಹಿತ್ಯಕ್ಕೆ ಹರಿದಾಸರ ಗಣ್ಯವಾದ ಕೊಡುಗೆಯಾಗಿದೆ."[೧೧] ಹಿರಿದಾಸ ಸಾಹಿತ್ಯದಲ್ಲಿ ಸುಳಾದಿಗೆ ಒಂದು ದೊಡ್ಡ ಪರಂಪರೆಯೇ ಇದೆ ಎಂದು ಹೇಳಬಹುದು.

ಹರಪನಹಳ್ಳಿ ಭೀಮವ್ವನವರು ಎರಡು ಸುಳಾದಿಗಳನ್ನು ರಚಿಸಿದ್ದಾರೆ. 'ಇಂದು ಎನಗೆ ನಿನ್ನ ಸಂದರುಶನ ಸುಖ' ಎಂಬ ಸುಳಾದಿಯಲ್ಲಿ "ಹರಿಯ ದಶಾವತಾರಗಳನ್ನು ಸ್ತುತಿಸುತ್ತ ಹರಿಯ ಸಂದರ್ಶನ ಸುಖವನ್ನು ಭೀಮವ್ವ ಅಪೇಕ್ಷಿಸುತ್ತಾರೆ."[೧೨]

“ಇಂದು ಎನಗೆ ನಿನ್ನ ಸಂದರುಶನ ಸುಖ
ವೊಂದು ತೋರೆನಗೆರವಿಂದನಾಯನ
ಎಂದೆನ್ನುತ್ತಾ
ಮಂದಬುದ್ಧಿಯ ಮಹಾಮದಡ ಪಾಮರ ಭವ
ಬಂಧನದೊಳು ಸಿಲುಕಿ ನೊಂದೆನಯ್ಯ
ಸಂದೇಹ ಮಾಡದೆ ಸಲಹದಿದ್ದರೆ ನಿನ್ನ
ಹೊಂದಿ ಬಾಳುವುದೆಂತೊ ಮುಂದರಿಯೆ
ಬಿಂದುಮಾತ್ರದಿ ನಾಮಾಮೃತವ ಭೀಮೇಶಕೃಷ್ಣ
ತಂದು ನೀಡೆನಗೆ ಇಂದೀವರಾಕ್ಷ”[೧೩]

‘ವಾರಿಧಿಯೊಳಗೆ ಓಡ್ಯಾಡಿ ನಾರುವುದೇನೊ’ ಎಂಬ ಇನ್ನೊಂದು ಸುಳಾದಿಯಲ್ಲಿ “ಧ್ರುವ, ಮಠ್ಯ, ರೂಪಕ, ಅಟ್ಟ ಝಂಪೆ ತಾಳಗಳೊಂದಿಗೆ ‘ಜೊತೆ’ ಇದೆ. ಈ ಸುಳಾದಿಯಲ್ಲಿಯೂ ಕೂಡಾ ಭೀಮವ್ವ ಭಗವಂತನ ಸರ್ವವ್ಯಾಪಕತೆಯನ್ನು ತಿಳಿಸಿದ್ದಾರೆ. ದ್ವಿತೀಯಾಕ್ಷರ ಪ್ರಾಸ ಭೀಮವ್ವನ ಕೃತಿಗಳ ವಿಶೇಷ ಗುಣವಾಗಿದೆ. ಶಬ್ದಗಳು ಅಡೆತಡೆಯಿಲ್ಲದೆ ಸರಾಗವಾಗಿ ಅರ್ಥವನ್ನು ಹೊರ ಹೊಮ್ಮಿಸುತ್ತವೆ.

ವಾಸುದೇವನೆ ನೀನು ವಸುದೇವನ ಸುತನೆ
ವಾಸವಿ ಸಖನಾದ ಸಾಸಿರ ಫಣಿಶಯನ
ದೇಶದೇಶದಿ ವ್ಯಾಪ್ತ ಏ ಸಿರಿಪತಿ ಕೇಳೊ
ಮೋಸವಾದ ಭವಪಾಶದೊಳಗೆ ಸಿಲ್ಕಿ
ಘಾಸಿಯಾಗಲು ನೋಡಿ ತಮಾಷೆಯಾಗಿದೆ ನಿನಗೆ
ಈಶ ಜೀವರಿಗಿನ್ನೂ ಉತ್ತಮ ನೀನಾಗಿ
ಬ್ಯಾಸರದಲೆ ಬೇಡಿದಿಷ್ಟಾರ್ಥವ ನೀಡಿ
ನಾಶರಹಿತ ನಿನಗೆ ನಾ ಸೆರಗೊಡ್ಡುವೆನು
ಆಶೀರ್ವಾದವನೇ ಮಾಡೊ ಮಹಾಪುರುಷ

ನನ್ನನ್ನು ಉದ್ಧರಿಸು ಎಂದು ಭಗವಂತನಲ್ಲಿ ನಿವೇದನೆ ಮಾಡಿಕೊಳ್ಳುತ್ತಾ ದೋಷಗಳನ್ನು ಪರಿಹರಿಸಿ ರೋಷರಹಿತನಾಗುವಂತೆ ಮಾಡು ಎಂದು ಬೇಡಿಕೊಳ್ಳುತ್ತಾಳೆ.”[೧೪]

ಸಾಮಾನ್ಯವಾಗಿ ಸುಳಾದಿಗಳು ಬಿಗಿಬಂಧನದ ರಚನೆಯಿಂದ ಕೂಡಿರುತ್ತವೆ. ಆದರೆ ಭೀಮವ್ವನವರಲ್ಲಿ ಸಂಕೀರ್ಣತೆ ಸರಳಗೊಂಡಿದೆ. ಇನ್ನಿತರ ಕೀರ್ತನೆಯಲ್ಲಿ ಗ್ರಾಮ್ಯ ಪದವನ್ನು ತರುವಂತೆ ಸುಳಾದಿಯಲ್ಲೂ ಸಹ ಸಹಜವೆಂಬಂತೆ ಬಳಸಿದ್ದಾರೆ.

ಭೀಮವ್ವನವರು ನಿರ್ದಿಷ್ಟವಾಗಿ ಒಂದು ಕಡೆ ಕುಳಿತು, ಶಾಸ್ತ್ರಬದ್ಧವಾಗಿ, ವ್ಯಾಕರಣಬದ್ಧವಾಗಿ ಕೀರ್ತನೆಯನ್ನು ರಚನೆಮಾಡಿದವರಲ್ಲ, ಭೀಮೇಶಕೃಷ್ಣ ಯಾವಾಗ ಪ್ರೇರಣೆ ಮಾಡುತ್ತಾನೊ ಆ

[illegible]

ಸಂದರ್ಭದಲ್ಲಿಯೇ ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ದೇವರನ್ನು ಸ್ತುತಿಸುವುದಕ್ಕೆ ಭಾಷೆ ಒಂದು ಸಾಧನವಾಗಿತ್ತಷ್ಟೇ. ಭಾಷೆಗಿಂತ ಭಕ್ತಿ ಮುಖ್ಯವಾಗಿತ್ತು. ಆದ್ದರಿಂದ ಭೀಮವ್ವನವರ ರಚನೆಯಲ್ಲಿ ಗ್ರಾಮ್ಯಪದಗಳು ಸಹಜವೆಂಬಂತೆ ಬಳಕೆಯಾಗಿವೆ. ಪದಗಳ ಬಳಕೆಯಲ್ಲಿ ಶಿಥಿಲ ರೂಪಗಳನ್ನು, ದ್ವಿರುಕ್ತಿಗಳನ್ನು, ಸಂಕ್ಷಿಪ್ತರೂಪಗಳನ್ನು, ಸಂವಾದಿರೂಪಗಳನ್ನು ಕಾಣಬಹುದು. ಈ ಬಗೆಯ ರೂಪದಲ್ಲಿ ಮಿಂದ ಪದಗಳು ಕೀರ್ತನೆಯ ಲಯವನ್ನು ನಾಶ ಮಾಡಿಲ್ಲ. ಬದಲು ಓದುಗರಿಗೆ ಸಹಾಯವಾಗಿದೆ ಎಂದು ಹೇಳಬಹುದು. ಈ ಸಂದರ್ಭದಲ್ಲಿ ಡಿ.ಎಸ್.ಕರ್ಕಿಯವರು ಹೇಳಿದ ಮಾತುಗಳನ್ನು ನೆನಪಿಗೆ ತಂದುಕೊಳ್ಳಬಹುದು. "ಶೈಲಿ ಒಂದಿಷ್ಟು ಗ್ರಾಮ್ಯವಾದರೂ ಚಿಂತೆಯಿಲ್ಲ. ಛಂದಕ್ಕೆ ಅನುಕೂಲವಾಗುವಂತೆ ಭಾಷೆಯನ್ನು ಅಳವಡಿಸಿಕೊಳ್ಳುವ ಪ್ರವೃತ್ತಿದಾಸರ ಹಾಡುಗಳಲ್ಲಿ ಎದ್ದು ಕಾಣುತ್ತದೆ.

ದಾಸಸಾಹಿತ್ಯ ಹಾಡುಗಬ್ಬವಾಗಿದೆ. ಕೆಲವು ಕೀರ್ತನೆಗಳಲ್ಲಿ ಆದಿ ಪ್ರಾಸಾಕ್ಷರವು ವ್ಯಾಕರಣ ಬಂಧನದಿಂದ ಸಡಿಲಗೊಂಡಿದೆ. ಪ್ರಾದೇಶಿಕ ಭಾಷಾ ಪ್ರಭೇದದಿಂದಾಗಿ ಈ ಬಗೆಯ ಪಲ್ಲಟಗಳನ್ನು ಸಹಜವಾಗಿ ಕಾಣಬಹುದು.

ಹರಪನಹಳ್ಳಿ ಪ್ರದೇಶದ ಕಡೆ	ಬೆಳಗಾವಿ ಪ್ರದೇಶದ ಕಡೆಗೆ
ದೇವೇಂದ್ರ ಸೊಸೆ ದೇವಕ್ಕಿತನಯಳು ಏನೇನು ಬಯಸಿದಳು.	ದೇವೇಂದ್ರ ಸೊಸೆ ದೇವಕಿ ತನಯಳು ಏನೇನು ಬಯಸುವಳು.
ಒಂದು ತಿಂಗಳು ತುಂಬಲು ಸುಭದ್ರ ಅಂಜೂರಿ ದ್ರಾಕ್ಷಿ ಕಿತ್ತಳೆ ಜಂಬು ನೇರಳ ಬಯಸಿದಳು.	ಒಂದು ತಿಂಗಳು ತುಂಬಲು ಸುಭದ್ರ ದ್ರಾಕ್ಷಿ ಮಾವು ಜಂಬು ನೀರಲೆ ಬಯಸುವಳು.
ಅಂಬುಜಾಕ್ಷನ ತಂಗಿ ಪೈಜಣರುಳಿಗೆಜ್ಜೆ ಕಾಲುಂಗರ ಕಿರುಪಿಲ್ಯ ಇಟ್ಟೇನೆಂಬುವಳು	ಅಂಬುಜಾಕ್ಷನ ತಂಗಿ ಕಾಲಲ್ಲಿ ಸರಗಜ್ಜೆ ಕಾಲುಂಗರ ಕಿರುಪಿಲ್ಯ ಇಟ್ಟೇನೆಂಬುವಳು
ಎರಡು ತಿಂಗಳು ತುಂಬಲು ಸುಭದ್ರ ಪರಡಿ ಮಾಲತಿ ಸಣ್ಣ ಶ್ಯಾವಿಗೆ ಬಯಸಿದಳು.	ಎರಡು ತಿಂಗಳು ತುಂಬಲು ಸುಭದ್ರ ಪರಡಿಪಾಯಸ ಸಣ್ಣ ಶ್ಯಾವಿಗೆ ಬಯಸುವಳು.
ಪರವೇಶನ ತಂಗಿ ಹರಡಿ ಕಂಕಣ ಹಸ್ತ ಕಡಗ ಹಿಂಬಳೆ ದ್ವಾರ್ಯ ಇಟ್ಟೇನೆಂಬುವಳು	ಪರವೇಶನ ತಂಗಿಹರಡಿ ಕಂಕಣ ಹಸ್ತ ಕಡಗ ಹಸಿರುಬಳೆ ಇಟ್ಟೇನೆಂಬವಳು

ಹಲವು ಜನ ಹಾಡಿದ ಗೀತ ರಚನೆಗಳು ಆ ಪ್ರದೇಶದ ಅನನ್ಯತೆಯನ್ನು ತೋರಿಸುತ್ತವೆ."[೧೬]

ಭೂಮಿಯ ಮೇಲೆ ಇರುವ ಅನೇಕ ಜೀವರಾಶಿಗಳ ನಡುವೆ ಇರುವ ಸಂಬಂಧ ಒಂದು ತೂಕವಾದರೆ ತಾಯಿ ಮಗುವಿನ ಸಂಬಂಧದ ತೂಕ ಇನ್ನೊಂದು ಬಗೆಯದು. ಹರಿದಾಸ ಸಾಹಿತ್ಯದಲ್ಲಿ ಯಶೋಧೆ

[illegible]

[illegible]

[illegible]

[illegible]

ಕೃಷ್ಣನನ್ನು ಕೇಂದ್ರದಲ್ಲಿರಿಸಿಕೊಂಡು ಅನೇಕ ಕೀರ್ತನೆಗಳು ಹೊರಬಂದಿವೆ. ಆ ಸಂದರ್ಭದಲ್ಲಿ ತಾಯಿಗೆ ಸಮಾಜದಿಂದ ಆಗಬಹುದಾದ ಅನುಭವಗಳನ್ನು ಕೀರ್ತನೆಯಲ್ಲಿ ಹೃದ್ಯವೆಂಬಂತೆ ಮೂಡಿಸಿದ್ದಾರೆ. ಬಾಲಮಕ್ಕಳ ತುಂಟಾಟ, ತೊದಲನುಡಿ, ಇತರ ಮಕ್ಕಳೊಂದಿಗೆ ಜಗಳ ತೆಗೆದುಬಂದ ಸಂದರ್ಭ, ತುಂಟಮಗುವಿನಿಂದ ತೊಂದರೆಗೊಳದಾವರ ಸಂದರ್ಭ ಮತ್ತು ಅವರು ಹೇಳುವ ನಿಂದನೆಯುಕ್ತ ಮಾತುಗಳನ್ನು ಕೀರ್ತನೆಯ ಬಂಧದಲ್ಲಿ ಸೆರೆಹಿಡಿದ್ದಾರೆ. ಕನಕ ಪುರಂದರದಾಸರ ಆದಿಯಾಗಿ ಎಲ್ಲರ ಕೀರ್ತನೆಗಳಲ್ಲಿ ಕೃಷ್ಣನ ಬಾಲಲೀಲೆಯುಳ್ಳ ಕೀರ್ತನೆಗಳ ರಚನೆಯನ್ನು ಕಾಣಬಹುದು. ಯಶೋಧೆ ಕೃಷ್ಣನನ್ನು ಹೊರಗೆ ಹೋಗದಂತೆ ಬೇಡಿಕೊಳ್ಳುವುದು. ಗೋಪಿಯರ ಕಡೆಯಿಂದ ನಿಂದನೆ ಮಾತುಗಳನ್ನು ಆಲಿಸುವುದು. ಹರಿದಾಸರು ಭಕ್ತಿಯ ಆವೇಶದಲ್ಲಿ ಯಶೋಧೆ, ಬಾಲಕೃಷ್ಣ, ಗೋಪಿಯರು, ಹೀಗೆ ಅನೇಕ ಪಾತ್ರಗಳಲ್ಲಿ ಪರಕಾಯ ಪ್ರವೇಶಮಾಡಿ 'ಬಾಲ್ಯವನ್ನು' ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಹಾಗೆಯೇ ಭೀಮವ್ವನವರು ಸಹ ಕೃಷ್ಣನ ಬಾಲಲೀಲೆಯನ್ನು ವರ್ಣಿಸಿದ್ದಾರೆ. ಭಕ್ತಿಯ ಸಾಂಗತ್ಯದಲ್ಲಿ ವಾತ್ಸಲ್ಯಭಾವ ಮಡುಗಟ್ಟಿದೆ. ಕೃಷ್ಣನ ತುಂಟಾಟವನ್ನು ಸಹಿಸಲಾರದೆ ಗೋಪಿಯರು ಯಶೋದೆಯಲ್ಲಿ ದೂರು ನೀಡುತ್ತಾರೆ.

"ಇದು ಏನೆಶೋಧ ಇದು ಏನೆಶೋಧ
ದಧಿಯ ದಾಮೋದರ ಹೆದರಿಕಿಲ್ಲದೆ
ಕುಡಿದೋಡಿ ತಾ ಪೋದ"[೧೭]

ಸಮಾಜದಲ್ಲಿ ಹೆಂಗಸರ ಕಷ್ಟ, ಕುಟುಂಬದಲ್ಲಿ ಗಂಡಿನ ಸ್ಥಾನಮಾನ ಯಾವ ಬಗೆಯದು ಎಂದು ಮುಂದಿನ ಸಾಲುಗಳಲ್ಲಿ ಕಾಣಬಹುದು.

ಇಂದೆನ್ನ ಮೆಯಲ್ಲೊಂದಿಷ್ಟು ಕ್ಷೀರಗಳಿಲ್ಲ.
ಗಂಡ ಅತಿ ದುಷ್ಟ ಕೊಲ್ಲುವನಮ್ಮ."[೧೮]

ಗೋಪಿಯೊರ್ವಳ ಮನೆಯಲ್ಲಿ ಕೃಷ್ಣ ಒಂದು ತೊಟ್ಟೂ ಬಿಡದೆ ಮನೆಯಲ್ಲಿದ್ದ ಹಾಲನ್ನು ಕುಡಿದು ಬಿಟ್ಟಿದ್ದಾನೆ. ಆ ಗೋಪಿ ಹಾಲು-ಮೊಸರು ಇಲ್ಲದ್ದನ್ನು ಗಮನಿಸಿ ಗಂಡ ಬೈಯುವನು ಇಲ್ಲವೆ ಹೊಡೆಯುವನೆಂದು ಭಯಭೀತಳಾಗಿದ್ದಾಳೆ.

ಯಶೋಧೆ ವಾತ್ಸಲ್ಯಭಾವದಿಂದ ಬಾಲಕೃಷ್ಣನನ್ನು ಸರಳ ಭಾಷೆಯಲ್ಲಿ ಪ್ರಶ್ನೆ ಮಾಡುತ್ತಿದ್ದಾಳೆ. ಕಳ್ಳತನ ಮಾಡುವುದನ್ನು ಯಾರು ಕಲಿಸಿದರು, ನೀನು ಹೇಗೆ ಕಲಿತೆ ಎನ್ನುವ ಯಶೋಧೆಯ ಮನದ ತಳಮಳವನ್ನು ಹರಪನಹಳ್ಳಿ ಭೀಮವ್ವ ಸಮರ್ಥವಾಗಿ ಸೆರೆಹಿಡಿದ್ದಾರೆ.

ಕಳವು ಕಲಿಸಿದರ್ಯಾರೊ ನಿನಗೆ ಕಂಜನಾಭನೆ
"ಕೇರಿ ಕೇರಿ ಮನೆಗಳಲ್ಲಿ
ಕ್ಷೀರ ಗಡಿಗೆಯನೊಡಿವರೇನಲ್ಲಿ
ಚೋರತನವ ನೀ ಕಲಿತಿಹುದಲ್ಲಿ
ಜಾರನೆನಿಸಿಕೊಂಬುವುದು ಕೇಳಿ ಬಲ್ಲೆ. -೧-

ಕಡೆದ ಬೆಣ್ಣೆ ಕಾಸಿದ ತುಪ್ಪ
ಕೊಡುವೆನ್ನಾಲು ನೀ ಕುಡಿಯದಲ್ಯಾಕೊ
ಮಡದಿಯರ ಸರಿ ನಿನಗೇನು ಬೇಕೊ
ಕೇಳಿ ಬ್ಯಾಸರಾದೆನು ನಿನ್ನ ವಾಕು -೨-
ಬಡವರ ಮನೆ ಅನ್ನದಲಿಷ್ಟು
ತುಡುಗುತನದ ನೀ ಮಾಡುವುದೆಷ್ಟು
ಪಿಡಿಯರವರು ಬರುವುದತಿ ಸಿಟ್ಟು
ಹಿಡಿದು ಹಾಕೋರು ನಿನಗೊಂದು ಪೆಟ್ಟು"[೧೯]

ಕೀರ್ತನೆಯಲ್ಲಿನ ಅಂತ್ಯ ಪ್ರಾಸಗಳು ಕೀರ್ತನೆ ಸೌಂದರ್ಯವನ್ನು ಹೆಚ್ಚಿಸಿವೆ. ಅದಕ್ಕೂ ಮುಖ್ಯವಾಗಿ ಇಲ್ಲಿನ ಭಾಷೆ ಮಕ್ಕಳನ್ನು ಹತ್ತಿರದಲ್ಲಿ ಕೂರಿಸಿಕೊಂಡು ಮುದ್ದಿನಿಂದ ಹೇಳಿದ ಬುದ್ಧಿ ಮಾತಿನಂತೆ ಕಾಣಬರುತ್ತವೆ.

ಯಶೋದೆಗೆ ತನ್ನ ಮಗ ಸಾಮಾನ್ಯ ಮಗುವಲ್ಲ. ಅವನು ಅಸಾಮಾನ್ಯನು ಎಂದು ತಿಳಿದು ಬಂದಿದೆ. ಅವನ ತುಂಟಾಟಗಳು ದೈವಿಕತೆಯನ್ನು ದರ್ಶನ ಮಾಡಿಸಿದಂತಿವೆ. ಕೃಷ್ಣನ ಚೆಲವು ಯಶೋದೆಯನ್ನು ಮೈಮರೆಸುವಂತೆ ಮಾಡಿದೆ.

"ಕಂಡು ಹಿಗ್ಗಿದಳೆ ಕಮಲಾಕ್ಷನ್ನ ಯಶೋದ ಎತ್ತಿ
ಕೊಂಡು ಮುದ್ದಿಸಿದಳೆ ಯದುನಾಥನ್ನ
ಕೋಟಿ ಸೂರ್ಯರ ಕಾಂತಿ ಹರಣಮಾಡವವ ಮುಖ ಕಿ
ರೀಟ ಕೌಸ್ತುಭ ಮಣಿಯಾಭರಣ
ಹಾಟಕಾಂಬರನುಟ್ಟು ನಾಟಕಧಾರಿ ಕಿ
ರೀಟಿ ಸಾರಥಿ ಪಕ್ಷಿರಾಟವಾಹನನ"[೨೦]

ಸೃಜನ ಶೀಲ ಕವಿಯಲ್ಲಿ ಪದಗಳೆಲ್ಲವೂ ಮಾರ್ಮಿಕವಾಗಿ ಮೂಡಿಬರುತ್ತವೆ. ಆಯಾ ಸಂದರ್ಭಕ್ಕೆ ಆ ಪದವನ್ನು ಹಾಕಿದರೆ ಕೀರ್ತನೆಯ ಸೌಂದರ್ಯವೂ ಹೆಚ್ಚುತ್ತದೆ. ನಿಂದನೆಯಂತೆ ಕೇಳಿಬಂದರೂ ಅವು ಒಂದು ಬಗೆಯಲ್ಲಿ ಸಹಜತೆಯನ್ನು ಪಡೆದುಕೊಂಡಿವೆ.

"ನೋಡೆ ಗೋಪ್ಯಮ್ಮ ಕೃಷ್ಣನಚಾಳಿಯ ನೀ
ಮಾಡಿಬಿಟ್ಟೆಯ ಇಂಥ ಗೂಳಿಯ ಇಂಥ ಧಾಳಿಯ
ತುಪ್ಪದ ಕೊಡ ಧಪ್ಪನೊಡೆದಾನೆ ಕಂ
ದರ್ಪನಪ್ಪನು ಈತೇನ್ನುಡುಗನೆ ಇಂಥ ತುಡುಗನೆ"[೨೧]

ಗೋಪಿಯರ ದೂರಿನಿಂದಾಗಿ ಮತ್ತು ತಾಯಿ ಯಶೋದೆಯ ಪ್ರಶ್ನೆಯಿಂದಾಗಿ ಬಾಲ ಕೃಷ್ಣ ರೋಸಿಹೋಗಿದ್ದಾನೆ. ಗೋಪಿಯರು ದೂರುವಷ್ಟು ನಾನು ದುಷ್ಟ, ತುಂಟನಲ್ಲ ಎಂದು ಬಾಲಕೃಷ್ಣನು

ನುಡಿಯುವ ಮಾತುಗಳು ಮಾರ್ಮಿಕವಾಗಿವೆ. ನೀನು ಕೊಡುವ ಬೆಣ್ಣೆಯನ್ನು ಸ್ವೀಕರಿಸದ ನಾನು ಗೋಪಿಯರ ಮನೆಯಲ್ಲಿ ಬೆಣ್ಣೆಯ ಕದಿಯುವುದು ಎಂದರೆ ಸಾಧ್ಯದ ಮಾತೇನು ಎಂದು ಮರು ಪ್ರಶ್ನೆ ಹಾಕುತ್ತಾನೆ.

"ಯಾಕೆನ್ನ ದೂರುವರೆ ಪೇಳಮ್ಮಯ್ಯ
ಪೋಕಬುದ್ಧಿಯ ಗೊಲ್ಲತಿ
ಗೋಕುಲದೊಳಗಿಂಥ ಪೋಕ ಹೆಂಗಸರಾಗಿ
ಲೋಕ ಲೋಕದಿ ನೋಡೆ ನಾಕಾಣೆನೆಲ್ಲೆಲ್ಲೂ ||ಪ||
ಅಮ್ಮಯ್ಯ ನೀನಿಡುವೂ ಪಾಲ್ಬೆಣ್ಣೆಯ
ಕಣ್ಣಿಂದ ನೋಡುವೆನೆ
ಅಣ್ಣ ರಾಮರ ಕೇಳೆ ಎನ್ನಾಣೆ ಹುಸಿಯಲ್ಲ
ಎನ್ನ ಪಣೆಯ ಲಿಖಿತ ಮುನ್ನ ಮಾಡಲಿ ಏನೆ ||೧||
ದುಷ್ಟ ಹೆಂಗಳೇರಾಡುವೂ ಮಾತೊಂದು ನೀ
ಗೊತ್ತು ಹಿಡಿಯ ಬ್ಯಾಡಮ್ಮ
ಚಟ್ಟಿಗೆ ಬೆಣ್ಣೆಯ ಮೆಲುವೊಂದುಂಟಾದರೆ
ಪುಟ್ಟಕೂಸಿನ ಹೊಟ್ಟೆಗೆ ದೃಷ್ಟಿತಾಗದು ಏನೆ ||೨||
ಚೆಂಡನಾಡುವಾಗ ಇವರು ಎನ್ನ
ಮುಂಗೈಯ ಪಿಡಿದುಕೊಂಡು
ಗಂಡರಂಜಿಕೆಯಿಲ್ಲ ಗಾಡಿಕಾರ್ತಿಯರೆಲ್ಲ
ಬಂಡು ಮಾತುಗಳಾಡಿ ಬಂದು ದೂರಿದರೇನೆ ||೩||
ಸಣ್ಣ ಮಕ್ಕಳರೊಡನೆ ಅಂಗಳದಿ ನಾ
ಚಿಣ್ಣಿಯನಾಡುವಾಗ
ಬೆಣ್ಣೆ ಕೊಡುತೇವೆಂದು ಬಣ್ಣ ಬಣ್ಣದಿ ಎನ್ನ
ಕಣ್ಣು ಸನ್ನೆಯ ಮಾಡಿ ಕರೆದರ್ಯಾತಕೆ ಕೇಳೆ ||೪||"[೨೨]

ಹರಪನಹಳ್ಳಿ ಭೀಮವ್ವನವರ ರಚನೆಗಳಲ್ಲಿ ಮಾತುಗಳು ಹಾಡಿನ ಲಯವನ್ನು ಪಡೆದುಕೊಂಡಿವೆ. ಬಾಲಕೃಷ್ಣನನ್ನು ತೂಗುವ ನೆಪದಲ್ಲಿ ಕೇಶವಾದಿ ನಾಮಗಳನ್ನು ಸ್ಮರಿಸುತ್ತಾ ಕೀರ್ತನೆಯೊಂದನ್ನು ರಚಿಸಿದ್ದಾರೆ. ಅದು ಅವರ ಪ್ರತಿಭೆಗೆ ಹಿಡಿದ ಕನ್ನಡಿಯಾಗದೆ. ಯಾವ ರೂಪಕ, ಉಪಮೆಗಳನ್ನು ಬಳಸದೆ ನೇರವಾದ ಸರಳವಾದ ಭಾಷೆಯಲ್ಲಿ ರಚಿಸಿಲಾಗಿದೆ.

"ಹಿಡಿ ಕೇಶವ ಕೃಷ್ಣ ನಾರಾಯಣನ
ಕೊಡು ಮಾಧವಗೋವಿಂದ ವಿಷ್ಣುನ್ನ

ಕಡಲ ಶಯನನಾದ ತಕ್ಕೊ ಮಧುಸೂದನನ
ಕಡುಬ್ಯಾಗದಲಿ ತಾರೆ ತ್ರಿವಿಕ್ರಮನ ಜೋಜೋ ||೧||
ವಾಮನ ಶ್ರೀಧರ ಹೃಷಿಕೇಶವನ
ಕಾಮಿಸಿ ನೀ ಕೊಳ್ಳೆ ಪದ್ಮನಾಭನ್ನ
ದಾಮೋದರ ಶ್ರೀ ಸಂಕರುಷಣನ
ಕೋಮಲಾಂಗಿ ತಾರೆ ವಾಸುದೇವನ ಜೋಜೋ ||೨||
ಪ್ರದ್ಯುಮ್ನ ಅನಿರುದ್ದ ಪುರುಷೋತ್ತಮನ
ಮುದ್ದು ಅಧೋಕ್ಷಜ ನಾರಸಿಂಹಾಚ್ಯುತನ
ಸದ್ಯೋಜನಾರ್ಧನ್ನಕೊಂಡು ಉಪೇಂದ್ರನ್ನ
ಸದ್ಯತಾದ್ದರಿ ಭೀಮೇಶಕೃಷ್ಣನ್ನ ಜೋಜೋ"[೨೩]

ಕೀರ್ತನೆಗಳಲ್ಲಿಯ ಎಲ್ಲಿದೆ ಹಾಡು ಸರಳ ಮತ್ತು ನೇರವಾಗಿ ಬಂದಿದೆ. ಪ್ರಾಸಗಳಲ್ಲಿ ಯಾವುದೇ ರೀತಿಯ ನಿರ್ಬಂಧವಿಲ್ಲ. ಈ ಬಗೆಯ ಕೀರ್ತನೆಗಳಿಗೆ ವಿಶೇಷವಾದ ಸಂವೇದನೆಯುಂಟು. ಅವುಗಳು ತಮ್ಮದೇ ಆದ ಅಂತಸ್ಸತ್ವದಿಂದ, ಅನನ್ಯತೆಯಿಂದ ಕೂಡಿವೆ.

ಹರಪನಹಳ್ಳಿ ಭೀಮವ್ವನವರು ಸಂಪ್ರದಾಯದ ಕುಟುಂಬದ ಹಿನ್ನೆಲೆಯಲ್ಲಿ ಬಂದವರು. ಹಲವಾರು ಆಚರಣೆಗಳನ್ನು ಕಂಡವರು ತಮಗೆ ಅನಿಸಿದ್ದನ್ನು ತನ್ನ ಪರಿಸರದ ಭಾಷೆ ಮತ್ತು ಲಯದಲ್ಲಿ ರಚಿಸಿದ್ದಾರೆ. ಆಡು-ನುಡಿಯ ಭಾಷೆಯೇ ಗೇಯತೆಯನ್ನು ಪಡೆದುಕೊಂಡಿರುವುದು ನೋಡಬಹುದು. ಹರಿಯ ದಶಾವತಾರವನ್ನು, ಸಂಪ್ರದಾಯದ ಗೀತೆಗಳನ್ನು, ಬಾಲ ಲೀಲೆಯುಳ್ಳ ಕೀರ್ತನೆಗಳಲ್ಲಿ ಭಾಷೆ ಹೃದ್ಯವೆಂಬಂತೆ ಮೂಡಿಬಂದಿದೆ.

ಭೀಮವ್ವನವರು ಸಹ ವ್ಯಾಜಸ್ತುತಿ ಅಥವಾ ನಿಂದನಾಸ್ತುತಿಯುಳ್ಳ ಕೀರ್ತನೆಗಳನ್ನು ರಚಿಸಿದ್ದಾರೆ. ಪುರಂದರದಾಸರ, ಕನಕದಾಸರ, ವಿಜಯದಾಸರ ಕೀರ್ತನೆಗಳಲ್ಲಿ ನಿಂದನಾಸ್ತುತಿಗಳ ಭಾಷೆ ಕಾಠಿಣ್ಯದ ಸ್ವರೂಪವನ್ನು ಕಾಣಬಹುದು. ಆದರೆ ಭೀಮವ್ವನವರಲ್ಲಿ ಕಾಠಿಣ್ಯದ ಸ್ವರೂಪಮೂಡಿಬಂದಿಲ್ಲ. ಬದಲು ಮೃಧು ಧೋರಣೆಯ ಹಿನ್ನೆಲೆಯಲ್ಲಿ ಬಂದಿವೆ. ಬಹುಶಃ ಭೀಮವ್ವನವರು ಸ್ತ್ರೀ ಆಗಿದ್ದ ಕಾರಣದಿಂದ ಬಂಧನ ದಾಟಿ ಹೊರಬರುವುದಕ್ಕೆ ಸಾಧ್ಯವಾಗಿಲ್ಲ. ಆಗಿನ ಕಾಲದಲ್ಲಿ ಸ್ತ್ರೀಯಾಗಿದ್ದುಕೊಂಡು ಕೀರ್ತನೆಗಳನ್ನು ರಚಿಸುವುದೇ ದೊಡ್ಡ ಸಂಗತಿ. ಅಂತಹುದರಲ್ಲಿ ಬೈಗುಳದ ಭಾಷೆಯನ್ನು ಕೀರ್ತನೆಯಲ್ಲಿ ಬಳಸುವುದು ಎಂದರೆ ಅಪರಾಧವೇ ಸರಿ. ಪುರಂದರ ದಾಸರ ಕೀರ್ತನೆಯಲ್ಲಿ ಬೈಗುಳದ ಭಾಷೆ ಸಹಜವಾಗಿ ಮೂಡಿಬಂದಿದೆ. ಆ ಕೀರ್ತನೆ ಈ ರೀತಿಯಲ್ಲಿದೆ.

"ಕೇಳು ಕೋಪಿಸಬೇಡ ಹೇಳಲಂಜುವೆ
ಬಾಳು ಬಡತನವನಾನು

ತಲೆಗೊಯ್ಕ ಹಿರಿಯವರಿಗ ಇಳೆಗೆ ಪೂಜಿತನಲ್ಲ
ಬಲರಿಭಂಡ ನಿನ್ನ ಕಿರಿಯಮಗ
ಲಲನೆಯು ಸೇರಿದಳು ಬಲು ಲೋಭಿಗಳ ಮನೆಯ
ಹೊಲೆ ಕುಲವರಿಯ್ಯ ನಿನ್ನ ಸೂಳೆಯರಂಗ ||೧||
ಮಗಳ ಮೊಗವು ಡೊಂಕು ಮೈದುನ ಗುರುದ್ರೋಹಿ
ಮಗನ ಮಗನು ಚಾಡಿಗಾರ
ಹಗರಣಕೆ ನೀಚರ ಹಣ್ಣು ಮೆದ್ವೆಂಜಲ
ಜಗದೊಡೆಯ ನೆನೆಸಿಕೊಂಡೆ ನೀನುಂಡೆ ||೨||
ಲಕ್ಷ್ಮೀಪತಿಯು ಎನಿಸಿ ಭಿಕ್ಷೆ ಬೇಡಲು ಪೋದೆ
ಪಕ್ಷಿಯ ಪೆಗಲೇರಿ ರಾಜನೆನಿಸಿದೆ.
ಸಾಕ್ಷಾತು ಪುರಂದರ ವಿಠಲನೆ ನಿನ್ನಗುಣ
ಲಕ್ಷಣ ಪೇಳಲಳವೆ ಕಳವೆ"[೨೪]

ತಲೆಗೊಯ್ಕ, ಬಲುಭಂಡ, ಸೂಳೆ, ಗುರುದ್ರೋಹಿ, ಚಾಡಿಗಾರ ಎಂಬಬಾಹಿರ ಪದಗಳನ್ನು ದೇವರಿಗೆ ಆರೋಪಿಸುತ್ತಾರೆ. ಬಹುಶಃ ಆಗಿನ ಸಮಾಜದಲ್ಲಿ ಗಂಡಿಗೆ ಮಾತ್ರ ಸಹಜವಾಗಿ ಬಳಸುವ ಸ್ವಾತಂತ್ರ್ಯವಿತ್ತೇನೊ. ಅಂತಲೇ ಅವು ಸಹಜವೆಂಬಂತೆ ಮೂಡಿಬಂದಿವೆ. ಇದೇ ಬಗೆಯ ಹರಿಯ ದಶಾವತಾರ ಚಿತ್ರಣವನ್ನು ಭೀಮವ್ವ ಕಟ್ಟಿಕೊಡುತ್ತಾರೆ. ಆದರೆ ಸಹಜವಾಗಿ ಮೂಡಿಬಂದಿದೆ.

"ನಾರುತ ಮೈಯ ನೀರೊಳಗಿರುವ ಮಂ
ದಾರವನ್ನೊರುವ
ಕೋರೆಯಲಿ ಧರೆಯ ಮ್ಯಾಲಕೆ ತರುವ
ಕರೆಯ ಕಂಬದಿ ಬರುವ
ಪೋರ ಧರಿತ್ರಿ ವಿಕ್ರಮನಾಗಿ ತೋರುವ
ತಾಯಿ ಶಿರವ ಬರುವ
ನಾರು ವಸ್ತ್ರ ಬಿಗಿದುಟ್ಟೆ ಮಾಡಿ ಭೀಮೇಶ ಕೃಷ್ಣನ
ನಾರೇರ ವ್ರತಭಂಗ ಮಾಡಿ ತುರಗವೇರಿ"[೨೫]

ಹರಿದಾಸರು ರಚಿಸಿದ ಸಾಹಿತ್ಯದಲ್ಲಿ ವಸ್ತು ಒಂದೇ ಆಗಿರಬಹುದು. ಆದರೂ ತೆಗೆದುಕೊಂಡ ವಸ್ತುವನ್ನು ಹೇಳುವ, ಕೇಳುವ ಕ್ರಮ, ಕಟ್ಟಿಕೊಡುವ ರೀತಿ ಭಿನ್ನವಾಗಿದೆ. ಮೊದಲನೆಯ ಕಾಲಘಟ್ಟದ ದಾಸರೆಂದೆನಿಸಿಕೊಂಡ ಪುರಂದರದಾಸರು ಕನಕದಾಸರ ಕೀರ್ತನೆಗಳಲ್ಲಿ ಸರಳ ಭಾಷೆಯ ಪ್ರಯೋಗವನ್ನು ಕಂಡರೆ ಎರಡನೆಯ ಕಾಲಘಟ್ಟದ ದಾಸರೆಂದೆನಿಸಿಕೊಂಡ ವಿಜಯದಾಸರ, ಜಗನ್ನಾಥ ದಾಸರ ಮುಂತಾದ

ಹರಿದಾಸರ ಕೀರ್ತನೆಗಳಲ್ಲಿ ಪ್ರೌಢಭಾಷೆಯ ಬಳಕೆಯನ್ನು ಕಾಣಬಹುದು. ಜೊತೆಗೆ ದ್ವೈತ ಸಿದ್ಧಾಂತವನ್ನು ಪ್ರಚುರ ಮಾಡುವುದೇ ಅದರ ಪರಮ ಧ್ಯೇಯವಾಗಿತ್ತು. ಎರಡು ಕಾಲಘಟ್ಟದ ಹರಿದಾಸರು ರಚಿಸಿದ ಕೀರ್ತನೆಗಳಿಗೆ ಹೋಲಿಸಿದಾಗಿ ಭೀಮವ್ವನವರ ಕೀರ್ತನೆಗಳು ವಿಭಿನ್ನವಾಗಿವೆ. ಯಾವುದನ್ನು ಮಾರ್ಗಭಾಷೆಯೆಂದು ಗುರುತಿಸುತ್ತೇವೆಯೋ ಆ ಭಾಷೆಯ ಬಂಧದಲ್ಲಿ ಭೀಮವ್ವನವರ ಕೀರ್ತನೆಗಳು ರಚನೆಗೊಂಡಿಲ್ಲ. ಬಡಲು ಆಡುಮಾತುಗಳು ಕಾವ್ಯರೂಪವನ್ನು ಧರಿಸಿವೆ. ಸುತ್ತಮುತ್ತಲಿನ ಹಬ್ಬ, ಹರಿದಿನ, ಆಚರಣೆ, ಸಂಪ್ರದಾಯಗಳೇ ಕೀರ್ತನೆಗಳಿಗೆ ವಸ್ತುವಾಗಿವೆ. ಭಾಷೆಯೂ ಕೂಡ ಸರಳ ಭಾವವನ್ನು ಹೊತ್ತು ಬಂದಿದೆ. ಆರತಿಯ ಹಾಡು ತುಂಬ ಸೊಗಸಾಗಿ ಮೂಡಿಬಂದಿದೆ.

"ಆರತಿಯ ಬೆಳಗಬನಿರೆ ಆರತಿಯ ಬೆಳಗ ಬನ್ನಿರೆ
ಪಾರ್ವತಿ ದೇವಿಯರಿಗೆ
ಕೀರುತಿ ಕೊಂಡಾಡುತಲಿ ಪರ್ವತರಾಜನ ಮಗಳಿಗೆ
ಆರತಿಯ ಬೆಳಗ ಬನ್ನಿರೆ
ವಾಲೆ ಕಠಾಣಿ ಚಿಂತಾಕು ಮ್ಯಾಲೆ ಸರಿಗೆ ಸರ ಮುತ್ತುಗಳು
ಕಾಲಗೆಜ್ಜೆ ಸರಪಳಿನಿಟ್ಟ ಫಾಲಾಕ್ಷನ ಮಡದಿಗೆ ||೧||
ರಂಗುಮಾಣಿಕ್ಯದ ಹೆರಳು ಬಂಗಾರದಾಭರಣವಿಟ್ಟು
ದುಂಡು ಮಲ್ಲಿಗೆ ಮುಡಿದು ಕುಳಿತ ಮಂಗಳಾದೇವಿಯರಿಗೆ ||೨||
ದುಂಡುಮುತ್ತಿನ ಮುಕುರ್ಯವ ಚಂದ್ರಬಾಳ್ಯ ಬುಗುಡಿನಿಟ್ಟು
ದುಂಡುಹರಡಿ ಕಂಕಣ ಕಮಲ ದ್ವಾರ್ಯನಿಟ್ಟ ವಾರಿಜಾಕ್ಷಿಗೆ ||೩||
ಜಾತಿ ಮಾಣಿಕ್ಯದ ವಂಕಿ ನೂತನಾದ ನಾಗಮುರಿಗೆ
ಪ್ರೀತಿಯಲಿ ಪೀತಾಂಬ್ರನುಟ್ಟು ಜೋತಿಯಂತೆ ಹೊಳೆವೂ ಗೌರಿಗೆ ||೪||
ನೀಲ ವರ್ಣ ಭೀಮೇಶ ಕೃಷ್ಣ ಧ್ಯಾನಮಾಡುತ ಕೃಷ್ಣನ
ನೀಲಕಂಠನ ಸಹಿತ ಕುಳಿತ್ವಿಶಾಲನೇತ್ರ ಪಾವರ್ತಿಗೆ"[೨೬]

ಹರಪನಹಳ್ಳಿ ಭೀಮವ್ವನವರು ಬಾಗಿಲು ಕಟ್ಟುವ ಹಾಡು, ಪತಿದಾನಕೊಟ್ಟ ಕೀರ್ತನೆಗಳಲ್ಲಿ ಸಂಭಾಷಣೆ ಮಧುರವಾಗಿ ಬಂದಿದೆ. ಪ್ರಶ್ನೆಗೆ ಉತ್ತರವೆಂಬಂತೆ ಸರಳವಾಗಿ, ಭಕ್ತಿ ಪ್ರಧಾನವಾಗಿ ಮೂಡಿಬಂದಿದೆ.

ಹರಪನಹಳ್ಳಿ ಭೀಮವ್ವನರಿಗೆ ಶಿಷ್ಟ ಭಾಷೆಯ ಪರಿಚಯ ವಿದ್ದಾಗಲೂ ಅವರು ತಮ್ಮ ಕೃತಿಯಲ್ಲಿ ಜನರಾಡುವ ಆಡುನುಡಿಯನ್ನು ಅಥವಾ ಗ್ರಾಮ್ಯ ಪದಗಳನ್ನು ಬಳಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಹೆಚ್ಚಾಗಿ ಅವರ ಕೃತಿಗಳಲ್ಲಿ ಶಿಥಿಲ ರೂಪಗಳನ್ನು, ಸಂವಾದಿರೂಪಗಳನ್ನು, ಗ್ರಾಮ್ಯ ರೂಪಗಳನ್ನು ಬಳಸಿಕೊಂಡಿದ್ದಾರೆ. ಈ ಮೂಲಕ ಅವರ ಕೀರ್ತನೆಯ ಭಾಷಾ ಸ್ವರೂಪ ಸರಳವಾಗಿರುವುದನ್ನು ಗಮನಿಸಬಹುದಾಗಿದೆ.

ಶಿಥಿಲ ರೂಪ	ಸಂಸ್ಕೃತರೂಪ
ಕೀರುತಿ	ಕೀರ್ತಿ
ಯುಕುತಿ	ಯುಕ್ತಿ
ಲಕುಮಿರಮಣ	ಲಕ್ಷ್ಮೀರಮಣ
ವಜ್ಜರ	ವಜ್ರ
ಷಡುರಸಾನ್ನ	ಷಡ್ರಸಾನ್ನ
ಷಡುವೈರಿ	ಷಡ್ವೈರಿ
ಉದ್ರಿ	ಸಾಲ
ಶುಕ್ಕುರುವಾರ	ಶುಕ್ರವಾರ
ರುಕುಮಿಯ	ರುಕ್ಮಿಣಿ
ಸರುವ	ಸರ್ವ
ಛಿದ್ದರ	ಚಿಂದ್ರಿ ಛಿದ್ರ
ವರಣನೆ	ವರ್ಣನೆ
ಸಾದೇವ	ವರ್ಣನೆ
ಸಾದೇವ	ಸಹದೇವ
ಮದಡ	ಮೂರ್ಖ
ಬ್ರಾಂಬರ	ಬ್ರಾಹ್ಮಣರ
ಸರುವಾಂತರಯಾಮಿ	ಸರ್ವವಂತರಯಾಮಿ
ಪ್ರವುಢ	ಪ್ರೌಢ

ಗ್ರಾಮ್ಯ ಅಥವಾ ಪ್ರಾದೇಶಿಕ ರೂಪಗಳು	
ಬ್ಯಾರಾಗಿ	ಬೇರೆ ಆಗಿ
ಖಿಡುಕಿಲಿಂದೆ	ಮುನಿಸಿನಿಂದ
ಕುವ್ವಾಡ	ಹಾಸ್ಯ
ಉಸುಕು	ಮರಳು
ಬ್ಯಾನೆ	ಬೇನೆ
ನಿಂದ್ಯ	ನಿಂದೆ
ಬ್ಯಾಳೆ	ಬೇಳೆ
ಬ್ಯಾಸರ	ಬೇಸರ
ಪತ್ತಲ	ಸೀರೆ
ಬ್ಯಾಗನೆ	ಬೇಗನೆ

ಕೂಡ್ಯಾ	ಕೂಡ
ಬ್ಯಾಡೊ	ಬೇಡ
ಮ್ಯಾಲೆ	ಮೇಲೆ
ಈಸು	ಇಷ್ಟು
ಅರುಹ್ಯಾರೆ	ಹೇಳಿದ್ದಾರೆ

ಪ್ರಸ್ತುತ ಹರಪನಳ್ಳಿ ಭೀಮವ್ವನವರ ಕೀರ್ತನೆಯಲ್ಲಿ ಸಂಕ್ಷಿಪ್ತ ರೂಪಗಳು ಹೆಚ್ಚಾಗಿ ಕಂಡು ಬಂದಿವೆ. ಆಕೆ ಗ್ರಾಂಥಿಕ ರೂಪಕ್ಕಿಂತ ಹೆಚ್ಚಾಗಿ ಆಡುನುಡಿಯ ರೂಪವನ್ನು ಬಳಸಿಕೊಂಡಿದ್ದಾಳೆ.

ಸಂಸ್ಕೃತ/ಗ್ರಾಂಥಿಕರೂಪ	ಸಂಕ್ಷಿಪ್ತರೂಪ
ಒಮ್ಮೆ ಆದರೂ	ಒಮ್ಯಾದರೂ
ಗೋಪಿಯರ	ಗೋಪೇರ
ಕುಡಿದು ಓಡು	ಕುಡಿದೋಡಿ
ಸಾಕುವರು ಯಾರು	ಸಾಕುವ್ರೊರ್‍ಯಾರು
ಬಂದವರ ಯಾರು	ಬಂದವರ್‍ಯಾರು
ತೆಗೆಯುವವರು ಯಾರು ಇಲ್ಲ	ತೆಗೆಯಾರ್‍ಯಾರಿಲ್ಲ
ಓಡುತ ಆಡುತ	ಓಡ್ಯಾಡುತ
ಸಿಗುವುದು ಇಲ್ಲ	ಸಿಗಲ್ಲದು
ಬರಲು ಹೆಳಿದರು	ಬರಲೇಂದ್ರು
ಕಳಿಸಲು ಹೇಳಿದರು	ಕಳಿಸೇಂದ್ರು
ವಿವಾಹದ ಉತ್ಸವ	ವಿವಹದುತ್ಸವ
ಚೆಲ್ಲಿ ಆಡುತ್ತಾ	ಚೆಲ್ಯಾಡುತ
ಸಂಕಟಹರಣ	ಸಂಕಟ್ಹರಣ
ಚರಣಕ್ಕೆವಂದನೆ	ಚರಣಕ್ವಂದನೆ
ಕಲ್ಲುಉದ್ಧಾರಕ	ಕಲ್ಲೋದ್ಧಾರಕ
ಈಗ ಇಲ್ಲಿ ಅವತರಿಸಿದ	ಈಗಿಲ್ಲ್ಯವತರಿಸಿದ
ಕಳಿಸಿದ್ದಾನೆ	ಕಳಿಸ್ಯಾನೊ
	ಒಲ್ಯಾಡುತ
	ಮ್ಯಾಲ್ಹತ್ತಿರುವುದು
	ಎಲ್ಲ್ಯಾಡಿಲ್ಲಿಗೆ
	ಚಿತ್ತದ್ವಲ್ಲಭ
	ಹೊನ್ನ್ಹೊಸಿಲು

ಹರಪನಹಳ್ಳಿ ಭೀಮವ್ವನವರು ವಿಷ್ಣುವಿನ ಮಹಿಮೆಯನ್ನು ಹೇಳುವ ಸಂದರ್ಭದಲ್ಲೆಲ್ಲಾ ದಶಾವತಾರದ ಸ್ತುತಿಯ ಮೂಲಕ ಸ್ತುತಿಸಿದ್ದಾಳೆ. ಹಾಗೇ ಶ್ರೀ ಕೃಷ್ಣನನ್ನು ನೇರವಾಗಿ ಸ್ತುತಿಸದೆ, ಅವನು ಮಾಡಿದ ಲೀಲೆಗಳ ಮೂಲಕ ಕೊಂಡಾಡಿದ್ದಾಳೆ. ಹೀಗಾಗಿ ಇದೊಂದು ಬಗೆಯಲ್ಲಿ ಹೊಸ ಹೊಸ ಬಗೆಯ ಪದರಚನೆಗಳು ಸೃಷ್ಟಿಯಾಗಿವೆ. ಒಂದರ್ಥದಲ್ಲಿ ಅನ್ವರ್ಥನಾಮ ಎಂದು ಕರೆಯಬಹುದು.

ಸಂಸ್ಕೃತ/ಗ್ರಾಂಥಿಕರೂಪ	ಸಂವಾದಿರೂಪ
ಯತಿಗಳು	ಮಂಡೆಬೋಳಕರು
ಶ್ರೀಕೃಷ್ಣ	ಶಂಬರಾರಿಯ
	ಜನಕ, ಕಮಲನಾಳದಿ
	ಹುಟ್ಟಿದಾತನ ಜನನಿಪತಿ, ಗಯನ
	ಮಟ್ಟಿದವನೆ, ಹಯನಕೊಂದು
ಕುಚೇಲ	ತಿರುಕ
ತ್ರಿವಕ್ರೆ	ಡೊಂಕಸತಿ
ಉಡುಪಿ	ರಜತಪೀಠಪುರ

ಹರಪನಹಳ್ಳಿ ಭೀಮವ್ವನವರ ಕೀರ್ತನೆಯಲ್ಲಿ ಸಹ ಸಂಖ್ಯಾವಾಚಕಗಳು ಬಳಕೆಯಾಗಿವೆ.

ಸೋಳಸಾಸಿರ:- ಹದಿನಾರುಸಾವಿರ

ಐದು ಮುಂದ್ಯೆನ್ನಲ್ಲಿ ಐದಾರೆ:- ಈ ಮೂಲಕ ಭೀಮವ್ವನವರು ದೇಹದಲ್ಲಿರುವ ಪಂಚೇಂದ್ರಿಗಳ ಕುರಿತು ಹೇಳಿದ್ದಾರೆ. ಶ್ರೋತ್ರ, ಚಕ್ಷು, ಚಕ್ಷಸ್ಸು, ಜಿಹ್ವೆ, ನಾಸಿಕವೇ ಐದು ಮಂದಿಗಳು.

ಆರುಮುಂದ್ಯರಿಗಳು:- ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಮೋಹ ಲೋಭ, ಮದ, ಮತ್ಸರಗಳು.

ಪಂಚೇಂದ್ರಿಯ ವಿಷಯವನ್ನು, ಅರಿಷಡ್ವರ್ಗಗಳ ವಿಷಯವನ್ನು, ಕಲಿಯುಗದ ಕಾಲಾವಧಿಯನ್ನು ಹೇಳುವಾಗ ದಾಸರು ಸಂಖ್ಯಾವಾಚಕಗಳನ್ನು ಬಳಸಿಕೊಂಡಿರುವುದನ್ನು ಕಾಣಬಹುದು. ಸಂಖ್ಯಾವಾಚಕಗಳು ಒಂದು ಬಗೆಯಲ್ಲಿ ಸಂಕ್ಷೇಪ ರೂಪಗಳೆಂದು ಕರೆಯಬಹುದು.

ಪದದಾದಿಯ ವರ್ಣಗಳು ಮಹಾಪ್ರಾಣಗಳಾಗಿ ಬಳಕೆಯಾಗಿವೆ

ಬಹಳ	ಭಾಳ
ಬಕ್ಕರಿ	ಭಕ್ಕರಿ
ಚಾದಾರ	ಛಾದಾರ

ಮೇಲಿನ ಎಲ್ಲ ಲಕ್ಷಣಗಳ ಜೊತೆಗೆ ಭೀಮವ್ವನವರಲ್ಲಿ ಗ್ರಾಮ್ಯ ಪದಗಳ ಬಳಕೆ ಹೆಚ್ಚಾಗಿ ಮೂಡಿಬಂದಿವೆ. ಆಡುನುಡಿ ಪದಗಳ ಬಳಕೆಯಾದದ್ದನ್ನು ಗಮನಿಸಿದಾಗ ಭೀಮವ್ವನವರು ಆಡುನುಡಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ ಅಂಶತಿಳಿದು ಬರುತ್ತದೆ. ಯಾಕೆಂದರೆ ಪುರಂದರದಾಸರು ಮತ್ತು ಕನಕದಾಸರ

ಕಾಲಘಟ್ಟದಲ್ಲಿ ಹೆಚ್ಚಾಗಿ ಗ್ರಾಮ್ಯಪದಗಳ ಬಳಕೆಯನ್ನು ಕಾಣಬಹುದು. ಹಾಗೆಯೇ ವಿಜಯದಾಸರಾದಿ ಕಾಲಘಟ್ಟದಲ್ಲಿ ಕೀರ್ತನೆಯ ಭಾಷೆಯು ಸಂಸ್ಕೃತ ಭೂಯಿಷ್ಠದ ಕಡೆಗೆ ಹೊರಳಿರುವುದನ್ನು ಕಾಣಬಹುದು. ವಿಜಯದಾಸರು, ಜಗನ್ನಾಥದಾಸರು ಹೀಗೆ ವಿಜಯದಾಸರ ನಂತರ ಬಂದ ದಾಸವರೇಣ್ಯರು ಶಾಸ್ತ್ರ ಸಂಪನ್ನರಾಗಿದ್ದರು. ಇವರ ಮುಂದುವರಿಕೆಯಾಗಿ ಬಂದ ಹರಪನಹಳ್ಳಿ ಭೀಮವ್ವನವರು ಸಹಜವಾಗಿ ಶಾಸ್ತ್ರ ಸಂಪನ್ನ ಭಾಷೆಯನ್ನು ಬಳಸಬೇಕಾಗಿತ್ತು. ಆದರೆ ಭೀಮವ್ವನವರು ಹೆಂಗಸು ಆಗಿದ್ದರಿಂದ ಶಾಸ್ತ್ರಜ್ಞಾನ ಅಕ್ಷರ ಮೂಲಕ ಲಭಿಸಲಿಲ್ಲ. ಬದಲು ಶಾಸ್ತ್ರ ಜ್ಞಾನವೂ ಶ್ರವಣದ ಮೂಲಕ ಲಭಿಸಿತು. ಹೀಗಾಗಿ ಅವರು ತಮ್ಮ ಸೃಜನಶೀಲ ಕೀರ್ತನೆಗೆ ದಿನನಿತ್ಯದ ಆಡುನುಡಿಯನ್ನು ಬಳಸಿಕೊಂಡರು, ಹಾಗೆ ಬಳಕೆಯಾದ ಪದಗಳು ಹೀಗಿವೆ.

೧. ಸೋಳ ಸಾಸಿರ - ಹದಿನಾರು ಸಾವಿರ

೨. ಖರೆ - ನಿಜ; ಹೈದರಾಬಾದ್ ಕರ್ನಾಟಕ ಪ್ರದೇಶದ ಭಾಗದಲ್ಲಿ ಹೆಚ್ಚಾಗಿ ಈಗಲೂ ಬಳಕೆಯಾಗುವಪದ

೩. ಬೂಟಕತನ - ಕಳ್ಳತನ

೪. ಪಾಟುಬಟ್ಟು - ತೊಂದರೆ ಪಡು

೫. ಹಿಕ್ಕು - ಬಾಚು; ತಲೆಯ ಕೂದಲನ್ನು ಬಾಚುವುದು

೬. ಹುಟ್ಟು - ಮರದ ಸೌಟು

೭. ಕಳಲಗಡಿಗೆ - ತೂತು ಬಿದ್ದಗಡಿಗೆ, ವ್ಯರ್ಥವಾಗು

೮. ಎಡೆ - ನೈವೇದ್ಯ; ಸಾಮಾನ್ಯವಾಗಿ ವೈದಿಕರಲ್ಲಿ ನೈವೇದ್ಯ ಪದ ಹೆಚ್ಚು ಬಳಕೆಯಾಗುತ್ತದೆ. ಆದರೆ ಭೀಮವ್ವನವರು ವೈದಿಕೇತರ ಜನರು ಬಳಸುವ ಪದವನ್ನು ಬಳಸಿರುವುದು ವಿಶೇಷ.

೯. ನಾರಂದ - ನಾರದ ಮುನಿ

೧೦. ಮಿರ್ತಾ - ಸಾವು; ಮೃತ್ಯು>ಮಿರ್ತಾ

೧೧. ಬಾಜಾರ - ಸಂತೆ/ಪೇಟೆ

೧೨. ಬ್ರಾಂಬರ - ಬ್ರಾಹ್ಮಣ;

೧೩. ಬ್ಯಾಸರ - ಬೇಸರ

೧೪. ಪೋಕಬುದ್ಧಿ - ತುಂಟತನ

೧೫. ಬುಕ್ಕಿಟ್ಟು - ಹಣೆಗೆ ತಿಲಕ ಇಡುವ ವಸ್ತು

೧೬. ಜಾವಳಜುಟ್ಟು - ಹುಟ್ಟಿನಕೂದಲು

೧೭. ಮುದ್ದೆ - ಮುದುರಿಹೋಗು; ನೀರಿನಿಂದ ತೇವವಾಗು

೧೮. ಅಂಬಲಿ - ಗಂಜಿ ನೀರಿನಿಂದ ಕೂಡಿದ ಮೆತ್ತನೆಯ ಅನ್ನ

೧೯. ಭಾಳ - ಬಹಳ

೨೦. ಭಕ್ಕರಿ - ಜೋಳದ ರೊಟ್ಟಿ ಹೈ.ಕದಲ್ಲಿ ವೈದಿಕರು ಮಾತ್ರ ಹೆಚ್ಚಾಗಿ ಈ ಪದವನ್ನು ಬಳಸುತ್ತಾರೆ.

೨೧. ಉತ್ರಾಣಿ ಬುಧಗ್ರಹದ ಪೂಜೆಗೆ ಮತ್ತು ಪಾಂಡವರ ಪೂಜಾ ಸಂದರ್ಭದಲ್ಲಿ ಬಳಸುವ ಸಸ್ಯ ವಿಶೇಷ. ಇದು ಸಹಜವಾಗಿ ಹೊಲದ ಬದಿಯಲ್ಲಿ ಬೆಳೆದಿರುತ್ತದೆ.

೨೨. ಹಿಡಿಜೋಳ - ಒಂದು ಮುಷ್ಟಿ ಜೋಳ

೨೩. ಪಡಿಜೋಳ - ಒಂದು ನಿರ್ದಿಷ್ಟ ಅಳತೆಯ ಜೋಳ; ಭತ್ಯೆ

೨೪. ಒಂದು ಶ್ಯಾರೆ -

೨೫. ಅಟ್ಟ - ಮನೆಯ ಉಪ್ಪರಿಗೆ ಮುಖ್ಯವಾಗಿ ದನದಕೋಠಡಿಯಲ್ಲಿ ಎತ್ತು ಕಟ್ಟುವ ಮೇಲ್ಭಾಗದಲ್ಲಿರುತ್ತದೆ. ಈ ಸ್ಥಳದಲ್ಲಿ ನಾಲ್ಕಾರು ದಿನಗಳಿಗೆ ಆಗುವಷ್ಟು ಮೇವನ್ನು ಸಂಗ್ರಹಿಸಿ ಇಡುವ ಸ್ಥಳ.

೨೬. ಚಟ್ಟಗಿ - ಚಿಕ್ಕಗಡಿಗೆ, ಹಿಂದಿನ ಕಾಲದವರು ಹಾಲನ್ನು ಕಾಯಿಸಲು ಚಿಕ್ಕಚಿಕ್ಕ ಮಡಿಕೆ ಅಥವಾ ಗಡಿಗೆಗಳನ್ನು ಬಳಸುತ್ತಿದ್ದರು. ಗಾತ್ರದಲ್ಲಿ ಚಿಕ್ಕದಿದ್ದಾಗ ಚಟ್ಟಗಿ ದೊಡ್ಡ ಗಾತ್ರದಿದ್ದಾಗ ಮಡಿಕೆ/ಗಡಿಗೆ

೨೭. ಛಾದಾರ - ಹೊದಿಕೆ

೨೮. ಕಟಬಾಯಿ - ತುದಿಬಾಯಿ

೨೯. ಗಾವುದ - ಒಂದು ಅಳತೆ

೩೦. ಬಾಯಿ - ಸ್ತ್ರೀಯರಿಗೆ ಬಳಸುವ ಗೌರವ ಸೂಚಕಪದ

೩೧. ಕದಲಾರತಿ - ದೀಪವಿಲ್ಲದೆ ಮಾಡುವ ಆರತಿ; ನೀರಿನಲ್ಲಿ ಕುಂಕುಮವನ್ನು ಬೆರೆಸಿ ಮಾಡುವ ಆರತಿ, ಶುಭ ಸಂದರ್ಭದಲ್ಲಿ ಈ ಆರತಿಯನ್ನು ಮಾಡುತ್ತಾರೆ.

೩೨. ಗ್ಯಾದಲಿ - ದನಗಳು ವ್ಯವಸ್ಥಿತವಾಗಿ ಮೆಯ್ಯಲು ಕಟ್ಟಿರುವ ಜಾಗ

೩೩. ಮರದ ಬಾಗಿಣ - ಮೊರದಲ್ಲಿ ಮಂಗಲ ದ್ರವ್ಯಗಳನ್ನಿಟ್ಟು ಮುತ್ತೈದರಿಗೆ ಕೊಡುವ ಆಚರಣೆ

೩೪. ಗರಳ - ವಿಷ

೩೫. ಅಚ್ಚದ - ಪ್ರೀತಿಯ

೩೬. ಅಸು - ಪ್ರಾಣ

೩೭. ಈಡು - ಸಮಾನ

೩೮. ಅಲ್ಪರಿ - ಗಟ್ಟಿಯಾಗಿ ಕೂಗು

೩೯. ಈರಲು	-	ಹೆರಿಗೆಯಾದ ಹನ್ನೊಂದನೆಯ ದಿನ ಬಾಣಂತಿಯು ಮಾಡುವ ಮಂಗಳಸ್ನಾನ.
೪೦. ಉಚ್ಚುಬಡಿ	-	ಹೊರತೆಗೆ
೪೧. ಉದ್ರಿ	-	ಸಾಲ
೪೨. ಉರಲು	-	ನೇಣು ಹಾಕಿಕೊಳ್ಳುವ ಸ್ಥಿತಿ
೪೩. ಉರುಟಣೆ	-	ಮದುವೆಯು ಮುಗಿದು ಗಂಡಿನ ಮನೆಯಲ್ಲಿ ವಧು ವರರು ಪರಸ್ಪರರಿಗೆ ಮಂಗಲ ದ್ರವ್ಯಗಳನ್ನು ಹಚ್ಚಿ, ಹಾಡು, ಒಗಟ ಹೇಳುವ ಮನರಂಜನೆಯ ಕಾರ್ಯಕ್ರಮ.
೪೪. ಉರುಟು	-	ದುಂಡಾದ
೪೫. ಉಸುಕು	-	ಮರಳು
೪೬. ಎಜ್ಜ	-	ತೂತು
೪೭. ಎಡ್ಡು	-	ಸೊಕ್ಕು, ಅಹಂಕಾರ
೪೮. ಕಕ್ಕಸ	-	ಕಷ್ಟ, ತೊಂದರೆ
೪೯. ಕದರಿ	-	ಕೂದಲು
೫೦. ಕಳಲು	-	ಮಜ್ಜಿಗೆ
೫೧. ಕೊಂಡ	-	ಹೊಂಡ, ತಗ್ಗು, ಭಕ್ತಿಯಿಂದ ಬೆಂಕಿಯ ತುಳಿದುಕೊಂಡು ಹೋಗುವ ಸ್ಥಳ
೫೨. ಕೋರಿ	-	ತುಂಡುನೇರೆ
೫೩. ಖಡುಕಿಲಿಂದೆ	-	ನೆಟ್ಟನಿಂದ
೫೪. ಖೋಡಿ	-	ಕೆಡುಕು, ಬೈಗುಳಪದ
೫೫. ಗೋಪಾಳ	-	ಭಿಕ್ಷೆ
೫೬. ಈಸು	-	ಇಷ್ಟು
೫೭. ಅರುಹ್ಯಾರೆ	-	ಹೇಳಿದ್ದಾರೆ
೫೮. ಹೀಲಾಲು	-	ಕಾದಿಲು
೫೯. ರಾಸಿ	-	ರಾಶಿ

ಭೀಮವ್ವ ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಬದುಕಿದ್ದುರಿಂದ ಆ ಕಾಲದಲ್ಲಿ ಕನ್ನಡ ಭಾಷೆಯನ್ನ ಕಾವ್ಯದಲ್ಲಿ ಬಳಸಿಕೊಂಡಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ನಡುಗನ್ನಡ ಭಾಷೆಯ ಧ್ವನಿರಚನೆಯ ಪ್ರಕ್ರಿಯೆಗಳು ಬದಲಾವಣೆಯ ಹಂತವನ್ನು ದಾಸರಕೀರ್ತನೆಗಳಲ್ಲಿ ಕಾಣಬಹುದು. ಕೀರ್ತನೆಗಳಲ್ಲಿ ನಡುಗನ್ನಡ ಭಾಷೆ ನಿರ್ದಿಷ್ಟ ರೂಪತಾಳಿ ಆಡುನುಡಿಯನ್ನಾಧರಿಸಿ ಮೂಡಿಬಂದ ವಿಶಿಷ್ಟ ಅಭಿವ್ಯಕ್ತಿ ಮಾಧ್ಯಮವಾಗಿ ರೂಪು ತಳೆದಿದೆ.

ಅಡಿಟಿಪ್ಪಣಿ

೧. ರಾಘವಾಂಕನ ಸಮಗ್ರ ಕಾವ್ಯ, ಪುಟ-೪

೨. ಡಾ.ಎನ್.ಕೆ.ರಾಮಶೇಷನ್, ಹರಿದಾಸ ಆಂದೋಲನ : ಒಂದು ಅಧ್ಯಯನ, ಪುಟ-೪೬

೩. ಸಾವಿರಾರು ಕೀರ್ತನೆಗಳು, (ಸಂ) ಎ.ವಿ.ನಾವಡ, ಪುಟ-೨೧೧

೪. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೯೩, ಪುಟ-೨೧೨

೫. ಡಾ.ಎಲ್.ಬಸವರಾಜು, ತಿರುಮಲಾರ್ಯನ ಶೃಂಗಾರ ನಿದರ್ಶನ (ಪ್ರಸ್ತಾವನೆ), ೧೯೭೧, ಪುಟ-೩೧

೬. ಜಿ.ಪವನಕುಮಾರ್, ಹೂವಕೊಡೆ ತಾಯಿ, ಪುಟ-೭೩

೭. ಜಿ.ಪವನಕುಮಾರ್, ಹೂವಕೊಡೆ ತಾಯಿ, ಪುಟ-೮೫

೮. ಜಿ.ಪವನಕುಮಾರ್, ಹೂವಕೊಡೆ ತಾಯಿ, ಪುಟ-೭೬

೯. ಟಿ.ಎನ್.ನಾಗರತ್ನ: ಹರಿದಾಸರ ಭಕ್ತಿಯ ಸ್ವರೂಪ, ಪುಟ-೧೫೫

೧೦. ಕೆ.ಎಂ.ಕೃಷ್ಣರಾವ್, ಶ್ರೀ ಜಗನ್ನಾಥದಾಸರು, ಪುಟ-೩೪೫

೧೧. ಹಾ.ಮಾ.ನಾ (ಸಂ), ಕನ್ನಡ ಛಂದಸ್ಸಿನ ಚರಿತೆ, ಪುಟ-೩೨೭

೧೨. ಜಿ.ಪವನಕುಮಾರ್, ಹೂವಕೊಡೆ ತಾಯಿ, ಪುಟ-೭೪

೧೩. ಟಿ.ಎನ್.ನಾಗರತ್ನ (ಸಂ), ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೨೫

೧೪. ಜಿ.ಪವನಕುಮಾರ್, ಹೂವ ಕೊಡೆ ತಾಯಿ, ಪುಟ-೭೫

೧೫. ಜಿ.ಪವನಕುಮಾರ್, ಹೂವ ಕೊಡೆ ತಾಯಿ, ಪುಟ-೭೫

೧೬. ಎಸ್.ಎಸ್.ಅಂಗಡಿ, ದಾಸಸಾಹಿತ್ಯ ಮತ್ತು ಶಬ್ದಶಿಲ್ಪ, ಪುಟ-೩೧

೧೭. ಟಿ.ಎನ್.ನಾಗರತ್ನ, ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೧೧

೧೮. ಟಿ.ಎನ್.ನಾಗರತ್ನ, ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೧೧

೧೯. ಟಿ.ಎನ್.ನಾಗರತ್ನ, ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೮೫

೨೦. ಟಿ.ಎನ್.ನಾಗರತ್ನ, ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೮೬

೨೧. ಟಿ.ಎನ್.ನಾಗರತ್ನ, ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೧೭೯

೨೨. ಟಿ.ಎನ್.ನಾಗರತ್ನ, ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೨೧೨

೨೩. ಟಿ.ಎನ್.ನಾಗರತ್ನ, ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೨೮೫

೨೪. ಎ.ವಿ.ನಾವಡ: ಸಾವಿರಾರು ಕೀರ್ತನೆಗಳು, ಪುಟ-೪೯೨

೨೫. ಟಿ.ಎನ್.ನಾಗರತ್ನ, ಹರಪನಹಳ್ಳಿ ಭೀಮವ್ವನವರ ಹಾಡುಗಳು, ಪುಟ-೭

ಅಧ್ಯಾಯ - ಏಳು

ಹರಪನಹಳ್ಳಿ ಭೀಮವ್ವನವರ ಸಮಾಜೋಭಾಷಿಕ ಆಯಾಮಗಳು

ಅಧ್ಯಾಯ - ಏಳು

ಹರಪನಹಳ್ಳಿ ಭೀಮವ್ವನವರ ಸಮಾಜೋಭಾಷಿಕ ಆಯಾಮಗಳು

ಆಧುನಿಕ ಯುಗವು ತನ್ನ ವಿಚಾರಗಳನ್ನು ಹೆಚ್ಚಾಗಿ ಭಾಷೆ ಮೇಲೆ ಕೇಂದ್ರೀಕರಿಸಿದೆ. ಶತಾವಧಾನಿ ಡಾ.ಆರ್.ಗಣೇಶ್‌ರವರು ಹೇಳುವಂತೆ "ಭಾರತೀಯರು ಭಾಷೆ, ಸಂವಹನ, ಆಲೋಚನ ಹಾಗೂ ಅರ್ಥಾವ ಬೋಧಗಳೇ ಮುಂತಾದ ಅನೇಕ ವಾಙ್ಮಯ ವ್ಯಾಪಾರಗಳ ಬಗೆಗೆ ಅತ್ಯಂತ ಸ್ವೋಪಜ್ಞವೂ ಮೌಲಿಕವೂ ಆದ ಚಿಂತನೆಯನ್ನು ಹಲವು ಸಹಸ್ರಮಾನಗಳಿಂದ ನಡೆಸಿಕೊಂಡು ಬಂದಿದ್ದಾರೆ. ಅಷ್ಟೇ ಏಕೆ ಇಡಿಯ ಪಾಶ್ಚಾತ್ಯ ಪ್ರಪಂಚವು ಸಂಸ್ಕೃತ ಭಾಷೆ ಮತ್ತದರ ವ್ಯಾಕರಣ ಶಾಸ್ತ್ರ ಪರಂಪರೆಯನ್ನು ಕಂಡ ಬಳಿಕ ಭಾಷಾ ಶಾಸ್ತ್ರವೆಂಬ ಜ್ಞಾನ ಶಾಖೆಗೆ ಜೀವ ಬಂದ ಸಂಗತಿ ಸಕಲ ಸುವಿದಿತ."[1] ಹೀಗೆ ಕೈಗೆ ಎಟುಕದಷ್ಟು, ಅಚ್ಚರಿ ಹುಟ್ಟಿಸುವಷ್ಟು ಭಾಷೆ ಬೆಳೆಯುತ್ತಾ ಬಂದಿದೆ. ಹಾಗೆಯೇ ದಿನದಿಂದ ದಿನಕ್ಕೆ ನವನವೀನ ಎಂಬ ರೀತಿಯಲ್ಲಿ ಭಾಷೆ ರೂಪುಗೊಂಡು ಬಳಕೆಯಾಗುತ್ತಿದೆ.

ಭಾರತೀಯ ದಾರ್ಶನಿಕ ವೈಯಾಕರಣೆಗಳು ಭಾಷಾಕ್ಷೇತ್ರಕ್ಕೆ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ಅವರು ಹೇಳಿರುವ ವ್ಯಾಖ್ಯೆಗಳು ಗಮನಾರ್ಹವೆನಿಸುತ್ತವೆ. ಯಾಕೆಂದರೆ ಅವರು ಭಾಷೆಯ ಕುರಿತಂತೆ ಹೊಂದಿರಬಹುದಾದ ನಿಲುವುಗಳೇನು, ಭಾಷೆಯನ್ನು ಯಾವ ಕ್ರಮದಲ್ಲಿ ನೋಡುತ್ತಾರೆ, ಭಾಷೆಗೆ ನೀಡುವ ವಿಶೇಷತೆ ಎಂಬ ಅನೇಕ ಪ್ರಶ್ನೆಗಳಿಗೆ ಅವರ ವ್ಯಾಖ್ಯೆಗಳು ಉತ್ತರ ಹೇಳುತ್ತವೆ. ಆ ವಾಖ್ಯೆಗಳು ಹೀಗಿವೆ.

"ದೇವೀಂ ವಾಚಮಜನಾಯಂತ ದೇವಾಸ್ತಾರಿ ವಿಶ್ವರೂಪಾಃ ಪಶವೋವದಂತಿ|

- ಋಕ್ಸಂಹಿತೆ

(ದಿವ್ಯವಾದ ಭಾಷೆಯನ್ನು ದೇವತೆಗಳು ಹುಟ್ಟಿಸಿದರು. ಅದನ್ನು ಜಗತ್ತಿನ ಎಲ್ಲ ಜೀವರಾಶಿಗಳು ಬಳಸುತ್ತಿವೆ)

[illegible]

[illegible]

[illegible]

ನಸೋಽಸ್ತಿ ಪ್ರತ್ಯಯೋ ಲೋಕೇಯಶ್ಯಬ್ದಾನು ಗಮಾದೃತೇ|

ಅನುವಿದ್ಧಮಿವಜ್ಞಾನಂ ಸರ್ವಂ ಶಬ್ದೇನ ಭಾಸತೇ||

- ವಾಕ್ಯಪದೀಯ

(ನುಡಿಯು ಹಿಡಿಯದ ಅರಿವೇ ಈ ಜಗದಲ್ಲಿಲ್ಲ. ಎಲ್ಲ ತಿಳಿವೂ ನುಡಿಯಿಂದ ಪೋಣಿಸಲ್ಪಟ್ಟಂತೆ ಬೆಳಗುತ್ತದೆ)

ಭಗವದ್ಭಾಷಾಽಪಿ ಸ್ವೋತ್ಪತ್ತಿಸಮಯೇ ಸಮುದ್ರ ಘೋಷವದವ್ಯಕ್ತೈಕ ಭಾಷಾ ರೂಪಾಽಪಿ ತತ್ತಚ್ಛ್ರೋತೃ ಶ್ರೋತ್ರ ದೇಶಂ ಪ್ರಾಪ್ತಾಸತೀ ತತ್ತದ್ಭಾಷಾತ್ಮನಾ ಪರಿಣಮತಿ ವಿಚಿತ್ರ ಶಕ್ತಿತ್ವಾತ್|....

ದೇವಾ ದೈವೀಂ ನರಾ ನಾರೀಂ ಶಬರಾಶ್ಚಾಪಿ ಶಾಬರೀಂ

ತಿರ್ಯಂಚೋಪಿಚ ತೈರಶ್ಚೀಂ ಮೇನಿರೇ ಭಗವದ್ಗಿರಂ

ಕರ್ನಾಟಕ ಶಬ್ದಾನುಶಾಸನ

(ದೇವ ಭಾಷೆಯೂ ಸಹ ತನ್ನ ಉಗಮ ಕಾಲದಲ್ಲಿ ಸಮುದ್ರ ಘೋಷದಂತೆ ಅವ್ಯಕ್ತ ರೂಪದ ಧ್ವನಿಯಾಗಿದ್ದು ಆ ಬಳಿಕ ಕೇಳುಗರ ಕಿವಿಗಳನ್ನು ತಲುಪಿದಾಗ ಅಲ್ಲಿ ತನ್ನ ವಿಚಿತ್ರ ಶಕ್ತಿಯ ಕಾರಣ ಆಯಾ ಭಾಷೆಗಳ ಸ್ವರೂಪವನ್ನು ತಳೆಯುತ್ತವೆ. ದೇವಭಾಷೆಯನ್ನು ದೇವತೆಗಳೂ ಮನುಷ್ಯ ಭಾಷೆಯನ್ನು ಮಾನವರೂ ಅಟವಿಕರ ಭಾಷೆಯನ್ನು ಅಟವಿಕರೂ ಪಶು ಪಕ್ಷಿಗಳ ಭಾಷೆಯನ್ನು ಪಶುಪಕ್ಷಿಗಳು ಭಗವದ್ವಾಣೀಯೆಂದೇ ಭಾವಿಸಿರುವುದು ಸತ್ಯ)

ಮಾತೆಂಬುದು ಜ್ಯೋತಿರ್ಲಿಂಗ

- ಅಲ್ಲಮಪ್ರಭು" ೨

ಹೀಗೆ ಭಾಷೆಯ ಹರವು ತುಂಬಾ ವ್ಯಾಪಕವಾಗಿದೆ. ಮೇಲಿನ ಎಲ್ಲ ವಾಕ್ಯಗಳನ್ನು ಗಮನಿಸಿದಾಗ ಭಾಷೆಯ ಮಹತ್ವವನ್ನು ತಿಳಿಯಬಹುದಾಗಿದೆ. ಇನ್ನೂ ಅನೇಕ ಭಾರತೀಯ ವೈಯಾಕರಣಿಗಳು ಭಾಷೆಯ ಮಹತ್ವವನ್ನು ಹೇಳಿದ್ದಾರೆ. ಪಾಣಿನಿ, ಪತಂಜಲಿ, ಯಾಸ್ಕರ, ಜಯಾದಿತ್ಯ, ವಾಮನ, ಜಿನೇಂದ್ರಬುದ್ಧಿ, ಹರದತ್ತ, ಭರ್ತೃಹರಿ, ವಿಮಲ ಸರಸ್ವತಿ, ಕಯ್ಯಟ, ರಾಮಚಂದ್ರ, ಭಟ್ಟೋಜಿದಿಕ್ಷಿತ, ಹೇಮಚಂದ್ರ, ನಾಗೇಶಭಟ್ಟ, ಕೌಂಡಭಟ್ಟ ಮುಂತಾದವರು ತಮ್ಮ ದಾರ್ಶನಿಕ ಜೀವನದಿಂದ ವಿಚಾರಯುಕ್ತವಾಗಿ, ಶಾಸ್ತ್ರೀಯವಾಗಿ ಭಾಷಾಶಾಸ್ತ್ರವನ್ನು ಮಂಡಿಸಿದ್ದಾರೆ. ಸಸ್ಸೂರ್ ತನ್ನ ಭಾಷಾ ಶಾಸ್ತ್ರವನ್ನು ಕುರಿತು ವಿವೇಚಿಸುವ ಸಂದರ್ಭದಲ್ಲಿ ಭಾರತೀಯ ದಾರ್ಶನಿಕ ವೈಯಾಕರಣಿಗಳ ಮಹತ್ವವನ್ನು ಹೇಳುವುದು ಗಮನಾರ್ಹ.

ಭಾರತೀಯ ವೈಯಾಕರಣಿಗಳು ಭಾಷಾಕ್ಷೇತ್ರಕ್ಕೆ ಅನೇಕ ಕೊಡುಗೆಗಳನ್ನು ನೀಡಿರುವಂತೆ ಪಾಶ್ಚಾತ್ಯ ವಿದ್ವಾಂಸರೂ ಸಹ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಜೊತೆಗೆ ಕಾಲಕ್ಕನುಗುಣವಾಗಿ ಹೊಸ ಹೊಸ ಸಿದ್ಧಾಂತಗಳನ್ನು ಅವಿಷ್ಕಾರ ಮಾಡಿದ್ದಾರೆ.

ಭಾರತೀಯ ದಾರ್ಶನಿಕ ವೈಯಾಕರಣಿಗಳು ಭಾಷೆ ಕುರಿತು ದೈವಿಕ ಚಿಂತನೆಯ ಮೂಲಕ ವಿಚಾರವನ್ನು ಹೇಳಿದರೆ ಪಾಶ್ಚಾತ್ಯರು ದೈವಿಕ ಚಿಂತನೆಯ ಹೊರತಾಗಿ ಸಮಾಜದಲ್ಲಿ ಬಳಕೆಯಾಗುವ

ಭಾಷಾ ಆಧಾರದ ಮೇಲೆ ವಿಚಾರಗಳನ್ನು ಹೇಳಿದ್ದಾರೆ. ಆ ವಿಚಾರಯುಕ್ತ ವಾಕ್ಯಗಳು ಹೀಗಿವೆ.

"ಸಸ್ಯೂರ್: ಭಾಷೆ ಸಂಕೇತಗಳ ಒಂದು ವ್ಯವಸ್ಥೆ ನಿರ್ದೇಶಿತ ಹಾಗೂ ನಿರ್ದೇಶಕಗಳ ವಜ್ರ ಲೇಪ ಹಾಕುವ ಸೇತುವೆ.

ಪ್ಲೇಟೋ: ಧ್ವನಿ ಸಂಕೇತಗಳಿಂದ ಮನುಷ್ಯನ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವ ಸಾಧನ (ಭಾಷೆ)

ಸಪೀರ: ಅದು ಮಾನವನ ಬಯಕೆ ಭಾವ-ಭಾವಾವೇಶಗಳನ್ನೂ ಇನ್ನೊಬ್ಬರಿಗೆ ತಿಳಿಸುವ ವಿಧಾನ. (ಧ್ವನಿ ಸಂಕೇತಗಳಿಂದ) Language is Purely human and non-instinetive method of Commuicatiing iden emotions and derires by means of a System of Volum terily produced symbols."

ಸ್ಟುರ್ಟವೆಂಟ : Languageis a sysstem of orbitarary vocal sysmbols by which numbers of a soliety act and react (ಭಾಷೆಯು ಸಮಾಜದ ವ್ಯಕ್ತಿಗಳ ನಡುವೆ ಪರಸ್ಪರ ಕೊಡುಕೊಳ್ಳುವಿಕೆಗೆ ಉಂಟಾದ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆ)

Block and trager: Language is a system of arbitatary vocal sysmbols by means of which a social group co-operats.

ಭಾಷೆ ಎಂಬುದು ಸಾಮಾಜಿಕ ಸಹಕಾರಕ್ಕಾಗಿ ಏರ್ಪಟ್ಟ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯ ಸಾಧನವಾಗಿದೆ."[೨]

ಮನುಷ್ಯನು ತನ್ನ ಅನುಕೂಲಕ್ಕಾಗಿ ರೂಪಿನ ಸಂಕೇತವನ್ನು ನೀಡಿ ತನ್ನ ದಿನನಿತ್ಯದ ಅನೇಕ ಬಗೆಯ ವ್ಯಾಪಾರ, ವ್ಯವಹಾರಗಳನ್ನು ಭಾಷೆಯಿಂದಲೇ ನಿರ್ವಹಿಸಿಕೊಳ್ಳುತ್ತಿದ್ದಾನೆ. ಪ್ರಪಂಚದ ಯಾವುದೇ ಭಾಷೆ ಆಗಿರಬಹುದು. ಪರಸ್ಪರ ವಿನಿಮಯದ ಹೊರತಾಗಿರುವುದಿಲ್ಲ. ಹೀಗೆ "ಎಲ್ಲ ಭಾಷೆಗಳು ಅವ್ಯಕ್ತವೂ ಹೃದಯಂತರ್ಗತವೂ ಆಗಿ ಎಲ್ಲ ಜೀವಿಗಳ ಒಳಗಿರುವ ಅಪರಿಚ್ಛಿನ್ನ ಅನಾದಿ ಅನಂತ ಭಾಷೆಯ ವ್ಯಕ್ತ ರೂಪಗಳಷ್ಟೇ ವೈಚಿತ್ರ್ಯಪೂರ್ಣ ರೂಪಗಳಷ್ಟೇ ಮತ್ತು ಸಾಪೇಕ್ಷ ಧ್ವನಿಗಳಷ್ಟೇ ಎಂಬ ಮೌಲ್ಯವನ್ನು ತಿಳಿಯಪಡಿಸಿ ತನ್ಮೂಲಕ ಭಾಷೆಗಳ ನಡುವೆ ಜನಿಸಬಹುದಾದ ರಾಗ ದ್ವೇಷಪೂರ್ಣವಾದ ಮೇಲರಿಮೆ, ಕೀಳರಿಮೆಗಳನ್ನು ನಿವಾರಿಸುತ್ತಲೂ ಇವೆ."[೩] ಎಂಬ ಮಾತುಗಳನ್ನು ತಳ್ಳಿಹಾಕುವಂತಿಲ್ಲ.

ಭಾಷಾ ವಿಜ್ಞಾನವು ಭಾಷೆಗಳಿಗೆ ಸಂಬಂಧಿಸಿದ ಬಾಹ್ಯ ಹಾಗೂ ಆಂತರಿಕ ವಿಚಾರಗಳ ವೈಜ್ಞಾನಿಕ ಅಧ್ಯಯನವನ್ನೇ ಒಳಗೊಂಡಿರುವುದಾಗಿದೆ. ಇದರಲ್ಲಿ ಭಾಷೆಯ ಉಗಮ ಮತ್ತು ವಿಕಾಸ ಭಾಷೆ ಬೆಳೆದು ಬಂದ ಬಗೆ ಅದರ ಪರಂಪರೆ, ಭಾಷೆ ಭಾಷೆಗಳ ನಡುವಿನ ವ್ಯತ್ಯಾಸ, ಅವುಗಳ ಹೊಂದಾಣಿಕೆ, ಸಮಾಜ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಭಾಷೆಯನ್ನು ಅಧ್ಯಯನ ಮಾಡುವುದಾಗಿದೆ. ಒಟ್ಟಾರೆಯಾಗಿ ಹೇಳುವುದಾರೆ ಭಾಷೆಯೇ ಕೇಂದ್ರವಸ್ತುವಾಗಿರುತ್ತದೆ. ಮೇಲಿನ ಅಂಶಗಳಲ್ಲದೆ ಭಾಷೆಗಳ ಧ್ವನಿ, ಪದ, ರೂಪ, ವಾಕ್ಯ, ಅರ್ಥ, ವ್ಯಾಕರಣಗಳಿಗೆ ಪೂರಕವಾಗುವಂತಹ ವಿವರಣಾತ್ಮಕ, ತೌಲನಿಕ, ಐತಿಹಾಸಿಕ ಹಾಗೂ ಪ್ರಾಯೋಗಿಕವಾಗಿಯೂ ಸಹ ಅಧ್ಯಯನ ಮಾಡಲಾಗುವುದು.

[illegible]

ಮೊದಲನೆಯ ಅಂಶವಾದ ಸಾಮಾನ್ಯ ಭಾಷಾವಿಜ್ಞಾನವನ್ನು ಮತ್ತೆ ಮೂರು ರೀತಿಯಲ್ಲಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಲಾಗುತ್ತದೆ. ಆ ಮೂರು ವರ್ಗೀಕರಣಗಳು ಹೀಗಿವೆ.

೧. ಐತಿಹಾಸಿಕ/ಚಾರಿತ್ರಿಕ ಭಾಷಾ ಅಧ್ಯಯನ

೨. ವಿವರಣಾತ್ಮಕ ಭಾಷಾ ಅಧ್ಯಯನ

೩. ತೌಲನಿಕ ಭಾಷಾ ಅಧ್ಯಯನ

ಚಾರಿತ್ರಿಕ ಅಥವಾ ಐತಿಹಾಸಿಕ ಭಾಷಾ ಅಧ್ಯಯನವನ್ನು ಕಾಲದ ಮೂಲಕ ಅಧ್ಯಯನ ಮಾಡಲಾಗುತ್ತದೆ. ಹೆಸರೇ ಸೂಚಿಸುವಂತೆ ಮನುಷ್ಯ ವಿವಿಧ ಹಂತಗಳಲ್ಲಿ ಬೆಳೆದು ಬಂದಿರುವ ಬಗೆಯನ್ನು ಆ ಕಾಲದಲ್ಲಿ ಹೊಂದಿದ ಅಥವಾ ಹೊಂದಿರಬಹುದಾದ ಭಾಷಿಕ ಸಂಗತಿಗಳನ್ನು ದಾಖಲಿಸುವುದಾಗಿದೆ. ವಿವರಣಾತ್ಮಕ ಭಾಷಾ ಅಧ್ಯಯನದಲ್ಲಿ ನಿರ್ದಿಷ್ಟವಾಗಿ ಕಾಲ ಒಂದರಲ್ಲಿ ಭಾಷೆ ಕುರಿತಾಗಿ ಅಧ್ಯಯನ ಮಾಡುವಂಥದ್ದು. ಈ ಸಂದರ್ಭದಲ್ಲಿ ಭಾಷೆಯನ್ನು ಎಳೆ ಎಳೆಯಾಗಿ ಬಿಡಿಸುತ್ತಾ ಅದು ಒಳಗೊಂಡಿರುವ, ಒಳಗೊಳ್ಳಬಹುದಾದ ಸಾಧ್ಯತೆಯನ್ನು ಗುರುತಿಸುವುದು. ಕೊನೆಯದಾಗಿ ತೌಲನಿಕ ಭಾಷಾ ಅಧ್ಯಯನದಲ್ಲಿ ಸಾಧ್ಯತೆಯನ್ನು ಗುರುತಿಸುವುದು. ಕೊನೆಯದಾಗಿ ತೌಲನಿಕ ಭಾಷಾ ಅಧ್ಯಯನದಲ್ಲಿ ಐತಿಹಾಸಿಕ ಭಾಷಾವಿಜ್ಞಾನ ಮತ್ತು ವಿವರಣಾತ್ಮಕ ಭಾಷಾ ವಿಜ್ಞಾನಗಳ ಮೂಲಕ ಅಧ್ಯಯನ ಮಾಡಲಾಗುವುದು.

ಇತ್ತೀಚಿನ ದಿನಗಳಲ್ಲಿ ಅನ್ವಯಿಕ ಭಾಷಾವಿಜ್ಞಾನ ಎಂಬ ಹೊಸ ವಿಭಾಗದಡಿಯಲ್ಲಿ ಭಾಷೆಯನ್ನು ವಿವಿಧ ಅಂಶಗಳ ಆಧಾರದ ಮೇಲೆ, ಅನ್ವಯಿಸಿ ಅಧ್ಯಯನ ಮಾಡಲಾಗುತ್ತಿದೆ. ಭಾಷಾ ಬೋಧನೆ, ಕಲಿಕೆ, ಮನೋಭಾಷಾವಿಜ್ಞಾನ, ಸಾಮಾಜಿಕ ಭಾಷಾ ವಿಜ್ಞಾನ ಮುಂತಾದವು ಇದರ ವ್ಯಾಪ್ತಿಯೊಳಗೆ ಬರುತ್ತದೆ. ವಿಜ್ಞಾನವು ರೂಪಿಸಿಕೊಟ್ಟ ಧ್ವನಿಸಂಬಂಧಿ ಸಾಮಾನ್ಯ ತತ್ವಗಳನ್ನು ಯಾವುದಾದರೊಂದು ಭಾಷೆಗೆ ಅನ್ವಯವಾಗುವ ರೀತಿಯಲ್ಲಿ ಅಧ್ಯಯನ ಮಾಡುವುದು. ಭಾಷೆ ಒಂದರ ಉಚ್ಚಾರಣೆ ಸರಿಪಡಿಸಲು, ಉಚ್ಚಾರಿತ ಧ್ವನಿಗಳ ಗುಣದೋಷಗಳನ್ನು ಪತ್ತೆ ಹಚ್ಚುವುದು ಮತ್ತು ತಿದ್ದುವುದು ನಮ್ಮದಲ್ಲದ ಅಂದರೆ ವಿದೇಶಿ ಭಾಷಾ ಕಲಿಕೆಯಲ್ಲಿ ಕಂಡುಬರುವ ಉಚ್ಚಾರಣ ಸಂಬಂಧಿ ದೋಷಗಳನ್ನು, ನ್ಯೂನತೆಗಳನ್ನು ಗುರುತಿಸಲು, ಹಾಗೆ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸಲು ಹೀಗೆ ಹಲವಾರು ರೀತಿಯಲ್ಲಿ ಅನ್ವಯಿಕ ಧ್ವನಿವಿಜ್ಞಾನ ನೆರವಾಗುವುದು. ಟೆಲಿಗ್ರಾಫ್, ಟೆಲಿ ಪ್ರಿಂಟರ್, ಟೆಲಿಫೋನ್, ಟೈಪ್‌ರೈಟರ್ ಇನ್ನೂ ಅನೇಕ ಯಂತ್ರೋಪಕರಣಗಳ ಬಳಕೆ ಮತ್ತು ಅವುಗಳ ಸುಧಾರಣೆ ಅಲ್ಲದೆ ಶೀಘ್ರಲಿಪಿ ಸುಧಾರಣೆ, ಧ್ವನಿಲಿಪಿ ಸುಧಾರಣೆ ಹಾಗೆ ಬಗೆಬಗೆಯ ಲಿಪಿ ಸುಧಾರಣೆಗೆ ಅನ್ವಯಿಕ ಧ್ವನಿವಿಜ್ಞಾನವು ಹೆಚ್ಚು ಅತ್ಯಗತ್ಯವಾಗಿದೆ. ಬೇರೆ ಬೇರೆ ಭಾಷೆಗಳಿಗೆ ಸಂಬಂಧಪಟ್ಟ ಭಾಷೆಗಳ ಲಿಪಿ ನಿರ್ಮಾಣ ಮತ್ತು ಅವುಗಳ ಸುಧಾರಣೆಯ ಸಂದರ್ಭದಲ್ಲಿ ಅನ್ವಯಿಕ ಭಾಷಾ ವಿಜ್ಞಾನವು ಮುಖ್ಯವೆನಿಸುತ್ತದೆ. ಬಗೆಬಗೆಯ ವ್ಯಾಕರಣ ಗ್ರಂಥಗಳ ರಚನೆ ನಾನಾ ರೀತಿಯ ಕೋಶಗಳ ನಿರ್ಮಾಣ ವಾಕ್ ಸಂಬಂಧಿ ನ್ಯೂನತೆಗಳ ನಿರ್ಧಾರ ಅವುಗಳ ಸುಧಾರಣೆ ಹೀಗೆ ಹಲವಾರು ರೀತಿಯಲ್ಲಿ ಅನ್ವಯಿಕ ಭಾಷಾ ಧ್ವನಿ ವಿಜ್ಞಾನವು ಸಹಾಯವಾಗುತ್ತದೆ.

ಆಧುನಿಕ ಯುಗದ ಬಹುದೊಡ್ಡ ಕೊಡುಗೆ ಎಂದರೆ ಅಂತರ್ಶಿಸ್ತೀಯ ಅಧ್ಯಯನ. ಈ ಅಧ್ಯಯನವು ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಇದರಲ್ಲಿ ಒಳಗೊಳ್ಳದ ಜ್ಞಾನ ಶಾಖೆಗಳೇ ಇಲ್ಲವೆನ್ನಬಹುದು. ಒಂದು ವಿಷಯವನ್ನು ಒಂದೇ ಕೇಂದ್ರ ಬಿಂದುವಿನಿಂದ ನೋಡದೆ ಹಲವು ಕೇಂದ್ರಬಿಂದುಗಳ ಮುಖಾಂತರ ಚಲಿಸಿ ಅಧ್ಯಯನ ಮಾಡುವುದಾಗಿದೆ. ಸಮಾಜದಲ್ಲಿ ಮಾನವನ ಒಡನಾಟವೂ, ಬೌದ್ಧಿಕತೆಯೂ ಒಂದೇ ಆಗಿರುವುದಿಲ್ಲ. ಬಹು ಜ್ಞಾನಮೂಲದಿಂದ ಕೂಡಿರುತ್ತದೆ. ಆದ್ದರಿಂದ ಮಾನವನ ಬೌದ್ಧಿಕತೆಯು ಹಲವು ಜ್ಞಾನ ಶಾಖೆಗಳ ಸಹಾಯದಿಂದ ವೃದ್ಧಿಯಾಗುತ್ತಿರುತ್ತದೆ. ಸಾಹಿತ್ಯದ ಜ್ಞಾನ ಮೀಮಾಂಸೆಯ ಜೊತೆಗೆ ಚರಿತ್ರೆ, ಜಾನಪದ, ಶಿಕ್ಷಣ, ಲಲಿತಕಲೆ, ಸಾಹಿತ್ಯ, ನೀತಿಶಾಸ್ತ್ರ, ತತ್ವಶಾಸ್ತ್ರ, ಖಗೋಳವಿಜ್ಞಾನದ ಜ್ಞಾನ ಮೀಮಾಂಸೆಯು ಮಾನವನ ಬೌದ್ಧಿಕತೆಗೆ ಮುಖ್ಯ ಅಂಗಗಳಾಗಿಬಿಡುತ್ತವೆ. ಹಾಗೆಯೇ ಸಮಾಜ ವಿಜ್ಞಾನದಲ್ಲಿ ಬರಬಹುದಾದ ಸಮಾಜಶಾಸ್ತ್ರ, ಮಾನವಿಕ ವಿಜ್ಞಾನ, ಅರ್ಥಶಾಸ್ತ್ರ, ರಾಜಕೀಯವಿಜ್ಞಾನ, ನ್ಯಾಯವಿಜ್ಞಾನ, ಮನೋವಿಜ್ಞಾನ, ಭಾಷಾವಿಜ್ಞಾನದ ಜ್ಞಾನವೂ ಸಹ ಬೌದ್ಧಿಕತೆಯ ಒಂದು ಭಾಗವಾಗಿಬಿಡುತ್ತದೆ.

ಈ ಆಧುನಿಕ ಸಂದರ್ಭದಲ್ಲಿ ಭಾಷಾ ವಿಜ್ಞಾನದ ವಲಯದಲ್ಲಿ ಬರದಿರುವ ಸಂಗತಿಗಳೇ ಇಲ್ಲವೆನ್ನಬಹುದು. ಅಂತರ್ಶಿಸ್ತೀಯ ಅಧ್ಯಯನದ ಚೌಕಟ್ಟಿನಲ್ಲಿ ಮೇಲೆ ಹೇಳಿದ ಎಲ್ಲ ವಿಷಯಗಳು ಒಳಗೊಳ್ಳುತ್ತವೆ. ವಿವಿಧ ಬಗೆಯ ಅಧ್ಯಯನಗಳ ಫಲಿತದಿಂದಾಗಿ ಭಾಷಾವಿಜ್ಞಾನಕ್ಕೆ ಅತ್ಯಂತ ಹೆಚ್ಚಿನ ಮಹತ್ವಬಂದಿದೆ. ಅಲ್ಲದೆ ತಮ್ಮ ಕ್ಷೇತ್ರದ ವಿಸ್ತಾರವನ್ನು ಹಂಚಿಕೊಳ್ಳಲು ಭಾಷಾ ವಿಜ್ಞಾನದ ಆಶ್ರಯ ಅಥವಾ ನೆರವು ಬೇಕೇ ಬೇಕು. ಏಕೆಂದರೆ ಭಾಷೆ ಸಮಾಜದ ಆತ್ಮವಿದ್ದಂತೆ. ಸಮಾಜದ ಅದೆಷ್ಟೋ ಜ್ಞಾನ ಭಾಷೆಯ ಬಂಧದಲ್ಲಿ ಅಡಗಿಕೊಂಡಿರುತ್ತದೆ. ಇಂಥ ಸುಪ್ತ ಜ್ಞಾನವನ್ನು ತಿಳಿಯಲು ಎಲ್ಲಜ್ಞಾನ ಶಾಖೆಗಳ ಅರಿವು ಮುಖ್ಯವೆಂಬುದು ಎಲ್ಲ ವಿಜ್ಞಾನಿಗಳ ಆಶಯವಾಗಿದೆ. ಇಂತಹ ಹಲವು ಜ್ಞಾನ ಶಾಖೆಗಳ ಜೊತೆಗೆ ಐವತ್ತರ ದಶಕದಲ್ಲಿ 'ಸಾಮಾಜಿಕ ಭಾಷಾವಿಜ್ಞಾನವು' ಸೇರ್ಪಡೆಯಾಯಿತು.

ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಭಾಷಿಕಕ್ಕೆ ಸಂಬಂಧಿಸಿದಂತೆ ಚಿಂತನೆಗಳು ಇರಲಿಲ್ಲವೆ ಎಂಬ ಪ್ರಶ್ನೆಗೆ ಇರಲಿಲ್ಲವೆನ್ನುವುದಕ್ಕಿಂತ ಪ್ರತ್ಯೇಕವಾಗಿರಲಿಲ್ಲ ಎನ್ನಬಹುದು. ಆದಿ ಕವಿಯಾದ ಪಂಪ ತನ್ನ ಕೃತಿಯಾದ ವಿಕ್ರಮಾರ್ಜುನ ವಿಜಯದಲ್ಲಿ ಒಂದು ಸುಂದರವಾದ ಪ್ರಸಂಗವೊಂದನ್ನು ತರುತ್ತಾನೆ. ಕುರುಕ್ಷೇತ್ರ ಯುದ್ಧ ನಿರ್ಣಯವಾಗಿರುತ್ತದೆ. ಕೌರವರ ಪಾಳೇಯದಲ್ಲಿ ಸೇನಾ ನಾಯಕನ ಪಟ್ಟಯಾರಿಗೆ ಕಟ್ಟಬೇಕು ಎಂಬ ಚರ್ಚೆ ನಡೆಯುವ ಸಂದರ್ಭವದು. ದುರ್ಯೋಧನನು ಭೀಷ್ಮರೇ ಸೇನಾನಾಯಕ ಪಟ್ಟಕ್ಕೆ ಅರ್ಹರು ಎಂದು ಸೂಚಿಸುತ್ತಾನೆ. ದುರ್ಯೋಧನನ ಈ ನಿಲುವನ್ನು ಸಭೆಯಲ್ಲಿದ್ದವರು ಒಪ್ಪಿದರೂ ಕರ್ಣ ವಿರೋಧಿಸುತ್ತಾನೆ. ಹಾಗೆ ವಿರೋಧಿಸುವ ಸಂದರ್ಭದಲ್ಲಿ ಭೀಷ್ಮರ ಪ್ರಾಂಜಲ ವ್ಯಕ್ತಿತ್ವವನ್ನು ಹಳಿಯುತ್ತಾನೆ. ದ್ರೋಣರು ತಮ್ಮ ಮೌನವನ್ನು ಮುರಿದು ಕರ್ಣನನ್ನು ವಿರೋಧಿಸುತ್ತಾರೆ. ಆಗ ಕರ್ಣನು ದ್ರೋಣರನ್ನು ಸಹ ಕಡೆಗಾಣಿಸಿ ವಿರೋಧಿಸುವ ಸಂದರ್ಭದಲ್ಲಿ ದ್ರೋಣರು ಹೀಗೆ ಹೇಳುತ್ತಾರೆ.

[illegible]

ಕುಲಜರನುದ್ಘ ತರಂ ಭೂಜ

ಬಲಯುತರಂ ಹಿತರನೀ ಸಭಾಮಧ್ಯದೊಳ

ಗಲಸಿದ ಮದದಿಂ ನಾಲಗೆ

ಕುಲಮಂ ತಬ್ಬುವವೊಲುರದೆ ನೀ ಕಡೆ ನುಡಿವೆ

ಘನತರವಾದ ವ್ಯಕ್ತಿತ್ವವುಳ್ಳ ಭೀಷ್ಮರ ಕುರಿತು ಈ ರೀತಿ ನುಡಿಯುವುದು ಉಚಿತವಲ್ಲ. ನೀನಾರು ಎಂಬುದು ನಿನ್ನ ನಾಲಿಗೆ ಹೇಳುತ್ತದೆ. ಗೆರೆ ಸೂಚಿಸುವರ ಸಾಲುಗಳು ಅವನ (ವ್ಯಕ್ತಿಯ) ನಾಲಿಗೆಯ (ಮಾತಿನ) ಮೂಲಕ ಯಾವ ಕುಲದವನು ಎಂದು ಸೂಚಿಸುತ್ತದೆಂಬ ಅರ್ಥವನ್ನು ನೀಡುತ್ತವೆ. ಅಂದರೆ ವ್ಯಕ್ತಿಯ ಮಾತಿನ ಮೂಲಕವೇ ವ್ಯಕ್ತಿಯೋರ್ವನನ್ನು ಅಧ್ಯಯನ ಮಾಡಬಹುದು. ಆದರೆ ಈ ಸಾಲುಗಳು ಜಾತಿಯ ಬಿರುಗಾಳಿಗೆ ಸಿಕ್ಕು ಬೇರೊಂದು ಮುಖದ ಅಧ್ಯಯನಕ್ಕೆ ಮೊದಲಾಗಲೇ ಇಲ್ಲ.

ರಾಘವಾಂಕನು ಹರಿಶ್ಚಂದ್ರ ಕಾವ್ಯದಲ್ಲಿ ತನ್ನ ಕಾವ್ಯಭಾಷೆಯ ಮಹತ್ವ ಕುರಿತು ಷಟ್ಪದಿಯೊಂದರಲ್ಲಿ ಹೀಗೆ ಹೇಳುತ್ತಾನೆ. ಇದು ಸಾಮಾಜಿಕ ಭಾಷೆಯನ್ನು ಕುರಿತು ಹೇಳಿದಂತಿದೆ.

"ಪರರೊಡೆವೆಯಂ ಕೊಂಡು ಕೃತಿಯ ಪೇಳದ ಭಾಷೆ

ಪರರ ಕಾವ್ಯಾರ್ಥಗಳಂ ಛಿದ್ರಿಸದ ಭಾಷೆ

ಪರರ ದೈವವನುತಿಸದಿಪ್ಪ ಭಾಷೆ ಪರರ ಕ್ಲೇಶ ವೀಕ್ಷಿಸದ ಭಾಷೆ

ಪರರ ನಿಂದಿಸಿ ತನ್ನ ಹೋಗಳಿಕೊಳ್ಳದ ಭಾಷೆ

ಪರರ ವದುವಂ ಕಂಡು ಮನವೆಳಸದಿಹ ಭಾಷೆ

ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯಿದು ರಾಘವಾಂಕಗೆ ಸಂದುದು"[೬]

ಮೇಲಿನ ಷಟ್ಪದಿಯೊಂದರಲ್ಲಿ ಹಲವು ರಚನೆಗಳ ಭಾಷಾ ಬಂಧವನ್ನು ಗುರುತಿಸಬಹುದು. ಭಾಷೆಯೊಂದರಲ್ಲಿ ಹಲವು ರಚನೆಗಳನ್ನು ಹೇಗೆ ಸೃಷ್ಟಿಸಬಹುದು ಎಂಬುದನ್ನು ಸಹ ತಿಳಿಯಬಹುದು. ಒಂದು ಕೃತಿಯಿಂದ ಇನ್ನೊಂದು ಕೃತಿಗೆ ತೆಗೆದು ಕೊಳ್ಳುವಾಗ, ಬೇರೊಬ್ಬರ ಕಾವ್ಯಭಾಷೆಯನ್ನು ಛಿದ್ರಿಸುವಾವಾಗಿನ ಭಾಷೆಯಾಗಲಿ, ಬೇರೊಬ್ಬರ ದೈವವನ್ನು ತೆಗಳುವಾಗ, ತನ್ನ ಕುರಿತು ಹೊಗಳಿಕೆ ಬಂದ ಸಂದರ್ಭದಲ್ಲಾಗಲಿ ಭಾಷೆ ವಿವಿಧ ಮುಖಗಳಲ್ಲಿ ಚಲನೆಗೈಯುತ್ತದೆ ಅಥವಾ ರಚನೆಯಾಗುತ್ತದೆ ಎಂಬುದನ್ನು ಮನಗಾಣಬಹುದು.

ಪ್ರಾಚೀನ ಸಂಸ್ಕೃತ ಮೀಮಾಂಸಕರು ಭಾಷೆ ಮೇಲೆ ವಿಶೇಷವಾದ ಬೆಳಕು ಚೆಲ್ಲಿದ್ದಾರೆ. ಕಾವ್ಯ ಮೀಮಾಂಸೆಗೆ ಸಂಬಂಧಿಸಿದಂತೆ ವೈಯಾಕರಣಿಗಳು ನಡೆಸಿದ ಚರ್ಚೆಯೇ ಭಾಷೆ ಹೇಗೆ ಬಳಸಬೇಕು ಎಂಬುದರ ಕುರಿತಾಗಿತ್ತು. ಕಾವ್ಯ ಎಂದರೇನು, ಕಾವ್ಯದ ಭಾಷೆ ಹೇಗಿರಬೇಕು, ಕಾವ್ಯವು ಸಹೃದಯನಲ್ಲಿ ರಸೋದ್ದೀಪನ ಗೊಳಿಸುವಂತಿರಬೇಕೆ, ಕಾವ್ಯದ ಆತ್ಮಯಾವುದು, ಅಲಂಕಾರಿಕ ಭಾಷೆ ಸಹೃದಯನಲ್ಲಿ ಉಂಟುಮಾಡುವ ಬಗೆ ಯಾವುದು ಎಂಬ ಹಲವಾರು ಪ್ರಶ್ನೆಗಳನ್ನು ಎತ್ತಿಕೊಂಡು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ. ಆ ಎಲ್ಲ ಚಿಂತನೆಗಳು ಭಾಷೆಯನ್ನು ಹೊರತು ಪಡಿಸಿದ ಚಿಂತನೆಗಳಲ್ಲ ಬದಲು ಭಾಷೆಗೆ ಸಂಬಂಧಿಸಿದ ಚಿಂತನೆಗಳೇ ಆಗಿವೆ.

ಮೊದಲಿನಿಂದಲೂ ಭಾಷೆಯನ್ನು ಹಲವು ಸಂಗತಿಗಳ ಜೊತೆಯಲ್ಲಿ ಚರ್ಚಿಸಿರುವುದರಿಂದ ಭಾಷಿಕ ಅಧ್ಯಯನ ಪ್ರಧಾನ ನೆಲೆಯನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ.

ಆಧುನಿಕ ಸಂದರ್ಭವು ಭಾಷೆಗೆ ಪ್ರತ್ಯೇಕವಾದ ಪ್ರಧಾನ ನೆಲೆಯನ್ನು ಒದಗಿಸಿತು. ಈ ಹಿನ್ನೆಲೆಯಲ್ಲಿ ಭಾಷಾ ಕ್ಷೇತ್ರವೂ ಹೊಸ ಅಧ್ಯಯನಗಳಿಗೆ ಬಾಗಿಲು ತೆರೆಯಿತು. ಈ ಸಂದರ್ಭದಲ್ಲಿ ಅನೇಕ ಅಂತರ್ಶಿಸ್ತೀಯ ಅಧ್ಯಯನಗಳು ಭಾಷಾ ವಲಯವನ್ನು ವಿಸ್ತರಿಸಿದವು. ಭಾಷಾ ಕ್ಷೇತ್ರವೂ ದಿನದಿಂದ ದಿನಕ್ಕೆ ಹೊಸ ಆಯಾಮವನ್ನು ಪಡೆದುಕೊಂಡಿತು ಎಂದರೆ ತಪ್ಪಾಗಲಾರದು.

ಮನುಷ್ಯ ಸಮೂಹ ಮತ್ತು ಸಮಾಜ ಜೀವಿ. ಅವನ ಜನನ ಮರಣಗಳೆರಡೂ ಸಮಾಜದಲ್ಲಿಯೇ ಸಂಭವಿಸುತ್ತವೆ. ಸಮಾಜದ ಸಹಕಾರವಿಲ್ಲದೆ ಮನುಷ್ಯನ ಬೆಳವಣಿಗೆಯನ್ನು ಊಹಿಸಿಕೊಳ್ಳುವುದು ಕೂಡ ಅಸಾಧ್ಯ.ಮಾನವನ ಪೂರ್ಣ, ಅಪೂರ್ಣ ಬೆಳವಣಿಗೆಗೆ ಸಮಾಜ ಕಾರಣೀಭೂತವಾಗಿರುತ್ತದೆ. ಆದ್ದರಿಂದ ಒಂದು ಭಾಷೆಯನ್ನು ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ ಸಮಾಜದಲ್ಲಿ ಇತರ ಸದಸ್ಯರ ಸಹಭಾಗಿತ್ವದಲ್ಲಿ ಬೆರೆಯುತ್ತಾ ಸಹಜವಾಗಿ ಕಲಿಯುತ್ತಾನೆ. ಹೀಗೆ ಕಲಿತಂಥ ಮನುಷ್ಯ ತನ್ನ ಅನುಭವಗಳನ್ನು ಆಲೋಚನೆಗಳನ್ನು ಮತ್ತು ಅನಿಸಿಕೆಗಳನ್ನು ಬೇರೊಬ್ಬರಿಗೆ ತಿಳಿಸಲು ಭಾಷೆಯನ್ನು ಬಳಸುತ್ತಾನೆ. ವ್ಯಕ್ತಿ ಬಳಸುವ ಭಾಷೆಯ ಒಳ ರೂಪಗಳಿಗೆ ವ್ಯಕ್ತಿಯ ವಾಸಸ್ಥಳ, ಜೀವನ ವಿಧಾನ, ಆಚಾರ ವಿಚಾರ, ವ್ಯವಹಾರ, ಜಾತಿ, ಕಸುಬು ಮುಂತಾದುವೆಲ್ಲಾ ಕಾರಣವಾಗಿರುತ್ತವೆ. ಯಾಕೆಂದರೆ ಭಾಷೆಯೊಡನೆ ಸಂಸ್ಕೃತಿಯು ಸೇರಿರುತ್ತದೆ. ಭಾಷೆಯಲ್ಲಿ ಆ ಭಾಷಿಕರ ಪ್ರಜ್ಞೆ (Awareness) ಏಕಾತ್ಮವಾಗಿ ಬೆರೆತುಕೊಂಡಿರುತ್ತದೆ. ಇದರ ಮೂಲಕವಾಗಿ ವಸ್ತ್ರಪೂರ್ವ, ವಸತಿಪೂರ್ವ, ಭಾಷಾಪೂರ್ವ, 'ನರ'ವರ್ಗದ ಜೀವನ ರೀತಿಯೂ ಈ ಭಾಷಿಕ ಪ್ರತಿಮೆಗಳಲ್ಲಿ ಪ್ರತಿಬಿಂಬಿತವಾಗಿರುವುದು ಸಾಧ್ಯವಿದೆ.

ಸಂಪರ್ಕ ಮತ್ತು ವ್ಯವಹಾರಕ್ಕಾಗಿ ಭಾಷೆಯನ್ನು ರೂಪಿಸಿಕೊಂಡರೂ ಸಮಾಜದ ಏಳಿಗೆಗಾಗಿ, ಸಂಸ್ಕೃತಿಯ ವಿಕಾಸಕ್ಕಾಗಿ ಬಳಕೆಯಾಗಿದೆ. ಸಾವಿರಾರು ವರ್ಷಗಳಿಂದ ಹರಿದುಬಂದ ಭಾಷೆ ಸಮಾಜ ಮತ್ತು ಸಂಸ್ಕೃತಿಗಳನ್ನು ಹುಟ್ಟುಹಾಕಿದೆ. ಭಾಷೆ ಸಮಾಜ ಮತ್ತು ಸಂಸ್ಕೃತಿ ಮಾನವನ ಬೆಳವಣಿಗೆಯಲ್ಲಿ ಪೂರಕವಾಗಿದ್ದು ಒಂದಕ್ಕೊಂದು ಬೇರ್ಪಡಿಸಲಾಗದಷ್ಟು ಅವಲಂಬಿಸಿವೆ. ಇವುಗಳಲ್ಲಿ ಒಂದಿಲ್ಲದೆ ಇನ್ನೊಂದಕ್ಕೆ ಅಸ್ತಿತ್ವವೇ ಇಲ್ಲವೆಂದು ಹೇಳಬಹುದು. ಸಮಾಜ ಮತ್ತು ಸಂಸ್ಕೃತಿಯ ಮಹತ್ವವನ್ನು ಭಾಷೆಯ ಮುಖಾಂತರ ತಿಳಿದುಕೊಳ್ಳಬಹುದು.

ಭಾಷೆ ಸಮಾಜ ಬೆಳೆಯಲು, ಸಂಸ್ಕೃತಿ ಅರಳಲು ಸಹಾಯ ಮಾಡುತ್ತದೆ. ಹಾಗೆಯೇ ಸಮಾಜ ಮತ್ತು ಸಂಸ್ಕೃತಿಗಳ ಪ್ರಭಾವ ಭಾಷೆಯ ಮೇಲೂ ಇರುತ್ತದೆ. ಸಮಾಜದ ಅಂಗಗಳಾದ ಕುಟುಂಬ, ಸಂಘ ಸಂಸ್ಥೆಗಳು, ಮದುವೆ, ಬಾಂಧವ್ಯ, ಕುಲಗೋತ್ರ, ಹಬ್ಬಹರಿದಿನಗಳು, ಆಚಾರಗಳು ಇನ್ನೂ ಜೀವನದ ಅನೇಕ ವಿಷಯಗಳು ಭಾಷೆಯಲ್ಲಿಯೇ ಅಡಕಗೊಂಡಿರುತ್ತವೆ. ಜೊತೆಗೆ ಆ ಎಲ್ಲಾ ವಿಷಯಗಳನ್ನು ತಿಳಿಯಲು ಭಾಷೆಯೇ ಸಹಾಯ ಮಾಡುತ್ತದೆ. ಆದ್ದರಿಂದ ಮನುಷ್ಯ ಸಮಾಜದಲ್ಲಿ ಒಬ್ಬ ಸದಸ್ಯನೆಂಬುದರಲ್ಲಿ ಸಂದೇಹವಿಲ್ಲ. ಸಮಾಜದ ಸಂಪರ್ಕವಿಲ್ಲದಿದ್ದರೆ ಮನುಷ್ಯ ಮನುಷ್ಯನಾಗದೆ ಪ್ರಾಣಿಯಾಗಿಯೇ ಉಳಿದು ಬಿಡುತ್ತಿದ್ದ.

'Sociolinguistic' ಎಂಬ ಪದವನ್ನು ಮೊಟ್ಟಮೊದಲಬಾರಿಗೆ ಬಳಸಿದ ವಿದ್ವಾಂಸ ಹ್ಯಾವರ್ ಸಿ.ಕೂರಿಯವರು. ೧೯೫೨ರಲ್ಲಿ 'SouthSpeech Journal'ಗೆ ಬರೆದ 'A projection of Sociolinguistics : the relation ship of speech to social staltes' ಎಂಬ ಲೇಖನದಲ್ಲಿ Sociolingustics ಎಂಬ ಪದಕ್ಕೆ ಪರ್ಯಾಯವಾಗಿ Sociolinguistika ಮತ್ತು Socialnaja Linguistika ಎಂಬ ಪದಗಳು ರಷ್ಯಾದೇಶದಲ್ಲಿ ಬಳಕೆಯಲ್ಲಿದ್ದವು. ೧೯೬೪ರಲ್ಲಿ ಅಮೇರಿಕಾದ ಪ್ರಮುಖಭಾಷಾ ವಿಜ್ಞಾನಿ ಡೆಲ್‌ಹೈಮ್ಸ್‌ನು ರಚಿಸಿದ 'Language in Culture and Society' ಕೃತಿ ಹೊರಬಂದಿತು. ಈ ಕೃತಿಯಲ್ಲಿ ಸಾಮಾಜಿಕ ಭಾಷಾ ವಿಜ್ಞಾನಕ್ಕೆ ಸಂಬಂಧಪಟ್ಟ ಹಲವು ಲೇಖನಗಳಿದ್ದವು. ಸಾಮಾಜಿಕ ಭಾಷಾ ವಿಜ್ಞಾನ ಬೆಳೆದು ಬರುವಲ್ಲಿ ಈ ಕೃತಿ ಭದ್ರ ಬುನಾದಿಯನ್ನು ಹಾಕಿಕೊಟ್ಟಿತು ಎಂದರೆ ತಪ್ಪಾಗಲಾರದು. ಅದೇ ವರ್ಷದಲ್ಲಿ ಅಂದರೆ ೧೯೬೪ರಲ್ಲಿ ಸಾಮಾಜಿಕ ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದಂತೆ ಅಮೇರಿಕಾದ ಲಾಸ್ ಏಂಜಲ್ಸ್‌ನ ಕ್ಯಾಲಿಪೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಸಮ್ಮೇಳನ ನಡೆಯಿತು. ಈ ಸಮ್ಮೇಳನವು ಹಲವಾರು ಸಾಮಾಜಿಕ ವಿಜ್ಞಾನಿಗಳು ಬೆಳೆದು ಬರುವುದಕ್ಕೆ ವೇದಿಕೆಯಾಯಿತು. ಅಂತಹ ಹಲವಾರು ವಿಜ್ಞಾನಿಗಳಲ್ಲಿ ವಿಲಿಯಂ ಲ್ಯಾಬೊವ್ ಕೂಡ ಒಬ್ಬರು. ಈ ಸಮ್ಮೇಳನದಲ್ಲಿಯೇ ವಿಲಿಯಂ ಲ್ಯಾಬೋವ್ ಅವರ 'The Social Stratification of English in Newyork city' ಎಂಬ ಸಂಶೋಧನ ಕೃತಿ ಹೊರಬಂದಿತು. ಸಾಮಾಜಿಕ ವಿಜ್ಞಾನದ ಕ್ಷೇತ್ರದಲ್ಲಿ ೧೯೬೪ನೇ ಇಸ್ವಿಯು ಮಹತ್ವಪೂರ್ಣ ಎಂದು ಹೇಳಬಹುದು.

ಅಮೇರಿಕಾ ಸಂಯುಕ್ತ ಸಂಸ್ಥಾನದ ಸರಕಾರ ಮತ್ತು ಹಲವು ಸಂಘಸಂಸ್ಥೆಗಳ ಆರ್ಥಿಕ ನೆರವಿನಿಂದ ಸಾಮಾಜಿಕ ಭಾಷಾ ವಿಜ್ಞಾನ ಕ್ಷೇತ್ರವು ಬೆಳೆದು ಬಂದಿತು. ಇದರ ಸಹಾಯ ಸಹಕಾರ ಪಡೆದುಕೊಂಡ ಲ್ಯಾಬೋವ್, ಫಿಶ್‌ಮನ್, ಶೊಯ್ ಎಲ್‌ಫ್ರಾರಿ, ರಿಲ್, ಗ್ರಿಮ್‌ಷಾ ಮುಂತಾದ ಸಂಶೋಧಕರು ಮೌಲಿಕ ಕೃತಿಗಳನ್ನು ರಚಿಸಿದರು. ಇವರು ಮಾತ್ರವಲ್ಲದೆ ಡೆಲ್‌ಹೈಮ್ಸ್, ವೆಯಿನ್‌ರಿಚ್, ಫರ್ಗೂಸನ್, ಲೀಬಸ್‌ಸನ್, ಬರ್ನಸ್ಟೈನ್ ಫ್ರೈಡ್, ಹಡ್ಸನ್, ಟ್ರಡ್ಗಿಲ್ ಮೊದಲಾದವರು ತಮ್ಮ ಹಲವು ಆಲೋಚನೆಗಳಿಂದ ಸಾಮಾಜಿಕ ಭಾಷಾ ವಿಜ್ಞಾನ ಕ್ಷೇತ್ರವನ್ನು ವಿಶಾಲವಾಗಿ ಬೆಳೆಸಿದರು.

ಸಾಮಾಜಿಕ ಭಾಷಾವಿಜ್ಞಾನ ಕುರಿತಂತೆ ಹಲವಾರು ವ್ಯಾಖ್ಯೆಗಳಿವೆ. ಆ ಕ್ಷೇತ್ರದಲ್ಲಿ ದುಡಿದ ಪ್ರತಿಯೊರ್ವ ವಿದ್ವಾಂಸರು ತಮ್ಮ ಅನುಭವಕ್ಕೆ ದಕ್ಕಿದ ಅನುಭವಗಳನ್ನು, ವಿಚಾರಗಳನ್ನು ದಾಖಲೆ ಮಾಡಿದ್ದಾರೆ. ಆ ವಿಚಾರಗಳೆಲ್ಲವೂ ಸಮಾಜ, ಸಂಸ್ಕೃತಿ ಮತ್ತು ಭಾಷೆಯ ನಡುವಿನ ಸಂಬಂಧವನ್ನು ಕುರಿತು ಹೇಳುತ್ತವೆ. ಆ ವ್ಯಾಖ್ಯೆಗಳು ಹೀಗಿವೆ.

"ಜೆ.ಜೆ.ಗುಂಪರ್ಜ್: ಒಂದು ಭಾಷೆಯನ್ನಾಡುವ ಜನರ ಸಾಮಾಜಿಕ ಗುಣ ಲಕ್ಷಣಗಳು ಅವರ ಸಾಂಸ್ಕೃತಿಕ ಹಿನ್ನೆಲೆ ಬದುಕಿನ ಪರಿಸರದಲ್ಲಿ ಅವರು ನಡೆಸುವ ಚಟುವಟಿಕೆಗಳ ಅಧ್ಯಯನವೇ ಸಾಮಾಜಿಕ ಭಾಷಾ ವಿಜ್ಞಾನ.

[illegible]

ವಿಲಿಯಂ ಬ್ರೈಟ್: ಸಾಮಾಜಿಕ ಭಾಷಾ ವಿಜ್ಞಾನದ ಪ್ರಮುಖ ಧ್ಯೇಯ ಭಾಷಿಕ ಬದಲಾವಣೆ ಅಥವಾ ವೈವಿಧ್ಯತೆ ಮುಕ್ತವಾದುದಲ್ಲ ಬದಲಾಗಿ ಅದಕ್ಕೆ ವ್ಯವಸ್ಥಿತವಾದ ಸಾಮಾಜಿಕ ಭಿನ್ನತೆಯ ಸಹಯೋಗ ಇರುತ್ತದೆ ಎಂಬುದನ್ನು ನಿರೂಪಿಸುವುದು.

ನಿಕೋಲ್‌ಸ್ಕಿ: ಭಾಷಿಕ ವ್ಯತ್ಯಯಗಳು ಸಾಮಾಜಿಕವಾಗಿ ಅಥವಾ ಕ್ರಿಯಾತ್ಮಕವಾಗಿ ನಿಯಂತ್ರಿಸಲ್ಪಡುವ ಬಗೆಯನ್ನು ಒಳಗೊಂಡ ಅಧ್ಯಯನವೇ ಸಾಮಾಜಿಕ ಭಾಷಾ ವಿಜ್ಞಾನ.

ಡೆಲ್ ಹೈಮ್ ಕೆಲವರು ಸಾಮಾಜಿಕ ಭಾಷಾ ವಿಜ್ಞಾನವನ್ನು ಭಾಷಿಕ ವೈವಿಧ್ಯತೆಗಳ ಅಥವಾ ಬದಲಾವಣೆಗಳ ಅಧ್ಯಯನ ಎಂದು ವ್ಯಾಖ್ಯಾನಿಸಿದ್ದಾರೆ. ಇದಕ್ಕಿಂತ ವಿಸ್ತೃತ ನೆಲೆಯಲ್ಲಿ ಸಾಮಾಜಿಕ ಭಾಷಾ ವಿಜ್ಞಾನವನ್ನು ವಿವರಿಸಬೇಕಾಗುತ್ತದೆ. ಬದಲಾವಣೆಯ ಮೂಲ, ಅದರ ಸಂಗೋಪನೆ, ಬದಲಾವಣೆಯಿಂದ ಭಾಷೆಯಲ್ಲಾಗುವ ಖಚಿತ ಹಾನಿ ಮುಂತಾದವುಗಳನ್ನು ಒಳಗೊಳ್ಳುವ ಅಧ್ಯಯನದಲ್ಲಿ ಸಾಮಾಜಿಕ ಭಾಷಾ ವಿಜ್ಞಾನದ ಭವಿಷ್ಯ ಅಡಗಿದೆ.

ಫಿಶರ್: ಸಾಮಾಜಿಕ ಭಾಷಾ ವಿಜ್ಞಾನ ಎಂಬ ಹೆಸರು ಸಾಮಾನ್ಯವಾಗಿ ಅನ್ವಯವಾಗುವುದು ಒಂದು ಗೊತ್ತಾದ ಸಮಾಜ ಅಥವಾ ಸಂಸ್ಕೃತಿಯಲ್ಲಿ ಸಂದರ್ಭ ವ್ಯತ್ಯಯ ಆಡುಗ ಕೇಳುಗರ ಸಂಬಂಧ ಸಾಮಾಜಿಕ ವರ್ಗ ಮುಂತಾದವುಗಳಿಗೆ ಸಂಬಂಧಿಸಿದಂತೆ ಉಂಟಾಗುವ ಭಾಷಿಕ ವ್ಯತ್ಯಯಗಳ ಅಧ್ಯಯನಕ್ಕೆ...

ಪೀಟರ್ ಟ್ರುಡ್ಗಿಲ್: ಭಾಷಾವಿಜ್ಞಾನದ ಯಾವ ಭಾಗ ಭಾಷೆಯನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಬಂಧಿಯಾಗಿ ನೋಡುತ್ತದೆಯೋ ಅದೇ ಸಾಮಾಜಿಕ ಭಾಷಾ ವಿಜ್ಞಾನ.

ಡಾ.ಹಾ.ಮಾ.ನಾಯಕ: ಭಾಷಾ ವಿಜ್ಞಾನದ ಯಾವ ಒಂದು ಶಾಖೆ ಭಾಷೆಯಲ್ಲಿ ಹುದುಗಿರುವ ಸಾಮಾಜಿಕ ಅಂಶಗಳ ವಿವರಗಳನ್ನು ಒದಗಿಸುತ್ತದೆಯೋ ಅದೇ ಸಾಮಾಜಿಕ ಭಾಷಾವಿಜ್ಞಾನ.''

ಮೇಲಿನ ಭಾಷಾ ವಿದ್ವಾಂಸರ ವ್ಯಾಖ್ಯೆಗಳನ್ನು ಗಮನಿಸಿದಾಗ ಭಾಷಿಕ ರಚನೆಯ ನಿಯಮ ಒಂದೇ ರೀತಿಯದ್ದಾಗಿರಬಹುದು. ಆದರೆ ಕಾಲದಿಂದ ಕಾಲಕ್ಕೆ ಭಾಷಿಕ ಅರ್ಥಗಳು ಸಮಾಜದ ಹಿನ್ನೆಲೆಯಲ್ಲಿ ಬೇರೊಂದು ಅರ್ಥಗಳೊಂದಿಗೆ ಬಳಕೆಯಾಗುತ್ತಿರುತ್ತವೆ. ಹಾಗೆ ಅರ್ಥಗಳು ಒಂದೇ ರೀತಿಯಾಗಿ ಬಳಕೆಯಾಗುವುದರ ಬದಲು ನಾನಾ ವಿಧದಲ್ಲಿ ಬಳಕೆಯಾಗಲು ಹಲವು ಕಾರಣಗಳೂ ಇವೆ. ಸಮಾಜವು ಹಲವು ಪ್ರಭಾವಗಳಿಗೆ ಒಳಗಾಗುತ್ತಿರುತ್ತದೆ. ಹಾಗೆ ಒಳಗಾಗುವ ಸಂದರ್ಭದಲ್ಲಿ ಅಥವಾ ಈಗಾಗಲೇ ಬೆಳೆದು ಬಂದ ಜನಜೀವನದಲ್ಲಿ ಭಾಷಿಕ ವ್ಯತ್ಯಾಸವನ್ನು ಕಾಣಬಹುದಾಗಿದೆ. ಜೊತೆಗೆ ಭಾಷಾ ಬಳಕೆಯಲ್ಲೂ ಸಹ ತಾರತಮ್ಯದ ಛಾಯೆಯನ್ನು ಕಾಣಬಹುದು. ಸಮಾಜದಲ್ಲಿ ಗಂಡಿಗಿರಬಹುದಾದ ಸ್ವಾತಂತ್ರ ಹೆಣ್ಣಿಗಿರುವುದಿಲ್ಲ. ಹಲವು ಹಬ್ಬಹರಿದಿನಗಳಲ್ಲಿ ಶುಭಸಮಾರಂಭಗಳಲ್ಲಿ ಹೆಣ್ಣಿಗೆ ನಿಷೇಧ ನಿಯಮಗಳಿರುತ್ತವೆ. ಹಾಗೆಯೇ ಭಾಷೆಯ ಬಳಕೆಯ ಸಂದರ್ಭದಲ್ಲಿಯೂ ನಿಷೇಧಗಳಿವೆ. ಈ ಹಿನ್ನೆಲೆಯಲ್ಲಿ ಹರಪನಹಳ್ಳಿ ಭೀಮವ್ವನವರು ಕೃತಿಗಳಲ್ಲಿರುವ ಸಮಾಜೋ ಭಾಷಿಕ ಅಂಶಗಳನ್ನು ಸಮಾಜ ಸಂಸ್ಕೃತಿಗಳ ಮೂಲಕ ವಿವೇಚಿಸುವ ಕೆಲಸವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಇದರಲ್ಲಿ ಮುಖ್ಯವಾಗಿ ಹಾಕಿಕೊಂಡ ಅಂಶಗಳು ಹೀಗಿವೆ.

[illegible]

೧. ಗಾದೆಗಳು

೨. ನುಡಿಗಟ್ಟುಗಳು

೩. ಸಂಬಂಧವಾಚಿಗಳು

೪. ಬೈಯ್ಗುಳುಗಳು

೫. ಅನ್ಯದೇಶಿಯ ಪದಗಳ ಬಳಕೆ

೬. ಉಡುಗೆ ತೊಡುಗೆಗಳು

೮. ಆಹಾರದ ಬಗೆಗಳು

ಈ ಅಂಶಗಳ ಮೂಲಕ ಸಂಶೋಧನೆಯ ಕೇಂದ್ರಬಿಂದುವಾಗಿರುವ ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಭಾಷಾ ವೈಶಿಷ್ಟ್ಯವನ್ನು ತಿಳಿಯುವುದಾಗಿದೆ. ಆ ಮೂಲಕ ಸಮಾಜವೊಂದರ ಸಮುದಾಯದ ಗುಣಲಕ್ಷಣಗಳನ್ನು ತಿಳಿಯಬಹುದಾಗಿದೆ. ಅದರಲ್ಲೂ ಮುಖ್ಯವಾಗಿ ವೈದಿಕ ಮನೆತನದ ಹೆಣ್ಣು ಮಗಳೊರ್ವಳು ಭಾಷೆಯನ್ನು ಬಳಸುವ ಕ್ರಮ ಹೇಗೆ? ಹಾಗೆ ಬಳಕೆಗೊಂಡ ಭಾಷೆಯಲ್ಲಿ ವ್ಯತ್ಯಾಸವೇನು? ಪುರುಷ ಪಂಡಿತರ ರಚನೆಗಿಂತ ಇವರ ರಚನೆಯು ಯಾವ ರೀತಿಯ ಭಿನ್ನತೆ ಹೊಂದಿದೆ. ಭಾಷೆ ಹೇಗೆ ಮೇಲಿನ ಅಂಶಗಳಲ್ಲಿ ಅಡಕಗೊಂಡಿದೆ ಮತ್ತು ಯಾವ ಬಗೆಯ 'ಅರ್ಥ'ವನ್ನು ಒಳಗೊಂಡಿದೆ ಎಂಬುದನ್ನು ಚರ್ಚಿಸಲಾಗಿದೆ.

ಗಾದೆಗಳು

ಗಾದೆ ಆರಂಭವಾದ ಕಾಲವನ್ನು ಖಚಿತವಾಗಿ ಗುರುತಿಸಲು ಸಾಧ್ಯವಿಲ್ಲ. ಅವುಗಳು ಇಂದು ನಿನ್ನೆಯದಿನದಂದು ಹುಟ್ಟಿದಂಥವುಗಳಲ್ಲ. ಕಾಲದಿಂದ ಕಾಲಕ್ಕೆ ಪರಂಪರಾಗತವಾಗಿ ಜ್ಞಾನದ ಚುಟುಕುಗಳಾಗಿ ಹರಿದು ಬಂದಿವೆ. ಪ್ರಪಂಚದ ಎಲ್ಲ ಕಡೆ ಮತ್ತು ಎಲ್ಲಾ ಜನವರ್ಗಗಳಲ್ಲಿಯೂ ಗಾದೆ ಪ್ರಚಲಿತವಾಗಿದೆ. ನಿತ್ಯದ ಭಾಷೆಯಂತಯೇ ಸಹಜವಾಗಿ ಅನಿವಾರ್ಯ ಎಂಬಂತೆ ಗಾದೆ ಜನಜೀವನದೊಡನೆ ಮುಕ್ತವಾಗಿ ಬೆಳೆದುಬಂದಿದೆ. ದಿನವಹಿ ಜೀವನದಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ ಅವಶ್ಯಕತೆಗಳಿಗನುಗುಣವಾಗಿ ಗಾದೆಗಳು ಪ್ರಯೋಗವಾಗುತ್ತಿರುತ್ತವೆ. ಗಾದೆಗಳಿಲ್ಲದ ಭಾಷೆಗಳೇ ಇಲ್ಲ. ಸಂಸ್ಕೃತ ಭಾಷೆಯಲ್ಲಿ 'ಲೋಕೋಕ್ತಿ', 'ಸಾಮತಿ', 'ಸಾರೋಕ್ತಿ' ಎಂಬಿತ್ಯಾದಿ ಪದಗಳಿವೆ. ಮರಾಠಿಯಲ್ಲಿ 'ಅಹಣಾ' ಬಂಗಾಳಿಯಲ್ಲಿ 'ಪ್ರವಾದ' ಹಿಂದಿಯಲ್ಲಿ 'ಕಹಾವತ್', ಗುಜರಾತಿಯಲ್ಲಿ 'ಲುಖಾಣಿ', 'ತಮಿಳಿನಲ್ಲಿ', 'ಪೆಳಮೊಳ', ಮಳೆಯಾಳಾನಲಿ 'ಪಳಂಚೋತ್' ತೆಲುಗಿನಲಿ 'ನಾನುಡಿ' ಕೊಡವದಲ್ಲಿ 'ಗಾದಿ' ತುಳುವಿನಲ್ಲಿ 'ಗಾದೆ'. ಇಂಗ್ಲೀಷ್‌ನಲ್ಲಿ proverb ಎಂಬ ಪದವಿದ್ದು ಅದು ಲ್ಯಾಟಿನ ಪದ paromia, ಇದಕ್ಕೆ ಜನರೆದರು ಅಥವಾ ಬೀದಿಯಲ್ಲಿ ಉದ್ಗರಿಸಿದ ಮಾತು ಎಂಬರ್ಥವಿದೆ. ಗಾದೆಗಳು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿವೆ. ಅವು ಯಾವಾಗ, ಹೇಗೆ ಹುಟ್ಟಿಕೊಂಡವೆಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ.

ಗಾದೆಯ ಲಕ್ಷಣವನ್ನು ಕುರಿತು ಅನೇಕ ವಿದ್ವಾಂಸರು ಅನೇಕ ವಾದಗಳನ್ನು ಮಂಡಿಸಿದ್ದಾರೆ. "ಗಾದೆ ಅತ್ಯಂತ ವಿಶಿಷ್ಟವೂ ಪರಂಪರಾಗತವಾದ ಒಂದು ಸಾಹಿತ್ಯ ರೂಪ. ಅದು ಜನಪದ ಜೀವನದ ಎಲ್ಲ

ಮಜಲುಗಳಲ್ಲಿಯೂ ಹಾಸುಹೊಕ್ಕಾಗಿದ್ದು ದೈನಂದಿನ ಮಾತು ಕತೆಗಳಲ್ಲಿ ವಾದ ವಿವಾದಗಳಲ್ಲಿ ಸಭೆ ಸಮಾರಂಭಗಳಲ್ಲಿ ಮಾತಿನ ಜೊತೆಗೆ ಅಯಾಚಿತವಾಗಿ ಸಮೃದ್ಧವಾಗಿ ಹರಿದು ಬರುವಂಥದು. ರಾಜಕೀಯ ಸಾಮಾಜಿಕ, ಧಾರ್ಮಿಕ ಸಂಸ್ಥೆಗಳ ಮೂಲಭೂತ ತತ್ವಗಳು, ಸಾಮಾಜಿಕ ವ್ಯವಸ್ಥೆಯ ಕೌಟುಂಬಿಕ ಪದ್ಧತಿಯು ನೀತಿ ನಿಯಮಗಳು ಒಟ್ಟಿನಲ್ಲಿ ಜನಪದರು ನಂಬಿಕೊಂಡ ಎಲ್ಲ ಜೀವನ ಮೌಲ್ಯಗಳು ಅವುಗಳಲ್ಲಿ ಕೆನೆಗಟ್ಟಿಕೊಂಡಿವೆ.”[೮]

ಚಿದಾನಂದ ಮೂರ್ತಿಯವರ ಪ್ರಕಾರ “ಗಾದೆಗಳು ವಿನೋದ ಮತ್ತು ವಿವೇಕಗಳೆರಡರ ಸಂಗಮಸ್ಥಾನ... ಗಾದೆಗಳ ಮೂಲದ್ರವ್ಯ ಅನುಭವ ಮತ್ತು ಅವುಗಳ ಉಗಮ ಜನ ಸಾಮಾನ್ಯರಲ್ಲಿ ಅನೇಕರ ಅನಿಸಿಕೆ ಅಥವಾ ಆಲೋಚನೆ ಅಥವಾ ಅನುಭವಕ್ಕೆ ಯಾವನೋ ಒಬ್ಬ ಮೊನಚಾದ ಮಾತಿನ ರೂಪಕೊಡುತ್ತಾನೆ. ಅವು ಎಲ್ಲರಿಗೆ ಸಮ್ಮತವಾದ ಸಂಗತಿಗಳನ್ನು ಹೇಳುತ್ತಾನೆ... ಗಾದೆ ಹಳೆಯದಾದರೂ ಎಂದೆಂದಿಗೂ ಚಿರಯೌವ್ವನವುಳ್ಳ ಸಮಕಾಲೀನ ಮೌಲ್ಯವುಳ್ಳ ಉಕ್ತಿ.”[೯] ಗಾದೆಯು ಪರಂಪರಾಗತವಾದ ಮಾತು ಎಂಬುದನ್ನು, ಅದು ಅನುಭವ ಜನ್ಯ ಎಂಬುದನ್ನು ಬಹುತೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಅಲ್ಲದೆ ಗಾದೆಯು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಮಾತುಕತೆಗೆ ಸಹಾಯಕವಾಗಿ ಬಳಕೆಯಾಗುತ್ತದೆ.

ಗಾದೆಗಳಲ್ಲಿ ಉಪಮೆ, ವಿರೋಧಭಾಸ, ಅತ್ಯುಕ್ತಿ, ಮೊದಲಾದ ಅಲಂಕಾರಗಳು ಪ್ರಾಸ, ಅನುಪ್ರಾಸ, ಪುನರಾವರ್ತನೆ, ಸಮತೂಕ ಮುಂತಾದ ವಿಶಿಷ್ಟ ಗುಣಗಳು ಅಡಕವಾಗಿರುತ್ತವೆ. ಗಾದೆಗಳು ಸಂಕ್ಷಿಪ್ತವಾಗಿ ವಿವೇಕ ಪೂರ್ಣವಾಗಿ ಪ್ರಾಸಬದ್ಧವಾಗಿಯೂ ಇರುತ್ತವೆ. ಇಂಥ ಗುಣಗಳೇ ಗಾದೆಯ ಹೊರ ರೂಪದ ಲಕ್ಷಣಗಳಾವೆ. ಗಾದೆಗಳಲ್ಲೂ ಅನೇಕ ಬಗೆಯ ಪ್ರಕಾರಗಳನ್ನು ಕಾಣಬಹುದು. ಹೋಲಿಕೆ ರೂಪದ ಗಾದೆಗಳು, ವಾಸ್ತವದ ಘಟನೆಯನ್ನು ಆಧಾರಿಸಿದ ಗಾದೆಗಳು, ಕುಲ, ವಂಶವನ್ನಾಧರಿಸಿದ ಗಾದೆಗಳು ಹೀಗೆ ಅನೇಕ ರೀತಿಯ ಗಾದೆಗಳು ಪ್ರಚಲಿತದಲ್ಲಿವೆ. ಹೋಲಿಕೆ ರೂಪದ ಗಾದೆಗಳಲ್ಲಿ ವಿಷಯವೊಂದನ್ನು ಹೇಳುವಾಗ ಹಲವು ವಸ್ತುಗಳು, ಪ್ರಾಣಿಗಳು ಹೋಲಿಕೆಯಾಗಿ ಬರುತ್ತವೆ. ಹಾಗೆಯೇ ವಾಸ್ತವದ ಘಟನೆಗಳನ್ನು ಹೇಳುವ ಗಾದೆಗಳಲ್ಲಿ ಹೋಲಿಕೆ ರೂಪದ ವಸ್ತುಗಳಾವು ಬರುವುದಿಲ್ಲ. ಬದಲು ಸರಳವಾಗಿ, ನೇರವಾಗಿ ಇರುತ್ತವೆ. ನಿಂದಾತ್ಮಕ ಗಾದೆಗಳಲ್ಲಿ ವ್ಯಕ್ತಿಯ ಕುಲದ ಕುರಿತು, ಕಸುಬಿನ ಕುರಿತು ಒಟ್ಟಾರೆಯಾಗಿ ವ್ಯಕ್ತಿಯ ಪರಿಸರದ ಕುರಿತು ಗಾದೆಗಳು ಪ್ರಯೋಗವಾಗುತ್ತವೆ.

ಗಾದೆಗಳು ಸಮಾಜದಲ್ಲಿ ಹಲವು ಬಗೆಯ ಕಾರ್ಯಗಳನ್ನು ನಿರ್ವಹಿಸುತ್ತವೆ. ಮುಖ್ಯವಾಗಿ ಅಕ್ಷರಸ್ಥ ಮತ್ತು ಅನಕ್ಷರಸ್ಥ ಸಮಾಜದಲ್ಲಿ ತಿಳುವಳಿಕೆ ನೀಡುವ ಕೆಲಸವನ್ನು ಮಾಡುತ್ತಿವೆ. ಹಾಗೆಯೇ ಹಿಂದಿನ ತಿಳುವಳಿಕೆಯ ಅನುಭವ ಜ್ಞಾನವನ್ನು ಹಂಚಲು ಸಹಾಯಕವಾಗಿದೆ. ಸಂಭಾಷಣೆಯ ಮಧ್ಯೆ ಗಾದೆಯನ್ನು ಬಳಸುವುದು ಆಡುಗನ ಜಾಣ್ಮೆಯನ್ನು ತಿಳಿಸುತ್ತದೆ. ಗಾದೆಗಳನ್ನು ವಿಷಯದ ಪೂರಕಕ್ಕೆ ಅನುಗುಣವಾಗಿ ಬಳಸಿಕೊಳ್ಳುವುದರಿಂದ ಅನಾವಶ್ಯಕ ಮಾತಿನ ಸಾಲುಗಳು ಕಡಿಮೆಗೊಳ್ಳುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಗಲಾರದು ಎಂಬ ಗಾದೆಯೇ ಗಾದೆಯ ಮಹತ್ವವನ್ನು ಹೇಳುತ್ತದೆ. ಹೀಗೆ ಗಾದೆಗಳು ವ್ಯಕ್ತಿಯ ಮಹತ್ವವನ್ನು. ಸಂಕುಚಿತ ಮನೋಭಾವವನ್ನು ತಿಳಿಸುತ್ತವೆ. ಹಾಗೆಯೆ ಕುಲದ

ಮಹತ್ವ, ಕುಲ ಕಸುಬು, ದಾರಿದ್ರ್ಯ ಚಿತ್ರಣ, ಯುಗಧರ್ಮಪ್ರಜ್ಞೆ, ದುರ್ಬಲರ ಮತ್ತು ವಿಧವೆಯರ ಗೋಳಿನ ಬಾಳು, ವೇಶ್ಯೆಯರ ಜೀವನ ಮುಂತಾದ ಹತ್ತು ಹಲವು ಸಂಗತಿಗಳ ಕುರಿತು ಇರುವ ಗಾದೆಗಳು ಸಮಾಜವನ್ನು ತಿಳಿಯಲು ಸಹಾಯಕವಾಗಿವೆ.

ಗಾದೆಗಳು ಸಮಷ್ಠಿಯಾಗಿ ಸಮಾಜವನ್ನು ಪರಿಚಯಿಸುವಾಗೆ ಸಮಾಜದ ಸಮೂಹವೊಂದರ ಕುರಿತಂತೆ ಇರುವ ಅನೇಕ ಗಾದೆಗಳು ಆ ಸಮೂಹ ಸಂಸ್ಕೃತಿಯನ್ನು ತಿಳಿಸುತ್ತವೆ. ಹಾಗೆ ಸಮೂಹವೊಂದರಲ್ಲಿ ಹುಟ್ಟುವ ಅಥವಾ ಜನಿಸುವ ಗಾದೆಗಳು ಸಮೂಹ ಸಂಸ್ಕೃತಿಯ ಪರಿಸರದ ಹಿನ್ನೆಲೆಯಲ್ಲಿಯೇ ರಚನೆಗೊಂಡಿವೆ. ಮಂಗಳಾರತಿ ತೆಗೆದುಕೊಂಡರೆ ಉಷ್ಣ ತೀರ್ಥ ತೆಗೆದುಕೊಂಡರೆ ಶೀತ ಅನ್ನುವಂಥ ಗಾದೆ ಬಳಕೆಯಾದರೆ ಇದು ಆ ಸಮಾಜದ ಆಚರಣೆಯ ಒಂದಂಶವನ್ನು ಹೇಳುತ್ತದೆ. ಈ ಮೇಲಿನ ಗಾದೆಯು ಹೆಚ್ಚಾಗಿ ವೈದಿಕ ಮನೆತನದವರ ಪರಿಸರದಲ್ಲಿ ಬಳಕೆಯಾಗುತ್ತಿರುತ್ತದೆ. ಅದೇ ರೀತಿಯಲ್ಲಿ ಅವರ ಮಾತುಗಳಲ್ಲಿ ಆಪೋಶನ ತಗಂತು, ಮಂಗಳ ಹಾಡಿದ, ನಾಂದಿಹಾಡಿದ, ನೀರಿನಲ್ಲಿ ಹೋಮ ಮಾಡಿದ ಹಾಗಾಯಿತು, ಮಡಿ ಮೈಲಿಗೆ ಹೀಗೆ ಆಯಾ ಸಂಸ್ಕೃತಿಗೆ ಸಂಬಂಧಿಸಿದ ಪದಗಳು ಬಳಕೆಯಾಗುವುದನ್ನು ಕಾಣಬಹುದು.

ಪ್ರಸ್ತುತ ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳಲ್ಲಿ ಸಾಮಾಜಿಕ ಚಟುವಟಿಕೆಗಳು ಮತ್ತು ಅವರ ದೈನಂದಿನ ಜೀವನ, ಅದರಲ್ಲೂ ಮುಖ್ಯವಾಗಿ ಅಧ್ಯಾತ್ಮ ಅಥವಾ ಅಲೌಕಿದೆಡೆಗೆ ಇದ್ದುದರಿಂದ ತೀರ ಸರಳವಾದ ಮತ್ತು ಸಾಧುವಾದ ಭಾಷಿಕ ಪ್ರಯೋಗಗಳಿರುವುದನ್ನು ಕಾಣಬಹುದು. ಇಲ್ಲಿ ಕಂಡು ಬರುವ ಕೆಲವು ಗಾದೆಗಳ ಸ್ವರೂಪ ಕುರಿತಂತೆ ಹೇಳುವುದಾದರೆ ಹೋಲಿಕೆ ರೂಪದ ಗಾದೆಗಳೇ ಅಧಿಕವಾಗಿವೆ.

"ಕರಗಸದಿಂದಲಿ ಕೊರೆದುಪ್ಪು ಸಾಸಿವೆ

ಅರೆದ್ಹಚ್ಚಿಂದಂಥ ಮಾತು"

ಕೀರ್ತನೆಯೊಂದರಲ್ಲಿ ಈ ಗಾದೆಯ ಸಾಲುಗಳು ಬರುತ್ತವೆ. ಈ ಗಾದೆಯು ಹೋಲಿಕೆ ರೂಪದ ಗಾದೆಯಾಗಿದೆ. ಮಾತಿನ ಹರಿತ, ಪ್ರಭಾವವನ್ನು ಹೇಳುವ ಸಲುವಾಗಿಯೇ ಬಳಕೆಯಾಗಿದೆ. ಇದರ ಹಿನ್ನಲೆಯಿಷ್ಟೇ. ಅಕ್ಕ ತಂಗಿಯರು ಇಬ್ಬರು ಬಹುದಿನದ ಮೇಲೆ ಭೇಟಿಯಾಗುತ್ತಾರೆ. ಅಕ್ಕ ಸಿರಿವಂತಿಕೆಯಿಂದ ಮೈ ಮರೆತು ದೇವರ ಕೃಪೆಗೆ ಪಾತ್ರಳಾಗದೆ ಬಡತನಕ್ಕೆ ಒಳಗಾಗುತ್ತಾಳೆ. ತಂಗಿ ಚಾಚೂ ತಪ್ಪದೇ ದೇವರ ಸೇವೆಯನ್ನು ಭಕ್ತಿಯಿಂದ ಮಾಡಿ ಸುಖ ಸಂತೃಪ್ತ ಜೀವನದಿಂದ ಇರುತ್ತಾಳೆ. ಒಂದು ಸಾರಿ ಅಕ್ಕನು ತಂಗಿಯ ಮನೆಗೆ ಬಂದಾಗ ಶ್ರಾವಣ ಶುಕ್ರವಾರದ ಹಬ್ಬವಿರುತ್ತದೆ. ಮೊದಲನೆಯ ದಿನದ ಊಟದಲ್ಲಿ ಹೋಳಿಗೆ, ಹೊಸ ಬೆಣ್ಣೆಯಿಂದ ಕಾಸಿದ ತುಪ್ಪ, ಹಾಲು ಶ್ಯಾವಿಗೆ ಹೀಗೆ ಮೃಷ್ಟಾನ್ನ ಭೋಜನದ ಆತಿಥ್ಯ ನಡೆಯುತ್ತದೆ. ಶುಕ್ರವಾರದ ಮರುದಿನ ವಾರವಾದ ಶನಿವಾರದಂದು ತಂಗಿ ಬೇಗನೆ ಎಂದ್ದು ಎಂದಿನ ಅಡಿಗೆಯ ಪಟ್ಟಿಯನ್ನು ಸೊಸೆಯರಿಗೆ...

ಬಿಳಿಜೋಳ ಕುಟ್ಟಿ ಬೀಸಿದೆ ನೀವು

ಹುಳಿನುಚ್ಚು ಮಾಡುವೆ ತುಳಿಯ ಕಟ್ಟಿಂಬಲಿ

ಎಳೆಸೊಪ್ಪಿನ್ನಿಂಡಿ ಪಲ್ಯವನ್ನು

ತಿಳಿಯಾದ ಒಳ್ಳೆಣ್ಣೆ ತರಿಸಬೇಕ್ಹಿಟ್ಟಿನ

ಕಡುವನು ಮಾಡಬೇಕುತ

ಹೀಗೆ ಅಜ್ಞೆ ಕೊಡುವಾಗ ಅಕ್ಕ ಹುಳಿನುಚ್ಚು, ಹಿಟ್ಟಿನ ಕಡುಬು ಪದಾರ್ಥಗಳನ್ನು ಕೇಳಿ ಬಹುಷಃ ನಾವು ಬಂದುದಕ್ಕಾಗಿ ಈ ಬಗೆಯ ಅಡಿಗೆಯನ್ನು ಮಾಡುತ್ತಿದ್ದಾರೆಂದು ತಿಳಿದು ಸಂಕಟ ಪಡುತ್ತಾ ಮೇಲಿನ ಗಾದೆಯನ್ನು ಉದ್ಗರಿಸುತ್ತಾಳೆ. ಮೊದಲೇ ಕಡುಬಡತನದಿಂದ ಬಳಲುತ್ತಿದ್ದಾಳೆ. ಕಡುಬಡತನ ಬೇಗೆ ತಡೆಯಲಾರದೆ ತಂಗಿಯ ಮನೆಗೆ ಬಂದರೆ ಬಡತನದ ಊಟವನ್ನೇ ಹಾಕುತ್ತಿದ್ದಾಳಲ್ಲ ಎಂದು ದುಃಖಿತಗೊಳ್ಳುತ್ತಾಳೆ. ಹಾಗೆಯೇ ಮುಂದುವರೆದು ಇನ್ನೊಂದು ಗಾದೆಯ ಮಾತನ್ನು ಹೇಳುತ್ತಾಳೆ.

ಜನರ ಮನೆಯಲಪಹಾಸ್ಯವಾಗೋದಕಿಂತ

ವನವಾಸಗಳು ಲೇಸು

ಬಡತನ ಬಂದಿದೆಯೆಂದು ತೆರಳಿದ್ದ ಅಕ್ಕನಿಗೆ ಅವಮಾನವಾದಂತಾಯಿತು. ಬೇರೆಯವರ ಮನೆಯಲ್ಲಿ ಉಂಡು, ತೇಗಿ, ಅಪಹಾಸ್ಯಕ್ಕೆ ಒಳಗಾಗುವುದಕ್ಕಿಂತ ಕಾಡಿನಲ್ಲಿರುವುದೇ ಒಳ್ಳೆಯದು ಎಂದುಕೊಂಡು ತಂಗಿಯ ಮನೆಯಿಂದ ಹೊರಟೇ ಬಿಡುತ್ತಾಳೆ. ಈ ಗಾದೆಯು ವಾಸ್ತವದ ಘಟನೆಯನ್ನು ವಿವರಿಸುತ್ತದೆ. ಸಮಾಜದಲ್ಲಿ ಸಂಬಂಧದ ಭಾವನೆಗಳು ಒಂದು ಹಂತದ ತನಕ ಮಾತ್ರ ನೋಡಲು ಚೆನ್ನಾಗಿರುತ್ತದೆ. ಅತಿಯಾದಾಗ ಅಪಹಾಸ್ಯವೇ ಎದುರುರಾಗುತ್ತದೆ ಎಂಬುದನ್ನು ಈ ಗಾದೆಯ ಮೂಲಕ ತಿಳಿಯಬಹುದು.

ಖಗರಾಜನಲಿ ನೊಣವು ಬಂದು ಸರಿ

ಬೀಗತನ ಮಾಡೇನೆಂಬೋದು ಚಿತವೆ

ಹಾಗೆಯೆ ಮುಂದುವರಿದು ದೇಹಕ್ಕನು ತಾನು ಬಡತನದೊಂದಿಗೆಬಂದದ್ದು ತಪ್ಪಾಯಿತೆಂದು ದುಃಖಿಸುತ್ತಾ ಬಡವರು ಸಿರಿವಂತರ ಜೊತೆಗೆ ಬೀಗತನ ಅಥವಾ ಸಮಾನರಾಗಿ ಬೆರೆಯಬಹುದೆ? ಎಂದು ಚಿಂತಿಸುತ್ತಾಳೆ. ಇದು ಸಹ ಹೋಲಿಕೆ ರೂಪದ ಗಾದೆಯಾಗಿದೆ. ಸಮಾಜದಲ್ಲಿ ಗರುಡನ ಸ್ಥಾನ ಶ್ರೇಷ್ಠವಾದದ್ದು. ಯಾಕೆಂದರೆ ಅದು ವಿಷ್ಣುವಿನ ವಾಹನ. ನೊಣದ ಸ್ಥಾನ ಕನಿಷ್ಠವಾದದ್ದು ಮತ್ತು ಹೀನಾಯವಾದದ್ದು. ಕೀರ್ತನೆಯ ಹಿನ್ನೆಲೆಯಲ್ಲಿ ಗರುಡ ಎಂದ ಕೂಡಲೇ ಶ್ರೇಷ್ಠ ಎಂಬ ಭಾವ ತಕ್ಷಣ ಹೊಳೆಯುತ್ತದೆ. ಹೋಲಿಕೆಗೆ ಒಳಪಟ್ಟ ವಸ್ತುಗಳು ಒಂದಲ್ಲ ಒಂದು ಬಗೆಯಲ್ಲಿ ಅರ್ಥವನ್ನು ಸೂಚಿಸುತ್ತಿರುತ್ತವೆ.

ಮಕ್ಕಳು ಮಾಡೋ ಮಹಾತಪ್ಪು

ಹೆತ್ತ ಮಾತೆಯರೆಣಿಸುವರೆ

ಮಕ್ಕಳು ಮಾಡುವ ತಪ್ಪುಗಳನ್ನು ತಂದೆ ತಾಯಿಯರು ಹೇಗೆ ಕ್ಷಮಿಸುವರೋ ಹಾಗೆಯೇ ಭಗವಂತನು ಸಹ ಭಕ್ತರು ಮಾಡುವ ತಪ್ಪುಗಳನ್ನು ಮನ್ನಿಸುತ್ತಾನೆ ಎಂಬ ಅರ್ಥದೊಂದಿಗೆ ಕೀರ್ತನೆಯಲ್ಲಿ ಮೇಲಿನ ಗಾದೆಯು ಮೂಡಿ ಬಂದಿದೆ.

[illegible]

ಮಂಡೆಬೋಳಕರಿಗೆ ಹೆಂಡಿರಸುಖವೆ

ಈ ಗಾದೆಯು ವಾಸ್ತದ ಸಂಗತಿಯನ್ನು ಹೇಳುತ್ತದೆ. ಮಂಡೆಬೋಳಕರು ಎಂದರೆ ಸನ್ಯಾಸಿಗಳು ಅಥವಾ ಯತಿಗಳು ಎಂದರ್ಥ. ಕೀರ್ತನೆಯಲ್ಲಿ ಅರ್ಜುನನು ಸುಭದ್ರೆಯನ್ನು ಮದುವೆಯಾಗುವ ಸಂದರ್ಭದಲ್ಲಿ ಸನ್ಯಾಸಿ ವೇಷವನ್ನು ಧರಿಸಿ ಬರುತ್ತಾನೆ. ಅರ್ಜುನನೇ ಸ್ವಗತದ ರೀತಿಯಲ್ಲಿ ಈ ಗಾದೆಯನ್ನು ಹೇಳಿಕೊಳ್ಳುತ್ತಾನೆ. ಈ ಮೂಲಕ ಸಮಾಜದಲ್ಲಿ ಯತಿಗಳ ಸ್ಥಾನ ಮಾನವೇನು, ಅವರ ಸ್ಥಿತಿಗತಿಗಳೇನು ಎಂಬುದನ್ನು ತಿಳಿಯಬಹುದು.

"ಬಂಗಾರ ಕಳೆದುಕೊಂಡು ಮಂಗನಂತಾಗು"

ಗೋಪಿಯರು ಜಲಕ್ರೀಡೆಯನ್ನು ಆಡುವ ಸಂದರ್ಭದಲ್ಲಿ ಶ್ರೀಕೃಷ್ಣನ ಲೀಲೆಯಿಂದ ಅವರ ಬಟ್ಟೆಗಳು ಮಾಯವಾಗುತ್ತವೆ. ಜಲಕ್ರೀಡೆಯನ್ನು ಮುಗಿಸಿಕೊಂಡು ಬಂದ ಗೋಪಿಯರು ಬಟ್ಟೆಗಳು ಕಾಣದಿದ್ದಾಗ ಮೇಲಿನ ಗಾದೆಯಂತೆ ಉದ್ಗರಿಸುತ್ತಾರೆ. ವಸ್ತುವನ್ನು ಕಳೆದುಕೊಂಡ ವ್ಯಕ್ತಿಯೊರ್ವನ ಸ್ಥಿತಿಗತಿಯನ್ನು ಹೇಳುತ್ತದೆ.

ಹೀಗೆ ಭೀಮವ್ವನವರಲ್ಲಿ ಅನೇಕ ಬಗೆಯ ಗಾದೆಗಳನ್ನು ಕಾಣಬಹುದಾಗಿದೆ. ಬಳಕೆಯಾದ ಗಾದೆಗಳು ಕೀರ್ತನೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಆ ಮೂಲಕ ಸಮಾಜವನ್ನು ಅರಿಯಲು ಸಹಾಯಕವಾಗಿದೆ. ಹಾಗೆ ಬಳಕೆಯಾದ ಗಾದೆಗಳು ಹೀಗಿವೆ.

೧. **ಇರುವಗೊಂದಾನೆಯ ಉರಲು ಕಟ್ಟಿದಂತೆ**

೨. **ಬಡವನ ಮಡದಿಯ ಬಡಿವಾರ**

೩. **ಮರಕತ ಮಣಿಯ ಸರವ ಮರ್ಕಟಗೆ ಹಾಕಿದಂತೆ**

೪. **ಸುರಪತಿಗಳಿಗಿಂತ ನರಪತಿ ಅಧಿಕನೆ.**

ನುಡಿಗಟ್ಟು

ಭಾಷಾ ಬಳಕೆಯಲ್ಲಿ ಮಾತಿನ ವಿಶಿಷ್ಟ ಜೋಡಣೆಯೇ ನುಡಿಗಟ್ಟು. ನುಡಿಗಟ್ಟುಗಳು ಸಾಮಾನ್ಯ ವ್ಯಕ್ತಿಗಳಿಂದ ಮೂಡಿಬರುತ್ತವೆ. ನುಡಿಗಟ್ಟಿನ ಪದಗಳಲ್ಲಿ ಹೊರ ಅರ್ಥಕ್ಕಿಂತ ಒಳ ಅರ್ಥ ಮುಖ್ಯವಾಗಿರುತ್ತದೆ. ಹಠಾತ್ತನೆ ಪ್ರಭಾವ ಬೀರಬಹುದಾದ ಶಕ್ತಿಯನ್ನು ತುಂಬಿಕೊಂಡು ಇವು ಹೊಮ್ಮುತ್ತವೆ. ಪದಗಳ ಅಸಾಧಾರಣ ಸಂಯೋಗದಿಂದ ಅವು ಮಿಂಚಿನಂತೆ ಹೊಳೆಯುತ್ತವೆ. ಅವನ್ನೂ ಕೇಳಿದರೂ ಥಟ್ಟನೆ ಅರ್ಥಮಾಡಿಕೊಳ್ಳುವುದು ಸಾಧ್ಯ. ಅವನ್ನು ಹೇಳಿದವನಿಗೂ ಕೇಳಿದವನಿಗೂ ಸಮಾನವಾದ ಅನುಭವ ಇದ್ದಾಗ ಅವನ್ನು ಗ್ರಹಿಸುವುದು ಕಷ್ಟವಲ್ಲ. ಪ್ರತಿಯಾಗಿ ಪರಿಣಾಮ ಅಗಾಧ.

ನುಡಿಗಟ್ಟು ನಿರ್ದಿಷ್ಟ ಭಾಷೆಯೊಂದರ ವೈಶಿಷ್ಟ್ಯವಾಗಿ ಮೂಡಿಬರುತ್ತದೆ. ಒಂದು ಭಾಷೆಯಲ್ಲಿ ಬಳಕೆಯಾಗುವ ನುಡಿಗಟ್ಟುಗಳು ಇನ್ನೊಂದು ಭಾಷೆಯಲ್ಲಿ ಬಳಕೆಯಾಗುವ ನುಡಿಗಟ್ಟುಗಳಿಗೆ ಸಾಮ್ಯವಾಗಿರಬಹುದು ಇಲ್ಲವೆ ವ್ಯತ್ಯಾಸವು ಇರಬಹುದು.

[illegible]

ಕೆಲವು ನುಡಿಗಟ್ಟುಗಳು ಪ್ರಾಣಿಗಳ ಗುಣ ಸ್ವಭಾವ ಹಿನ್ನೆಲೆಯಲ್ಲಿ ಮೂಡಿ ಬಂದಿವೆ. ಈ ಸಂದರ್ಭದಲ್ಲಿ ಪ್ರಾಣಿಗಳ ಜೀವನವನ್ನು ಮನುಷ್ಯ ಜೀವನಕ್ಕೆ ಹೋಲಿಸಲಾಗುತ್ತದೆ. ನಿಷ್ಠೆಯಿಂದ ಮಾಡುವ ಅಲ್ಪ ಸೇವೆಯನ್ನು ಅಳಿಲು ಸೇವೆ ಎಂದು ಗುರುತಿಸುವುದು ಹಾಗೆಯೇ ಸುಪ್ರಸಿದ್ಧ ವ್ಯಕ್ತಿಗಳು ಮತ್ತು ಅವರ ಗುಣವಿಶೇಷಗಳಿಗೆ ಅನುಸಾರವಾಗಿ ನುಡಿಗಟ್ಟುಗಳು ಬಳಕೆಯಾಗುತ್ತವೆ. ಇನ್ನೂ ಕೆಲವು ಬಗೆಯ ನುಡಿಗಟ್ಟುಗಳು ಅರ್ಥ ಮತ್ತು ವಾಕ್ಯದ ಬಂಧದಲ್ಲಿ ಸೇರಿರುತ್ತವೆ.

ಸಂಭಾಷಣೆಯ ಮಧ್ಯೆ ಬಳಸುವ ಪದಗಳ ಶಬ್ದಾರ್ಥವು ಒಂದಿದ್ದು ಬಳಕೆಯಲ್ಲಿ ಪದವೊಂದು ಅನ್ಯಾರ್ಥವನ್ನು ಸೂಚಿಸುತ್ತಿದ್ದರೆ ಅಂತಹ ಪದ ಅಥವಾ ಶಬ್ದಗಳನ್ನು ನುಡಿಗಟ್ಟು ಎಂದು ಕರೆಯಬಹುದು. ಗಾದೆಯ ಸ್ವರೂಪ ದೀರ್ಘವಾಗಿರುತ್ತದೆ. ನುಡಿಗಟ್ಟು ಗಾತ್ರದಲ್ಲಿ ಚಿಕ್ಕದಿದ್ದು ಅರ್ಥದಲ್ಲಿ ವಿಶಾಲತೆಯನ್ನು ಪಡೆದುಕೊಂಡಿರುತ್ತದೆ. ನುಡಿಗಟ್ಟುಗಳು ಹೆಚ್ಚಾಗಿ ವಾಕ್ಯದ ಮಧ್ಯೆ ಬಳಕೆಯಾಗುವುದನ್ನು ಕಾಣಬಹುದು. ಬಿಡಿ ಬಿಡಿಯಾಗಿ ಪ್ರಯೋಗಗೊಂಡಾಗ ಅವುಗಳು ಸ್ಫುಟವಾದ ಅರ್ಥವನ್ನು ನೀಡುವುದಿಲ್ಲ. ಆದರೆ ಕ್ರಿಯಾಪದದ ಅಂತಿಮ ರೂಪವನ್ನು ಪಡೆದಾಗಲೇ ನುಡಿಗಟ್ಟು ವಿಶೇಷತೆಯನ್ನು ಪಡೆಯುತ್ತವೆ.

ಒಟ್ಟಿನಲ್ಲಿ ಒಂದು ಭಾಷೆಯ ನುಡಿಗಟ್ಟು ಅದು ತನ್ನ ಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡು ವಿಶಿಷ್ಟ ಹಾಗೂ ಶಕ್ತಿಪೂರ್ಣ ಅರ್ಥ, ಅನುಭವ, ಭಾವ, ಮುಷ್ಠಿಯನ್ನು ಹಠಾತ್ತನೆ ಮುಚ್ಚಿ ಸಿಕ್ಕಿಬಿದ್ದರು ಮಿಡತಂಭಟ್ಟರು ಎಂದು ಹೇಳುತ್ತ ಮಕ್ಕಳ ಆಟವಾಡುವುದುಂಟು. ಮುಷ್ಠಿಯೊಳಗಿನ ಮಿಡತೆ ಒಂದು ಸ್ವಾರಸ್ಯವಾದ ರಹಸ್ಯ ಮುಷ್ಠಿಯನ್ನು ಬಿಡಿಸಿ ತೆರೆದಾಗಲೇ ಅದು ಅನುಭವ ವೇದ್ಯ.

ಭೀಮವ್ವನವರು ಸಹ ತಮ್ಮ ಕೀರ್ತನೆಗಳಲ್ಲಿ ಅಲ್ಲಲ್ಲಿ ನುಡಿಗಟ್ಟುಗಳನ್ನು ಬಳಸಿದ್ದಾರೆ. ಬಳಕೆಯಾದ ನುಡಿಗಟ್ಟುಗಳು ಪಾತ್ರವೊಂದರ ಮನಸ್ಥಿತಿಯನ್ನು ತಿಳಿಸಲು ಸಹಾಯವಾಗಿವೆ. ಭೀಮವ್ವನವರಲ್ಲಿ ಬಳಕೆಯಾದ ನುಡಿಗಟ್ಟುಗಳು ಹೀಗಿವೆ.

೧. ಹಚ್ಚಿದ್ದಗಲು ಬತ್ತಿಯಂತೆ:-

ಪ್ರಕಾಶಮಾನವಾಗಿ ಹೊಳೆ; ಹದಿನಾರು ಸಾವಿರ ಮಂದಿ ಗೋಪಿಯರು ಕೃಷ್ಣನ ಕೃಪೆಯಿಂದ ಮಿಂಚುತ್ತಿದ್ದಾರೆ. ಅವರ ಮಧ್ಯೆದಲ್ಲಿ ಶ್ರೀಕೃಷ್ಣನ ಕುಳಿತ್ತಿದ್ದಾನೆ.

೨. ಮಣ್ಣು ಗೊಂಬ್ಯಂತೆ:-

ತಟಸ್ಥನಾಗಿರುವುದು; ಕೀರ್ತನೆ ಒಂದರಲ್ಲಿ ದೇವರ ಮಹಿಮೆಯನ್ನು ಕೇಳದ, ನೋಡದ ಕಿವಿ, ಕಣ್ಣುಗಳಿದ್ದು ಫಲವೇನು ಎನ್ನುವ ಸಂದರ್ಭದಲ್ಲಿ ಭೀಮವ್ವ ತನ್ನನ್ನು ತಾನು ಮಣ್ಣಿನ ಗೊಂಬೆಯಾಗಿ ಎಂದು ಹೇಳಿಕೊಂಡಿದ್ದಾಳೆ. ಸಾಮಾನ್ಯವಾಗಿ ಸಮಾಜದಲ್ಲಿ ಸುಮ್ಮನೆ ಇರುವವರನ್ನು, ತಿಳುವಳಿಕೆ ಇಲ್ಲದ ಜನರನ್ನು ಅಥವಾ ವ್ಯಕ್ತಿಯನ್ನು ಮಣ್ಣು ಗೊಂಬ್ಯಂತೆ ಎಂದು ಹೇಳುವುದನ್ನು ಕಾಣಬಹುದು.

೩. ಕಟ್ಟಿಕಣ್ಣುಗಳ ನಿಚ್ಚಣಿಕೆ:-

ತ್ರಾಸದಾಯಕವಾದ ಕೆಲಸ; ಹೆಣ್ಣುಮಗಳೊರ್ವಳ ಪ್ರಸವ ವೇದನೆಯನ್ನು ಚಿತ್ರಿಸುವಾಗ ಈ ನುಡಿಗಟ್ಟು ಪ್ರಯೋಗವಾಗಿದೆ.

೪. ಉಗಲು - ತಗಲಿನ ಮಾತು:- ಬೇಕಾಬಿಟ್ಟಿ ಮಾತು

೬. ಲಾಜಾವರದ ಗೊಂಬೆಯಂತೆ:- ಅರಳಿನ ಗೊಂಬೆ; ಪ್ರದರ್ಶನಕ್ಕಿಟ್ಟ ಗೊಂಬೆ.

೭. ಕೋತಿಯಂದದಿ ತನ್ನ ಮೂತಿ ತಗ್ಗಿಸಿ:- ಅಪಮಾನದಿಂದ ತಲೆಯನ್ನು ತಗ್ಗಿಸುವುದು.

೮. ಕಬ್ಬಿನ ಮ್ಯಾಲೆ ಜೇನಿಕ್ಕಿದಂತೆ ಸಿಹಿಗಿಂತಲೂ:-

ಸಿಹಿಯಾದದ್ದು. ಶ್ರೀಕೃಷ್ಣನನ್ನುಧೇನಿಸುವು ಎಂದರೆ ಸಂತೋಷಪದ ವಿಷಯವೇ ಸರಿ. ಕಬ್ಬು ಮೊದಲೆ ಸಿಹಿ ಪದಾರ್ಥ. ಅದರ ಮೇಲೆ ಜೇನು ಸವರಿ ತಿಂದರೆ ಇನ್ನೂ ಸಿಹಿ. ಹಾಗೆಯೇ ಆಧ್ಯಾತ್ಮದ ಜೀವನವೂ ಒಂದು ಬಗೆಯಲ್ಲಿ ಸಿಹಿಯಾದ್ದದ್ದು. ಅದರಲ್ಲಿ ವಿಶ್ವಂಧರನನ್ನು ಕುರಿತು ಚಿಂತಿಸುವುದು ಮತ್ತೊಂದು ಬಗೆಯಲ್ಲಿ ಸಿಹಿಯ ವಸ್ತುವೇ ಸರಿ.

ಒಂದು ಸಮಾಜ ಸಂಸ್ಕೃತಿಗೆ ತಕ್ಕಂತೆ ಭಾಷೆ ಬಳಕೆಯಾಗುತ್ತವೆ. ನುಡಿಗಟ್ಟುಗಳೂ ಸಹಾ ಹಾಗೆಯೇ ಆಯಾ ಸಮಾಜ ಸಂಸ್ಕೃತಿಗೆ ತಕ್ಕಂತೆ ಅನುಭವಕ್ಕೆ ತಕ್ಕಂತೆ ಬಳಕೆಯಾಗುತ್ತವೆ. ಒಂದೇ ವಸ್ತುವಿನ ಉಪಯೋಗ ಒಂದೊಂದು ಸಮಾಜದಲ್ಲಿ ಒಂದೊಂದು ರೀತಿ ಇರಬಹುದು. ಚಾಕುವಿನಿಂದ ಹಣ್ಣನ್ನು ಕತ್ತರಿಸಬಹುದು ಕೋಳಿಯನ್ನೂ ಕತ್ತರಿಸಬಹುದು. ಭಾಷಾ ಬಳಕೆಯು ಸಂಸ್ಕೃತಿಯ ವಿವರವನ್ನು ನೀಡುತ್ತದೆ. ಮೇಲಿನ ಉದಾಹರಣೆಗಳಲ್ಲಿ ಮೇಲ್ವರ್ಗದ ಸಮಾಜದಲ್ಲಿ ಬಳಕೆಯಿರುವ ಸಾಂಸ್ಕೃತಿಕ ಮಾಹಿತಿ ಇದೆ. ಕೀರ್ತನೆಗಳು ಭಕ್ತಿ, ಆರಾಧನೆ, ಮುಂತಾದ ಅಲೌಕಿಕ ಸಂದರ್ಭದಲ್ಲಿ ಮಾತ್ರ ಬಳಕೆಯಿರುವುದರಿಂದ ಇಲ್ಲಿನ ನುಡಿಗಟ್ಟುಗಳು ಆ ಸಮಾಜದ ಕ್ವಚಿತ್ತಾದ ಮಾಹಿತಿಯನ್ನು ಮಾತ್ರ ನೀಡಬಲ್ಲವು ಇಲ್ಲಿ ನೀಡುವ ಹೋಲಿಕೆಗಳೆಲ್ಲವೂ ಶಿಷ್ಟಮೂಲದ್ದೇ ಆಗಿವೆ.

ಸಂಬಂಧವಾಚಿಗಳು

ಭಾಷಾಸಮುದಾಯದಲ್ಲಿ ಭಾಷಿಕರು ವಿವಿಧ ಬಗೆಯ ಸಾಮಾಜಿಕ ಸಂಬಂಧಗಳಿಗೆ ಒಳಗಾಗಿರುತ್ತಾರೆ. ಈ ಸಂದರ್ಭದಲ್ಲಿ ಸಂಬಂಧದ ಬಂಧುತ್ವವು ಬಹುಮುಖ್ಯವಾಗಿರುತ್ತದೆ. ವ್ಯಕ್ತಿಯು ಸಮಾಜ ಜೀವಿಯಾಗಿರುವುದರಿಂದ ತನ್ನ ಸುತ್ತ ಮುತ್ತಲಿನ ಜೊತೆಗೆ ಹಲವಾರು ಸಂಬಂಧಗಳಿಂದ ಬಂಧಿತನಾಗಿದ್ದೇನೆ. ರಕ್ತ ಸಂಬಂಧಿ, ಕಳ್ಳುಬಳ್ಳಿ, ನೆಂಟರು, ಪ್ರಭು, ಆಳು, ಸ್ನೇಹ ಹೀಗೆ ಹಲವು ರೂಪಗಳಲ್ಲಿ ಮನುಷ್ಯನ ಸಮಾಜದ ಜೊತೆಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಾನೆ. ಮನೆಯ ಒಳಗಿನ ಬಂಧುತ್ವ ರಚನೆ ಒಂದು ತೆರನಾದರೆ ಮನೆಯ ಹೊರಗಿನ ಬಂಧುತ್ವದ ರಚನೆ ಇನ್ನೊಂದು ತೆರನದ್ದು. ಈ ಸಂದರ್ಭದಲ್ಲಿ ಬಳಕೆಯಾಗುವ ಬಂಧುತ್ವದ ಅಥವಾ ಸಂಬಂಧ ಸೂಚಕ ಪದಗಳು ಅಥವಾ ಭಾಷಾ ಬಳಕೆ ಬೇರೆಯಾಗಿರುತ್ತದೆ. ವ್ಯಕ್ತಿ ವ್ಯಕ್ತಿಯ ಮಧ್ಯೆ ಬಳಕೆಯಾಗುವ ಭಾಷಾ ಸೂಚಕ ಪದಗಳ ಮೂಲಕ ಸಂಬಂಧವನ್ನು ತಿಳಿಯಬಹುದು.

ಯಾರಾದರೂ ನಮಗೆ ಪರಿಚಯವಿರುವ ಅಥವಾ ಹತ್ತಿರದಲ್ಲಿರುವ ರಕ್ತ ಸಂಬಂಧಿಗಳು ಎದುರಾದಾಗ ಹಲವಾರು ಪದಗಳನ್ನು ಬಳಸುತ್ತೇವೆ. ಉದಾ:- ಚಿಕ್ಕಮ್ಮ-ಚಿಕ್ಕಪ್ಪ, ದೊಡ್ಡಮ್ಮ-ದೊಡ್ಡಪ್ಪ, ಅತ್ತೆ-ಮಾವ, ನೆಂಟರು ಅಥವಾ ಸ್ನೇಹಿತರು ಎದುರಾದಾಗ ಬಳಸುವ ಸಂಬಂಧ ಸೂಚಕ ಪದಗಳು

ಬೇರೆಯಾಗಿರುತ್ತವೆ. ಇಲ್ಲಿ ಬಳಕೆಯಾಗುವ ಪದಗಳು ವ್ಯಕ್ತಿಯೊರ್ವನು ಸಮಾಜದಲ್ಲಿ ಹೊಂದಿರಬಹುದಾದ ಬಂಧುತ್ವವನ್ನು ತಿಳಿಸುವುದಾಗಿದೆ. ಈ ಬಂಧುತ್ವವೂ ವಯಸ್ಸು, ಲಿಂಗ, ಜಾತಿ ಹಾಗೂ ಸಾಮಾಜಿಕ ವರ್ಗಗಳನ್ನು ಅವಲಂಬಿಸಿರುತ್ತದೆ.

ಸಾಮಾನ್ಯವಾಗಿ ಹಳ್ಳಿ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ವೈದಿಕೇತರ ಭಾಷಿಕರು ಶಿಷ್ಟ ರೂಪದ ಸಂಬಂಧ ಸೂಚಕ ಪದಗಳ ಬದಲು ಗ್ರಾಮ್ಯ ರೂಪದ ಸಂಬಂಧ ಸೂಚಕ ಪದಗಳನ್ನು ಬಳಸುತ್ತಾರೆ. ಉದಾ:- ಯಪ್ಪ, ಯವ್ವ, ಯಣ್ಣ, ಸಣೆವ್ವ, ಸಣೆಪ್ಪ, ಯಣ್ಣ, ಯಕ್ಕ ಈ ಬಗೆಯ ಭಾಷಾ ಬಳಕೆ ವೈದಿಕರಲ್ಲಿ ಕಂಡು ಬರುವುದಿಲ್ಲ. ಸಾಮಾನ್ಯ ಶಿಷ್ಟ ಅಥವಾ ಗ್ರಾಂಥಿಕ ರೂಪದ ಪದಗಳು ಬಳಕೆಯಾಗುತ್ತವೆ.

ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳಲ್ಲಿ ಬಳಕೆಯಾಗಿರುವ ಸಂಬಂಧ ವಾಚಿಗಳು ಹೆಚ್ಚಾಗಿ ರಕ್ತ ಸಂಬಂಧಿ ಸೂಚಕಗಳಾಗಿವೆ. ಕುಟುಂಬವೊಂದರಲ್ಲಿ ಬಳಸಬಹುದಾದ ಸಾಮಾನ್ಯ ಸಂಬಂಧವಾಚಿ ರೂಪಗಳಿವೆ. ಹಾಗೆ ಬಳಕೆಯಾದ ಸಂಬಂಧವಾಚಿಗಳು ಗ್ರಾಮ್ಯ ರೂಪದಿಂದ ಕೂಡಿರದೆ ಶಿಷ್ಟ ರೂಪದಿಂದ ಕೂಡಿವೆ.

೧. ಅಪ್ಪ
೨. ಅಳಿಯ
೩. ಮಲತಾಯಿ
೪. ಸೋದರತ್ತೆ
೫. ಅಕ್ಕತಂಗಿಯರು
೬. ಅಕ್ಕ
೭. ಸೋದರಮಾವ
೮. ಭಾವ
೯. ನೆಗಣ್ಣಿ
೧೦. ಮಾವ
೧೧. ಅತ್ತೆ
೧೨. ಪತಿ
೧೩. ಅತ್ತಿಗೆ
೧೪. ಅಣ್ಣ
೧೫. ಅಣ್ಣ-ತಮ್ಮ
೧೬. ಕಾಂತ/ಕಾಂತೆ
೧೭. ಮಡದಿ
೧೮. ಪಿತ
೧೯. ಸತಿ

ಇಲ್ಲಿ ಬರುವ ಈ ಸಂಬಂಧವಾಚಿಗಳು ರಕ್ತಸಂಬಂಧದಿಂದ ವಿವಾಹ ಸಂಬಂಧದಿಂದ ಉಂಟಾದಂತಹುವುಗಳು ಇವುಗಳ ವಿವರಗಳನ್ನು ಕೀರ್ತನೆಗಳು ದಾಖಲಿಸುತ್ತವೆ. ಆದರೆ ಚಿಕ್ಕ ಚಿಕ್ಕ ರೂಪದ ಕೀರ್ತನೆಗಳಲ್ಲಿ ಹೆಚ್ಚಾಗಿ ಕಾಣಬರುವುದಿಲ್ಲ. ಯಾಕೆಂದರೆ ಅಲ್ಲಿ ಕಥೆಯ ಬದಲು ದೇವರ ಮಹಿಮೆಯನ್ನು ಕೊಂಡಾಡುವ ಚಿತ್ರಣವಿರುತ್ತದೆ. ಉಮೆಯ ಸುತನ ಚರಣ ಕಮಲಕೆ, ಏಕದಂತಗೆ, ಗಜಮುಖ ಗಣಪಗೆ, ನಾಗಭೂಷಣ ಸುತೆಗೆ ಎರಗಿ, ಸುಭದ್ರಾ ಕಲ್ಯಾಣ ಎಂಬ ದೀರ್ಘ ಹಾಡುಗಳಲ್ಲಿ ಅತಿ ಹೆಚ್ಚಾಗಿ ಸಂಬಂಧವಾಚಿಗಳು ಬಳಕೆಯಾಗಿವೆ. ಈ ದೀರ್ಘ ಹಾಡುಗಳಲ್ಲಿ ಕಥೆ ಮುಖ್ಯವಾಗಿರುತ್ತದೆ. ಕಥೆಯ ಬೆಳವಣಿಗೆಗಾಗಿ ಮತ್ತು ಸಂವಹನಕ್ಕಾಗಿ, ಪಾತ್ರ ಪಾತ್ರಗಳ ಮಧ್ಯೆ ಸಂಭಾಷಣೆಗಾಗಿ ಸಂಬಂಧ ಸೂಚಕಗಳು ಬಳಕೆಯಾಗಿವೆ. ಕೇವಲ ಸಂದರ್ಭದಲ್ಲಿ ಸಂಬೋಧನೆಯಲ್ಲಿ ಸಂಬಂಧವಾಚಿ ರೂಪಗಳು ಬಳಕೆಯಾಗುತ್ತಿರುತ್ತವೆ.

ಬೈಗುಳುಗಳು

ಹಾಡು, ಕಥೆ, ಒಗಟು, ಒಡಪು, ಗಾದೆಗಳಂತೆ ಸಮಾಜೊಭಾಷಿಕಾಂಶದ ಇನ್ನೊಂದು ಪ್ರಕಾರ ಬೈಗುಳ. ಬೈಗುಳದ ಕುರಿತು ಲೇಖನಗಳು, ಅಧ್ಯಯನಗಳು ವಿರಳವಾಗಿ ಮೂಡಿಬಂದಿವೆ. ಬೈಗುಳದ ಅರ್ಥವ್ಯಾಪ್ತಿ ತುಂಬಾ ವಿಶಾಲವಾದದ್ದು. ಸಮಾಜದಲ್ಲಿ ಬೈಗುಳಗಳಿಗೆ ನಿಷೇಧದ ಹೇರಿಕೆಯಿದ್ದರೂ ವಿಶೇಷ ರೀತಿಯಿಂದ ಬಳಕೆಗೆ ಒಳಗಾಗುತ್ತಿವೆ. ಹಿರಿಯ ಕಿರಿಯರೆನ್ನದೆ ಲಿಂಗಭೇದವಿಲ್ಲದೆ ಸರಿಸಮವಾಗಿ ಬಳಕೆಯಲ್ಲಿದೆ ಆದರೂ ಸಮಯ, ಸಂದರ್ಭ, ಸ್ಥಿತಿ ಪರಿಸ್ಥಿತಿಗನುಗುಣವಾಗಿ ಪುರುಷರು ಮತ್ತು ಸ್ತ್ರೀಯರು ಬೈಗುಳ ಬಳಸುವುದನ್ನು ಕಾಣಬಹುದು.

ನಮಗಾಗದವರನ್ನು ಅಥವಾ ಅನ್ಯರನ್ನು ಯಾವುದೇ ಕಾರಣದಿಂದ ನಿಂದಿಸುವುದಕ್ಕಾಗಿ ಶಪಿಸುವುದಕ್ಕಾಗಿ, ಅಪಮಾನಗೊಳಿಸುವುದಕ್ಕಾಗಿ, ವ್ಯಂಗ್ಯ ಅಥವಾ ಕಟಕಿಯ ನುಡಿಗಳಿಂದ ಅವರ ಮನಸ್ಸನ್ನು ಚುಚ್ಚಿ ಘಾಸಿಗೊಳಿಸುವುದಕ್ಕಾಗಿ ಆಡುವಂಥ ಮಾತುಗಳನ್ನು ಬಯ್ಗಳವೆಂದು ಕರೆಯಬಹುದು. ಬೈಗುಳಗಳಲ್ಲೆವೂ ಒಂದೇ ರೂಪವನ್ನು ಪಡೆದುಕೊಂಡಿಲ್ಲ. ಅವುಗಳಲ್ಲಿ ಕೂಡ ಹಲವು ಮಾದರಿಯ ಬೈಗುಳಗಳು ಇವೆ. ಹಾಗೆಯೇ ವ್ಯಕ್ತಿ, ಕುಲ, ಜಾತಿ, ವರ್ಗ, ವೃತ್ತಿಗಳಿಗೆ ಸಂಬಂಧಿಸಿದ ಬೈಗುಳಗಳು ಚಾಲ್ತಿಯಲ್ಲಿವೆ. ಅಲ್ಲದೆ ವ್ಯಕ್ತಿಯೋರ್ವನನ್ನು ಕುರಿತು ಬೈಯುವ ಸಂದರ್ಭದಲ್ಲಿ ಅವನ ದೈಹಿಕ ಚಹರೆಗಳನ್ನು ಸಾಮಾಜಿಕ ಹಿನ್ನೆಲೆಯನ್ನಿಟ್ಟುಕೊಂಡು ಬೈಯುವುದನ್ನು ಕಾಣಬಹುದು.

ಡಾ.ಎಂ.ಚಿದಾನಂದ ಮೂರ್ತಿಯವರು ಬೈಗುಳಗಳನ್ನು ಶಾಬ್ದಿಕ 'ಹೊಡೆತ' ಎಂದು ನಿರ್ವಚಿಸಿದ್ದಾರೆ. ಬೈಗುಳಗಳನ್ನು ಬಳಸುವ ಉದ್ದೇಶ ವ್ಯಕ್ತಿಯ ಮಾನಸಿಕ ಉಪಶಮನ, ಸಮತೋಲನ ಮತ್ತು ಸ್ವರಕ್ಷಣೆಯ ಕುರಿತಾಗಿರುತ್ತದೆ ಎನ್ನುವುದು ಅವರ ನಿಲುವು ಆಗಿದೆ.

ದೈಹಿಕ ನೋವಿಗಿಂತ ಮಾನಸಿಕ ನೋವು ತುಂಬ ಪರಿಣಾಮಕಾರಿ. ಒಂದು ಚಿಕ್ಕ ಬೈಗುಳ ಜೀವನದುದ್ದಕ್ಕೂ ಕೊರೆಯುತ್ತಿರುತ್ತದೆ. ಮನಸ್ಸು ಅದರ ನೆನಕೆಯಿಂದ ಕ್ಷೋಭೆಗೆ ಒಳಗಾಗುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಬಾಯಿಬಿಟ್ಟೆ ಬೈಗುಳಗಳನ್ನು ಪ್ರಯೋಗಿಸಬೇಕೆಂದೇನಿಲ್ಲ. ಮನಸ್ಸಿನಲ್ಲಿಯೇ

[illegible]

[illegible]

[illegible]

ಬೈಯಬಹುದು. ಈ ರೀತಿಯ ಬೈಯುವಿಕೆಯ ಸಮಾಧಾನ ವ್ಯಕ್ತಿ ಕೈಗೊಳ್ಳಬಹುದಾದ ಎಷ್ಟೋ ಅನಾಚಾರಗಳನ್ನು ಅಥವಾ ಅಪ್ರಿಯ ಕಾರ್ಯಗಳನ್ನು ತಡೆಯಬಹುದು.

ಸಮಾಜದಲ್ಲಿ ಬೈಗುಳಕ್ಕೆ ಮಾನ್ಯತೆಯಿಲ್ಲದಿದ್ದರೂ ಮಾನ್ಯತೆ ಪಡೆದುಕೊಂಡಿದೆ. ಎಂ.ಚಿದಾನಂದ ಮೂರ್ತಿಯವರು ಬೈಗುಳದ ಮಹತ್ವವನ್ನು ಹೀಗೆ ಹೇಳಿದ್ದಾರೆ. "ಬೈಗುಳಕ್ಕೆ ಬೆಲೆ ಬರುವುದು ಅದು ಸಾಮಾಜಿಕ ಒಪ್ಪಿಗೆ ಪಡೆಯುವುದರಿಂದ ಆದ್ದರಿಂದಲೇ, ವ್ಯಕ್ತಿಗಳಿಬ್ಬರೇ ಇದ್ದಾಗ ಪರಸ್ಪರ ಬೈದಾಡಿದರೆ ಬೈಗುಳ ಅಷ್ಟು ಪ್ರಮುಖವಾಗುವುದಿಲ್ಲ. ಅಂಥ ಸಮಯದಲ್ಲಿ ಬೈಯಿಸಿಕೊಂಡ ವ್ಯಕ್ತಿ ಸುಮ್ಮನಾಗಲೂ ಸಾಧ್ಯ ಮನುಷ್ಯ ತನ್ನ ಸ್ಥಾನಮಾನಕ್ಕೆ ಸಾಮಾಜಿಕವಾಗಿ ಚ್ಯುತಿ ಬಂದದ್ದನ್ನು ಬಹಳ ಗಂಭೀರವಾಗಿ ಭಾವಿಸುತ್ತಾನೆ. ಬೈಗುಳವು ಸಾಮಾಜಿಕ ಹೊಲಸು ಅಭಿವ್ಯಕ್ತಿಯಾಗಿ ಹೊರ ಬೀಳುವುದಕ್ಕೆ ಒಂದು ಅತ್ಯಂತ ಅಗತ್ಯವಾದ ಮಾಧ್ಯಮ ಎಂದರೆ ಬೈಗುಳಕ್ಕೆ ತಿದ್ದುವಿಕೆಯು, ಮೌಲ್ಯವೂ ಇದೆ. ಸಮಾಜ ತನ್ನ ನೀತಿ ಪ್ರಜ್ಞೆಯನ್ನು ಕಾಪಾಡಿಕೊಳ್ಳುವುದರಲ್ಲಿ ಬೈಗುಳದ್ದೂ ಒಂದು ಪಾತ್ರ ಇದೆ... ಈ ದೃಷ್ಟಿಯಿಂದ ಇತರ ಶಬ್ದಗಳಂತೆಯೇ ಬೈಗುಳವೂ ಒಂದು ಮೂಲ ಭೂತವಾದ ಸಾಮಾಜಿಕ ಅಗತ್ಯವನ್ನು ಪೂರೈಸುತ್ತದೆಯೆಂದು ಹೇಳಲೂ ಸಾಧ್ಯವಾಗುತ್ತದೆ." ಡಾ.ಎಂ.ಚಿದಾನಂದ ಮೂರ್ತಿಯವರು ಹೇಳುವ ಹಾಗೆ "ಬೈಗುಳಕ್ಕೆ ತಿದ್ದುವ ಶಕ್ತಿಯ ಜೊತೆಗೆ ವ್ಯಕ್ತಿಯೋರ್ವನ ಉಪಶಮನ, ಸಮತೋಲನ ಮತ್ತು ಸ್ವರಕ್ಷಣೆಯ ಕುರಿತಾಗಿರುತ್ತದೆ"[೧೦] ಎನ್ನುವ ಮಾತನ್ನು ಸಹ ತೆಗೆದುಹಾಕಲಾಗದು. ಗಂಡ ಹೆಂಡತಿಯನ್ನು ನೇರವಾಗಿ, ತೀವ್ರವಾಗಿ ಬೈಯುವಷ್ಟು ಹೆಂಡತಿ ಗಂಡನಿಗೆ ಬೈಯುವುದಿಲ್ಲ. ಒಂದು ವೇಳೆ ಹೆಂಡತಿಯು ಗಂಡನಿಗೆ ಬೈದಾಗಲೂ ಮೃದು ಧೋರಣೆಯಿಂದ ಕೂಡಿರುತ್ತದೆ ಹೊರತು ಪ್ರತಿಭಟನಾತ್ಮಕವಾಗಿರುವುದಿಲ್ಲ.

ದಾಸ ಸಾಹಿತ್ಯದಲ್ಲಿ ವ್ಯಾಜ್ಯಸ್ತುತಿಗಳು ಅಥವಾ ನಿಂದಾಸುತ್ತಿಗಳು ಎಂಬ ಪ್ರತ್ಯೇಕ ಕೀರ್ತನೆಗಳಿವೆ. ವ್ಯಾಜ್ಯ ಎಂದರೆ ಕಲಹ, ಜಗಳ ಎಂದರ್ಥ ಜನಸಾಮಾನ್ಯರು ತಮ್ಮ ನೆರೆಹೊರೆಯವರೊಂದಿಗೆ ವ್ಯಾಜ್ಯವಾಡಿದರೆ ದಾಸರು ದೇವರೊಂದಿಗೆ ವ್ಯಾಜ್ಯವಾಡಿದ್ದಾರೆ. ಹಾಗೆ ವ್ಯಾಜ್ಯಮಾಡುವಾಗ ದೇವರನ್ನು ನಿಂದಿಸಿದ್ದಾರೆ. ಬೈಯಿದಿದ್ದಾರೆ ಹತ್ತು ಅವತಾರಗಳ ಹಿನ್ನೆಲೆಯನ್ನಿಟ್ಟುಕೊಂಡು ನಿಂದೆ ಮಾಡಿದ್ದಾರೆ. ಕೀರ್ತನ ಗಾರ್ತಿಯಲ್ಲಿ ನಿಂದಾಸ್ತುತಿಗಳು ಮೂಡಿಬಂದಿದ್ದರೂ ಸೌಮ್ಯರೂಪದ ನಿಂದೆಗಳಾಗಿವೆ. ಆದರೆ ಕೀರ್ತನಗಾರರಲ್ಲಿ ದೇವರ ಕುರಿತಾದ ನಿಂದೆ ದಟ್ಟವಾಗಿ ಮೂಡಿಬಂದಿದೆ.

ಏನು ಮೆಚ್ಚಿದಲೆ ಹೆಣ್ಣೆ ಏನು ಮರುಳಾದೆ
ನೋಟದಿ ಚೆಲುವ ನಿವನೆಂಬೆನೆ ಚಂಚಲ
ಮಾಟದಿ ಚೆಲುವ ನಿವನೆಂಬನೆ ಬೆನ್ನುಗುಪುಟು
ಗೂಟದಂಥ ಹಲ್ಲು ಮೊಳದುದ್ದ ಮೋರೆ
ಬೂಟಕತನದಿ ಬಾಯ್ದೆರೆದು ಅಂಜಿಪಗೆ

- (ಪುರಂದರದಾಸರು)

ಇನ್ನು ಕೆಲವು ಕೀರ್ತನೆಯಲ್ಲಿ ನೀತಿಬೋಧನೆಯನ್ನು ಹೇಳುವಾಗ ದಾಸರು ಬೈಗುಳವನ್ನು ಬಳಕೆಮಾಡಿದ್ದಾರೆ. ಅವು ಬುದ್ಧಿವಾದ ಹೇಳುವ ರೀತಿಯಲ್ಲಿ ಮೂಡಿಬಂದಿವೆ.

[illegible]

ಛೀ ಛೀ ಏತರ ಜನ್ಮ
ತಿಳಿಯೋ ನೀತಿ ಧರ್ಮ
ನೀತಿ ತಪ್ಪಿ ನಡೆವ ಮನುಜನ
ಬಾಯಲಿ ಬಿತ್ತೋ ಬೂಡಿ
ಪುರಾಣ ಹೇಳುವ ಪುಂಡ
ಆವ ಮದ್ಯದ ಹರವಿಯ ಕೊಂಡ
ಮುಂದುಗಾಣದೆ ಮೋಕ್ಷವ ಬೊಗಳುವ
ಬರಿಯ ಮಾತಿನ ಭಂಡ

ಬುದ್ಧಿಯನ್ನು ಹೇಳುವ ಸಂದರ್ಭದಲ್ಲಿ ಸಾಮಾನ್ಯವಾಗಿ, ಖೋಡಿ, ದುರುಳ, ಹುಚ್ಚ ಪುಂಡ, ಭಂಡ, ಕಪಟಿ, ಅಜ್ಞಾನಿ ಎಂಬ ಪದಗಳು ದಾಸ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಮೂಡಿಬಂದಿದೆ.

ಹರಪನಹಳ್ಳಿ ಭೀಮವ್ವನವರ ಕೀರ್ತನೆಯಲ್ಲಿ ಬೈಗುಳ ಪದಗಳ ಬಳಕೆ ಬಹಳ ಕಡಿಮೆ. ಹಾಗೆ ಕಡಿಮೆಯಾಗಿ ಬಳಕೆಯಾಗಿರುವುದಕ್ಕೆ ಹಲವಾರು ಕಾರಣಗಳಿವೆ. ಭೀಮವ್ವನವರು ವೈದಿಕ ಮನೆತನಕ್ಕೆ ಸೇರಿದವರಾಗಿದ್ದಾರೆ. ಅಲ್ಲದೆ ಅವರ ಸೃಜನಶೀಲತೆಯ ಮೂಲ ವಸ್ತುವೂ ಸಹ ರಾಮಾಯಣ, ಮಹಾಭಾರತ ಕಥೆಗಳ ಆಧಾರಿತವಾಗಿದೆ. ಈಗಾಗಲೇ ಗುರುತಿಸಿರುವ ದೋಷವನ್ನು ಮಾತ್ರ ಬೈಯಬಹುದಲ್ಲದೆ ಅದರ ಹೊರತಾಗಿ ಯಾವುದನ್ನು ಬೈಗುಳದ ಮೂಲಕ ಸಂಗತಿಯೊಂದನ್ನು ತರುವಂತಿಲ್ಲ ಉದಾ:- ಕೃಷ್ಣನ ಬಾಲ ಲೀಲೆಗಳನ್ನು ವರ್ಣಿಸುವಾಗ ಕಳ್ಳ, ತುಂಟ, ಜಾರ ಹೀಗೆ ಈಗಾಗಲೇ ಬಳಕೆಯಲ್ಲಿ ಇರಬಹುದಾದ ಬೈಗುಳಗಳನ್ನು ಬಳಸಬಹುದಲ್ಲದೆ ಅನ್ಯ ಬೈಗುಳ ಪದಗಳನ್ನು ಬಳಸುವಂತಿಲ್ಲ. ಆದ್ದರಿಂದ ಹರಪನಹಳ್ಳಿ ಭೀಮವ್ವನರಲ್ಲಿ ಬೈಗುಳ ಪದಗಳ ಬಳಕೆ ಗೌಣವೆನ್ನಬಹುದು.

ಹರಪನಹಳ್ಳಿ ಭೀಮವ್ವನವರಲ್ಲಿ ಬಳಕೆಯಾದ ಬೈಗುಳ ಪದಗಳು ಇಂತಿವೆ.

ಮತಿಗೇಡಿ = ಬುದ್ಧಿಯನ್ನು ಕಳೆದುಕೊಂಡವನು
ಜಾರ = ಹಲವು ಹೆಂಗಸರ ಸ್ನೇಹ ಮಾಡುವವನು
ಖಳ = ನೀಚ, ದುಷ್ಟ, ರಾಕ್ಷಸ, ದೈತ್ಯ
ದುರುಳ = ಕೆಟ್ಟವನು
ಕಡುಪಾಪಿ = ಘನಘೋರವಾದ ಪಾಪದ ಕಾರ್ಯಗಳನ್ನು ಮಾಡುವವನು

ಮೇಲೆ ಬಳಕೆಯಾದ ಬೈಗುಳಪದಗಳು ದಿನನಿತ್ಯ ಒಂದಲ್ಲ ರೀತಿಯಲ್ಲಿ ಬಳಕೆಯಾಗುತ್ತಿರುತ್ತವೆ.

'ಮತಿಗೇಡಿ' ಎಂಬ ಪದವು ಭೀಮವ್ವನವರಲ್ಲಿ ಬಳಕೆಯಾದ ಸಂದರ್ಭ ಹೀಗಿದೆ. ಜೂಜಿನಲ್ಲಿ ಧರ್ಮರಾಯನು ದನಕನಕಾದಿಗಳ ಜೊತೆಗೆ ದ್ರೌಪದಿಯನ್ನು ಪಣಕ್ಕಿಟ್ಟು ಸೋತು ಹೋಗುತ್ತವೆ. ದುರ್ಯೋಧನನ ಅಪ್ಪಣೆಯ ಮೇರಿಗೆ ದ್ರೌಪದಿಯನ್ನು ಸಭೆಗೆ ಎಳೆದುತರಲಾಗುತ್ತದೆ. ಹಾಗೆಯೇ ದ್ರೌಪದಿ ಕುರಿತು ಹೀನ ಮಾತುಗಳನ್ನು ಆಡುವ ಸಂದರ್ಭದಲ್ಲಿ ದ್ರೌಪದಿಯು ಕೌರವಾದಿಗಳಿಗೆ

[illegible]

[illegible]

[illegible]

ಬೈಯುವುದರ ಜೊತೆಗೆ ತಿಳುವಳಿಕೆಯನ್ನು ನೀಡುತ್ತಾಳೆ. ಹೀಗೆಯೇ ನಿಮ್ಮ ಪುಂಡಾಟ ಮುಂದುವರೆದರೆ ಪಾಂಡವರು ನುಚ್ಚುನೂರು ಮಾಡಿಬಿಡುತ್ತಾರೆ. ಶತ್ರುವಿನ ಅಸ್ತಿತ್ವವನ್ನು ಕಣಕಣವಾಗಿ ನಾಶ ಮಾಡಿ ಬಿಡುತ್ತೇನೆ ಎನ್ನುವ ಸಂದರ್ಭ. ಬಂದಾಗ ಈ ಪದವು ಸಾಮಾನ್ಯ ಬಳಕೆಯಾಗುತ್ತಿರುತ್ತದೆ.

ಬೈಗುಳಗಳು ಕೇವಲ ಬುದ್ಧಿಯನ್ನು ನೀಡುವ ಅಥವಾ ತಿದ್ದುವ ಕೆಲಸವನ್ನು ಮಾತ್ರ ಮಾಡದೆ ವ್ಯಕ್ತಿಯೋರ್ವನ ವ್ಯಕ್ತಿತ್ವವನ್ನು ತೋರಿಸಿ ಕೊಡುತ್ತದೆ. ಖಳ, ದುರುಳ, ಪುಂಡ, ಕ್ರೂರ, ಕಡುಪಾಪಿ ಹೀಗೆ ಅನೇಕ ಪದಗಳು ವ್ಯಕ್ತಿಯೋರ್ವನು ಕೆಟ್ಟವನೆಂದು ಸೂಚಿಸುತ್ತವೆ. ಸಮಾಜದಲ್ಲಿ ವ್ಯಕ್ತಿಯೋರ್ವನ ಮೇಲೆ ಬಳಕೆಯಾಗುವ ಬೈಗುಳ ಪದಗಳ ಮೇಲೆ ವ್ಯಕ್ತಿತ್ವವನ್ನು ಈ ಮೂಲಕ ಗುರುತಿಸಬಹುದಾಗಿದೆ. ಆದ್ದರಿಂದಲೇ ಬೈಗುಳಗಳು ನಿಷೇಧವಾಗಿವೆ. ಬಳಕೆ ಮಾಡುವವನ ಮತ್ತು ಬಳಕೆಗೆ ಒಳಗಾಗುವವನ ಸಂಸ್ಕೃತಿಯನ್ನು ತಿಳಿಯಲು ಬೈಗಳುಗಳು ಬಹು ಮುಖ್ಯವಾಗುತ್ತವೆ.

ಅನ್ಯದೇಶಿಯ ಪದಗಳ ಬಳಕೆ

ಭೀಮವ್ವ ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ಬದುಕಿದ್ದರಿಂದ ಆ ಕಾಲದಲ್ಲಿ ಕನ್ನಡ ಭಾಷೆಯನ್ನು ಪ್ರದೇಶಿಸಿದ ಉರ್ದು, ಮರಾಠಿ ಪದಗಳು ಅವರ ರಚನೆಗಳಲ್ಲಿ ಬಳಕೆಯಾಗಿವೆ. ಆದರೂ ಹರಪನಹಳ್ಳಿ ಭೀಮವ್ವನವರಲ್ಲಿ ಅನ್ಯದೇಶಿಯ ಪದಗಳು ಹೆಚ್ಚಾಗಿ ಕಾಣಿಸಿಕೊಂಡಿಲ್ಲ. ಕ್ವಚಿತ್ತಾಗಿ ಬಳಕೆಯಾಗಿವೆ.

೧. ಅನಾರಸ - ಫೈನಾಫಲ್, ಅನಾನಸ್,

೨. ಶಿಫಾರಸು - ಪ್ರಭಾವವನ್ನು ಬೀರುವುದು

೩. ಚಾರಖಾನಿ - ಪಗಡೆಯಾಟದ ಮನೆ

೪. ಜುಲ್ಮಾನೆ - ದಂಡ, ತಪ್ಪುಕಾಣಿಕೆ

೫. ಛಾಧಾರ - ಹೊದಿಕೆ

೬. ದೌಲತ್ತು - ಜಂಭ

೭. ಖರೆ - ನಿಜ

ಭೀಮವ್ವನವರು 'ಜುಲ್ಮಾನೆ' ಎಂಬ ಪದವನ್ನು 'ಜುಲುಮಾನವ' ಎಂಬ ಶಿಥಿಲರೂಪವಾಗಿ ಬಳಸಿದ್ದಾರೆ

ಉಡುಗೆ-ತೊಡುಗೆಗಳು

ಭಾರತದ ಉಡುಗೆ-ತೊಡುಗೆಗೂ ಪಾಶ್ಚಿಮಾತ್ಯರ ಉಡುಗೆ-ತೊಡುಗೆಗೂ ಬಹಳಷ್ಟು ಭಿನ್ನತೆಯಿದೆ. ಭಾರತೀಯರಲ್ಲಿಯೇ ಉಡುಗೆ-ತೊಡುಗೆಯ ಕುರಿತು ಅನೇಕ ಭಿನ್ನತೆಗಳನ್ನು ಕಾಣಬಹುದು. ಉಡುಗೆ ತೊಡುಗೆಗಳನ್ನು ಯಾವಾಗ ಖರೀದಿ ಮಾಡಬೇಕು ಯಾವಾಗ ಧರಿಸಬೇಕು ಎಂಬ ಸಾಂಪ್ರದಾಯಿಕ ನಂಬಿಕೆ ನಮ್ಮಲ್ಲಿ ವಿಶೇಷವಾಗಿ ಬೆಳೆದು ಬಂದಿದೆ. 'ಅಕ್ಷಯ ತೃತೀಯ' ದಿನದಂದು ಜನರು ಹೆಚ್ಚಾಗಿ ಚಿನ್ನ, ಬೆಳ್ಳಿಯ ಒಡವೆಗಳನ್ನು ಖರೀದಿ ಮಾಡುತ್ತಾರೆ. ಆ ದಿನದಂದು ಖರೀದಿ ಮಾಡುವುದಕ್ಕೂ ಒಂದು ಕಾರಣ

ನಂಬಿಕೆಯೂ ಇದೆ. ಆ ದಿನದಂದು ಆಭರಣವನ್ನು ಖರೀದಿ ಮಾಡುವುದರಿಂದ ವರ್ಷ ವರ್ಷವೂ ಆರ್ಥಿಕ ಸಂಪತ್ತು ವೃದ್ಧಿಯಾಗುತ್ತದೆಯಂತೆ. ಆದ್ದರಿಂದ ಆ ದಿನಂದು ಗುಲಗುಂಜಿಯ ತೂಕದಷ್ಟದರೂ ಬಂಗಾರವನ್ನು ಖರೀದಿ ಮಾಡಬೇಕು ಎಂಬ ನಂಬಿಕೆಯನ್ನು ಸಮಾಜದಲ್ಲಿ ಕಾಣಬಹುದು. ಇನ್ನೂ ಮುಂದುವರೆದು ನೋಡುವುದಾದರೆ ಖರೀದಿ ಮಾಡಿದ ಆಭರಣಗಳನ್ನು ಇಷ್ಟವಾದ ದೇವರಿಗೆ ಸಮರ್ಪಣೆ ಮಾಡಿ ಧರಿಸುವ ಕ್ರಮವಿದೆ.

ತೊಡುಗೆಯ ಕ್ರಮ ಒಂದು ಬಗೆಯಾದರೆ ಉಡುಗೆಯ ಕ್ರಮವೂ ಇನ್ನೊಂದು ಬಗೆ. ಭಾರತೀಯ ಪರಂಪರೆಯಲ್ಲಿ ಅದರಲ್ಲೂ ಮೂಖ್ಯವಾಗಿ ಮದುವೆ, ಹಬ್ಬಹರಿದಿನಗಳಲ್ಲಿ, ಹೊಸದಾಗಿ ಮದುವೆ ಆದ ಹೆಣ್ಣು ಗಂಡನ ಮನೆಗೆ ಹೋಗುವ ಸಂದರ್ಭದಲ್ಲಿ ಹೀಗೆ ಹುಟ್ಟಿನಿಂದ ಸಾಯುವವರೆಗೂ ಉಡುಗೆಯ ಇತಿಹಾಸವನ್ನು ಕಾಣಬಹುದಾಗಿದೆ. ಮದುವೆ, ಹಬ್ಬಹರಿದಿನಗಳಿಗೆ ಅರ್ಥವಿರುವಂತೆ ಉಡುಗೆಗೂ ಸಹ ಸಾಮಾಜಿಕ ಸಂಬಂಧದ ಹಿನ್ನೆಲೆಯಿದೆ.

ವೈದಿಕ ಸಂಪ್ರದಾಯದಲ್ಲಿ ಚೊಚ್ಚಲ ಅಥವ ಮೊದಲನೆಯದಾಗಿ ಗಂಡು ಮಗು ಹುಟ್ಟಿದರೆ ಹಸಿರು ಸೀರೆಯನ್ನು ಧರಿಸುವಂತಿಲ್ಲ. ಹಾಗೆಯೇ ಹಸಿರು ಬಳೆಯನ್ನು ಸಹ ತೊಡುವಂತಿಲ್ಲ. ಅದು ಅಲ್ಲದೆ ಹಾಗಲಕಾಯಿಯ ಪಲ್ಯವನ್ನು ಸಹ ತಿನ್ನುವಂತಿಲ್ಲ. ಆ ಗಂಡು ಬೆಳೆದು ದೊಡ್ಡವನಾಗಿ ಅವನ ಮದುವೆ ಆದ ನಂತರವೇ ತಾಯಿಯು ಹಸಿರು ಸೀರೆ, ಹಸಿರು ಬಳೆಯನ್ನು ಧರಿಸಬಹುದು. ಜೊತೆಗೆ ಹಾಗಲಕಾಯಿ ಪಲ್ಯವನ್ನು ತಿನ್ನಬಹುದು.

ಕಾವ್ಯ ಪ್ರಪಂಚದಲ್ಲಿ 'ಉಡುಗೆ-ತೊಡುಗೆ'ಯ ವಿಶೇಷ ಹೆಂಗಳೆಯರ ಮೂಲಕವೆ ಬಂದಿದೆ. ಉಡುಗೆ-ತೊಡುಗೆ ಅಂದರೆ ಹೆಣ್ಣು, ಹೆಣ್ಣು ಅಂದರೆ ಉಡುಗೆ ತೊಡುಗೆ ಅನುವಷ್ಟರಮಟ್ಟಿಗೆ ಅವಿನಾಭಾವ ಸಂಬಂಧದಂತೆ ಬೆಳೆದು ಬಂದಿದೆ.

ಉಡುಗೆ

ಉಡುಗೆಯ ಕುರಿತಂತೆ ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳಲ್ಲಿ ಗುರುತಿಸುವುದಾದರೆ ವಿಶೇಷವಾಗಿ ಮೂಡಿ ಬಂದಿದೆ. ಭೀಮವ್ವನವರು ಮುಖ್ಯರಾಗುವುದು ಇಂತಹ ಸಂದರ್ಭದಲ್ಲಿಯೇ. ಕಥಾ ವಸ್ತು ಪುರಾಣದ ಹಿನ್ನೆಲೆ ಪಡೆದಿದ್ದರೂ ಅದರ ಭಾವ ಹೊಸ ಬಗೆಯದು. ಕೀರ್ತನೆಯೊಂದರಲ್ಲಿ ಭೀಮವ್ವನವರು ತಮ್ಮ ಕಾಲದಲ್ಲಿದ್ದ ಹಲವಾರು ಸೀರೆಗಳ ಹೆಸರುಗಳನ್ನು ಮತ್ತು ಸೀರೆಯ ಮಹಿಮೆ, ಸೀರೆಯ ಸಂಬಂಧ ಮುಂತಾದ ಸಂಬಂಧಗಳನ್ನು ಸವಿವರವಾಗಿ ಹೇಳಿದ್ದಾರೆ. ಬಹುಷ, ಭೀಮವ್ವನವರು ಹೇಳಿರುವ ಅಥವಾ ಪ್ರಸ್ತಾಪ ಮಾಡಿರುವ ಸೀರೆಯ ಪ್ರಪಂಚವನ್ನು ದಾಸ ಸಾಹಿತ್ಯದಲ್ಲಿ ಎಲ್ಲಿಯೂ ಕಾಣಲು ಸಾಧ್ಯವಿಲ್ಲ. ಇಲ್ಲಿ ನಮಗೆ ಮುಖ್ಯವಾದ ಸಂಗತಿ ಎಂದರೆ ಹೆಣ್ಣು ಸುತ್ತಮುತ್ತಲಿನ ಜಗತ್ತನ್ನು ನೋಡುವ ಬಗೆಯನ್ನು ತಿಳಿಯಬಹುದು.

ಹಲವು ಸೀರೆಗಳು ಪ್ರಸ್ತಾಪಗೊಂಡ ಆ ಕೀರ್ತನೆಯ ಹಿನ್ನೆಲೆ ಹೀಗಿದೆ. ಗೋಕುಲದ ಗೋಪಿಯರೆಲ್ಲರೂ ಸೇರಿ ಒಂದು ದಿನ ವನ ವಿಹಾರಕ್ಕೆ ತೆರಳುತ್ತಾರೆ. ಹಾಗೇ ಹೋಗುವಾಗ ಬಣ್ಣಬಣ್ಣದ ತಮಗೆ

[illegible]

ಇಷ್ಟವೆನಿಸುವ ಸೀರೆಯನ್ನು, ಆಭರಣವನ್ನು ತೊಟ್ಟುಕೊಂಡು ಹೋಗುತ್ತಾರೆ. ಜೊತೆಗೆ ಹೊಟ್ಟೆಯ ಹಸಿವನ್ನು ನೀಗಿಸುವುದಕ್ಕೆ ಬುತ್ತಿಯನ್ನು ತೆಗೆದುಕೊಂಡು ಹೋಗುತ್ತಾರೆ. ವನದ ಸಕಲ ಸೌಂದರ್ಯವನ್ನು ಸವಿಯುತ್ತಾ, ಎಳೆಯ ಮಕ್ಕಳ ತೆರದಿ ಆಟವಾಡುತ್ತಾ ಹತ್ತಿರವಿದ್ದ ಯಮುನಾ ನದಿಯ ತಟಕ್ಕೆ ಬರುತ್ತಾರೆ. ಆಗ ಗೋಪಿಯರೆಲ್ಲರಿಗೂ ಆ ಯಮುನಾ ನದಿಯಲ್ಲಿ ಈಜಾಡುವ ಬಯಕೆಯುಂಟಾಗಿ ತೊಟ್ಟ ಬಟ್ಟೆಯನ್ನು ಮರದಡಿಯಲ್ಲಿ ಇಟ್ಟು ಸ್ನಾನಕ್ಕೆ ಇಳಿಯುತ್ತಾರೆ. ಅಲ್ಲಿಗೆ ಶ್ರೀಕೃಷ್ಣನು ಕಳ್ಳತನದಿಂದ ಬಂದು ಬಟ್ಟೆಯನ್ನು ಅಪಹರಿಸುತ್ತಾನೆ. ಗೋಪಿಯರು ನೀರಾಟವನ್ನು ಮುಗಿಸಿಕೊಂಡು ಬಟ್ಟೆಯಿಟ್ಟ ಮರದಡಿಬಂದು ನೋಡುತ್ತಾರೆ. ಬಟ್ಟೆಗಳೇ ಮಾಯವಾಗಿರುವ ಅಥವಾ ಕಳುವಾಗಿರುವ ಸ್ಥಿತಿಯನ್ನು ಗಮನಿಸಿ ಒಬ್ಬೊಬ್ಬರು ದುಃಖಿತರಾಗುತ್ತಾರೆ. ಹಾಗೆ ದುಃಖಿತರಾಗುವ ಸಂದರ್ಭದಲ್ಲಿ ತಮ್ಮ ಸೀರೆಗೆ ಹಿನ್ನೆಲೆ ಇದ್ದ ಮಹಿಮೆ, ಮಹತ್ವ, ಬೆಲೆ, ಯಾವ ತೂರಿನಿಂದ ತರಿಸಿದ್ದು ಹೀಗೆ ವ್ಯಕ್ತವಾಗುತ್ತ ಹೋಗುತ್ತದೆ. ಹಾಗೆ ವ್ಯಕ್ತಗೊಂಡು ಕಾವ್ಯ ಭಾಗ ಹೀಗಿದೆ.

ಕರಿಯ ಹೂವಿನ ಸೀರೆ ಬಿಳಿದು ಹೂವಿನ ಸೀರೆ
ಜರಕಾಟಿ ಕೆಂಪು ಹೂವಿನ ಸೀರೆಯು ನಂದು
ಸಾರಾವಳಿ ಸೀರೆ ರಾಗಾವಾಳಿ ಸೀರೆ
ದ್ವಾರಮುನಿ ಸೀರೆ ನಿಂದಲ್ಲೇನೆ ಅಕ್ಕ
ಗೋಧಿಮುಗ್ಗಿ ಸೀರೆ ಗುಬ್ಬಿನ ಕಣ್ಣಿನ ಸೀರೆ
ಸೋದರತ್ತೆಯರುಟ್ಟ ಸೀರೆಗಳ

ಬಾಳೆಪಟ್ಟೆ ಸೀರೆ ಬದನೆ ಬಣ್ಣದ ಸೀರೆ
ಸುರುತಿ ಸುಗುತಿ ಬಣ್ಣದ ಸೀರೆಯನಂದು
ಕಾಡಿಗಣ್ಣಿನ ಸೀರೆ ಕರಿಯ ಚಂದರಕಾಳಿ
ನಾವಕ್ಕ ತಂಗಿಯೇರಿಟ್ಟಿದ್ದೆವೆ.

ಸಾಸ್ವೆ ಚುಕ್ಕೆ ಸೀರೆ ಸರಪಳ್ಯಂಚಿನ ಸೀರೆ
ರೇಷ್ಮೆ ಚುಕ್ಕಿ ಸೀರೆ ನಿಂದಲ್ಲೇನೆ ಅಕ್ಕ
ಸೂಸಿ ತುಂಬಿದ ನೀರೊಳೀಸ್ಯಾಡಿ ನಾವೆಲ್ಲ
ಮೋಸಹೋಗಿ ಕಳಕೊಂಡೇವಲ್ಲೆ

ಕರಿಯ ಮಧುರೆ ಸೀರೆ ಜರಮುಗ್ಗಿ ಕುಪ್ಪಸ
ಕರೆಸಿ ಸೋದರಮಾವ ಉಡಿಸಿದ್ದನೆ ನನ್ನ
ರವಡಕೆ ಅಂಚಿನ ದಿವ್ಯ ಕವಳೆ ಹೂವಿನ ಸೀರೆ

[illegible]

ಕುರುಡ್ಡುವ್ವಿನ ಸೀರೆ ನಮ್ಮು ಕಾಣಲಿಲ್ಲೆ
ಕಡ್ಡಿ ಪೈರಣಿ ಸೀರೆ ಕಡ್ಡಾಯದಿಂದ ನಾ
ಬಡ್ಡಿ ಸಾಲವ ಮಾಡಿ ತಂದಿದ್ದೆನೆನಾನು

ಅಡ್ಡಿ ಮಾಡಿದ ಭಾವನಾ ಉಟ್ಟು ಬರುವಾಗ ಕುದ್ರಿ
ಗೇಡಿ ನೆಗಣ್ಣಿ ಕುದಿವೋಳಲ್ಲೆ
ಊದಿ ಬಣ್ಣದ ಸೀರೆ ಉದ್ರಿ ಮಾಡ್ತಂದು ನಾ
ನಿಂದು ಗಳಿಗೆಯ ಮುಂದುಟ್ಟೆನೆ ಅಕ್ಕ
ನಾದಾರಿಗ್ಹೇಳಲಿ ನನ್ನಾಸೆ ಪಪ್ಪಳಿ
ಸೀರೆ ಎಲ್ಹೋಯಿತೆ ಸಿಗವಲ್ಲದು

ಮಾವಿನ (ನ್ಗೆ) ರೆ ಸೀರೆ ಮಾರುದ್ದ ಸೆರಗಿತ್ತು
ಮಾವ ತಂದು ಕೊಟ್ಟ ನನಗೆನಿನ್ನೆ ನೋಡೆ
ಹ್ಯಾವವಿಲ್ಲದೆ ಮನೆಗ್ಹೋದರೆ ನ
ಮ್ಮಾವ ಕೋಲು ಕೋಲಲಿ ಹೊಡೆದ್ಹೊರಗ್ಹಾಕುವ

ಜರತಾರಿ ಸೆರಗಿನ ಮತ್ತಾರಿ ಪತ್ತತಲ
ಅತ್ತ್ಯುಟ್ಟ ಬಣ್ಣವ ಕೊಟ್ಟಿದ್ದಳೆ ನನಗೆ
ಬತ್ತಲೆ ನಾ ಮನೆಗೋದರೆ ನಮ್ಮತ್ತೆ
ನೆತ್ತಿನೆತ್ತಿಗೆ ಹೊಡೆದಟ್ಟುವಳೆ

ಪಚ್ಚದಂತ್ಹೊಳೆಯೋದು ಹಸಿರು ಪತ್ತಲ ನಂದು
ಹಚ್ಚನ ಗಿಳಿ ಗಿಡ ಸೆರಗಿನಲ್ಲೆ ಅದ
ಇಚ್ಚೆಗೆ ಬಂದಂತೆ ಕುಣಿಕುಣಿದಾಡುತ
ರೊಚ್ಚಿಗೆ ನಾ ಒಳಗಾದೆನಲ್ಲೆ

ರಂಗ್ಯದ್ದಿಸಿದ್ದಿನೆ ಚಂಗಾವಿ ಪತ್ತಲ
ಬಂಗಾರದಗೆರೆ ಸೀರೆ ನಿಂದಲ್ಲೇನೆ ಅಕ್ಕ
ಅಂಜೂರಿಬಣ್ಣ ನೋಡಾಚಿತ್ರ ಸೊಬಗಿನ
ಚೆಂದ ಚೆಂದದ ಸೀರ್ಯೆಲ್ಹೋದವ್ಹೇಳೆ

ಮದುವ್ಯಾಗೆ ತಂದದ್ದು ಮಧುರೆ ಪತ್ತನಂದು
ಚದುರಂಗಮನೆ ಸೀರೆ ಚದುರೆ ನಿಂದು ನೋಡೆ
ಪದುಮದ್ಹೂವಿನ ಸೀರೆ ಪತಿವಶವಾಗೋದು
ಅದರಲ್ಲಿತ್ತಾಮಾಯ ಮಂತ್ರಗಳು

ಪ್ರಸ್ತಕ್ಕೆ ತಂದದ್ದು ಉಪ್ಪಾಡಿ ಪತ್ತಲ
ಕಸ್ತೂರಿ ಬಣ್ಣದ ಕಮಲದ ಪೇಟ ಅಂಚು
ಮುತ್ತಿನ ಬಟ್ಟಿನ ಸೀರೆ ಮೈನೆರೆದಾಗ್ನ
ಮ್ಮತ್ತಿಗ್ಯಕ್ಕರದಿಂದ ಕೊಟ್ಟಿದ್ದಳೆ

ಹಾಲ್ಚಿಕ್ಕಿ ಸೀರ್ನೊಂದು ಗುಲಾಬ್ಚಿಕ್ಕಿ ಗೋಪೀದು
ಹಾವುರಾಣಿಗೆರೆ ಸೀರೆ ದಾರದೇನೆ ಅಕ್ಕ
ನೋಡೆ ನನ್ನಗುರು ಚುಕ್ಕೆ ಸೀರೆಯಲಿ ಮಟ
ಮಾಯಾಗಿ ಹೋಯಿತಲ್ಲೆ ತಿಳಿಯಲಿಲ್ಲ

ಹಸುತಾಪ್ತಿ ಕುಪ್ಪಸ ಕೀಡಿ ಬಣ್ಣದ ಸೀರೆ
ಮುಸುಗ್ಹೊದ್ದು ನಾ ಮರಿಯಾದೆಯಿಂದ ಬಂದೆ
ಹಸುರು ಸಿಲಾರಿ ಸೀರೆಯ ಕಳಕೊಂಡೆ ನಾ
ರಸಿಕಳ ಭಾಳ ನಮ್ಮನೆ ಒಳಗೆ

ಲಾಡ್ಲಾಪುರ ಸೀರೆನಂದು ಜೋಡು ಬುಗುಡಿ ಅಂಚಿತ್ತು
ನೋಡನ್ನ ಕರಿಯ ಮಿರಾಣಿ ಸೀರೆ ಅಕ್ಕ
ಜೋಡ್ ಪಕ್ಕಿ ಸೀರೆ ಕುಂಕುಮಗೆರೆ ಸೀರೆ ನಾ
ಜೋಡಿಸಿಟ್ಟಿದ್ದರೆಲ್ಲಿ ಹೋದವ್ವೇಳೆ

ಜ್ಯೋತಿಯಂತ್ಹೊಳೆಯೋದು ಮೋತಿಚೂರಿನ ಸೀರೆ
ನಾ ತವರು ಮನೆಯಿಂದ ತಂದಿದ್ದೆನೆ ಅಕ್ಕ
ಪ್ರೀತಿಲಿ ನಮ್ಮಪ್ಪ ಕೊಟ್ಟಿದ್ದ ಕೇಳಿದ
ರಾತಗಿನ್ನೇನ್ಹೇಳಲುತ್ತರವ

ಕೋಲುಂಬ್ರ ಪೈಠಣಿ ಕೊರ್ನಾಡ ಸೀರೆಯು
ಚಾಡೆಗೆ (ಸಾಡಿಗೆ) ರುಪಾಯ್ಗ ಕೊಟ್ಟಿಲ್ಲವೆ ಇನ್ನು

ನೀನೋಡಿದ್ದಿಲ್ಲೇನೆ ನೀಲಪತ್ತಲ ನಂದು
ಬಾಲಕೃಷ್ಣನ ಬಣ್ಣ ಹೋಲುವೋದೆ

ಮಂತೆಸಾಲಿನ ಸೀರೆ ಚಿಂತಾಕು ಪೈಠಣಿ
ಎಂಥ ಬಣ್ಣಿತ್ತ್ಹೇಳು ಮಗ್ಗಿಸೀರೆ ನಂದು
ಕಾಂತರು ತಂದರಂಥ ಕಮಲದ್ಹೂವಿನ
ಭ್ರಾಂತರಾಗಿ ಕಳಕೊಂಡೆವಲ್ಲೆ

ವರಹಾದ್ಹೂವಿನ ಸೀರೆ ಒಯ್ಯಾರದಿಂದುಟ್ಟು
ನಿರಿಗಳ ಕಾಲಿಂದ ಚಿಮ್ಮುತಲಿ ಬಂದೆ
ನೆರೆಮನೆಯವಕ್ಕಂಡು ಬಿರಿಬಿರಿ ನೋಡುತ
ಯಿವಳ್ಯಾವಲ್ ಹೊಯ್ಯಾಲಿಯೆಂದಲ್ಲ

ಇರವಂತಿಗ್ಹೂವಿನ ಸೀರೆ ಕುಪ್ಪಸ ನಾ
ವಿಟ್ಟಿರುವುದೆಲೂ ಈಗ ಹುಡುಕುದೆಲ್ಲೊ
ಸೆರಗೆಲ್ಲ ಜರತಾರಿ ಚಾರ್ಕಾನಿ ಪತ್ತಲ
ಸರಿಯಾಗಿ ಕೂಡಿಸಿಟ್ಟೆದ್ದೆವಲ್ಲ

ಪುಠಾಣ್ ಪೈಠಣಿಸೀರೆ ರತ್ನಮಾಣಿಕ್ಯದಂಚು
ಪಟ್ಟಾವಳಿ ಸೆರಗ್ಹೊದ್ದುಕೊಂಡು ನಾನು
ಕುತ್ತನಿ ಕುಬುಸ ತೊಟ್ಟೂರಿಗೆ ನಾ ಬಂದರೆ
ದೃಷ್ಟ್ಯಾಗಿ ನನಮುಖ ಬಾಡೋದಲ್ಲೆ

ಪಂಚ ಪೈಠಣಿ ನಂದು ಪಗಡೆ ಮನೆ ನಂದು
ಅಂಚೆಲ್ಲ ಜರತಾರಿ ಸೆರಗು ನೋಡೆ
ಮಿಂಚುತ ನಾವುಟ್ಟುಕೊಂಡು ಕೊಂಡರೆ ನನಗಂಡ
ಮಂಚ ಇಳಿಯದೆ ಇಲ್ಲೆ ಕೊಡೆಂಬೋರೆ

ಹಂಡ್ಯ ಪೈಠಣಿ ಸೀರೆಗೊಂಡ್ಯ ಮುತ್ತಿನ ಸೆರಗು
ಗಂಡ ನೊಲಿಸಿಕೊಂಡು ಸೀರೆ ಅದು ನೋಡೆ
ಕಂಡ ಕಂಡಲ್ಲೆ ನಾ ತಿರುತಿರುಗಿ ಬಂದರೆ
ಒಂದು ಮಾತಾಡುತಿದ್ದಿಲ್ಲವರು.

ಬುಟ್ಟದಾರಿ ಸೀರೆ ಬಗುಡಿ ಜರತಾ ರಂಚು
ಪಟ್ಟಿಕೊಂಡಿಗೆ ವಜ್ರಪದಕನ್ಹಾರೆ ಗೆಜೆ
ಕಟ್ಟಾಣಿ ಸರ ನಿರಿಗಳ ಮ್ಯಾಲೋಲ್ಯಾಡುತ
ಎಷ್ಟು ಸಂಭ್ರಮದಿ ನಾ ಬಂದದ್ದೇನೆ

ಭಾರಿ ಬೆಲೆಕೊಟ್ಟು ಬನಾರಸದ್ ಸೀರೆ ನಾ
ಭಾಳಪೇಕ್ಷದಲುಟ್ಟಕೊಂಡಿದ್ದೇನೆ ನಾನು
ಭಾನು ಪ್ರಕಾಶದಂತ್ಹೊಳೆವೊ ಚಂದರ ಸೀರೆ
ಬಾ ನಾನು ನೀನು ಕೊಡ್ಹುಡುಕುವೋಣ

ಥಳ ಥಳ ಹೊಳೆಯುವುದು ತಲಕದ್ಹೂವಿನ ಸೀರೆ
ಮೊಳಕೊಂದು ನೂರ್ರೂಪಿನ್ನು ಕೊಟ್ಟಿದ್ದೇನೆ ನಾನು
ಝುಳುಕುತ ಬಾಗುತ ಬಾಳೆಯ ಸುಳಿಯಂತೆ
ಬಳಕುತ ಬಂದಿಲ್ಲೆ ಕಳಕೊಂಡೆನೆ

ಝುಗ ಝುಗ ಹೊಳೆವುದ ಜಗನ್ಮೋಹಿನಿ ಸೀರೆ
ನಗೆ ಮುಖದ ಗೊಂಬೆ ಸೆರಗನ್ಹೊದ್ದು ನಾನು
ವಗಲ್ ವಗಲ್ ಮಾಡುತ ಧಿಗಿಧಿಗಿ ನಾ ಬಂದೆ
ಧಿಗಲ್ ಧಿಗಲ್ಲಾ ಗೇದೆನ್ನೆದೆವೊಳೆಗೆ

ವಂಕಿ ತೋಳಿಗೆ ತಕ್ಕಕಂಚುಕ ಹೋದರೆ
ಟೊಂಕದ ಪಟ್ಟಿ ಇನ್ಯಾತಕ್ಹೇಳೆ ನಮಗೆ ಅ
ಲಂಕಾರ ವ್ಯಾತಕಿನ್ನು ಸೊಬಗಿನ ಸಭಾ
ಲಂಕಾದ ಸೀರ್‍ಯೆಲ್ಲೊ್ಹೀದವ್ಹೇಳೆ

ಆಕಳ್ ಕರಳೀ ಸೀರೆ ನಾ ಉಟ್ಟು ಬರುವಾಗ
ಗೋಪಾಲ ಕೃಷ್ಣ ತಾ ಕೊಳಲೂದುತ ಬಂದು
ಯಾಕೆ ಗಯ್ಯಾಳಿ ನಮ್ಮಾಕಳ ಕೊಡುಯೆಂದು
ತಾ ಕೈಯ್ಯ ಪಿಡಿದೆನ್ನ ಜಗ್ಗೋನಲ್ಲೆ

ಖಂಬಾವತಿ ನಂದು ನಿಂಬಾವಳಿ ನಿಂದು
ಜಾಂಬೂನಾಜರದ ಪೀತಾಂಬರವೆ ಅಕ್ಕ

ಹೊಂಬಣ್ಣದ್ದ್ಹಳದಿ ಪೀತಾಂಬರ ಕಳಕೊಂಡು ದಿ
ಗಂಬರರಾಗಿಲ್ಲಿ ನಿಂತೆವಲ್ಲೆ

ವಸ್ತ್ರಗಣಿಕೆ ಸೀರೆ ಸುರ್‍ತಿ ಬಣ್ಣವು ನಂದು
ರತ್ನದ್ ಪಪ್ಪಳಿ ಸೀರೆ ಉಟ್ಟಿದ್ದೆಲ್ಲೆ ನೀನು
ಕೊಟ್ಟು ಕಳ್ಳನ ಕೈಯ್ಯಾಗೆನ ಕೂಸುಂಬಿ ಸೀರೆ
ಎಷ್ಟು ಬಾಯ್ಬಿಟ್ಟರಿನ್ನೇನು ಫಲ

ಈ ಮೇಲಿನ ದೀರ್ಘ ಕೀರ್ತನೆಯಲ್ಲಿ ಪ್ರಸ್ತಾಪಗೊಂಡಿರುವ ಸೀರೆಗಳು ಕೇವಲ ಸೀರೆಗಳಾಗಿ ಮೂಡಿಬಂದಿಲ್ಲ. ಪ್ರತಿಯೊಂದು ಸೀರೆಗಳಿಗೂ ಅದರದೇ ಆದ ಸಾಂಸ್ಕೃತಿಕ ವಿಶೇಷತೆ ಇದೆ.

ಕೆಲವೊಂದು ಸೀರೆಗಳು ಬಣ್ಣದ ದೃಷ್ಟಿಯಿಂದ, ಜರತಾರಿ ಅಂಚಿನ ದೃಷ್ಟಿಯಿಂದ ಮುಖ್ಯವಾಗಿವೆ. ಇನ್ನೂ ಕೆಲ ಸೀರೆಗಳು ಸೀರೆಗಂತಲೇ ಪ್ರಸಿದ್ಧಿ ಹೊಂದಿದ ಸ್ಥಳಗಳ ಆಧಾರದ ಮೇಲೆ ಮಾನ್ಯತೆ ಹೊಂದಿವೆ. ಉದಾ ಬನಾರಸ್ ಸೀರೆ, ಮಧುರೆ ಸೀರೆ, ಪುಠಾಣ್ ಪೈಠಣಿ ಸೀರೆ, ಕೊರ್‍ನಾಡಸೀರೆ, ಲಾಡ್ನಾಪುರ ಸೀರೆ ಹೀಗೆ ಅನೇಕ ಊರುಗಳು ಪ್ರಸ್ತಾಪವಾಗಿರುವುದನ್ನು ಕಾಣಬಹುದು. ಈ ಮೊದಲೇ ತಿಳಿಸಿದಂತೆ ಪ್ರತಿಯೊಂದು ಸೀರೆಗಳಿಗೂ ಒಂದೊಂದು ಬಗೆಯ ಇತಿಹಾಸವಿದೆ.

ಸೋದರಮಾವನು ಪ್ರೀತಿಯಿಂದ ಉಸಿಡಿಸಿದ ಸೀರೆ, ಸಾಲ ಮಾಡಿ ತಂದ ಸೀರೆ, ಮಾವ ತಂದುಕೊಟ್ಟ ಸೀರೆ, ಮದುವೆಯ ಸಂದರ್ಭದಲ್ಲಿ ತಂದ ಸೀರೆ, ಪ್ರಸ್ತಕ್ಕೆ ತಂದ ಸೀರೆ, ತವರು ಮನೆಯಿಂದ ತಂದ ಸೀರೆ ಹೀಗೆ ಪರಿಸ್ಥಿತಿಗೆ ಅನುಗುಣವಾಗಿ ಸೀರೆ ತಂದ, ಬಂದ ಸಂದರ್ಭವನ್ನು ಇಲ್ಲಿ ಕಾಣಬಹುದು.

ಸೀರೆಯನ್ನುಟ್ಟುಕೊಂಡಾಗ ಆಗುವ ಪರಿಣಾಮಗಳೇ ಬೇರೆ ಸೀರೆಯನ್ನು ಕಳೆದುಕೊಂಡ ಗೋಪಿಯೋರ್ವಳು ಹಂಡ್ಯ ಪೈಠಣಿ ಸೀರೆ ಗೊಂಡ್ಯ ಮುತ್ತಿನ ಸೆರಗನ್ನು ಹೊಂದಿರುವ ಸೀರೆಯು ಗಂಡನನ್ನು ವಶೀಕರಿಸಿಕೊಳ್ಳುವ ಸೀರೆಯಾಗಿತ್ತು ಎಂದು ಹೇಳುತ್ತಾಳೆ. ಮತ್ತೋರ್ವ ಗೋಪಿಯು ಜರತಾರಿಸೆರಗು ಇರುವ ಸೀರೆಯನ್ನು ಉಟ್ಟುಕೊಂಡರೆ ಗಂಡನು ಮಂಚದಿಂದ ಇಳಿಯಬೇಡವೆಂದು ಹೇಳುತ್ತಿದ್ದನಂತೆ.

ಒಟ್ಟಾರೆಯಾಗಿ ಈ ಬಗೆಯ ಕೀರ್ತನೆಗಳಲ್ಲಿ ಸೀರೆಯ ವಿಶೇಷತೆಯನ್ನು ಗಮನಿಸಿದಾಗ ಗಂಡಸು ಇಷ್ಟು ವಿವರವಾಗಿ ಹೇಳಲಾರನೆಂದೆನಿಸುತ್ತದೆ. ಹೆಂಗಸರ ಸಮಾಜದಲ್ಲಿ ಯಾವ ಬಗೆಯ ಸ್ಥಾನಮಾನವನ್ನು ಹೊಂದಿದ್ದಾರೆಂದು ತಿಳಿಯಬಹುದಾಗಿದೆ. ಇಲ್ಲಿ ಬರುವ ಪ್ರತಿಯೊಂದು ಪಾತ್ರಗಳು ಕಳವಳಪಡುತ್ತಿದ್ದಾವೆ. ಏಕೆಂದರೆ ಇಂಥ ಬೆಲೆಬಾಳುವ ಸೀರೆಯನ್ನು ಕಳೆದುಕೊಂಡರೆ ಮನೆಯ ಹಿರಿಯರು ಬೈಯುವುದಿಲ್ಲವೆ? ಎಂಬ ಕಾರಣದಿಂದ.

[illegible]

ಹರಪನಹಳ್ಳಿ ಭೀಮವ್ವನವರು ಹೆಸರಿಸಿರುವ ಸೀರೆಗಳು ಸಾಮಾಜಿಕವಾಗಿ ಮೇಲ್ವರ್ಗದ ಜನರಲ್ಲಿ ಬಳಕೆಯಾಗುವಂಥ ಸಂದರ್ಭವನ್ನು ಕಾಣಬಹುದು. ಹಾಗೆಯೇ ದೇವರಿಗೆ ಅಲಂಕಾರ ಮಾಡುವಾಗಲೂ ಸಹ ಇದೇ ತರಹದ ಸೀರೆಗಳು ಬಳಕೆಯಾಗುವುದನ್ನು ಕಾಣಬಹುದು.

ತೊಡಿಗೆ

ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳಲ್ಲಿ ಉಡುಗೆ-ತೊಡಿಗೆಯ ವಿಚಾರ ವಿಶೇಷವಾಗಿ ಮೂಡಿಬಂದಿದೆ ಎಂದರೆ ತಪ್ಪಾಗಲಾರದು. ತೊಡಿಗೆ ಎಂದರೆ ತೊಟ್ಟುಕೊಳ್ಳುವಂಥದ್ದು. ಸಾಮಾನ್ಯವಾಗಿ ಆಭರಣಗಳನ್ನು ತೊಟ್ಟುಕೊಳ್ಳುವುದರಿಂದ ತೊಡಿಗೆ ಎಂಬ ಪದವೆ ಬಳಕೆಯಲ್ಲಿದೆ. ಭೀಮವ್ವನವರು ತಮ್ಮ ಕಾಲದಲ್ಲಿ ಬಳಕೆಯಲ್ಲಿದ್ದ ಆಭರಣಗಳ ಹೆಸರುಗಳನ್ನು ಹೇಳುತ್ತಾಳೆ. ಇಲ್ಲಿ ಹೆಸರಿಸುವ ಆಭರಣಗಳು ತುಂಬಾ ಬೆಲೆ ಬಾಳುವಂಥವು. ದೇವರನ್ನು ವರ್ಣಿಸುವಾಗ ಅತಿ ಹೆಚ್ಚಾಗಿ ಆಭರಣಗಳ ಬಳಕೆಯಾಗಿದೆ. ಸಾಮಾನ್ಯವಾಗಿ ವೈದಿಕರು ದೇವರನ್ನು ಪೂಜಿಸುವಾಗ, ಅಲಂಕರಿಸುವಾಗ ಈ ಬಗೆಯ ಆಭರಣಗಳನ್ನು ಮಾಡುತ್ತಾರೆ ಎಂಬುದು ತಿಳಿದುಬರುತ್ತದೆ.

ಪಾಗಡರುಳಿ ಕಿರುಗೆಜ್ಜೆ	- ಕಾಲಿನ ಕಡಗ, ಕಾಲುಬಳೆ
ವೈಜಯಂತಿ ಹಾರ	- ವಿಷ್ಣುವಿನ ಹಾರ ತುಳಸೀಮಾಲೆ
ಸರಿಗೆ	- ತೋಳಿನಲ್ಲಿ ಧರಿಸುವ ತೋಳುಬಂಧಿ
ಸರಿಗೆ ಸರಪದಕ	- ಒಂದು ಬಗೆಯ ಕಂಠಾಭರಣ
ಕಂಕಣ ಕಡಗ	- ಕೈಗೆ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ
ವಾಲೆ	- ಕರ್ಣಾಭರಣ
ಏಕಾವಳಿ	- ಒಂದೆಳೆಯ ಸರ
ಕಾಲಕಡಗ	- ಕಾಲಿನ ಕಡಗ ಕಾಲುಬಳೆ
ವಜ್ರದೊಲೆ	- ವಜ್ರದ ಕರ್ಣಾಭರಣ
ಬಿಂದಲಿಗುಂಡು	- ಚಿಕ್ಕಮಕ್ಕಳು ಮುಂಗೈಗೆ ತೊಡಿಸುವ ಒಂದು ಬಗೆಯ ಆಭರಣ
ಬುಗುಡಿಬುಲಾಕು	- ಮೂಗಿನ ಎರಡು ಹೊಳ್ಳೆಗಳ ನಡುವೆ ಜೋತಾಡುವಂತೆ ತೊಡುವ ಒಂದು ಬಗೆಯ ಆಭರಣ
ಗೆಜ್ಜೆ ಅಡ್ಡಿಗೆ	- ಕಾಲಿಗೆ ತೊಟ್ಟುಕೊಳ್ಳುವ ಒಂದು ಬಗೆಯ ಆಭರಣ
ಕಾಲುಂಗರ, ಕಿರುಪಿಲ್ಯೆ	- ಕಾಲಿನ ಬೆರಳುಗಳಿಗೆ ತೊಡಿಸುವ ಆಭರಣ
ಒಡ್ಯಾಣ	- ನಡುವಿಗೆ ಹಾಕಿಕೊಳ್ಳುವ ಪಟ್ಟಿ, ಡಾಬು
ನಾಗಮುರಿಗೆ	- ತೋಳಿನಲ್ಲಿ ಧರಿಸುವ ಹಾವಿನಾಕಾರದ ಒಂದು ಆಭರಣ ತೋಳು ಬಂಧಿ

[illegible]

ಚೌರಿರಾಗಟೆ - ಹೆಂಗಸರು ಕೇಶ ಶೃಂಗಾರಕ್ಕೆಂದು ತಲೆಯಲ್ಲಿ ಧರಿಸುವ ಒಂದು ಆಭರಣ

ದುಂಡುಮಲ್ಲಿಗೆ - ಹೂವಿನಾರಕಾರದ ಒಂದು ಬಗೆಯ ಆಭರಣ

ಅಚ್ಚುಮುತ್ತಿನ ಹರಿವಾಣ

ಜಾತಿ ಮಾಣಿಕ್ಯದ ವಂಕಿ

ರಂಗು ಮಾಣಿಕ್ಯಕ ಹೆರಳು

ಕಾಲಗೆಜ್ಜೆ ಸರಪಳಿ

ಸರಿಸರ ಮುತ್ತುಗಳು

ಚಿಂತಾಕುಮ್ಯಾಲೆ

ಆಹಾರದ ಬಗೆಗಳು

ಅಲೆಮಾರಿಯಾಗಿದ್ದ ಮಾನವ ಒಂದೆಡೆ ನೆಲೆ ನಿಂತ ಮೇಲೆ ಗೆಡ್ಡೆ, ಗೆಣಸು ತಿನ್ನುವುದರ ಜೊತೆಗೆ ಸುಧಾರಿತ ಆಹಾರ ಪದ್ಧತಿಯೊಂದನ್ನು ರೂಢಿಸಿಕೊಂಡನು. ಸಾಮಾಜಿಕ ವರ್ಗದ ನೀತಿಯಿಂದಾಗಿ ಸಮಾಜದ ಪ್ರತಿಯೊಂದು ಪಂಗಡವು ತನಗೆ ಸಮ್ಮತವೆನಿಸುವ ಆಹಾರ ಪದ್ಧತಿಯೊಂದು ರೂಢಿಸಿಕೊಂಡು ಬಂದಿತು. ಈ ಸಂದರ್ಭದಲ್ಲಿ ಕೆಲವರು ಮಾಂಸಾಹಾರಿಗಳಾದರೆ ಇನ್ನೂ ಕೆಲವರು ಶಾತಾಹಾರಿಗಳಾದರೂ. ಭಾರತೀಯರಲ್ಲಿ ಆಹಾರ ಸೇವನೆಯು ಸಾಂಪ್ರದಾಯಿಕವಾಗಿ ಮಹತ್ವ ಪಡೆದಿದೆ.

ವೈದಿಕ ಸಮಾಜದಲ್ಲಿ ಚಾತುರ್ಮಾಸ ಸಂದರ್ಭದಲ್ಲಿ ಕೆಲವೊಂದು ಆಹಾರ ಪದಾರ್ಥಗಳನ್ನು ಬಳಸುವುದಿಲ್ಲ. ಬದಲು ಗೆಡ್ಡೆ, ಗೆಣಸಿನ ರೂಪದ ಆಹಾರವನ್ನೇ ಹೆಚ್ಚಾಗಿ ಬಳಸುತ್ತಾರೆ. ಇದೊಂದು ಬಗೆಯ ಧಾರ್ಮಿಕ ಆಚರಣೆ ಆದರೂ ಪರಿಸರದ ಹವಾಗುಣಕ್ಕೆ ತಕ್ಕಂತೆ ದೇಹಕ್ಕೆ ಒಳಿತಾಗುವ ಉದ್ದೇಶದ ಹಿನ್ನಲೆಯೂ ಇರಬಹುದು.

ಆಹಾರಕ್ಕೆ ಸಂಬಂಧಿಸಿದಂತೆ ಪ್ರಾಚೀನ ಕಾವ್ಯಗಳಲ್ಲಿ ವಿವರವಾಗಿ ಮೂಡಿಬಂದಿದೆ. ಭಾರತೀಯ ಪರಂಪರೆಯ ಸಂದರ್ಭದಲ್ಲಿ ದಿನದ ಆಹಾರಕ್ಕೂ ಹಬ್ಬದ ದಿನದಂದು, ಮದುವೆಯ ದಿನಮಾಡುವ, ಸೂತಕ ದಿನದಂದು ಮಾಡುವ ಆಹಾರಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಹಬ್ಬದ ದಿನದಂದು ಸೂತಕ ಅಡಿಗೆ ಮಾಡಿದರೆ ಅಕ್ಕಪಕ್ಕದವರ ತಿರಸ್ಕಾರಕ್ಕೆ ಒಳಗಾಗಬೇಕಾಗುತ್ತದೆ. ಹಬ್ಬದ ಅಡಿಗೆಗಳು ಸಹ ಒಂದಲ್ಲ ಒಂದು ಬಗೆಯಲ್ಲಿ ಸಮಾಜವನ್ನು ಹಿಡಿದಿಟ್ಟುಕೊಂಡಿರುತ್ತದೆ.

ಆಹಾರ ಬಳಕೆಯ ಸಂದರ್ಭದಲ್ಲಿ ಬಳಸುವವರ ಕೌಟುಂಬಿಕ ಪರಂಪರೆಯನ್ನು ತಿಳಿಯಬಹುದು. ಇಲ್ಲಿಯೂ ಸಹ ಸಾಮಾಜಿಕ ವರ್ಗಗಳ ಆಧಾರದ ಮೇಲೆ ಆಹಾರ ತಯಾರಾಗುವ ಕ್ರಮವನ್ನು ಕಾಣಬಹುದು.

ಆಚರಿಸುವ ಪ್ರತಿ ಹಬ್ಬಗಳು, ಹಬ್ಬದಡಿಗೆಗಳು ಒಂದೊಂದು ಬಗೆಯ ಸಾಂಸ್ಕೃತಿಕ ಸಂಕೇತದಿಂದ ಕೂಡಿವೆ. ಹಾಗೆಯೇ ಜಾತ್ರೆ, ಉತ್ಸವಗಳಲ್ಲಿ ತಯಾರಿಸುವ ಸದರ್ಭದಲ್ಲಿಯೂ ಕೂಡ ಆಹಾರದ ವಿಶೇಷತೆಯನ್ನು ಕಾಣಬಹುದು.

ಹರಪನಹಳ್ಳಿ ಭೀಮವ್ವನವರ ಶುಕ್ರವಾರ, ಶನಿವಾರದ ಹಾಡುಗಳಲ್ಲಿ ಬರುವ ಅಡಿಗೆಯ ಪ್ರಸ್ತಾಪ ಕೇಳುಗರಿಗೆ ನೀರೂರಿಸುವಂತಿದೆ.

ಭಕ್ಷ್ಯ ಶಾವಿಗೆ ಪರಮಾನ ಚಿತ್ರಾನ ಸಣ್ಣಕ್ಕಿ
ಶ್ಯಾಲಾನ್ನ ಸೂಪಗಳು
ಚಕ್ಕುಲಿ ಗಿಲಿಗಂಜಿ ಚೆಂದಚಿರೋಟಿ
ಹಪ್ಪಳ ಸಂಡಿಗೆ ಅಂಬೋಡೆಗಳು
ಸಕ್ಕರೆ ಘೃತ ಕ್ಷೀರ ಸಕಲಪಕ್ವಾನ್ನ
ಎಂದು ಮಂಗಳಗೌರಿ ಎಂಬ ಇನ್ನೊಂದು ಹಾಡಿನಲ್ಲಿ
ಆರೋಗಣೆ ಮಾಡಮ್ಮ ಮಂಗಳಗೌರಿ
ಬೇಡಿಕೊಂಬೆನೆ ನಿನಗೆ ಬೇಡಿದಡಿಗೆ ಎಡೆ
ಮಾಡಿ ತಂಟ್ಬಿಹೆ ಜೋಡಿಸಿ ನಿನಗೆ ಕ್ಷಿರ
ದದಿಯು ಬೆಣ್ಣೆ ಘೃತ ನೇಕರ್ಣ ಕಾಯೊಲು
ಹೊಯ್ಗುಡುವನಿಟ್ಟು ಸಾರು ಸಾಂಬಾರ ಚಿಟ್ಟಣಿ ಕೋಸುಂಬರಿ

ಎಂಬಂಥ ಅಡಿಗೆಗಳ ಸುದೀರ್ಘ ವಿವರಣೆ ಭೀಮವ್ವಳ ಪಾಕಶಾಸ್ತ್ರ ಪ್ರಾವಿಣ್ಯತೆಗೆ ನಿದರ್ಶನವಾಗಿದೆ.

ಹಿಂದಿನವರು ಧಾರ್ಮಿಕವಾಗಿ ಅನುಸರಿಸಿಕೊಂಡು ಬಂದ ಆಹಾರ ಪದ್ಧತಿಯ ಕ್ರಮವನ್ನು ನೋಡಿದಾಗ ಆರೋಗ್ಯ ದೃಷ್ಟಿಯಿಂದಲೂ, ವೈದ್ಯಕೀಯ ದೃಷ್ಟಿಯಿಂದಲೂ ಉಚಿತವೆನಿಸುತ್ತದೆ. ಭೀಮವ್ವನವರು ಬಸಿರು ಬಣ್ಣಿಸಿದ ಹಾಡಿನಲ್ಲಿ ಗರ್ಭಿಣಿಯೊರ್ವಳು ಬಯಸಬಹುದಾದ ಆಹಾರವನ್ನು ಹೇಳುತ್ತಾಳೆ. ಇದರ ಮೂಲಕ ಸಮಗ್ರವಾಗಿ ಅಲ್ಲದಿದ್ದರೂ ಸಮುದಾಯವೊಂದರ ಸೀಮಂತದ ಆಚರಣೆಯನ್ನು ತಿಳಯಬಹುದಾಗಿದೆ.

ದೇವೇಂದ್ರನ ಸೊಸೆ ದೇವಕ್ಕಿ ತನಯಳು
ಏನೇನು ಬಯಸಿದಳು
ಒಂದು ತಿಂಗಳು ತುಂಬಲು ಸುಭದ್ರ
ಅಂಜೂರಿ ದ್ರಾಕ್ಷಿ ಕಿತ್ತಳೆ ಜಂಬುನೇರಳು ಬಯಸಿದಳು
ಎರಡು ತಿಂಗಳೂ ತುಂಬಲು ಸುಭದ್ರ

ಪರಡಿ ಮಾಲತಿ ಸಣ್ಣ ಶ್ಯಾವಿಗೆ ಬಯಸಿದಳು

ನಾಲ್ಕು ತಿಂಗಳು ತುಂಬಲು ಸುಭದ್ರ

ಆಕಳ ತುಪ್ಪ ಅನಾರಸ ಬಯಸಿದಳು

ಐದು ತಿಂಗಳು ತುಂಬಲು ಸುಭದ್ರ

ಕೆನೆಮೊಸರ್ನ್ಹಾಕಿದ ಬುತ್ತಿ ಚಿತ್ರಾನ್ನವ ಬಯಸಿದಳು

ಏಳು ತಿಂಗಳು ತುಂಬಲು ಸುಭದ್ರ

ಕ್ಷೀರ ಮಂಡಿಗೆ ಬುಂದ್ಯ ಕ್ಷೇಣಿಯ ಬಯಸಿದಳು

ಹರಪನಹಳ್ಳಿ ಭೀಮವ್ವ ಕೀರ್ತನೆಯಲ್ಲಿ ಬಳಕೆಯಾದ ಆಹಾರ ಪದಾರ್ಥಗಳು

ಪಾಯಸ ಅಥವಾ ಸಿಹಿಖಾದ್ಯಕ್ಕೆ ಸಂಬಂಧಿಸಿದ ಆಹಾರಗಳು

ಮಾಲತಿ

ಬಟ್ಟಿ

ಗೌಲಿ

ಪರಡಿಪಾಯಸ

ಮಂಡಿಗೆ ಚೂರ್ಮ

ಬುಂದ್ಯ

ಕರ್ಜಿಕಾಯ್ಗಳು

ಕಾಯಿರಸ

ಶ್ಯಾವಿಗೆ ಫೇಣಿ

ಹೊಯ್ಗಡ್ಬು

ಮೋಚಿಚೂರು

ಚೂರ್ಮಲಾಡು

ಜಿಲೇಬಿ

ಕಡುಬು

ಶ್ಯಾವಿಗೆ

ಬೇಸನ್ನು

ಸೀಕರ್ಣಿ

ಖಾರವಾದ ಪದಾರ್ಥಗಳು

ಅಪ್ಪಗುಳ್ಳವು

ಸಾರು, ಸಾಂಬಾರು

ಚಟ್ಟಣಿ

ಕೋಸಂಬರಿ

ಬ್ಯಾಳೆಯ ತವ್ವೆ

ಹಿಂಡಿಯ ಪಲ್ಯ

ತುಳಿಯ ಕಟ್ಟಂಬಲಿ

ತೇಂತೊಳಿ

ಪಡುವಲಕಾಯಿ ಪಳದ್ಯ

ಕರಿದ ಪದಾರ್ಥಗಳು

ಚಕ್ಕುಲಿ

ಬುರುಬುರಿ

ಕರ್ಜಿಕಾಯಿ

ಹರಪನಹಳ್ಳಿ ಭೀಮವ್ವನವರು ಬ್ರಾಹ್ಮಣ ಸಮುದಾಯಕ್ಕೆ ಸೇರಿರುವುದರಿಂದ ಅದರಲ್ಲೂ ಅಡಿಗೆಯ ಬಗ್ಗೆ ಜ್ಞಾನ ಅಧಿಕವಾಗಿದ್ದರಿಂದ ಎಲ್ಲವನ್ನು ತಂದು ವಿವರವಾಗಿ ಕೀರ್ತನೆಗಳಲ್ಲಿ ಹಿಡಿದಿಟ್ಟಿದ್ದಾಳೆ. ನಿತ್ಯವೂ ಈ ಬಗೆಯ ಅಡಿಗೆಯ ವೈಶಿಷ್ಟ್ಯ ಇರುವುದಿಲ್ಲ. ಹಬ್ಬದಿನದಂದು ಮಾತ್ರ ಈ ಬಗೆಯ ವಿಶೇಷ ಅಡಿಗೆ ಇರುತ್ತದೆ. ಶ್ರಾವಣ ಮಾಸದಲ್ಲಿ ಶ್ರಾವಣಗೌರಿಯನ್ನು ಪೂಜಿಸುವಾಗ ಮಾತ್ರ ಅಡಿಗೆಯಲ್ಲಿ ವಿಶೇಷ ಮಾಡಲಾಗುತ್ತದೆ.

ಮೇಲ್ವರ್ಗದ ಸಮಾಜದಲ್ಲಿ ದೇವರ ನೈವೇದ್ಯಕ್ಕಾಗಿ ಸಿದ್ಧಪಡಿಸಿದಂಥ ಆಹಾರದ ಬಗೆಯಾಗಿದೆ. ಈ ಮೂಲಕ ಬ್ರಾಹ್ಮಣ ಸಮಾಜದಲ್ಲಿ ಹಬ್ಬ ದಿನದಂದು ಮಾಡಬಹುದಾದ ಆಹಾರದ ಬಗೆಯನ್ನು ತಿಳಿಯಬಹುದಾಗಿದೆ.

ಅಡಿಟಿಪ್ಪಣಿ

೧. ಡಾ.ಆರ್.ಶತಾವಧಾನಿಗಣೇಶ, ಭಾಷಾಭೃಂಗದ ಬೆನ್ನೇರಿ, ಪುಟ-೧೨

೨. ಡಾ.ಆರ್.ಶತಾವಧಾನಿಗಣೇಶ, ಭಾಷಾಭೃಂಗದ ಬೆನ್ನೇರಿ, ಪುಟ-೧೪

೩. ಡಾ.ಬ.ಸೋ.ಗೊರವರ, ಕನ್ನಡ ರಚನಾತ್ಮಕ ಮತ್ತು ಸಮಾಜೋ-ಭಾಷಿಕ ಅಧ್ಯಯನ, ಪು-೭

೪. ಡಾ.ಆರ್.ಶತಾವಧಾನಿ ಗಣೇಶ, ಭಾಷಾ ಭೃಂಗದ ಬೆನ್ನೇರಿ, ಪು-೧೬

೫. ಪಂಪಭಾರತ, (ಸಂ) ವೆಂಕಟಚಲಶಾಸ್ತ್ರಿ,

೬. ರಾಘುವಾಂಕನ ಸಮಗ್ರ ಕಾವ್ಯ, (ಸಂ) ಡಾ.ಬಿ.ಎ.ವಿವೇಕ ರೈ

೭. ಡಾ.ಸೋಮಶೇಖರಗೌಡ, ಸಾಮಾಜಿಕ ಭಾಷಾವಿಜ್ಞಾನ, ಪು-೩೪

೮. ಅಂಬಳಿಕೆ ಹಿರಿಯಣ್ಣ, ಜಾನಪದ ಪರಿಭಾವನ, ಪು-೯೭

೯. ಡಾ.ಚಿದಾನಂದಮೂರ್ತಿ, ಜನ-ಜನಪದ-ಜಾನಪದ, ಪು-೩೫೭

೧೦.ಡಾ.ಚಿದಾನಂದಮೂರ್ತಿ, ಜನ-ಜನಪದ-ಜಾನಪದ, ಪು-೩೧೩

ಅಧ್ಯಾಯ - ಎಂಟು

ಸಮಾರೋಪ

ಅಧ್ಯಾಯ - ಎಂಟು

ಸಮಾರೋಪ

ದಾಸ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ಅಪೂರ್ವವಾದ ಕೊಡುಗೆಯನ್ನು ನೀಡಿದೆ. ಕನ್ನಡ ಸಾಹಿತ್ಯದ ಮುಖ್ಯಧಾರೆಗಳಾದ ವಚನ ಸಾಹಿತ್ಯ. ದಾಸಸಾಹಿತ್ಯಗಳು ಜನಪರ ಚಳುವಳಿಗಳು ತಮ್ಮ ತಮ್ಮ ಕಾಲಘಟ್ಟದಲ್ಲಿ ಆಗಬೇಕಾದ ಬದಲಾವಣೆಗೆ ಪ್ರಯತ್ನಿಸಿದವು. ಎಲ್ಲ ಕ್ಷೇತ್ರಗಳೂ ಕೇವಲ ಪುರುಷರಿಗಷ್ಟೇ ಸೀಮಿತವಾದ್ದವು. ಸಾಹಿತ್ಯದ ಆದಿ ಭಾಗದಿಂದಲೂ ಇದನ್ನು ಗಮನಿಸಬಹುದು. ಆದರೆ ಈ ಎರಡೂ ಧಾರೆಗಳಲ್ಲಿ ಮಹಿಳೆಯರು ಭಾಗವಹಿಸುವುದನ್ನು ಕಾಣಬಹುದು. ವಚನ ಸಾಹಿತ್ಯದಲ್ಲಿ ಆರಂಭದಿಂದಲೂ ಕಂಡು ಬಂದರೆ, ದಾಸ ಸಾಹಿತ್ಯದಲ್ಲಿ ಕೊನೆಯ ಘಟ್ಟದಲ್ಲಿ ಮಹಿಳೆಯರ ಪ್ರವೇಶವಾಯಿತು.

ದಾಸ ಸಾಹಿತ್ಯದಲ್ಲಿ ಮಹಿಳೆಯರ ಪ್ರವೇಶ ತಡವಾಗಿಯಾದರೂ ಸಮೃದ್ಧ ಸಾಹಿತ್ಯ ಕೃಷಿಗೈದ ದಾಸ ಮಹಿಳೆಯರು ಕನ್ನಡಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಹೆಳವನಕಟ್ಟೆ ಗಿರಿಯಮ್ಮ, ಗಲಗಲಿ ಅವ್ವನವರು, ಅಂಬಾಬಾಯಿ, ನಿಡಗುರಕಿ ಜೀವೂ ಬಾಯಿಯವರು ಹೀಗೆ ಮುಂತಾದ ದಾಸ ಮಹಿಳೆಯರು ಉದ್ದಾಳಿಕನ ಕಥೆ, ಶಂಕರಗಂಡನ ಹಾಡು, ಸೀತಕಲ್ಯಾಣ, ಚಂದ್ರಹಾಸನ ಕಥೆ, ಬ್ರಹ್ಮಕೊರವಂಜಿ, ಲವಕುಶರ ಕಾಳಗ, ಕೃಷ್ಣಕೊರವಂಜಿ ಅಂತಹ ಅನನ್ಯವಾದ ಕೃತಿಗಳನ್ನು ನೀಡಿದ್ದಾರೆ. ಭೀಮವ್ವನ ಕಾವ್ಯವಂತೂ ತನ್ನದೇ ಆದ ವೈವಿಧ್ಯತೆಯಿಂದ ಮನಸೆಳೆಯುತ್ತದೆ. ಇವರು ಕೀರ್ತನೆ, ಸುಳಾದಿ, ಉಗಾಭೋಗದ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಹಾಡುಗಳ ಮೂಲಕ ರಚನೆಯ ಮಧ್ಯೆ ಧ್ವನಿ, ವಚನಗಳೆಂಬ ಹೊಸ ಪರಿಕಲ್ಪನೆ ನೀಡಿದವರು ಭೀಮವ್ವ. ದೀರ್ಘ ಕಥನ ಕವನಗಳನ್ನು ರಚನೆ ಗೈದು ಪ್ರಾಚೀನ ಪರಂಪರೆ ಉಳಿವಿಗೆ ಶ್ರಮಿಸಿದ್ದಾರೆ. ಪುರಾಣ, ಭಾಗವತ, ಮಹಾಕಾವ್ಯಗಳಲ್ಲಿನ ಆದರ್ಶಗಳನ್ನು ಹಾಡುಗಳ ಮೂಲಕ ಅಭಿವ್ಯಕ್ತಿಸಿ ಜನಸಾಮಾನ್ಯರಿಗೆ ಅರಿವನ್ನು ಮೂಡಿಸುವಲ್ಲಿ ಭೀಮವ್ವನ ಪಾತ್ರ ಹಿರಿದಾದುದು.

[illegible]

[illegible]

[illegible]

ಎಲ್ಲ ಮಹಿಳೆಯರು ಒಂದೆಡೆ ಸೇರಿ ಪರಸ್ಪರರನ್ನು ಸತ್ಕರಿಸುತ್ತಾ ಪರಿಹಾಸ ತಮಾಷೆಗಳಿಂದ ವಿನೋದವಾಡಿ, ಕೂಡಿ ನಲಿಯುವುದು ಆಚರಣೆಗಳ ವೈಶಿಷ್ಟ್ಯ ಈ ಸಂಪ್ರದಾಯಗಳಲ್ಲಿ ಬಳಸುವ ಹಾಡುಗಳು ಹದವರಿತು ಪ್ರಕಟವಾದುವುದು ಹೆಂಗಸರೇ ಕಲೆತು ಆಚರಿಸಿಕೊಳ್ಳುವಂಥ ಹಬ್ಬ, ಹರಿದಿನಗಳಲ್ಲಿ, ವ್ರತ ಹುಣ್ಣಿಮೆಗಳಲ್ಲಿ, ತೇರು, ಉತ್ಸವ, ಮದುವೆಗಳಂಥ, ಧಾರ್ಮಿಕವೂ, ಸಾಮುದಾಯಿಕವೂ ಆದ ಆಚರಣೆಗಳಲ್ಲಿ ಹೆಣ್ಣು ಮಕ್ಕಳ ಸಂಬಂಧಗಳು ಅರಳುತ್ತವೆ. ಹೆಣ್ಣು ಮಕ್ಕಳಿಗೆ ರಸಾನಂದ ಉಂಟು ಮಾಡಬಲ್ಲ ಈಕೆಯ ಹಾಡುಗಳು ದಾಸ ಸಾಹಿತ್ಯದಲ್ಲಿ ವೈಶಿಷ್ಟ್ಯ ಪೂರ್ಣವಾದ ಸ್ಥಾನವನ್ನು ಹೊಂದಿವೆ.

ಧಾರ್ಮಿಕ ಪ್ರಚಾರದ ಜೊತೆಗೆ ಜನಪರ ಧ್ವನಿಯನ್ನೊಳಗೊಂಡಿರುವ ಭೀಮವ್ವನ ಕೃತಿಗಳು. ಅವಳ ಅನುಭವಜನ್ಯವಾದ ಆಳವಾದ ಜ್ಞಾನಕ್ಕೆ ನಿದರ್ಶನಗಳಾಗಿವೆ. ರಾಶಿ ಹಾಡುಗಳು, ಬಸಿರು ಬಣ್ಣಿಸುವ, ಆರತಿ ಹಾಡುಗಳು ಮುಂತಾದ ಪ್ರಕಾರಗಳಿಂದ ದಾಸ ಸಾಹಿತ್ಯದ ಕ್ಷಿತಿಜವನ್ನು ವಿಸ್ತಾರಗೊಳಿಸಿದ ಕೀರ್ತಿ ಭೀಮವ್ವನವರದು. ಕಟ್ಟುನಿಟ್ಟಿನ ಮಡಿವಂತ ಸಮಾಜದಲ್ಲಿದ್ದುಕೊಂಡು ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹರಿಯಬಿಟ್ಟಿದ್ದಾರೆ.

ದಾಸ ಸಾಹಿತ್ಯದ ಪ್ರಸ್ತುತ ಅಧ್ಯಯನದಲ್ಲಿ ಭಾಷಿಕ ರಚನೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ದಾಸ ಸಾಹಿತ್ಯದಲ್ಲಾದ ಭಾಷಿಕ ಪಲ್ಲಟಗಳನ್ನು ಗುರುತಿಸಲಾಗಿದೆ. ದಾಸರಿಗೆ ಸಂಸ್ಕೃತ ಭಾಷೆಯ ಅರಿವಿದ್ದರೂ ಆಡು ನುಡಿಯನ್ನು ಕೀರ್ತನೆಯಲ್ಲಿ ಬಳಸಿರುವುದು, ಶಿಥಿಲರೂಪಗಳನ್ನು, ದ್ವಿತ್ವಗಳನ್ನು, ಸಂವಾದಿ ರೂಪಗಳನ್ನು, ಸಂಖ್ಯಾವಾಚಕಗಳನ್ನು ಗುರುತಿಸಲಾಗಿದೆ. ವ್ಯಾಕರಣದ ಅನೇಕ ನಿಯಮಗಳನ್ನು ದಾಸರು ದಾಟಿದ್ದಾರೆಂಬುದನ್ನು ಈ ಮೂಲಕ ಕಂಡುಕೊಳ್ಳಲಾಗಿದೆ. ದಾಸರಲ್ಲಿ ಅರಿಸಮಾಸದ ರಚನೆಗಳನ್ನು ಹೇರಳವಾಗಿ ಕಾಣಬಹುದು.

ಹರಪನಹಳ್ಳಿ ಭೀಮವ್ವನವರು ರಚಿಸಿದ ಕೃತಿಗಳನ್ನು ಆಧರಿಸಿದ ಈ ಅಧ್ಯಯನದಲ್ಲಿ ಅವರ ಸುಮಾರು ೧೪೩ ಕೀರ್ತನೆಗಳನ್ನು ಮತ್ತು ೭ ದೀರ್ಘ ಕೀರ್ತನೆಗಳನ್ನು ಅಧ್ಯಯನ ಮಾಡಲಾಗಿದೆ. ಭೀಮವ್ವನವರು ಸಹ ಶಿಷ್ಟ ಭಾಷೆಗೆ ಮೊರೆ ಹೋಗದೆ ಆಡು ನುಡಿಯ ಭಾಷೆಯನ್ನೇ ಹೆಚ್ಚಾಗಿ ಬಳಸಿಕೊಂಡಿದ್ದಾರೆ ಇವರ ಕೃತಿಗಳಲ್ಲಿ ಹೆಚ್ಚಾಗಿ ಗ್ರಾಮ್ಯ ಪದಗಳ ಬಳಕೆಯನ್ನು ಶಿಥಿಲರೂಪವನ್ನು, ಸಂವಾದಿರೂಪಗಳನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಹರಪನಹಳ್ಳಿ ಭೀಮವ್ವನವರ ಕೀರ್ತನೆಗಳ ಸಮಾಜೋ ಭಾಷಿಕ ಆಯಾಮಗಳು ಎನ್ನುವ ಅಧ್ಯಯನದಲ್ಲಿ ಭೀಮವ್ವನವರ ಕೃತಿಗಳಲ್ಲಿ ಕಂಡು ಬಂದಿರುವ ಗಾದೆಗಳು, ನುಡಿಗಟ್ಟುಗಳು, ಬೈಯ್ಗುಳುಗಳು, ಉಡುಗೆ ತೊಡುಗೆಗಳು, ಸಂಬಂಧ ವಾಚಿಗಳು, ಆಹಾರದ ಬಗೆಗಳು, ಅನ್ಯದೇಶಿಯ ಪದಗಳ ಬಳಕೆಯ ಕುರಿತು ಚರ್ಚಿಸಲಾಗಿದೆ. ಈ ಮೂಲಕ ಭೀಮವ್ವನವರಲ್ಲಿ ಬಳಕೆಯಾಗಿರುವ ಗಾದೆಗಳು ಹೆಚ್ಚಾಗಿ ಹೋಲಿಕೆ ರೂಪದ ಗಾದೆಗಳು, ಹಾಗೆಯೇ ಬೈಯ್ಗುಳುಗಳು ಸಹ ಸೌಮ್ಯರೂಪದ್ದವೇ ಆಗಿರುವುದನ್ನು ವಿವರಿಸಲಾಗಿದೆ.

ಆಹಾರದ ವಿಶೇಷತೆಯು ಭೀಮವ್ವನವರ ಕೃತಿಗಳಲ್ಲಿ ರಸವತ್ತಾಗಿ ಮೂಡಿಬಂದಿದೆ. ವೈದಿಕ ಪರಿಸರದಲ್ಲಿ ಹಬ್ಬ ಹರಿದಿನಗಳೆಂದು ಮಾಡುವ ಅಡಿಗೆಯ ವಿಶೇಷತೆಯನ್ನು ಕಂಡುಕೊಳ್ಳಲಾಗಿದೆ. ಶ್ರಾವಣ ಶುಕ್ರವಾರ ಮತ್ತು ಶನಿವಾರದ ಹಾಡಿನಲ್ಲಿ ಮೂಡಿಬಂದಿರುವ ಪಾಕ ವೈವಿಧ್ಯ ಭೀಮವ್ವನವರ ಕೀರ್ತನೆಗಳಲ್ಲಿ ಒಂದು ಸಮಾಜದ ಸಾಂಸ್ಕೃತಿಕ ಚಿತ್ರಣವನ್ನು ಭಾಷೆಯಲ್ಲಿ ಹಿಡಿದಿಡುವ ಸ್ವರೂಪದ್ದಾಗಿದೆ.

ಉಡುಗೆ ತೊಡುಗೆಯ ವಿಷಯವೂ ಸಹ ಭೀಮವ್ವನವರ ಕೃತಿಗಳಲ್ಲಿ ವಿಶೇಷವಾಗಿ ಮೂಡಿಬಂದಿದೆ. ಕೀರ್ತನೆಯೊಂದರಲ್ಲಿ ಭೀಮವ್ವನವರು ಸೀರೆಯ ಕುರಿತು ಪ್ರಸ್ತಾಪ ಮಾಡುತ್ತಾರೆ. ಆ ಕೀರ್ತನೆಯಲ್ಲಿನ ವರ್ಣನೆ ಕೇವಲ ಸೀರೆಗಳ ಹೆಸರಾಗಿರದೆ ಸಾಂಸ್ಕೃತಿಕ ಮಹತ್ವದ ಹಿನ್ನೆಲೆಯಾಗಿ ಮೂಡಿಬಂದಿರುವುದನ್ನು ಕಂಡುಕೊಳ್ಳಲಾಗಿದೆ. ಹರಪನಹಳ್ಳಿ ಭೀಮವ್ವನವರು ಬಳ್ಳಾರಿ ಭಾಗದವರಾದ್ದರಿಂದ ಅನ್ಯಭಾಷಾ ಬಳಕೆಯೂ ಇಲ್ಲಿ ಕ್ವಚಿತ್ತಾಗಿ ಮೂಡಿ ಬಂದಿರುವುದನ್ನು ದಾಖಲಿಸಲಾಗಿದೆ.

ಒಟ್ಟಾರೆಯಾಗಿ ಭೀಮವ್ವನವರ ಕೃತಿಗಳಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿವರಗಳನ್ನು ಹಾಡುಗಳಲ್ಲಿ ಭಾಷಿಕವಾಗಿ ಹೇಗೆ ಕಟ್ಟಿಕೊಡಲಾಗಿದೆ ಎಂಬುದನ್ನು ಗಮನಿಸಲಾಗಿದೆ. ಇಲ್ಲಿನ ಹೆಚ್ಚಿನ ವಿವರಗಳು ಮಹಿಳಾಪರ ಕಾಳಜಿಯನ್ನು ವ್ಯಕ್ತಪಡಿಸುವ ರೀತಿಯದ್ದಾಗಿದೆ. ಎಂದು ಕಂಡುಕೊಳ್ಳಲಾಗಿದೆ. ಈ ಎಲ್ಲ ಅಂಶಗಳು ಒಂದು ಸಮಾಜದ ಭಾಷೆ, ಸಂಸ್ಕೃತಿ ರೀತಿ ನೀತಿಗಳನ್ನು ಕುರಿತಂತೆ ಭಾಷಿಕ ವಿವರಗಳನ್ನು ನೀಡುವುದಾಗಿದೆ.

[illegible]

ಅನುಬಂಧಗಳು

* ಅಪ್ರಕಟಿತ ಕೀರ್ತನೆಗಳು
* ಪರಾಮರ್ಶನ ಗ್ರಂಥಗಳು

ಕಡಲಬಾಳು ಪ್ರಾಣದೇವರ ಕುರಿತು ಹಾಡು

ಪಿಡಿದು ಕರವೆನ್ನ ಸಲಹು ಕಡಲ ಬಾಳೇಶನೆ
ಅಡಿಗೆರುವೆ ಭವ ಕಡಲ ದಾಟಿಸೋ ಬೇಗ ||ಪ||

ಮೂರು ಮಂದಿಯಕೂಡಿ
ಆರು ನೇತ್ರಡಿ ನೋಡಿ
ಅಪಾರ ಮಹಿಮ ನಮ್ಮ
ಬೇಡಿದಿಷ್ಟಾರ್ಥವ ನೀಡಿ ||೧||

ವಾನರನಾಗಿ ಶರಧಿ ಹಾರಿ
ಲಂಕೆಯ ಸುಟ್ಟಿ ಭಾನುವಂಶಕನ ಸತಿಗೆ
ಭಕ್ತಿ ಲುಂಗುರವನಿಟ್ಟಿ ||೨||

ದುಷ್ಟ ದುಶ್ಯಾಸನ್ನ ಹೊಟ್ಟಿ ಬಗದು ಕರುಳ
ಪಟ್ಟದರಸಿ ಮನೋಬಿಷ್ಟ ಪೂರೈಸಿದಂತೆ ||೩||

ಸೋಸಿಂದಲಿ ಸನ್ಯಾಸ ನೀನ್ಯಾದೋ ವೇದ
ವ್ಯಾಸರ ಕೂಡ ಬದರಿಕಾಶ್ರಮ ವಾಸವಾದೋ ||೪||

ಭೂಸುರರೊಡೆಯ ಭೀಮೇಶಕೃಷ್ಣನ ನಿಜ
ದಾಸರೆನಿಸಿ ಎನ್ನುದಾಸೀನ ಮಾಡುವರೂ ||೫||

ಆರತಿಯ ಹಾಡು

ಎತ್ತಿದಳಾರುತಿಯ ಶ್ರೀ ತುಳಸಿಗೆ
ಭಕ್ತಿ ಭಾವಗಳಿಂದಲಿ|

ಎತ್ತಿದಳಾರುತಿ ಸತ್ಯ ಧರ್ಮದ ರಾಣಿ
ಅಚ್ಯುತನ ತೋರೆಂದು ಅತಿ ದೈನ್ಯದಿಂದಲಿ ||ಪ||

ಗಂಧ ಪರಿಮಳ ಪುಷ್ಪದಿ ಪಾಂಚಾಲಿ ತಾ
ವೃಂದಾವನವ ಪೂಜಿಸಿ
ದುಂಡು ಮಲ್ಲಿಗಿ ಕರ್ಪೂರ ದೀಪ ಧೂಪಗಳಿಂದ
ಇಂದ್ರನಂದನಸತಿ ಒಂದೇ ಮನಸಿಲಿ ||೧||

ಹಾರ ಕೇಯೂರಗಳು ಮುಕ್ತಾವಳಿ
ನಾರಿ ತುಳಸಿಗೆ ರಚಿಸಿ
ಚಾರು ಹಸ್ತಗಳಿಂದ
ನಾರಿ ಬೊಗಸಿಯನೊಡ್ಡಿ
ವಾರಿಜನಾಭನ ತೋರು ತೋರೆನುತಲಿ ||೨||

ಅನ್ನ ಬೇಡಲು ಮುನಿಗಳು
ಪತಿಗಳು ಬಂದು ಎನ್ನನೇ ಕಾಡುವರು
ಪನ್ನಂಗವೇಣಿನ ನಿನ್ನ ಮೊರೆ ಹೊಕ್ಕೆನು
ಪನ್ನಂಗ ಶಯನನ ತೋರು ತೋರೆನುತುಲಿ ||೩||

ಕ್ಷುದೆಯಿಂದೊಲುವರು ದುರ್ವಾಸವರು
ಎಂದು ಪತಿಗಳು ಬೆದರುವರು
ಮತಿದಾಯಕಿ ನಿನ್ನ ಪತಿ ಶ್ರೀ ಕೃಷ್ಣಯ್ಯನ
ಅತಿ ಅದ್ಭುತದಿ ತೋರಿಸು ಎಂದು ತುಳಸಿಗೆ ||೪||

ಬೇಡಿದ ಭಕ್ತರಿಗೆ ತುಳಸಿ ನೀನು
ಸಾಯುಜ್ಯ ಪದವಿ ನೀನು
ಪಾರಿಜನಾಭನ್ನ ತೋರಿದಾಳಕ್ಷಣದಿ
ಧೀರ ಭೀಮೇಶಕೃಷ್ಣನ ಸತಿ
ತುಳಸಿಗೆ ಎತ್ತಿದಳಾರುತಿ ||೫||

ಲಕ್ಷ್ಮೀದೇವಿಯ ಮೇಲಿನ ಆರತಿಹಾಡು

ಶರಧಿರಾಜನ ಸುತೆಗೆ ಮಂಗಳ
ಭರದಿ ಪಾಡಿರಿ ||ಪ||

ಕರಡಿ ಕಂಕಣ ಹರಡಿ ಚಿನ್ನದ
ಸರಿಗೆನಾಗ ಮುರಿಗಿ ಇಟ್ಟಂತಹ ||ಅ.ಪ||

ಹಸ್ತಕಡಗ ಮುತ್ತಿನೊಲೆ
ಮತ್ತೆ ಮೂಗುತಿಯು ಕೃಷ್ಣನ
ಚಿತ್ತವನು ತಾ ಮೆತ್ತಗೆ ಮಾಡುವ ದೃಷ್ಟಿ
ಅಂಜನವನವೂ ಕಸ್ತೂರಿ ತಿಲಕವು ನೊಸಲಲಿ ಹೊಳೆಯುತ
ಮತ್ತಗಜವೂ ತಾ ಗಮನದಿ ಸೋಲಿಪ ||೧||

ಕಾಲದಂದಿಗೆ ಕೀಲುಕಡಗ
ಮೇಲೆ ದಿನವಸನ
ಬೈತಲು ಮೇಲೆ ಎಸೆಯುವ
ಪಿಂಪಿಣಿ ಹೂವು ಸಾಲು ಮುತ್ತುಗಳು
ಕಾಲಂದುಗೆ ಗೆಜ್ಜೆ
ನ್ಯಾವಳಿಮಿಂಟಕಿ ಸಾಲಾಗಿ ಮೋಹನ ಮಾಲೆಯ ಧರಿಸಿದ ||೨||

ಪೊಡವಿಯೊಳು ಬ್ರಹ್ಮಪುರ ನಿವಾಸ
ಒಡೆಯ ಭೀಮೇಶಕೃಷ್ಣ
ಬಿಡದೆ ಎಲ್ಲರೂ ಕಿಂಕಣಿ ಗಡಣದಿಂದಲಿ
ಮಡದಿಯರೆಲ್ಲರೂ ಸಡಗರದಿಂದಲಿ
ಬಿಡಿ ಮುತ್ತುಗಳು ಎಡಬಲ ಚೆಲ್ಲುತ ||೩||

ತುಳಸಿ ಹಾಡು

ಬೃಂದಾವನದಲ್ಲಿ ನಿಂದಾಳೆ ಶ್ರೀ ತುಳಸಿ
ಚೆಂದದಿ ಪೂಜಿಸಿ ಆನಂದ ಸುತನ
ರಾಣಿಗೆ ಮಂಗಳಾರತಿಯ ಬೆಳಗಿರೆ ||೧||

ಅಚ್ಚನಂಗದ ಜಾಣೆ
ಪಚ್ಚದಂದದಿ ತೆನೆ
ಅಚ್ಯುತನಂತನ
ಅಚ್ಚದೊಲ್ಲಭಗೆ
ಅಚ್ಚಮುತ್ತಿನಾರತಿಯ ಬೆಳಗಿರೆ ||೨||

ಬಿಡದೆ ಭೀಮೇಶಕೃಷ್ಣನ
ಸಿರಿಮುಡಿಯಲ್ಲಿ ದೃಢ ರೂಪಿನಿಂದಿದ್ದ
ಮಡದಿ ತುಳಸಮ್ಮಗೆ ಬೆಡಗಿ ನಾರತಿಯ ಬೆಳಗಿರೆ ||೩||

ಅನಂತಶಯನ

ಕಂಡು ಧನ್ಯಳಾದೆ ನಾನಿಂದು
ಅನಂತಶಯನನೆ ||ಪ||

ಸೋಸಿನಿಂದಲಿ ಹಾಸ್ಯ ಮುಖವನು ||ಅ.ಪ||

ಚಿತ್ರವಿಚಿತ್ರದಿ ಒಪ್ಪು ಕಿರೀಟ
ಕಸ್ತೂರಿ ತಿಲಕವು ಹೊಳೆವ ಲಲಾಟ
ಹಸ್ತದಲ್ಲೇ ಶಂಕಚಕ್ರಾಂಕಿತ ಪದ್ಮ
ಶಿಸ್ತಿಲಿ ಶಯನಿಪ ಸರ್ಪಶಯನನಪಾದ ||೧||

ಚಂದ್ರ ಬಿಂಬದಿ ಪೋಲುವ
ಚಂದುಳ್ಳ ಮುಖಕಾಂತಿ
ಚಂದ್ರಹಾಸ್ಯದಿ ನಡುವೆ
ನೊಸಲೊಳು ನೇತ್ರಂಗಳ್
ಕರಣ ಕುಂಡಲ ಧರ
ಕೊರಳೊಳು ವೈಜಯಂತಿ ಹಾರ
ನೋಡಿದೆ ಮನೋಹರ
ಚತುರ್ಭುಜದಲಂಕಾರ ||೨||

ಉರಗಶಯನನಾಗಿ ಸಿರಿದೇವಿ ಸಹಿತಾಗಿ
ಚಿತ್ತದಿ ಜನಕನ ಪೊತ್ತು ನಿರುತದೊಳು
ಹತ್ತಾವತಾರದಿ ಸುತ್ತಲೂ ಪ್ರಕಾಶ
ಭಕ್ತ ಬೆಳಗಾವಿಯವಾಸ ಭೀಮೇಶ ಕೃಷ್ಣನ ||೩||

ಪ್ರಾಣದೇವರು

ಭಾರತೀಯ ಕಾಯೋ ಸಜ್ಞಾನಾಭಾನೆ
ರಾಜನಂದನ ಭಾರತೀಶ ಕಾಯೋ ||ಪ||

ಕಾಕಾಸುರ ಭಂಜನಾಜ್ಞಾ
ಸ್ವೀಕರಿಸಿ ಶರಧಿ ಧಾಟಿ
ಏಕಾಂತದಿ ಕುರುಹ ಪೇಳಿ
ಶೋಕವ ಬಿಡಿಸಿದ ಸೀತೆಯ
ಲಂಕೆಯಿಂದ ಜಯಿಸಿ ಬಂದ ||೧||

ಪಾಂಡು ಸುತನೆನಿಸಿ ಜಗದಿ
ತಾಂಡವಾಡಿ ಕುರು ಬಲವನು
ದಿಂಡುಗೆಡಹಿ ರಿಪುಗಳಿಗೆ
ಗಂಡನೆಂದೆನಿಸಿದ ಪುಂಡರೀಕ ವರದ ಭಕುತ ||೨||

ಮಧ್ಯಗೇಹರಲ್ಲಿ ಜನಿಸಿ
ಮಧ್ವಮತ ಸಿದ್ಧಾಂತಗೈಸಿ
ಮದಕ ಜನಕನನ್ನು ಸ್ತುತಿಸಿ
ಬದರಿಲಿ ವಾಸವ ಮಾಡಿದ
ಸದಮಲ ಭೀಮೇಶ ಕೃಷ್ಣನ ||೩||

ಸುಳಾದಿ ತಾಳ:ಏರಡು

ಮಾತು ಮಾತಿಗೆ ನಿನ್ನ ನಾಮ ವಂದನ ಬೇಡಿ|
ಪ್ರಾರ್ಥಿಸುವೆನಯ್ಯ ಪರಮ ಸಮರ್ಥನೆ|
ಸೇತುಬಂಧನ ಮಾಡಿದ್ವಾತ ಸುತಗೆ|
ಒಲಿದಾತನೆ ನೀ ಮುದ್ದು ಸೀತವಲ್ಲಭ|
ನಾಭಿ ಜಾತಯ್ಯ ಪಾರಿಜಾತವ ತಂದ|
ಪ್ರಖ್ಯಾತನೆ ಯದುಕುಲ ನಾಥಾಗಿ ಬಂದು|
ಪೂತನಿ ಮರ್ದಕ ಮಾತುಳರೇ ಎನ್ನ
ಮಾತನು ಲಾಲಿಸಿ ಪ್ರೀತಿ ಮಾಡೆನ್ನ
ಸುನೀತಿ ಮಾರ್ಗದೊಳಿಟ್ಟು
ಭೂತಳದೊಳು ನರಪಾತಕಿಯೆನ್ನಯಮ ದೂತರಿಗೊಪ್ಪಿಸಿ
ಯಾತನೆಗೊಳಿಸುವುದ್ಯಾತರ ಘನತೆಯಿದು
ನೀತವೇನೋ ನವನೀತ ಚೋರನೆ ಕೃಷ್ಣ
ಸಾರ್ಥಕ ಮಾಡಿಸಿಗೆನ್ನ ಶರೀರ
ಅನಾಥ ಜೀವರ ಕೈಯ ಪ್ರೀತಿಂದೆ
ಹಿಡಿದೆತ್ತಿ ಭೀತಿ ಬಿಡಿಸಿ
ಕಾಯೋ ಭೀಮೇಶಕೃಷ್ಣ

ವೆಂಕಟೇಶ್ವರ ದೇವರ ಮೇಲಿನ ಆರತಿ ಹಾಡು

ಗಿರಿಯೊಡೆಯ ಶ್ರೀನಿವಾಸ
ಬಿಂಕ ರಹಿತ ಗಾರುತಿ ಗೈಯುವೆ ||ಪ||

ಬೇಟೆಯಾಡಲು ಬಂದು ಬೆಟ್ಟದಡಿಯಲು ನಿಂದು
ನಾಟಕೀಯದಾಟದಿಂದ ಮೋಸಿಗೊಳಿಸಿದ ಪದ್ಮಾವತಿಯ ||೧||

ಬಳುಕದೇವಿಗಾಜ್ಞೆಯಿತ್ತು ಭರದಿ ಪೊರವಿ ವೇಶ ಧರಿಸಿ
ಗಿರಿಯನಿಳಿದು ನಾರಾಯಣ ಪುರಕೆ ತೆರಳಿದಾ ಹರಿ ||೨||

ರಾಜಪತ್ನಿ ಧರಣಿದೇವಿಗೆ ಸೋಜಿಗದ ನುಡಿಯ ಪೇಳಿ
ಆಡಿದೆಯೋ ಸಕಲ ಪರಿಯ ರೂಢಿಗೊಡೆಯ ಭೀಮೇಶಕೃಷ್ಣ ||೩||

ಪರಾಮರ್ಶನ ಗ್ರಂಥಗಳು

೦೧. ಅಂಗಡಿ ಎಸ್.ಎಸ್., ಭಾಷಾ ಕ್ಷೇತ್ರಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೬.

೦೨. ಅಂಗಡಿ ಎಸ್.ಎಸ್., ಸಂಕೀರ್ಣ ವೃತ್ತಿಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೦೩. ಅಂಗಡಿ ಎಸ್.ಎಸ್., ಸಂಬಂಧವಾಚಕಗಳು ಮತ್ತು ಸಂಬೋಧನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೦೪. ಅಂಗಡಿ ಎಸ್.ಎಸ್., ದಾಸಸಾಹಿತ್ಯ ಶಬ್ದ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೦೫. ಅಂಗಡಿ ಎಸ್.ಎಸ್., ಜನಪದ ಸಾಹಿತ್ಯ ಭಾಷೆ, ವಿಕಾಶ ಪ್ರಕಾಶನ, ಹೊಸಪೇಟೆ, ೨೦೦೮.

೦೬. ಅಂಬಳಿಕೆ ಹಿರಿಯಣ್ಣ, ಜಾನಪದ ಪರಿಭಾವನ, ಸಂವಹನ, ೧೨/೧ಎ, ಈವನಿಂಗ್ ಬಜಾರ್, ಶಿವರಾಂಪೇಟೆ, ಮೈಸೂರು, ೧೯೯೮.

೦೭. ಅಂಬಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ಚೇತನಬುಕ್ ಹೌಸ್, ಮೈಸೂರು, ೨೦೦೧.

೦೮. ಅಶೋಕ ಕುಮಾರ ರಂಜೇರಿ, ವಿವಿಧ ವೃತ್ತಿ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೦೯. ಎಚ್ಚೆಸ್ಕೆ, ಬಳಕೆಯ ಭಾಷೆ, ಚೇತನ್ ಬುಕ್ ಹೌಸ್, ಮೈಸೂರು, ೨೦೦೪.

೧೦. ಕೀರ್ತಿನಾಥ ಕುರ್ತಕೋಟಿ, ಭಾಷೆ ಮತ್ತು ಸಂಸ್ಕೃತಿ, ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ, ೨೦೦೬.

೧೧. ಕುವೆಂಪು (ಸಂ)., ಕುಮಾರವ್ಯಾಸ ಭಾರತ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೧೨. ಕುಶಾಲಪ್ಪಗೌಡ ಕೆ., ಕನ್ನಡ ತಿರುಳ ಕನ್ನಡ ಮತ್ತು ಸಮಾಜ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೯೧.

೧೩. ಕೃಷ್ಣಯ್ಯ ಎಂ.ಎಚ್., ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, ೧೯೯೯.

೧೪. ಕೃಷ್ಣಕೊಲ್ಹಾರ ಕುಲಕರ್ಣಿ, ಕಾಖಂಡಕಿ ಮಹಿಪತಿದಾಸರು, ಮರಾಠಿ ಕನ್ನಡ ಸ್ನೇಹ ವರ್ಧನ ಕೇಂದ್ರ, ಪುಣೆ, ೧೯೮೯.

೧೫. ಕೃಷ್ಣರಾವ್ ಕೆ.ಎಂ., ದಾಸ ಸಾಹಿತ್ಯದಲ್ಲಿ ದ್ವೈತ ಪ್ರಮೇಯಗಳು, ೧೯೮೬.

೧೬. ಕೆಂಪೇಗೌಡ ಕೆ., ಸಾಮಾನ್ಯ ಭಾಷಾ ವಿಜ್ಞಾನ, ಭಾರತೀ ಪ್ರಕಾಶನ, ಮೈಸೂರು, ೧೯೯೩.

೧೭. ಕೆಂಪೇಗೌಡ ಕೆ., ಕನ್ನಡ ಉಪಭಾಷೆಗಳ ಅಧ್ಯಯನ, ಭಾರತೀ ಪ್ರಕಾಶನ, ಮೈಸೂರು ೨೦೦೩.

೧೮. ಗಣೇಶ ಆರ್., ಭಾಷಾಭೃಂಗದ ಬೆನ್ನೇರಿ, ವಸಂತಪ್ರಕಾಶನ, ನಂ.೧೦, ತುಳಸೀವನ, ಬೆಂಗಳೂರು, ೨೦೦೫.

೧೯. ಗಿರಿಜಾಪತಿ ಎನ್.ಎಂ., ಕನ್ನಡ ಭಾಷಾಲೇಕ, ಸುಮುಖ ಪ್ರಕಾಶನ, ಬೆಂಗಳೂರು, ೨೦೦೭.

೨೦. ಗುಡಿ ಆರ್.ಜಿ., ದಾಸ ಸಾಹಿತ್ಯ ಒಂದು ಸೈದ್ಧಾಂತಿಕ ಅಧ್ಯಯನ, ಶ್ರೀನಿಧಿ ಪ್ರಕಾಶನ, ವಿದ್ಯಾನಗರ, ಅಥಣಿ, ೧೯೯೪.

೨೧. ಗೊರವರ ಬ.ಸೋ., ಕನ್ನಡ ರಚನ್ಮಾತಕ ಮತ್ತು ಸಮಾಜೋಭಾಷಿಕ ಅಧ್ಯಯನ, ಲಡಾಯಿ ಪ್ರಕಾಶನ, ಗದಗ, ೨೦೦೮.

೨೨. ಚಿದಾನಂದ ಮೂರ್ತಿ ಎಂ., ಭಾಷಾವಿಜ್ಞಾನದ ಮೂಲತತ್ವಗಳು, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೮೬.

೨೩. ಚಿದಾನಂದಮೂರ್ತಿ ಎಂ., ಜನ-ಜನಪದ-ಜಾನಪದ (ಸಂ.೩), ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೨.

೨೪. ಜಯಲಕ್ಷ್ಮಿ ಮಂಗಳಮೂರ್ತಿ, ಹರಪನಹಳ್ಳಿ ಭೀಮವ್ವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮.

೨೫. ಜಯಲಕ್ಷ್ಮಿ ಮಂಗಳಮೂರ್ತಿ, ಹರಪನಹಳ್ಳಿ ಭೀಮವ್ವ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೯.

೨೬. ಜಯಸಿಂಹ, ಕನ್ನಡದ ಹೆಮ್ಮೆಯ ಕವಯಿತ್ರಿ ಹರಪನಹಳ್ಳಿ ಭೀಮವ್ವ, ಪರಿಮಳ ಪ್ರಕಾಶನ, ಬೆಂಗಳೂರು, ೨೦೦೭.

೨೭. ಜೋಷಿ ಶಂ.ಬಾ., ಭಾಷೆ ಮತ್ತು ಸಂಸ್ಕೃತಿ, ಶಂಬಾ ವಿಚಾರ ವೇದಿಕೆ ಶ್ರೇಯಸ್ ನಂ.೭೨೭ (೩೯೨), ಕೃಷ್ಣಾನದಿ ರಸ್ತೆ, ಪೈಪ್‌ಲೈನ್ ಶ್ರೀನಗರ, ಬೆಂಗಳೂರು

೨೮. ತರೀಕೆರೆ ರಹಮತ್, ಬಹುಭಾಷಾ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೨೯. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿ ಪುರ, ಮೈಸೂರು, ೧೯೯೭.

೩೦. ತಿರುಮಲೇಶ್ ಕೆ.ವಿ., ನಮ್ಮ ಕನ್ನಡ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೬.

೩೧. ದಾನೇಶ ಎ.ಚಕ್ಕಿ, ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ, ಎಸ್.ಎಸ್.ಒಡೆಯರ್, ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೭.

೩೨. ದಾಸೇಗೌಡ ಜಿ.ವಿ., ನಮ್ಮ ಜನಪದ ನಂಬಿಕೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ೧೯೭೩.

೩೩. ಧ್ರುವನಾರಾಯಣ, ನಾರಾಯಣ ದೇವರಕೆರೆ, ಯುವಕರ ಸಂಘ, ಹಗರಿಬೊಮ್ಮನಹಳ್ಳಿ, ರಾಮನಗರ, ಬಳ್ಳಾರಿ ಜಿಲ್ಲೆ, ೧೯೭೯.

೩೪. ನರಸಿಂಹಮೂರ್ತಿ ಎಚ್.ವಿ., ನಮ್ಮಹಬ್ಬಗಳು, ವಿಕಾಸ ಪ್ರಕಾಶನ, ಉಡುಪಿ, ೨೦೦೨.
೩೫. ನಾಗರತ್ನ ಟಿ.ಎನ್., ಹರಿದಾಸರ ಭಕ್ತಿ ಸ್ವರೂಪ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೩.
೩೬. ನಾಗರತ್ನ ಟಿ.ಎನ್., ಹರಪನಹಳ್ಳಿ ಭೀಮವ್ವನ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೪.
೩೭. ನಾರಾಯಣ ಕೆ.ವಿ. (ಸಂ)., ಭಾಷೆ ವಿಶ್ವಕೋಶ -೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೩೮. ನಾರಾಯಣ ಕೆ.ವಿ. (ಸಂ)., ವ್ಯಕ್ತಿನಾಮಗಳು ಸ್ವರೂಪ ಮತ್ತು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೩೯. ನಾರಾಯಣ ಕೆ.ವಿ., ಭಾಷೆಯ ಸುತ್ತ ಮುತ್ತ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೨೦೦೦.
೪೦. ನಾರಾಯಣ ಕೆ.ವಿ., ಕನ್ನಡ ಜಗತ್ತು ಅರ್ಧ ಶತಮಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.
೪೧. ನಾವಡ ಎ.ವಿ., ಸಾವಿರಾರು ಕೀರ್ತನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೪೨. ಪವನಕುಮಾರ್ ಜಿ., ಹೂವ ಕೊಡೆ ತಾಯಿ, ಇಂದಿರೇಶ ಪ್ರಕಾಶನ, ಗಂಗಾವತಿ, ೨೦೦೨.
೪೩. ಪಾಂಡುರಂಗಬಾಬು ಡಿ., ನುಡಿನೋಟ, ಆಕಾಶ್ ಪ್ರಕಾಶನ, ಹೊಸಪೇಟೆ, ೨೦೦೫.
೪೪. ಬಸವರಾಜು ಎಲ್., ತಿರುಮಲಾರ್ಯನ ಶೃಂಗಾರ ನಿದರ್ಶನ, ಗೀತಾಬುಕ್ ಹೌಸ್ ಮೈಸೂರು, ೧೯೭೧.
೪೫. ಬಸವರಾಜು ಎಲ್., ಶಿವದಾಸ ಗೀತಾಂಜಲಿ, ಜಗದ್ಗುರು ಶಿವರಾತ್ರೀಶ್ವರ, ಗ್ರಂಥಮಾಲೆ ಮೈಸೂರು, ೧೯೯೦.
೪೬. ಬೇಲೂರು ಕೇಶವದಾಸರು, ಕರ್ನಾಟಕ ಭಕ್ತವಿಜಯ, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೯೪.
೪೭. ಭಜನಾಮಂಡಳಿ, ಶ್ರೀ ಭೀಮೇಶಕೃಷ್ಣ ಭಜನಾಮೃತ, ಶ್ರೀ ಭೀಮೇಶಕೃಷ್ಣ ಭಜನಾ ಮಂಡಳಿ, ಹರಪನಹಳ್ಳಿ, ೨೦೦೫.
೪೮. ಮರುಳಯ್ಯ ಸಾ.ಶಿ., ಕನ್ನಡ ಭಾಷೆಯ ಚರಿತೆ, ಕನ್ನಡ ಸಾಹಿತ್ಯ ಪರಿಷತ್, ೧೯೯೯.
೪೯. ಮಲ್ಲೇಪುರಂ ಜಿ.ವೆಂಕಟೇಶ (ಸಂ)., ಶಂಬಾಕೃತಿ ಸಂಪುಟಗಳು-೧, ಕನ್ನಡ ಪುಸ್ತಕ ಪ್ರಧಿಕಾರ, ಬೆಂಗಳೂರು, ೧೯೯೬.
೧. ಕಂನಡ-ಕಂನುಡಿ, ಸಂ-೨, ೧೯೯೬.
೨. ಕರ್ಣಾಟ-ಸಂಸ್ಕೃತಿ, ಸಂ-೩, ೧೯೯೬.
೩. ಭಾರತೀಯ ಸಂಸ್ಕೃತಿ, ಸಂ-೪, ೧೯೯೬.
೪. ಮಾನವ ಸಂಸ್ಕೃತಿ, ಸಂ-೫, ೧೯೯೬.

೫೦. ಮಹಾದೇವಯ್ಯ ಪಿ., ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೫೧. ಮಹಾದೇವಯ್ಯ ಪಿ., ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ, ಹಂಪಿ, ೨೦೦೬.

೫೨. ಮುಗಳಿ ರಂ.ಶ್ರೀ., ಕನ್ನಡ ಸಾಹಿತ್ಯ ಚರಿತ್ರೆ, ಗೀತಾಬುಕ್ ಹೌಸ್, ಮೈಸೂರು, ೧೯೯೩.

೫೩. ಮುಗಳಿ ರಂ.ಶ್ರೀ., ಪ್ರಾಚೀನ ಕನ್ನಡ ಸಾಹಿತ್ಯರೂಪಗಳು, ಸಮಾಜಪುಸ್ತಕಾಲಯ, ಧಾರವಾಡ, ೧೯೯೭.

೫೪. ರಾಗೌ (ಸಂ)., ನಮ್ಮ ಒಗಟುಗಳು, ಡಿ.ವಿ.ಕೆ.ಮೂರ್ತಿ, ಮೈಸೂರು, ೨೦೦೧.

೫೫. ರಾಜ ಪುರೋಹಿತ ಬಿ.ಬಿ., ಭಾಷೆ ಮತ್ತು ಅರ್ಥಗಳ ಗುಟ್ಟು, ಮೈಸೂರು, ೨೦೦೫.

೫೬. ರಾಮಚಂದ್ರ ಸಿ.ಎಸ್., ಸಂಕೇತಿ: ಜನಾಂಗ ಸಂಸ್ಕೃತಿ ಮತ್ತು ಭಾಷೆ, ಚೈತ್ರ ಪಲ್ಲವಿ ಪ್ರಕಾಶನ, ಮೈಸೂರು, ೧೯೯೨.

೫೭. ರಾಮಚಂಗ್ರರಾವ್ ಬಿ., ಕನ್ನಡ ಭಾಷೆ ಪ್ರಾದೇಶಿಕ ವೈವಿಧ್ಯ, ಐ.ಬಿ.ಎಮ್.ಪ್ರಕಾಶನ, ಬೆಂಗಳೂರು ೧೯೮೩.

೫೮. ರಾಮಚಂದ್ರರಾವ್ ಎಸ್.ಕೆ., ದಾಸಸಾಹಿತ್ಯ ಮತ್ತು ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೫೯. ರಾಮಶೇಷನ್ ಎನ್.ಕೆ., ಹರಿದಾಸ ಆಂದೋಲನ ಒಂದು ಅಧ್ಯಯನ, ತಿರುಮಲತಿರುಪತಿ ದೇವಸ್ಥಾನ, ೧೯೯೧.

೬೦. ವರದರಾಜರಾವ್ ಜಿ., ಹರಿದಾಸ ಸಾಹಿತ್ಯಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೭.

೬೧. ವಿವೇಕ ರೈ ಬಿ.ಎ., ಕರ್ನಾಟಕ ಜನಪದ ನಂಬಿಕೆಗಳು, ಕರ್ನಾಟಕ ಜಾನಪದ, ೧೯೮೧.

೬೨. ವಿವೇಕ ರೈ ಬಿ.ಎ., ರಾಘುವಾಂಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೬೩. ವೆಂಕಟೇಶ ಮೂರ್ತಿ ಎಚ್.ಎಸ್., ಕೀರ್ತನಕಾರರು-II, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.

೬೪. ಶಾಂತಿನಾಥ ದೇಸಾಯಿ, ಸಾಹಿತ್ಯ ಮತ್ತು ಭಾಷೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೦.

೬೫. ಶಾಲಿನಿ ರಘುನಾಥ, ಉಪಭಾಷಾಧ್ಯಯನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೬. ಶಿವಾನಂದ ವಿ., ವಚನಸಾಹಿತ್ಯದಲ್ಲಿ ಸಮಾಜೋ ಭಾಷಿಕ ಚಿಂತನೆಗಳು, ಶ್ರೀ ಬಸವೇಶ್ವರ ಪೀಠ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೩.

೬೭. ಶೀಲಾದಾಸ್, ಸುಳಾದಿಗಳು ಒಂದು ಅಧ್ಯಯನ, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, ಮಂತ್ರಾಲಯ, ೨೦೦೫.

೬೮. ಸಮಗ್ರ ದಾಸಸಾಹಿತ್ಯ ಸಂಪುಟಗಳು, ಕರ್ನಾಟಕ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೬.

೬೯. ಸರಿತಾ ಕುಸುಮಾಕರ ದೇಸಾಯಿ, ಹರಪನಹಳ್ಳಿ ಭೀಮವ್ವನ ಹಾಡುಗಳು ಒಂದು ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧.

೭೦. ಸಣ್ಣಯ್ಯ ಬಿ.ಎಸ್., ರಾಮೇಗೌಡ (ಸಂ)., ಲಕ್ಷ್ಮೀಶ, ಕರ್ನಾಟಕ ಸಂಸ್ಕೃತಿ ನಿರ್ದೇಶನಾಲಯ,

೭೧. ಸದಾಶಿವಪ್ಪ ಕುಂ.ಬಾ., ಹಲವು ಹನ್ನೊಂದು ಹರಪನಹಳ್ಳಿ, ಮಾಲತೇಶ ಪ್ರಕಾಶನ, ಹರಪನಹಳ್ಳಿ, ೨೦೦೨.

೭೨. ಸಾಂಬಮೂರ್ತಿ, ಭಾಷೆ ಮತ್ತು ಅಶಾಬ್ಧಿಕ ಸಂವಹನ, ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೭೩. ಸಾಂಬಾಮೂರ್ತಿ, ಕನ್ನಡದಲ್ಲಿ ಪ್ರತ್ಯಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೭೪. ಸುಮಿತ್ರಾ ಬಾಯಿ ಬಿ.ಎನ್., ವೈಷ್ಣವ ಕವಿಯಿತ್ರಿಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮.

೭೫. ಸೋಮಶೇಖರ ಇಮ್ರಾಪುರ (ಸಂ)., ಆಯ್ದ ಜನಪದ ಒಗಟುಗಳು, ಚೇತನಾ ಪ್ರಕಾಶನ, ಧಾರವಾಡ, ೧೯೯೮.

೭೬. ಸೋಮಶೇಖರ ಗೌಡ, ಭಾಷೆ : ರಚನೆ ಬಳಕೆ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೦.

೭೭. ಸೋಮಶೇಖರ ಗೌಡ, ಸಾಮಾಜಿಕ ಭಾಷಾ ವಿಜ್ಞಾನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೭.

೭೮. ಹಣಮಂತ ತಾಸಗಾಂವಕರ್, ಪ್ರಥಮ ಹರಿದಾಸ ಮಹಿಳೆ ಗಲಗಲಿ ಅವ್ವನವರು, ಪುಸ್ತಕ ಶಕ್ತಿ, ಬೆಂಗಳೂರು, ೨೦೦೨.

೭೯. ಹನುಮಂತರಾವ್ ಜಿ., ೧೯ನೇ ಶತಮಾನದ ಹರಿದಾಸ ಸಾಹಿತ್ಯ,

೮೦. ಹರಿಹರ ಶ್ರೀನಿವಾಸ ರಾವ್, ಹರಪನಹಳ್ಳಿ ಭೀಮವ್ವನ ಹಾಡುಗಳು ಸೂಪಶಾಸ್ತ್ರ ವೈದ್ಯಶಾಸ್ತ್ರದ ಹಿನ್ನಲೆಯಲ್ಲಿ, ಇತಿಹಾಸ ದರ್ಶನ, ೨೦೦೭.

೮೧. ಹಾಮಾನಾ, ಕನ್ನಡ ಛಂದಸ್ಸಿನ ಚರಿತ್ರೆ ಸಂ-೭, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೭.